ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

(ಶ್ರೀ ಅರವಿಂದ ಎಸ್.ಲಿಂಬಾವಳಿ ಉನ್ನತ ಶಿಕ್ಷಣ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,

2000 ಇಸವಿಯ ಕರ್ನಾಟಕ ರಾಜ್ಯ ವಿಶ್ವ ವಿದ್ಯಾಲಯಗಳ ಅಧಿನಿಯಮದ ಕಲಂ 47(4) ಹಾಗೂ ಕಲಂ 50(2)ರ ಮೇರೆಗೆ :

1. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ 2007–08ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

(ಶ್ರೀ ಎಸ್.ಎ. ರವೀಂದ್ರನಾಥ್ ಕೃಷಿ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,

1963ರ ಕೃಷಿ ವಿಶ್ವವಿದ್ಯಾನಿಲಯ ಅಧಿನಿಯಮದ ಕಲಂ 38(3)ರ ಮೇರೆಗೆ :

1. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ '2007–08ನೇ ಸಾಲಿನ ವಾರ್ಷಿಕ ವರದಿಯನ್ನು ಪಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

* * * * * * * * * * * *

2. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮುಂದುವರದ ಚರ್ಚೆ :

ಅಧ್ಯಕ್ಷರು : ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ನನ್ನ ಒಂದು ವಿನಂತಿ ಏನೆಂದರೆ, ಈಗ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯಗಳ ಮೇಲಿನ ಚರ್ಚೆಯನ್ನು ಮುಂದುವರೆಸುತ್ತೇವೆ. ಈ ಸಂದರ್ಭದಲ್ಲಿ ನಮ್ಮ ಉದ್ದೇಶ ಏನು ಇದೆಯೆಂದರೆ, ಬಹಳಷ್ಟು ಜನ ಶಾಸಕರು ಮಾತನಾಡಬೇಕೆಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ. ಇವತ್ತು ಮತ್ತು ನಾಳೆ ಮಧ್ಯಾಹ್ನದವರೆಗೆ ಈ ವಿಷಯಗಳ ಮೇಲೆ ಚರ್ಚೆ ನಡೆಯುತ್ತದೆ. ನೀವು ಚರ್ಚೆಯಲ್ಲಿ ಭಾಗವಹಿಸಿ ನಿಮ್ಮ ಭಾವನೆಗಳನ್ನು ಏನು ವ್ಯಕ್ತಿಪಡಿಸುತ್ತೀರಿ, ಅದಕ್ಕೆ ನಾಳೆ ಮಧ್ಯಾಹ್ನ 1.00 ಗಂಟೆಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವುದಕ್ಕೆ ಸಮಯ

ನಿಗದಿ ಮಾಡಿದ್ದೇವೆ. ಆದುದರಿಂದ ಇಂದು ಬೆಳಗಿನಿಂದ ಸಂಜೆಯವರೆಗೂ ಬೇಕಾದರೆ ಏಳು ಗಂಟೆ, ಎಂಟು ಗಂಟೆಯವರೆಗೂ ಮಾತನಾಡಿ. ಒಂದು ಗಂಟೆ ಕಾಲ ಹೆಚ್ಚಿಗೆ ಕುಳಿತುಕೊಳ್ಳೋಣ. ಈ ಚರ್ಚೆಯಲ್ಲಿ ಭಾಗವಹಿಸಲು ಶಾಸಕರು ತಮ್ಮ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ. ನಾನು ಅವರೆಲ್ಲರಿಗೂ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಕೊಡುತ್ತೇನೆ. ಅದರೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ time limit ಹಾಕಿಕೊಳ್ಳಬೇಕಾಗುತ್ತದೆ. ಎಲ್ಲರೂ ಎಲ್ಲಾ ವಿಷಯಗಳನ್ನು ಮಾತನಾಡುವುದಕ್ಕೆ ಆಗುವುದಿಲ್ಲ. ತಾವು ಕೆಲವೊಂದು ವಿಷಯಗಳ ಮೇಲೆ ಮಾತ್ರ ಮಾತನಾಡಿದರೆ ಎಲ್ಲರೂ ಚರ್ಚೆಯರ್ಲಲ್ಲಿ participate ಮಾಡುವುದಕ್ಕೆ ಆಗುತ್ತದೆ. ಒಬ್ಬೊಬ್ಬರು ಕನಿಷ್ಠ 15 ನಿಮಿಷದೊಳಗೆ ಮಾತನಾಡಿ ಮುಗಿಸಿದರೆ, ನಿಮ್ಮ ಪಕ್ಷದ ಪರವಾಗಿ ಯಾರ‍್ಯಾರು ಹೆಸರುಗಳನ್ನು ಕೊಟ್ಟಿದ್ದಾರೆ. ಅವರೆಲ್ಲರಿಗೂ ಮಾತನಾಡಲು ಅವಕಾಶ ಕೊಡಲು ಸಾಧ್ಯವಾಗುತ್ತದೆ. ಆದುದರಿಂದ ತಾವೆಲ್ಲರೂ ಇದಕ್ಕೆ ಸಹಕಾರವನ್ನು ಕೊಡಬೇಕು. ಪ್ರತಿಯೊಬ್ಬರೂ 15 ನಿಮಿಷದೊಳಗೆ ಮಾತಮಾಡಿ ಮುಗಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅದಕ್ಕೆ ತಾವೆಲ್ಲರೂ ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಮೊದಲನೆಯದಾಗಿ ಡಾ: ಶರಣಪ್ರಕಾಶ ಪಾಟೀಲರವರೆ, ತಾವು ಮಾತನಾಡಿ.

ಶ್ರೀ ಶರಣ ಪ್ರಕಾಶ ಪಾಟೀಲ (ಸೇಡಂ) : ಮಾನ್ಯ ಅಧ್ಯಕ್ಷರೆ, ನಿನ್ನೆ ನಮ್ಮ ಪಕ್ಷದ ವತಿಯಿಂದ ಮಾನ್ಯ ಜಯಚಂದ್ರರವರು agriculture ಮೇಲೆ ಬಹಳ ಸುದೀರ್ಘವಾಗಿ ಚರ್ಚೆಯನ್ನು ಮಾಡಿದ್ದಾರೆ. ಮತ್ತೆ ಸಲಹೆಗಳನ್ನು ಕೊಟ್ಟಿದ್ದಾರೆ. ಸರ್ಕಾರ ಆ ಸಲಹೆಗಳನ್ನು note ಮಾಡಿಕೊಂಡು, ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತದೆಂದು ನಾನು ಅಂದುಕೊಂಡಿದ್ದೇನೆ. ತಾವು ಈ ಸದನವನ್ನು ವಿಶೇಷವಾಗಿ ಕೃಷಿಕರ ಬಗ್ಗೆ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಸರ್ಕಾರದ ಚಿಂತನೆ ಇದೆಯೆನ್ನುವಂಥ messageಅನ್ನು ಕೊಡುವುದಕ್ಕೆ ಕರೆದಿದ್ದೀರಿ. ಅದನ್ನು ನಾವು ಕೂಡ ಸ್ವಾಗತ ಮಾಡುತ್ತೇವೆ. ಅದರ ಸರ್ಕಾರ ಇಲ್ಲಿಯವರೆಗೆ ಮಾಡಿರುವಂಥದ್ದರ ಬಗ್ಗೆಯೂ ನಾವು ಕಠೋರವಾದಂಥ ಟೀಕೆಗಳನ್ನು ಕೂಡ ಮಾಡಬೇಕಾಗುತ್ತದೆ. ಈ ಟೀಕೆ ಮಾಡುವಂಥಾದ್ದನ್ನು ನಾವು ಯಾವುದೇ ರಾಜಕೀಯ ದೃಷ್ಟಿಯಿಂದ ಮಾಡುತ್ತಿಲ್ಲ. ನಾವು ಸಾರ್ವಜನಿಕರ ಹಿತದೃಷ್ಟಿಯಿಂದ, in the interest of public, ಮತ್ತೆ ಇಂಥ ತಪ್ಪುಗಳು

ಮುಂದೆ ನಡೆಯಬಾರದು, ಮತ್ತು ಸಾರ್ವಜನಿಕ ಹಿತಾಸಕ್ತಿಯಲ್ಲಿ ಸರ್ಕಾರ ಕೆಲಸ ಮಾಡಬೇಕೆನ್ನುವುದ, ಸರ್ಕಾರದ ಲೋಪವನ್ನು ಎತ್ತಿ ತೋರಿಸುವಂಥದ್ದು ಕೂಡ ನಮ್ಮ ಕರ್ತವ್ಯವೆಂದು ನಾನು ಅಂದುಕೊಂಡಿದ್ದೇವೆ. ಅದರ ಜೊತೆಗೆ ಕೇವಲ ಸರ್ಕಾರ ಮಾಡದೇ ಇರುವಂಥ ಕೆಲಸಕ್ಕೆ ಟೀಕೆ ಮಾಡುವುದೇ ನಮ್ಮ ಕೆಲಸವೆಂದು ನಾನು ಅಂದುಕೊಳ್ಳುವುದಿಲ್ಲ. ಆದರೆ Constructive ಆಗಿರುವಂಥ ಕೆಲವು ಸಲಹೆಗಳನ್ನು ಕೊಡುತ್ತೇವೆ. ನಾವು ಯಾವ ರೀತಿಯಾಗಿ ಜನಪರವಾಗಿ ಕೆಲಸಗಳನ್ನು ನಿರ್ವಹಿಸಬಹುದೆಂಬ ಸಲಹೆಗಳನ್ನು ಕೊಡುವುದಕ್ಕೆ ನಾನು ಇಚ್ಛಿಸುತ್ತೇನೆ. ಈಗಾಗಲೇ ಕೃಷಿ ಬಗ್ಗೆ ಬಹಳ ಸುದೀರ್ಘವಾಗಿ ಮಾತನಾಡಿರುವುದರಿಂದ, ನಾನು ಕೃಷಿಯ ಬಗ್ಗೆ ಕೆಲವೊಂದು ಸಲಹೆಗಳನ್ನು ಮಾತ್ರ ಕೊಡುತ್ತೇನೆ. ನಾನು ವಿಶೇಷವಾಗಿ Rural Development ಬಗ್ಗೆ ಕೆಲವೊಂದು ವಿಚಾರಗಳನ್ನು ಹೇಳಲಿಚ್ಛಿಸುತ್ತೇನೆ.

ಇಲ್ಲಿ ಬಂದಿರತಕ್ಕಂಥ ನಾವು ಬಹುತೇಕ ಶಾಸಕರೆಲ್ಲ ಕೃಷಿಗೆ ಸಂಬಂಧ ಇರತಕ್ಕಂಥವರು, ಹಳ್ಳಿ ಪ್ರದೇಶದಿಂದ ಬಂದಿರತಕ್ಕಂಥವರು, ಹಳ್ಳಿಗಾಡಿನ ಜನರ ಸಮಸ್ಯೆಗಳನ್ನು ಅರ್ಥಮಾಡಿಕೊಂಡಿರತಕ್ಕಂಥವರು ಎಂದೇ ಜನರು ನಮ್ಮೆಲ್ಲರನ್ನು ಪಕ್ಷಭೇದ ಮರೆತು ಇಲ್ಲಿಗೆ ಆರಿಸಿ ಕಳುಹಿಸಿದ್ದಾರೆ. ಅವರ ಕಷ್ಟಗಳಿಗೆ ಪರಿಹಾರವನ್ನು ಹುಡುಕಲಿಕ್ಕೆ ನಾವು ಎಷ್ಟು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ ಎಂದು ಇವತ್ತು ಅವರು ನಿರೀಕ್ಷೆಯಿಂದ ನೋಡುತ್ತಿದ್ದಾರೆ. ಈಗ ನಾನು specific ಆಗಿ ಒಬ್ಬ ಕೃಷಿಕನಿಗೆ ಸರ್ಕಾರ ಏನು ಸಹಾಯ ಮಾಡಬಹುದು ಎನ್ನುವ ಬಗ್ಗೆ ಹೇಳುತ್ತೇನೆ. ಏಕೆಂದರೆ, ಕೃಷಿಕ self-sufficientಆಗಿ ಕೆಲಸ ಮಾಡತಕ್ಕಂಥವನು. ಸರ್ಕಾರದಿಂದ ಅವನು ಯಾವುದೇ ಅಪೇಕ್ಷೆಯನ್ನು ಪಡುವುದಿಲ್ಲ. ಅವನು ಸಂಕಷ್ಟದಲ್ಲಿದ್ದಾಗ ಮಾತ್ರ ಸರ್ಕಾರದ ಕಡೆ ನೋಡುತ್ತಾನೆಯೇ ವಿನಾ ಕೃಷಿಕ ಯಾವತ್ತೂ ಸರ್ಕಾರದ ಮೇಲೆ ಅವಲಂಬಿತವಾಗಿಲ್ಲ. ಆದರೆ ಅವನಿಗೆ ಸಹಾಯ ಮಾಡುವುದಕ್ಕೆ ನಾವು ಏನು ಮಾಡಬಹುದು ಎನ್ನತಕ್ಕಂಥದ್ದನ್ನು ನೋಡಬೇಕು. ಕಡಿಮೆ ದರದಲ್ಲಿ ಸಾಲವನ್ನು ಕೊಡುವಂತೆ Rural Credit Poilcy ನಮ್ಮ ರಾಜ್ಯದಲ್ಲಿ ಸಮರ್ಪಕವಾಗಿಲ್ಲ. ಹಳ್ಳಿಯ ಪ್ರದೇಶದಲ್ಲಿರುವಂಥ ರೈತರಿಗೆ ಇಲ್ಲಿಯವರೆಗೆ ನಾವು 100% crop loan ಕೊಟ್ಟಿದ್ದೇವೆ, ಎಲ್ಲಾ ರೈತರಿಗೆ 100% ಬ್ಯಾಂಕಿನಿಂದ ಅಥವಾ V.S.S.N.ಗಳಿಂದ ಅಥವಾ ಸಹಕಾರಿ ಸಂಘಗಳಿಂದ ಸಾಲ ಕೊಟ್ಟಿದ್ದೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಸರ್ಕಾರ

ಇದರ ಬಗ್ಗೆ ಒಂದು ಸಮೀಕ್ಷೆ ಮಾಡಲಿ. ನ್ಯಾಷನಲೈಸ್ಡ್ ಬ್ಯಾಂಕುಗಳಿಂದ ಇವತ್ತು ನಾವು ಎಷ್ಟು credit ಕೊಡುತ್ತಿದ್ದೇವೆ, co-operative society ಗಳಿಂದ ಎಷ್ಟು ಕೊಡುವುದಕ್ಕೆ ಸಾಧ್ಯವಾಗಿದೆ ಎನ್ನುವ ಬಗ್ಗೆ ಒಂದು ನಿರ್ದಿಷ್ಟವಾದಂಥ ಮಾಹಿತಿಯನ್ನು ತೆಗೆದುಕೊಳ್ಳಬೇಕು. ನನಗನ್ನಿಸಿದ ಮಟ್ಟಿಗೆ ಇಲ್ಲಿಯವರೆಗೆ ಶೇ.40 ರಷ್ಟು ರೈತರಿಗೆ ಮಾತ್ರ ಮುಟ್ಟಲಿಕ್ಕೆ ಸಾಧ್ಯವಾಗಿದೆ. ಇದರಿಂದ ಇವತ್ತು ರೈತ debt trapಗೆ ಸಿಕ್ಕಿ ಹಾಕಿಕೊಂಡಿದ್ದಾನೆ. ಅವನು ಸಾಹುಕಾರರ ಹತ್ತಿರ ಸಾಲ ತರಬೇಕು, ನಂತರ ದುಡಿದಿರತಕ್ಕಂಥದ್ದನ್ನು ಬಡ್ಡಿರೂಪದಲ್ಲಿ ಸಾಹುಕಾರರಿಗೆ ವಾಪಸ್ಸು ಕೊಡಬೇಕು. ರೈತನನ್ನು ಈ debt trapನಿಂದ ಹೊರಗೆ ತರಲಿಕ್ಕೆ ಇವತ್ತು ಸರ್ಕಾರದವರು ಏನು ಪಾಲಿಸಿಯನ್ನು ಮಾಡಿಕೊಂಡಿದ್ದಾರೆ? ಇವತ್ತು ಕೇಂದ್ರ ಸರ್ಕಾರದವರು 7% ಬಡ್ಡಿದರದಲ್ಲಿ ಸಾಲವನ್ನು ಕೊಡುತ್ತಿದ್ದಾರೆ. ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಒಂದು ಒಳ್ಳೆಯ ಸಂಗತಿಯನ್ನು ಹೇಳಿದರು. ಅದನ್ನು ನಾವು welcome ಮಾಡಿದೆವು. ಅದೇನೆಂದರೆ, ನ್ಯಾಷನಲೈಸ್ಡ್ ಬ್ಯಾಂಕುಗಳಿಂದ ಸಾಲ ಪಡೆಯತಕ್ಕಂಥ ರೈತರಿಗೂ ಕೂಡ 3% ಬಡ್ಡಿದರದಲ್ಲಿ ಸಾಲವನ್ನು ಕೊಡುತ್ತೇವೆ, 4% ವ್ಯತ್ಯಾಸ ಏನಿದೆ ಅದನ್ನು ನಾವು ಕೊಡುತ್ತೇವೆ ಎಂದು ಹೇಳಿದರು. ಆದರೆ ಇದುವರೆಗೆ ಆ ಬಗ್ಗೆ ಯಾವುದೇ ಆದೇಶ ಆಗಿಲ್ಲ. ಯಾವುದೇ ನ್ಯಾಷನಲೈಸ್ಡ್ ಬ್ಯಾಂಕುಗಳಿಗೆ ಇವತ್ತು ಸರ್ಕಾರದಿಂದ ಆದೇಶ ಅಥವಾ request ಹೋಗಿದೆಯೇ ಎಂದು ಕೇಳಿದರೆ ಬ್ಯಾಂಕುಗಳವರು ಬಂದಿಲ್ಲ ಎಂದು ಹೇಳುತ್ತಾರೆ. ಹೀಗಾದರೆ ಅದು implement ಆಗುವುದು ಹೇಗೆ? ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು, ಸಂಬಂಧಪಟ್ಟ ಸಚಿವರು ಈ ಬಗ್ಗೆ ಆದೇಶ ಹೊರಡಿಸಿ, ಸಂಬಂಧಪಟ್ಟ ಬ್ಯಾಂಕುಗಳಿಗೆ ಒಂದು circular ಕಳುಹಿಸಿ, ನಿಮ್ಮ ಬೇಡಿಕೆ ಏನಿದೆ, ನೀವು ಎಷ್ಟು ಜನ ರೈತರಿಗೆ ಸಾಲ ಕೊಟ್ಟಿದ್ದೀರಿ, 4% ಅನ್ನು ನಾವು reimburse ಮಾಡುತ್ತೇವೆ ಎಂದು ನೀವು commitment ಮಾಡಬೇಕು. ಆದರೆ, 6 ತಿಂಗಳಾದರೂ ನೀವು ಅದರ ಬಗ್ಗೆ ಇನ್ನೂ ಏನೂ ಕ್ರಮ ತೆಗೆದುಕೊಂಡಿಲ್ಲ. ಈ ಬಗ್ಗೆ ಫೆಬ್ರವರಿಯಲ್ಲಿ ಬಜೆಟ್ ಮಂಡನೆ ಮಾಡಿ ಇದುವರೆಗೆ 6 ತಿಂಗಳಾಯಿತು, ಇದುವರೆಗೆ ಯಾವುದೇ ಆದೇಶ ಆಗಿಲ್ಲ. ಅದು ಶೀಘ್ರದಲ್ಲಿ ಆಗಬೇಕು.

ಇನ್ನು ಎರಡನೆಯದಾಗಿ, ಗೊಬ್ಬರದ ಕೊರತೆಯ ಬಗ್ಗೆ ಈಗಾಗಲೇ ಸಾಕಷ್ಟು ಸದಸ್ಯರು ಹೇಳಿದ್ದಾರೆ, ಅದರ ಬಗ್ಗೆ ನಾನು ಜಾಸ್ತಿ ಹೇಳುವುದಕ್ಕೆ

ಹೋಗುವುದಿಲ್ಲ. ಇನ್ನು, seeds ಬಗ್ಗೆ ಹೇಳುವುದಾದರೆ, ಇವತ್ತು ನಾವು ರೈತರಿಗೆ ಯಾವ ರೀತಿಯಾಗಿ ಬಿತ್ತನೆ ಬೀಜಗಳನ್ನು ಕೊಡುತ್ತಿದ್ದೇವೆ? ಮುಂಗಾರು ಸಂಪೂರ್ಣವಾಗಿ ವಿಫಲವಾಗಿದೆ. ಬರದ ಬಗ್ಗೆ ಮಾತನಾಡುವಾಗ ನಮ್ಮ ಜಿಲ್ಲೆಯ ಪರಿಸ್ಥಿತಿ ಏನಿದೆ ಎನ್ನುವ ಬಗ್ಗೆ ನಾನು ಸೋಮವಾರ ಮಾತನಾಡುತ್ತೇನೆ. ಅದರ ಬಗ್ಗೆ ವಿರೋಧ ಪಕ್ಷದ ನಾಯಕರೂ ಕೂಡ ಸುದೀರ್ಘವಾಗಿ ಮಾತನಾಡುತ್ತಾರೆ. ಅವರು ನಮ್ಮ ಜಿಲ್ಲೆಗೆ ಬಂದಿದ್ದರು. ಆ ರೀತಿ ಬಂದಾಗ, ನಮ್ಮ ಜಿಲ್ಲೆಯಲ್ಲಿ ಎಷ್ಟು ಭೀಕರವಾಗಿರತಕ್ಕಂಥ ಬರಗಾಲವಿದೆ ಎನ್ನುವುದನ್ನು ಅವರು ನೋಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಪರಿಸ್ಥಿತಿ ಹೇಗಿದೆ ಎಂದರೆ ಮೊದಲು ಮಳೆ ಬರಲಿಲ್ಲ, 50% sowing ಆಗಲಿಲ್ಲ. ಬಿತ್ತಿರತಕ್ಕಂಥದ್ದೂ ಸಹ ಮಳೆ ಬಾರದೇ ಇದ್ದುದರಿಂದ ಬಾಡಿ ಹೋಯಿತು. ಇನ್ನೂ ಸ್ವಲ್ಪ ತೊಗರಿ ಬೆಳೆ ಇತ್ತು. ಮೊನ್ನೆ 20 ದಿನ ಸತತವಾಗಿ ಮಳೆ ಬಂದು ಅದೂ ಸಹ ಹಾಳಾಗಿ ಹೋಯಿತು. ಇವತ್ತು ನಮ್ಮಲ್ಲಿ ಹಸಿ ಬರಗಾಲವೂ ಇದೆ, ಒಣ ಬರಗಾಲವೂ ಇದೆ. ಇವತ್ತು ರೈತ ಖಾಲಿಯಾಗಿದ್ದಾನೆ, ಅವನ ಹತ್ತಿರ ಹಣ ಇಲ್ಲ, ಬಿತ್ತನೆ ಬೀಜಗಳಿಗೆ 75% subsidy ಕೊಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಕೃಷಿ ಸಚಿವರು ಈಗ ಸದನದಲ್ಲಿ ಇಲ್ಲ. ಯಾರು ನೋಟ್ ಮಾಡಿಕೊಳ್ಳು ತ್ತಿದ್ದಾರೋ ಗೊತ್ತಿಲ್ಲ. ಇವತ್ತು ಸರ್ಕಾರದ ಹತ್ತಿರ ಬಿತ್ತನೆ ಬೀಜ ಇಲ್ಲ.

ಅಧ್ಯಕ್ಷರು : ಈಶ್ವರಪ್ಪನವರೆ, ವಿಶ್ವೇಶ್ವರ ಹೆಗಡೆಯವರೆ ಕೃಷಿ ಸಚಿವರು ಎಲ್ಲಿದ್ದಾರೆ?

ಶ್ರೀ ಸಿದ್ದರಾಮಯ್ಯ : ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುವಾಗ ಕೃಷಿ ಮಂತ್ರಿಗಳೇ ಇಲ್ಲಿ ಇಲ್ಲವಲ್ಲ. ಬಹಳ ಗಂಭೀರವಾಗಿ ಚರ್ಚೆ ಮಾಡಬೇಕು ಎಂದರೆ ಹೇಗೆ ಸಾಧ್ಯ?

ಅಧ್ಯಕ್ಷರು : ಕೌನ್ಸಿಲ್‌ಗೆ ಹೋಗಿರಬಹುದು, ಕರೆಸೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ಕೌನ್ಸಿಲ್‌ನಲ್ಲಿದ್ದಾರೆ, ಬರುತ್ತಾರೆ. ಎರಡೂ ಕಡೆ ಚರ್ಚೆಯಾಗುತ್ತಿರುವುದು ನಿಮಗೆ ಗೊತ್ತಿದೆ. ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲಿದ್ದಾರೆ. ಕೃಷಿ ಮಂತ್ರಿಗಳು ಅಲ್ಲಿದ್ದಾರೆ. ಖಂಡಿತವಾಗಿ ಬರುತ್ತಾರೆ.

ಡಾ: ಶರಣ ಪ್ರಕಾಶ್ ಪಾಟೀಲ್ : ಅಧ್ಯಕ್ಷರೆ, ಇವತ್ತು ನಾನು ನಿಮ್ಮ ಗಮನ ಸೆಳೆಯಲು ಇಚ್ಛೆ ಪಡುವುದೇನೆಂದರೆ, ಇವತ್ತು ಬಿತ್ತನೆಗೆ ಬೇಕಾಗಿರ ತಕ್ಕಂಥ Seeds ಅನ್ನು ಸರ್ಕಾರ ಸಂಗ್ರಹ ಮಾಡಿಲ್ಲ. ಈಗ ಹಿಂಗಾರು ಇದೆ. ನಮ್ಮ ಪ್ರದೇಶದಲ್ಲಿ ಹಿಂಗಾರಿನಲ್ಲಿ ಬಿತ್ತನೆ ಮಾಡತಕ್ಕಂಥ ಕಡಲೆಯಾಗಿರ ಬಹುದು, ಜೋಳ ಆಗಿರಬಹುದು, ಸೂರ್ಯಪಾನ ಆಗಿರಬಹುದು ಈ ಯಾವುದೇ ಬಿತ್ತನೆ ಬೀಜಗಳು ಇವತ್ತು ಸರ್ಕಾರದಲ್ಲಿ ದಾಸ್ತಾನು ಇಲ್ಲ. ಯಾವುದೇ Seed Contingency Plan ಸರ್ಕಾರದ ಹತ್ತಿರ ಇಲ್ಲ. ನಾನು ಈ ಬಗ್ಗೆ ಟೀಕೆ ಮಾಡುತ್ತೇನೆ ಎಂದೇನೂ ಅಲ್ಲ. ನಮ್ಮ ಜಿಲ್ಲೆಯಲ್ಲಿ ಮುಂಗಾರಿನಲ್ಲಿ ಬಿತ್ತನೆ ಮಾಡುವುದಕ್ಕೆ ನಮ್ಮ ಜಿಲ್ಲೆಯಲ್ಲಿ ಬೀಜವಿಲ್ಲ ಎನ್ನುವ ಬಗ್ಗೆ ನಾನು ಒಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ಮಂತ್ರಿಗಳು, ಬೀಜ ದಾಸ್ತಾನು ಇದೆ ಎನ್ನುವ ತಪ್ಪು ಉತ್ತರ ಕೊಟ್ಟುಬಿಟ್ಟರು. ಆದರೆ ಜಿಲ್ಲೆಯಲ್ಲಿ ಬೀಜವೇ ಇರಲಿಲ್ಲ. ಇವತ್ತು ಇಲ್ಲಿ Agriculture Secretary ಕೂಡ ಕಾಣಿಸುತ್ತಿಲ್ಲ, Commissioner ಇರಬಹುದು. Seeds Corporationಗೆ Principal Secretary is the Chairman. ನಮ್ಮ ರಾಜ್ಯದಲ್ಲಿರುವ Seeds Corporationಗೆ Principal Secretary is the Chairman ನಮ್ಮ ರಾಜ್ಯದಲ್ಲಿ ಯಾವುದೇ pulses ಆಗಲಿ, oil seeds ಆಗಲಿ ವರ್ಷಕ್ಕೆ 30% seed replacement ಮಾಡಬೇಕು ಅನ್ನತಕ್ಕಂಥದ್ದನ್ನು scientific reseachಗಳು ಹೇಳುತ್ತವೆ. ಆದರೆ ನಮ್ಮ Seeds Corporation ಅದ್ಯಾವು ದನ್ನೂ planning ಮಾಡಿಲ್ಲ. ನಾವು replacement ಮಾಡುತ್ತಿರತಕ್ಕಂಥದ್ದು ಎಷ್ಟೆಂದರೆ only 10-15%. ನಮ್ಮ Karnataka State Seeds Corporationಗೆ ಏನಾಗಿದೆ? What is the problem with them? ಅವರು ಏಕೆ ಅಧಿಕಾರಿಗಳನ್ನು ಕರೆದು, ನಾವು ಹೆಚ್ಚು ಹಣ ಕೊಡುತ್ತೇವೆ, ನೀವು ಇಷ್ಟು seeds ಬೆಳೆದುಕೊಡಿ ಎಂದು ರೈತರಿಗೆ request ಮಾಡಿ ಎಂದು ಹೇಳುವುದಕ್ಕೆ ಏನು ಕಷ್ಟ ಎಂದು ನನಗೆ ಅರ್ಥವಾಗುತ್ತಿಲ್ಲ. It shows the Government is not interested. ನಮಗೆ ತೊಗರಿ ಬಿತ್ತನೆಗೆ ಬೀಜ ಕಡಿಮೆ ಬೀಳುತ್ತಿದೆ, ಕಡಲೆಗೆ ಬಿತ್ತನೆ ಬೀಜ ಕಡಿಮೆ ಬೀಳುತ್ತಿದೆ ಎಂದು ನಾವು K.D.P.ಯಲ್ಲಿ ಹೇಳುತ್ತೇವೆ. ಇವತ್ತು ಕಡಲೆಯನ್ನು ಬಿತ್ತನೆ ಮಾಡುವುದಕ್ಕೆ ಸರ್ಕಾರದ ಹತ್ತಿರ ಕಡಲೆ ಬಿತ್ತನೆ ಬೀಜವೇ ಇಲ್ಲ. Then,

who should think of this? ಇವತ್ತು Central Governmentನವರು complete ಆಗಿ seplaecmentಗೆ subsidy ಕೊಡಲು ತಯಾರಾಗಿದ್ದಾರೆ. ಆದರೆ ರಾಜ್ಯದ ಸರ್ಕಾರ ಅದರ ಉಪಯೋಗ ಮಾಡಿಕೊಳ್ಳಲು ತಯಾರಾಗಿಲ್ಲ. ಇವತ್ತು ಎಷ್ಟು ಬಿತ್ತನೆ ಬೀಜ ಬೇಕು, ಅದಕ್ಕೆ ಯಾವ ವ್ಯವಸ್ಥೆ ಮಾಡಬೇಕು ಎನ್ನುವುದನ್ನು Agriculture Minister ನೋಡಬೇಕಲ್ಲವೇ? ನೀವು ಬಿತ್ತನೆ ಬೀಜವನ್ನೇ ಕೊಡುವುದಕ್ಕೆ ಆಗುವುದಿಲ್ಲ ಎಂದರೆ ರೈತ ಏನು ಮಾಡಬೇಕು ಹೇಳಿ. These are the basic things. Seeds Corporationಗೆ Principal Secreatrayಯವರೇ Chairman ಆಗಿದ್ದಾರೆ. ಅವರು ಈಗ ಹೊಸದಾಗಿ ಬಂದಿರಬಹುದು. ಆದರೆ ಹಿಂದೆ ಇದ್ದಂಥವರು ಇದರ ಬಗ್ಗೆ ಗಮನ ಹರಿಸಬೇಕಿತ್ತಲ್ಲವೇ? ಬಿತ್ತನೆ ಬೀಜ ಸಮರ್ಪಕವಾಗಿ ಸಿಗುತ್ತಿಲ್ಲ. ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕು. ಈಗಲಾದರೂ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ರೈತರಿಗೆ ಹಿಂಗಾರಿಗೆ ಬಿತ್ತನೆ ಬೀಜದ ಬಹಳ ದೊಡ್ಡ ಅಭಾವವಾಗುತ್ತದೆ. ಈ ರಾಜ್ಯದಲ್ಲಿ ಒಂದು ದೊಡ್ಡ ಸಮಸ್ಯೆ create ಆಗುತ್ತದೆ. ಅದರ ಬಗ್ಗೆ ಸರ್ಕಾರ ಗಮನ ಹರಿಸಲೇಬೇಕು. ಈ ಬಗ್ಗೆ ಇವತ್ತು ತಾವು ಸೂಚನೆ ಕೊಡಬೇಕು, ಅಧ್ಯಕ್ಷರೆ. ಏಕೆಂದರೆ, now we have lost faith in this Government ಆದ್ದರಿಂದ, ನೋಡಿ ಅಧ್ಯಕ್ಷರೆ, ಪರಿಸ್ಥಿತಿ ಹೀಗಿದೆ ಎಂದು ಈಗ ನಾವು ನಿಮಗೇ request ಮಾಡಬೇಕು. ಇವತ್ತು ರೈತನ ಸಂಕಷ್ಟವನ್ನು ಪರಿಹರಿಸಲು ಸರ್ಕಾರ ಏನು ಸಹಾಯ ಮಾಡಬಹುದು ಎಂದರೆ ಇವತ್ತು ನಮ್ಮಲ್ಲಿ 70–80% agriculture rai-fed ಇದೆ. Irrigation facility ಯನ್ನು increase ಮಾಡುವುದಕ್ಕೆ ಆಯವ್ಯಯದಲ್ಲಿ ಹೆಚ್ಚು ಹಣವನ್ನು ಕೊಡುವ ಬದಲು, ನಾಲ್ಕೈದು ವರ್ಷಗಳಿಂದ ಕ್ರಮೇಣವಾಗಿ ಹಣ ಕಡಿಮೆ ಮಾಡಿಕೊಂಡು ಬಂದಿದ್ದಾರೆ. 2004–05ರಲ್ಲಿ 30% of the plan outlay was for Irrigation. ಆದರೆ ಇವತ್ತು ನಮ್ಮ plan outlay ಎಷ್ಟಿದೆ ಎಂದರೆ, it is only 14%. It shows what is the commitment of the Government towards the farmers. 14% ಹಣವನ್ನು plan outlay ಯಲ್ಲಿ ಇಟ್ಟುಬಿಟ್ಟು, ನಾವು ರೈತರ ಪರವಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದರೆ ಅದಕ್ಕೆ ನಾವು ಏನು ಹೇಳಬೇಕು ಎಂದು ಹೇಳಿ. The Government should

understand. ನೀವು ರೈತರ ಪರವಾಗಿ ಇದ್ದರೆ, Irrigation ನಲ್ಲಿ ಎಷ್ಟು outlay ಇದೆ, Power ನಲ್ಲಿ ಎಷ್ಟು outlay ಇದೆ, Rural Development ನಲ್ಲಿ ಎಷ್ಟು outlay ಇದೆ ಎನ್ನುವುದನ್ನು ನೋಡಬೇಕು. ನೀವು ಇವುಗಳಿಗೆ ಹಣ ಕೊಟ್ಟರಲ್ಲವೇ, ನೀವು ಏನು ಮಾಡುತ್ತಿದ್ದೀರಿ ಎನ್ನುವುದು ನಮಗೆ ಅರ್ಥವಾಗುವುದು. ಆದರೆ Irrigationಗೆ ಕಡಿಮೆ ಹಣ ಇಟ್ಟಿದ್ದೀರಿ. ನಲ್ಲಿ ಇವತ್ತು ಆಗುತ್ತಿವೆ. ಆದರೆ ರೈತನ ಭೂಮಿಗೆ ನೀರು ಹೋಗುತ್ತಿಲ್ಲ. ಏಕೆಂದರೆ, F.I.C.ಗಳು ಆಗಿಲ್ಲ. Allocation ಮಾಡಿರತಕ್ಕಂಥ ಹಣ ಖರ್ಚಾಯಿತು ಎಂದ ಮಾತ್ರಕ್ಕೆ project complete ಆಯಿತು ಎಂದು ಅರ್ಥವಲ್ಲ. ರೈತನ ಭೂಮಿಗೆ ನೀರು ತಲುಪಿದಾಗ ಮಾತ್ರ project complete ಎಂದು ನಾವು ಅರ್ಥ ಮಾಡಿಕೊಳ್ಳಬೇಕು. ಅಧಿಕಾರಿಗಳು review ಮಾಡುವಾಗ ಏನು ಮಾಡುತ್ತಾರೆಂದರೆ, ನಮ್ಮ outlay Rs.200 crores ಇತ್ತು, ಅದರಲ್ಲಿ Rs.198 crores ನಾವು reach ಆಗಿದ್ದೇವೆ, ಎಂದರೆ we have achieved ಎಂದು ಅರ್ಥವಲ್ಲ. ಇವತ್ತು ಎಷ್ಟು ಎಕರೆ ಭೂಮಿ ನೀರಾವರಿಯಾಗಿದೆ, ರೈತರಿಗೆ ಎಷ್ಟು ನೀರನ್ನು ಕೊಟ್ಟಿದ್ದೇವೆ ಎನ್ನುವುದನ್ನು ಯಾರೂ ನೋಡು ವುದಿಲ್ಲ. ಏಕೆಂದರೆ ಅಲ್ಲಿಗೆ ನೀರು ಮುಟ್ಟೇ ಇರುವುದಿಲ್ಲ. ಎಲ್ಲ ರೆಡಿಯಾಗಿದೆ, laterals ಆಗಿದೆ, distributories ಆಗಿವೆ, main channels ಆಗಿವೆ, ಆದರೆ F.I.C. ಆಗಿಲ್ಲ, ಅದಕ್ಕಾಗಿ ನೀರು ಮುಟ್ಟಿಲ್ಲ ಎಂದು ಹೇಳುತ್ತಾರೆ. ಅದು ಎಷ್ಟು ವರ್ಷದಿಂದ ಆಗಿಲ್ಲ ಎಂದು ನೋಡಿದರೆ, 5 ವರ್ಷಗಳಿಂದ ಆಗಿಲ್ಲ. ಇದನ್ನು ಯಾರು ನೋಡುತ್ತಿದ್ದಾರೆ? ಎಲ್ಲಾ ರೈತರ ಭೂಮಿಗೆ ನೀರು ಮುಟ್ಟಿದಾಗ ಮಾತ್ರ irrigation project complete ಆಗಿದೆ ಎನ್ನುವ ಕಡೆಗೆ ನೀವು ಗಮನ ಹರಿಸಬೇಕು. ವಿಶೇಷವಾಗಿ, ನಮ್ಮ ಭಾಗದಲ್ಲಿ ಕೃಷ್ಣ ನದಿ 'ಬಿ' scheme ನಲ್ಲಿ ತೆಗೆದುಕೊಳ್ಳಬೇಕಾಗಿರತಕ್ಕಂಥ ಬಗ್ಗೆ surplus water ಜಯಚಂದ್ರರವರು ಹೇಳಿದರು. ಅದಕ್ಕೆ ನಮ್ಮ ಹತ್ತಿರ ಯಾವುದೇ plan ಇಲ್ಲ. ಆಂಧ್ರ ಪ್ರದೇಶದಲ್ಲಿ ವರ್ಷಕ್ಕೆ 5000 ಕೋಟಿ ರೂ.ಗಳನ್ನು ನೀರಾವರಿಗಾಗಿ ಖರ್ಚು ಮಾಡುತ್ತಿದ್ದಾರೆ. ಆದರೆ, ನಾವು 3–4 ಸಾವಿರ ಕೋಟಿ ರೂಪಾಯಿಗಳನ್ನು ಸಹ ಖರ್ಚು ಮಾಡುವುದಕ್ಕಾಗುತ್ತಿಲ್ಲ. ಅದರಿಂದ ರೈತರಿಗೆ ಯಾವುದೇ ರೀತಿಯ ಸಹಾಯವಾಗುತ್ತಿಲ್ಲ. ನಮ್ಮ ರಾಜ್ಯದಲ್ಲಿ irrigation potential ಇಲ್ಲದಿರುವ ಜಾಗದಲ್ಲಿ ಕೃಷಿಕರಾಗಿ ಏನು

ಮಾಡಬಹುದು? ನಾವೇನು ಮಾಡುತ್ತಿದ್ದೇವೆ? Watershed development ಅಲ್ಲಿ ನಾವು ಒಂದು ವೇಳೆ ಇರತಕ್ಕಂಥ ನೀರನ್ನು ಸಂಗ್ರಹ ಮಾಡಿ, ಇರುವ ನೀರಿನ ಸದ್ಬಳಕೆಯಾಗಿ, ground water recharge ಮಾಡಿದರೆ ಅಲ್ಲಿಯ ರೈತರು bore-well ಹಾಕಿಕೊಂಡು ಸ್ವಲ್ಪ ಕೃಷಿ ಮಾಡಲಿಕ್ಕೆ ಸಾಧ್ಯವಿದೆ. ಅದರ ಬಗ್ಗೆ ನಮ್ಮ ರಾಜ್ಯದಲ್ಲಿ ಇನ್ನೂ ಬಹಳ ಕೆಲಸವಾಗಬೇಕಾಗಿದೆ. ಉದ್ಯೋಗ ಖಾತರಿ ಯೋಜನೆಯಡಿ ಸಾಕಷ್ಟು ಕೆಲಸ ಮಾಡಬಹುದು. There is no limit for the funds. ಆದರೆ, ಇವತ್ತು ಏಕೆ ಆ ಕೆಲಸವಾಗುತ್ತಿಲ್ಲವೆಂದರೆ, there is no commitment from the side of the Government to utilize the funds. ನಾನು ಟೀಕೆಗಾಗಿ ಇದನ್ನು ಹೇಳುತ್ತಿಲ್ಲ. ಏಕೆಂದರೆ, ನನಗೆ ನೋವಾಗಿ ಇದನ್ನು ಹೇಳುತ್ತಿದ್ದೇನೆ. ಸಾರ್ವಜನಿಕ ಹಿತಾಸಕ್ತಿಯಿಂದ ಸರ್ಕಾರ, ಜನ ಪ್ರತಿನಿಧಿಗಳೇನು ಕೆಲಸ ಮಾಡಬೇಕಾಗಿತ್ತು, ಅದರಲ್ಲಿ we have failed because the official machinery is not co-operating with the system. ಇದಕ್ಕೆ ಯಾರು ಕಾರಣರು? ಸರ್ಕಾರ ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ, ಯಾವ ಅಧಿಕಾರಿಗಳನ್ನು ಯಾವ ಸ್ಥಳಕ್ಕೆ ನೀವು ನೇಮಕ ಮಾಡುತ್ತೀರಿ ಎನ್ನುವುದು ಮುಖ್ಯ. ಏಕೆಂದರೆ, ಆಡಳಿತ ಮಾಡತಕ್ಕಂಥವರು ಪ್ರಾಮಾಣಿಕ ಅಧಿಕಾರಿಗಳನ್ನು ಒಳ್ಳೆಯ ಹುದ್ದೆಯಲ್ಲಿ, important positions ನಲ್ಲಿ ನೇಮಿಸಿದರೆ ಮಾತ್ರ ಸರಿಯಾಗಿ ಕೆಲಸ ಆಗಲಿಕ್ಕೆ ಸಾಧ್ಯವಿದೆ. ರಾಜ್ಯದಲ್ಲಿ ಕೊಳ್ಳೆ ಹೊಡೆಯತಕ್ಕಂಥ ಅಧಿಕಾರಿ ಗಳನ್ನು ತಂದು ಆಯಕಟ್ಟಿನ ಸ್ಥಳದಲ್ಲಿ ನೇಮಿಸಿದರೆ ರಾಜ್ಯದಲ್ಲಿ ಅಭಿವೃದ್ಧಿ ಯಾಗುತ್ತದೆಂದು ನೀವು ಹೇಗೆ expect ಮಾಡುತ್ತೀರಿ? ಮೊದಲು ನೀವು ನಿಮ್ಮ ಆಡಳಿತ ಯಂತ್ರವನ್ನು ಸರಿ ಮಾಡಿಕೊಳ್ಳಬೇಕಾದರೆ ಯಾರು ಪ್ರಾಮಾಣಿಕ ಅಧಿಕಾರಿಗಳಿದ್ದಾರೆ, ಯಾರು ಜನಪರವಾಗಿ ಕೆಲಸ ಮಾಡುವ ಅಧಿಕಾರಿಗಳಿದ್ದಾರೆ ಅಂಥವರನ್ನು ನೀವು ಆಯಕಟ್ಟಿನ ಸ್ಥಳಗಳಲ್ಲಿ, important position ಗೆ first ನೇಮಿಸಿ. ಆಗ ಮಾತ್ರ ಆಡಳಿತ ಸುಲಲಿತವಾಗಿ ನಡೆಯುವುದಕ್ಕೆ ಸಾಧ್ಯವಿದೆ. ಅದನ್ನು ನೀವು ಮಾಡುತ್ತಿಲ್ಲ. ನೀವು ಯಾವ ರೀತಿ transfers ಮಾಡುತ್ತಿದ್ದೀರಿ? What is the morale of the bureaucracy in Karnataka today? ಯಾವುದೇ ಒಳ್ಳೆಯ ಅಧಿಕಾರಿ ಇವತ್ತು ಇಲ್ಲಿ ಕೆಲಸ ಮಾಡುವುದಕ್ಕೆ ತಯಾರಿಲ್ಲ. ಏಕೆಂದರೆ, they

are not protected, thet are not given important positions. ಇದನ್ನು ಸರ್ಕಾರ ಸರಿಪಡಿಸಿಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಯವರು ಈಗ ಈ ಸದನದಲ್ಲಿಲ್ಲ. ಏಕೆಂದೆರ, ಕಳೆದ ಸಾರಿ ಅವರೇ Minor Irrigation Minister ಸಹ ಆಗಿದ್ದರು. ಆಗ ಈ ಇಲಾಖೆಗೆ ಸ್ವಲ್ಪ ಹಣ ಇತ್ತು. ಆದರೆ, ಹಿಂದಿನ ಸರ್ಕಾರಗಳಲ್ಲಿ ಎಷ್ಟು ಹಣವನ್ನು Minor Irrigation ಗೆ ಖರ್ಚು ಮಾಡಬಹುದಿತ್ತು? ಏಕೆಂದರೆ, ಯಾವ ಪ್ರದೇಶದಲ್ಲಿ ಇವತ್ತು Irrigation ಮಾಡಲಿಕ್ಕೆ ಸಾಧ್ಯವಿಲ್ಲ, ಇವತ್ತು ನಮ್ಮ tanks ಏನಿವೆ, ಇವತ್ತು Minor Irrigation ಗೆ ಸರ್ಕಾರ ಒತ್ತು ಕೊಡಬೇಕಾಗಿತ್ತು. ಇವತ್ತು ಗೋವಿಂದ ಕಾರಜೋಳರವರಂಥ senior Minister ಆ ಇಲಾಖೆಯನ್ನು ವಹಿಸಿ ಕೊಂಡಿದ್ದಾರೆ, ಆದರೂ ಆ ಇಲಾಖೆಗೆ ಹಣ ಇಲ್ಲ. ಮಾನ್ಯ ಯಡಿಯೂರಪ್ಪ ನವರು ವಿರೋಧ ಪಕ್ಷದಲ್ಲಿದ್ದಾಗ Minor Irrigation ಬಗ್ಗೆ ಬಹಳಷ್ಟು ಹೇಳಿದರು. ಇವತ್ತು Minor Irrigation ಗೆ ಒತ್ತು ಕೊಟ್ಟರೆ ಅಭಿವೃದ್ಧಿ ಮಾಡಿ ರೈತರಿಗೆ ಹೆಚ್ಚು ಸಹಾಯ ಮಾಡುವುದಕ್ಕೆ ಆಗುತ್ತದೆ. ಆದರೆ, Minor Irrigation is completely neglected today. Minor Irrigation is noe of the important portfolios or department where farmers can be helped. ಆದರೆ, Minor Irrigation ಈ ಸಲ ಎಷ್ಟಿದೆ? ಕಳೆದ ಸಾರಿ ಮಾಡಿದ ಕೆಲಸದ ಬಿಲ್‌ಗೆ payment ಮಾಡುವುದಕ್ಕೂ ಸಹ ಇವತ್ತು allocation ಇಟ್ಟಿಲ್ಲ. ಈ ವರ್ಷ ಹೊಸದಾಗಿ ಯಾವುದೇ ಕಾಮಗಾರಿಯನ್ನೂ ತೆಗೆದುಕೊಳ್ಳತಕ್ಕಂಥ ಸ್ಥಿತಿಯಲ್ಲಿ Minor Irrigation Department ಇಲ್ಲ. ಜಿಲ್ಲಾ ಪಂಚಾಯಿತಿ ಕೆರೆಗಳಿಗಾಗಿ ಎಷ್ಟು ಹಣ ಕೊಡುತ್ತಿದ್ದೀರಿ? ಕಳೆದ ವರ್ಷ 50 ಕೋಟಿ ರೂ. ಕೊಡುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದಿರಿ. ಆದರೆ, ಅದ್ಯಾವುದೂ ಖರ್ಚಾಗಿಲ್ಲ. Action plan, tender ಆಯಿತು, ಆದರೆ, ಆ ಹಣ ಯಾವುದೂ ಖರ್ಚಾಗಿಲ್ಲ. ಇನ್ನೂ ಜಾಸ್ತಿ ಹಣವನ್ನು Minor Irrigation ಗೆ, ಜಿಲ್ಲಾ ಪಂಚಾಯಿತಿ tanks and Minor Irrigation tanks ಗೆ ಕೊಟ್ಟರೆ ಯಾವ ಪ್ರದೇಶದಲ್ಲಿ Irrigation ಇಲ್ಲ ಅಂಥ ಪ್ರದೇಶದಲ್ಲಿ ರೈತರಿಗೆ ಸಹಾಯ ಮಾಡಲಿಕ್ಕೆ ಸಾಧ್ಯವಿದೆ. ಅದಕ್ಕೆ ಇವತ್ತು ಹೆಚ್ಚಿನ ಆದ್ಯತೆ ಕೊಡಬೇಕು. ಇನ್ನೊಂದು ಪ್ರಮುಖವಾದ ಅಂಶದ ಬಗ್ಗೆ ಈ ಸದನದಲ್ಲಿ

ಚರ್ಚೆಯಾಗಬೇಕು. ನಾವೆಲ್ಲಾ ಇಲ್ಲಿ ಸೇರಿ ಒಂದು Comprehensive Crop Insurance Policyಯನ್ನು ತರತಕ್ಕಂಥದ್ದಾಗಬೇಕು. ಈಗ ಇದು ಕೇಂದ್ರ ಸರ್ಕಾರದಲ್ಲಿದೆ. ಇವತ್ತು Crop Insurance Policy ಯಲ್ಲಿ ಎಷ್ಟು ಲೋಪದೋಷಗಳಿವೆ? ನಾವು ಎಷ್ಟೇ ಹೇಳಿದರೂ, ಕೂಡ, ಇವತ್ತು ಸರ್ಕಾರ ನಡೆಸತಕ್ಕಂಥವರು ಇದರ ಬಗ್ಗೆ ಗಮನ ಕೊಡಬೇಕು. ನಾವು ಯಾವ ರೀತಿ ನಿರ್ಧಾರ ಮಾಡುತ್ತೇವೆ? ಇವತ್ತು ಬರಗಾಲದಿಂದ, ಅತಿವೃಷ್ಟಿಯಿಂದ ರೈತನನ್ನು protect ಮಾಡುವುದಕ್ಕೆ ಯಾವುದಾದರೊಂದು ಒಂದು instrument ಇದ್ದರೆ that is only Crop Insurance. ಬೆಳೆ ಹಾನಿಯಾಗಿದ್ದರೆ ಅದಕ್ಕೆ ಹಣ ಕೊಡತಕ್ಕಂಥ ಸಾಮರ್ಥ್ಯ ಯಾವ ಸರ್ಕಾರಕ್ಕೂ ಇರುವುದಿಲ್ಲ. ನಾವಿಲ್ಲ ವಿರೋಧ ಪಕ್ಷದಲ್ಲಿದ್ದೇವೆಂದು ರೈತರಿಗೆ ಬೆಳೆ ಹಾನಿ ಸಲುವಾಗಿ ಅಷ್ಟು ಕೊಡಿ, ಇಷ್ಟು ಕೊಡಿ ಎಂದು ಹೇಳಬಹುದೆ ವಿನಾ ಯಾವ ಸರ್ಕಾರಕ್ಕೂ ಆ ಸಾಮರ್ಥ್ಯವಿರುವುದಿಲ್ಲ. ಆದರೆ, ನಾವು ರೈತರನ್ನು protect ಮಾಡಲೇಬೇಕೆಂದು ನಮ್ಮ commitment ಇದ್ದರೆ, ಈ Crop Insurance Policy ಏನಿದೆ, ಇದಕ್ಕೆ ಇನ್ನೂ ಒಳ್ಳೆಯ ರೀತಿಯಿಂದ certain changes ಅನ್ನು ತರಬೇಕಾಗಿದೆ. ಈ Crop Insurance Policy ಯಲ್ಲಿ ಏನು ಲೋಪದೋಷಗಳಿವೆ? ಯಾವುದೇ ಒಬ್ಬ ರೈತ ಸರ್ಕಾರಿ ಬ್ಯಾಂಕ್‌ನಿಂದ ಸಾಲ ಪಡೆದರೆ automatically ಅವನು Crop Insurance ನಲ್ಲಿ Cover ಆಗುತ್ತಾನೆ. ಆದರೆ, ಇನ್ನೂ 60% ರೈತರು ಆ Credit Policy ಯಿಂದ ಏನು ಹೊಗಿದ್ದಾರೆ, ಅವರು ನೇರವಾಗಿ ಹೋಗಿ ಬ್ಯಾಂಕ್‌ನಲ್ಲಿ premium ಕಟ್ಟಬೇಕು. ಆ premium ಕಟ್ಟಿದ ಮೇಲೆ ಈ crop loss ಆಗಿದೆ ಎಂದು ಯಾವ ರೀತಿ ನಿರ್ಧಾರ ಮಾಡುತ್ತಾರೆ ಎಂಬುದನ್ನು ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ. ಅವರು every year crop cutting experiment ಎಂದು ಮಾಡುತ್ತಾರೆ. ಆ crop cutting experiment ನಲ್ಲಿ ಏನು ಇಳುವರಿ ಬರುತ್ತದೆ, ಅದನ್ನು ಒಂದು baseline ಆಗಿ ಇಟ್ಟುಕೊಳ್ಳುತ್ತೇವೆಂದು ಹೇಳುತ್ತಾರೆ. ಏಕೆಂದರೆ, ಈ ಬಗ್ಗೆ ನಾನು ಅಧಿಕಾರಿಗಳ ಜೊತೆ ಬಹಳಷ್ಟು ಸಲ ಜಗಳವಾಡಿದ್ದೇವೆ. ಅವರು, "ನಾವು 10 years average ತೆಗೆದು ಕೊಳ್ಳುತ್ತೇವೆ, ನಾವು crop cutting experiment ಏನು ಮಾಡುತ್ತೇವೆ, ಆ ನಲ್ಲಿ ಬಂದಿರುವ ಇಳುವರಿ, will be a threshold

yield." ಎಂದು ಹೇಳುತ್ತಾರೆ. ಅವರು fix ಮಾಡಿರುವ threshold yield ಅದಕ್ಕಿಂತ 50% less ಆದರೆ ಮಾತ್ರ crop insurance claim ಮಾಡುತ್ತಾರಂತೆ. ನಾನೊಂದು ಉದಾಹರಣೆ ಕೊಡುವುದಾದರೆ, ನಮ್ಮ ಭಾಗದಲ್ಲಿ ತೊಗರಿ ಬೆಳೆಯನ್ನು ಒಂದು ಎಕರೆ dry land ನಲ್ಲಿ ಸರಾಸರಿ 4–5 ಕ್ವಿಂಟಲ್ ಬೆಳೆಯುತ್ತೇವೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ, ಆ Crop Insurance ನವರ threshold value ಏನಿದೆ ಅಂದರೆ ನಿಮಗೆ ಅದು ಆಶ್ಚರ್ಯವಾಗಬಹುದು. ಅದರಲ್ಲಿ 150 ಕೆ.ಜಿ. ಮಾತ್ರ ಅವರ threshold value ಆಗಿದೆ. ಅಂದರೆ, 70–80 ಕೆ.ಜಿ.ಗಿಂತ ಕಡಿಮೆ ಆಯಿತು ಎಂದಾಗ ಮಾತ್ರ ನಿಮಗೆ claim ಆಗುತ್ತದೆ. This is totally unscientific. ನಿಮ್ಮ ಹತ್ತಿರ Agricultural Experts ಇಲ್ಲವೇ? ನಿಮ್ಮ ಪಾಲಿಸಿ ಏನಿದೆ, threshold value ಬಗ್ಗೆ ನೀವು ಯಾವ ರೀತಿಯಾಗಿ fix ಮಾಡಬೇಕೆನ್ನುತ್ತೀರಿ, ಅದು scientific ಆಗಿರಬೇಕು. ನಿಮ್ಮ Agriculture Scientists ರವರನ್ನು ಕೇಳಿ. ಏನೆಂದರೆ, ಸರಾಸರಿ 4 ಅಥವಾ 5 ಕ್ವಿಂಟಲ್ ಅನ್ನು threshold value ಎಂದು fix ಮಾಡಿದರೆ, ಅದರಲ್ಲಿ ಏನಾದರೂ ಬೆಳೆ ಕಡಿಮೆಯಾದರೆ, ನೀವು insurance claim ಮಾಡಬಹುದೆನ್ನುವ ಪಾಲಿಸಿ ತರತಕ್ಕಂಥ ಅವಶ್ಯಕತೆ ನಮ್ಮ ರಾಜ್ಯ ಸರ್ಕಾರದ್ದಿದೆ. ಇವತ್ತು ವಿಶೇಷವಾಗಿ, ಕೇಂದ್ರ ಸರ್ಕಾರದ್ದೂ ಇದರಲ್ಲಿ ಪಾಲಿದೆ. ನಾವೂ ಸಹ ಕೇಂದ್ರ ಸರ್ಕಾರಕ್ಕೆ ಮನವಿ ಮಾಡುತ್ತೇವೆ. ಹೋಬಳಿ ಮಟ್ಟದಲ್ಲಿರತಕ್ಕಂಥ ಏರಿಯಾ ಏನಿದೆ ಅದನ್ನು ಇನ್ನೂ ಕಡಿಮೆ ಮಾಡಿ ಅದನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನಾವು ತರಬೇಕು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ತಂದಾಗ ಮಾತ್ರ ಇನ್ನೂ accurate ಆಗಿ ಎಲ್ಲೆಲ್ಲಿ loss ಆಗಿದೆ, ಆ ಏರಿಯಾದಲ್ಲಿ ಕೊಡಲಿಕ್ಕೆ ಸಾಧ್ಯವಿದೆ. ಮಾನ್ಯ ಅಧ್ಯಕ್ಷರೆ, ನಾನು ನಮ್ಮ ಪಕ್ಷದ ಕಡೆಯಿಂದ ವಿಶೇಷವಾಗಿ Rural Development ಬಗ್ಗೆ ಮಾತನಾಡುತ್ತಿದ್ದೇನೆ. ಅದಕ್ಕೆ ನೀವು ಸಹಕಾರ ಕೊಡಬೇಕು. ನಾನು ಯಾವುದೇ ರಾಜಕೀಯ ಉದ್ದೇಶದಿಂದ ಮಾತನಾಡುತ್ತಿಲ್ಲ.

ಅಧ್ಯಕ್ಷರು : ನೀವು ಒಳ್ಳೆಯ ವಿಚಾರದ ಬಗ್ಗೆ ಮಾತನಾಡುತ್ತಿದ್ದೀರಿ, ನಾನು ಇಲ್ಲವೆಂದು ಹೇಳುತ್ತಿಲ್ಲ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಸದಸ್ಯರು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿದ್ದರು. ಇವತ್ತು ಮಾತನಾಡುವುದಕ್ಕೆ ತಯಾರಾಗಿ ಬಂದಿದ್ದಾರೆ. ಅವರಿಗೆ ಹೆಚ್ಚು ಸಮಯ ಕೊಡಿ.

ಅಧ್ಯಕ್ಷರು : ನಿಮ್ಮ ಪಕ್ಷದ ಉಳಿದ ಸದಸ್ಯರ ಸಮಯವನ್ನು ಸ್ವಲ್ಪ ಕಡಿಮೆ ಮಾಡಿಕೊಳ್ಳಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಯಾವುದೇ ವಿಷಯವನ್ನು ಹೇಳುವ ಸಂದರ್ಭದಲ್ಲಿ ನಾನು public interest ಇರುವ ವಿಷಯವನ್ನು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆಯೇ ಹೊರತು ಸರ್ಕಾರವನ್ನು ಟೀಕೆ ಮಾಡುವುದು ನನ್ನ ಉದ್ದೇಶವಲ್ಲ. APMC Act ಬಗ್ಗೆ ಹೇಳುವುದಾದರೆ, ಮಾನ್ಯ ಡಿ.ಆರ್. ಪಾಟೀಲ್‌ರವರು ಈಗ ಸದನದಲ್ಲಿರಬೇಕಾಗಿತ್ತು, ಆದರೆ, ದುರಾದೃಷ್ಟವಶಾತ್ ಅವರು ಆರಿಸಿ ಬಂದಿಲ್ಲ. APMC Act ಗೆ amedment ತಂದ ಮೇಲೆ ಇನ್ನೂ ಕೂಡ markets ನಲ್ಲಿ ರೈತರ payment ಗೆ delay ಆಗುತ್ತಿದೆ. ಒಂದು ದಿನ ತಡವಾದರೆ one percent additional ರೈತರಿಗೆ ಕೊಡಬೇಕೆಂದು ಕಾನೂನಿದೆ. ಆದರೆ, ಅದು implement ಆಗುತ್ತಿಲ್ಲ. ಒಂದು ವೇಳೆ 5 ದಿನ payment ಮಾಡುವುದಕ್ಕೆ ತಡವಾದರೆ 5% additional ಕೊಡಬೇಕೆನ್ನುವ ಕಾನೂನಿದೆ. ಆದರೆ, ಆ ಕಾನೂನು ಕಾರ್ಯರೂಪಕ್ಕೆ ಬರುತ್ತಿಲ್ಲ. ಏಕೆ ಕಾರ್ಯರೂಪಕ್ಕೆ ಬರುತ್ತಿಲ್ಲವೆಂದರೆ, ಸಂಬಂಧಪಟ್ಟ ಮಂತ್ರಿಯವರು ಆ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ. ಹಾಗೆಯೇ, ಮಧ್ಯವರ್ತಿಗಳು ದಲ್ಲಾಳಿ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಇದನ್ನು ನಿಲ್ಲಿಸಿದರೆ ಒಂದು ವರ್ಷದಲ್ಲಿ 1000 ದಿಂದ 1500 ಕೋಟಿ ರೂಪಾಯಿಗಳನ್ನು ರೈತರಿಂದ ಉಳಿಸಬಹುದು. ಇರುವ ವ್ಯವಸ್ಥೆಯಲ್ಲಿಯೇ ನಾವು ಹಣವನ್ನು ರೈತರ ಕೈಗೆ ಮುಟ್ಟಿಸುವಂಥ ವ್ಯವಸ್ಥೆಯನ್ನು ನಮ್ಮ ಕೈಯಲ್ಲಿರುವ ಹಾಗೆ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಅದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಇವತ್ತು Revenue Minister ರವರು ಸದನದಲ್ಲಿಲ್ಲ. ಆದರೆ, ಮಾನ್ಯ ಅಧ್ಯಕ್ಷರಾದ ತಾವು ಹಿಂದೆ Revenue Minister ಆಗಿದ್ದಿರಿ. ಆಗ ನಾನೊಂದು ಸಲಹೆ ಕೊಟ್ಟಿದ್ದೆ. ಇವತ್ತು ಮುಖ್ಯಮಂತ್ರಿಯವರು ಸದನದಲ್ಲಿಲ್ಲ. ರೈತರನ್ನು ಶ್ರೀಮಂತರನ್ನಾಗಿ ಮಾಡಬೇಕಾದರೆ ಒಂದು ಉಪಾಯವಿದೆ. ಸರ್ಕಾರ ಒಂದು ಪೈಸೆ ಸಹ ಖರ್ಚು ಮಾಡದೆ, ಸರ್ಕಾರ ಏನೂ ಕೆಲಸ ಮಾಡದೆ ರೈತರನ್ನು ಶ್ರೀಮಂತರನ್ನಾಗಿ ಮಾಡಬಹುದು.

ಯಾವ ರೀತಿ ಮಾಡಬಹುದೆಂದರೆ, ಗ್ರಾಮೀಣ ಪ್ರದೇಶದಲ್ಲಿರುವ ಕೃಷಿ ಭೂಮಿಯ ಬೆಲೆ ಏನು ಇದೆ ಎಂಬುದನ್ನು ಗಮನಿಸಬಹುದು. ಗುಲಬರ್ಗಾ ಪ್ರದೇಶದ ಯಾವುದೇ ಹಳ್ಳಿಗೆ ಹೋಗಿ ಅಲ್ಲಿ Land Guidance Value ಏನಿದೆ ಮತ್ತು ಬೆಂಗಳೂರಿನಲ್ಲಿ ಏನು Land Guidance Value ಏನಿದೆ ನೋಡಿ. ಗುಲಬರ್ಗಾದಲ್ಲಿ land guidance value 40000 ರೂ. ಸಹ ಇಲ್ಲ. ರೈತರನ್ನು ಶ್ರೀಮಂತರನ್ನಾಗಿ ಮಾಡಬೇಕೆಂಬ ಇಚ್ಛೆ ನಿಮಗಿದ್ದರೆ ನೀವು ಏನೂ ಕೆಲಸ ಮಾಡದೆಯೇ ಮಾಡಬಹುದು. ಏನೆಂದರೆ, land guidance value 40000 ರೂ. ಇದೆ. ರೈತ ತನಗೆ ಸಾಲ ಬೇಕಾಗಿದ್ದರೆ ತನ್ನ ಭೂಮಿಯನ್ನು ಅಡ ಇಡುವುದಕ್ಕೆ ಹೋದರೆ ಬ್ಯಾಂಕ್‌ನಲ್ಲಿ ಅದಕ್ಕೆ 40,000 ರೂ. ಬೆಲೆ ಕಟ್ಟುವುದಿಲ್ಲ. ಆದರೆ, Market value ಏನಿದೆ? 2 ಲಕ್ಷ ರೂ.ಗಳಿಗಿಂತ ಕಡಿಮೆ ಎಲ್ಲಿಯೂ ಭೂಮಿ ಸಿಗುವುದಿಲ್ಲ. Minimum 1.5 - 2.00 lakhs ರೂ. ಎಲ್ಲಾ ಕಡೆ ಬೆಲೆ ಇದೆ. ಆದರೆ, ಸರ್ಕಾರ fix ಮಾಡಿರುವ land guidance value ಮಾತ್ರ 40000 ರೂ. ಇದೆ. ಈ land guidance value ಅನ್ನು fix ಮಾಡುವುದು ಯಾರು ಎಂಬುದೇ ಅರ್ಥವಾಗಿಲ್ಲ. ನಾನೂ ಕೂಡ ತಿಳಿದುಕೊಳ್ಳಲು ಪ್ರಯತ್ನ ಮಾಡಿದ್ದೇನೆ. ಮಾನ್ಯ ಸಭಾಧ್ಯಕ್ಷರೆ, ತಾವೂ ಸಹ Revenue Minister ಆಗಿದ್ದಾಗ 'who is the fixing authority?' ಎಂದು ನಾನು ಕೇಳಿದ್ದಕ್ಕೆ ಅವರು ತಹಶೀಲ್ದಾರ್‌ರವರ ಒಂದು ಕಮಿಟಿ ಇರುತ್ತದೆ, ಅವರು ಎಲ್ಲಾ ರೈತರನ್ನು ಕರೆದು ಅವರಿಗೆ ಏನು ಸಮಂಜಸವಾಗುತ್ತದೆ ಅದನ್ನು ಅವರು ರೆಕಮಂಡ್ ಮಾಡಬೇಕು, ನಂತರ District Registrar ರವರ ಕಮಿಟಿಯಲ್ಲಿ ಅದು ಪಾಸ್ ಆಗಿ State Level Committee ಯಲ್ಲಿ ಪಾಸ್ ಆದರೆ land guidance value ಅನ್ನು increase ಮಾಡುತ್ತೇವೆಂದು ಹೇಳಿದರು. ನಾನು ನಮ್ಮ constituency ಯಲ್ಲಿ ಆ procedure follow ಮಾಡಿದೆ. ತಹಶೀಲ್ದಾರ್, ಎಲ್ಲಾ ರೈತರನ್ನು ಕರೆಸಿ land guidance value ಅನ್ನು increase ಮಾಡಬೇಕೆಂದು ಮೀಟಿಂಗ್ ಮಾಡಿ ಅದನ್ನು District Registrar ರವರಿಗೆ ಕಳುಹಿಸಿ ಇಲ್ಲಿಗೆ ಬಂದರೂ ಏನೂ ಆಗಿಲ್ಲ. ತಾವು ಸಹ ಆಗ reply ಕೊಟ್ಟಿದ್ದೀರಿ, ಏನೆಂದರೆ, land guidance value ಅನ್ನು

increase ಮಾಡಿದರೆ ರೈತರಿಗೆ ತೊಂದರೆಯಾಗುತ್ತದೆ. Agricultural land transfer ಗೆ stamp duty 6% ಇದೆ. ಅದನ್ನು ನೀವು 3% ಗೆ ಇಳಿಸಿ. ಆಮೇಲೆ land guidance value ಅನ್ನು increase ಮಾಡಿ. ಅದರಿಂದ ಸರ್ಕಾರದ ಬೊಕ್ಕಸಕ್ಕೆ ಯಾವುದೇ ಹಾನಿಯಾಗುವುದಿಲ್ಲ. You will not loose a single pie. ರೈತರ net value asset ಏನಿದೆ, ಅದು 40,000 ರೂ. ನಿಂದ 2 ಲಕ್ಷ ರೂ.ಗೆ ಏರಿಸಬಹುದು and there is a true market value. ಅಂದರೆ ರೈತರನ್ನು ಶ್ರೀಮಂತರನ್ನಾಗಿ ಮಾಡುವ instrument ನಿಮ್ಮ ಕೈಯಲ್ಲಿದೆ. ಆದರೆ, ಆ ಬಗ್ಗೆ ಯಾರೂ ಗಮನಹರಿಸಲಿಲ್ಲ. ನಾನು ಅದರ ಬಗ್ಗೆ ನಿಮಗೂ ಸಹ ಮನವಿ ಮಾಡಿದ್ದೆ. ಆಗ ಏಕೋ ತಾವು ಮನಸ್ಸು ಮಾಡಲಿಲ್ಲ. ತಾವು ಈಗಿರುವ ಸರ್ಕಾರಕ್ಕಾದರೂ directions ಕೊಡಿ. ಏನೆಂದರೆ, Land Guidance Value increase ಮಾಡಿ, stamp duty reduce ಮಾಡಿದರೆ ಸರ್ಕಾರಕ್ಕೇನೂ ಹಾನಿಯಾಗುವುದಿಲ್ಲ. ರೈತ ತನ್ನ ಮನೆಯಲ್ಲಿ ಇದ್ದಲ್ಲಿಯೇ ಶ್ರೀಮಂತನಾಗುತ್ತಾನೆ. ಅವನಿಗೆ ಸಾಲ ಬೇಕಿದ್ದರೆ ಬ್ಯಾಂಕ್‌ಗೆ ಹೋಗಿ ಭೂಮಿ ಅಡ ಇಟ್ಟರೆ ಅವನಿಗೆ ಜಾಸ್ತಿ ಸಾಲ ಸಿಗುತ್ತದೆ. ಆಗ ಅವನು productive agriculture ಮಾಡಬಹುದು. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ನಮ್ಮ agriculture growth ಏಕೆ ಆಗುತ್ತಿಲ್ಲವೆಂದರೆ agriculture ನಲ್ಲಿ, invest ಮಾಡುವುದಕ್ಕೆ ಯಾರೂ ರೆಡಿ ಇಲ್ಲ. There is no investment coming in agriculture. ಅದಕ್ಕೆ ನಾವೇನು ಮಾಡಬೇಕು? APMC Act amendment ಮಾಡುವಾಗ ನಾನು ಕೃಷ್ಣ ಬೈರೇಗೌಡರು ಬಹಳ support ಮಾಡಿದೆವು. ಯಾರಾದರೂ investors ಮುಂದೆ ಬಂದು agriculture ಗೆ invest ಮಾಡಿದರೆ ಇರುವ productive goods ಬೆಳೆದು ಅಂತರರಾಷ್ಟ್ರೀಯ ಮಾರುಕಟ್ಟೆ ಮತ್ತು ಬೇರೆ ಬೇರೆ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಿದರೆ ನಮ್ಮ ರೈತರಿಗೆ ಸ್ವಲ್ಪ ಹೆಚ್ಚು ಹಣ ಸಿಗುತ್ತದೆಂದು ಭಾವಿಸಿದರೆ ಇದುವರೆಗೂ ಯಾರೂ ಮುಂದೆ ಬರಲಿಲ್ಲ. ಏಕೆಂದರೆ there is no initiative from the side of the Government. Government should take initiative. ತನ್ನಷ್ಟಕ್ಕೆ ತಾನೆ ಎಲ್ಲಾ ಬದಲಾವಣೆಯಾಗುತ್ತದೆ ಎಂದರೆ ಹೇಗೆ? ಮುಂದೆ ಬದಲಾವಣೆ ಬರುತ್ತದೆ.

Change is inevitable. Nobody can stop change. But until and unless somebody tries change cannot be faster. ನಾವು ಪ್ರಯತ್ನ ಮಾಡಿದರೆ ಬದಲಾವಣೆಗೆ ಬೇಗ ಬರುತ್ತದೆ. ನಾವು ಪ್ರಯತ್ನ ಮಾಡದಿದ್ದರೆ ಬದಲಾವಣೆ ಬರುವುದಕ್ಕೆ ಇನ್ನೂ ಹತ್ತು ವರ್ಷ ಬೇಕು. ಅದಕ್ಕೆ ಸರ್ಕಾರ intervene ಆಗಬೇಕು. Community farming ಆಗಲಿ, contract farming ಆಗಲಿ, what is the role of the Government? What is the effort of the Government in this? Government is not making any effort in this. They should try to make some effort in this and bring certain changes. 70% ಜನ agriculture ನಲ್ಲಿ involve ಆಗಿದ್ದಾರೆಂದು ಹೇಳುತ್ತಾರೆ. What is the contribution to GSDP? It is very less. ಅಂದರೆ, there is a need to diversify from agriculture. ನಾವು ಎಷ್ಟು ಜನ ಕೃಷಿಯಲ್ಲಿ ಕೆಲಸ ಮಾಡುತ್ತಿದ್ದೇವೆ, ಅಷ್ಟು ಜನ ಕೆಲಸ ಮಾಡುವ ಅವಶ್ಯಕತೆ ಇಲ್ಲ. It can be done by a few people. Human Resources ಏನಿದೆ ಅದನ್ನು ಬೇರೆ ಕಡೆ diversify ಮಾಡುವ ಅಗತ್ಯವಿದೆ. ಅದಕ್ಕೆ ಸರ್ಕಾರ ಯಾವ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ? Industrialization is necessary and what incentives the Government is giving? ಕೇವಲ ಬೆಂಗಳೂರಿಲ್ಲಿ ಕೈಗಾರಿಕೆಗಳು ಬಂದರೆ ಸಾಲದು. ತಮಿಳುನಾಡು, ಕೇರಳದಲ್ಲಿ ನೋಡಿ. ಅಲ್ಲಿ ಒಂದೊಂದು district ನಲ್ಲಿ ಒಂದೊಂದು industry open ಮಾಡುವುದಕ್ಕೆ ಆದ್ಯತೆ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ಬಿಟ್ಟರೆ ಎಲ್ಲಿಯೂ industry ಬೆಳೆಯಲಿಕ್ಕೆ ಆಗಿಲ್ಲ. ಏಕೆಂದರೆ, ಸರ್ಕಾರ ಅವರಿಗೆ ಯಾವುದೇ incentive ಕೊಟ್ಟಿಲ್ಲ. ನಂಜುಂಡಪ್ಪ ವರದಿ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ industry open ಮಾಡುವುದಕ್ಕೆ ಏನು benefits ಕೊಟ್ಟಿದ್ದೀರಿ? ನಾನು ಮೊನ್ನೆ Industry Minister ರವರ ಜೊತೆ ಮಾತನಾಡಿದೆ. ಅವರು 2009–2014 New Industrrial Policy- ಎನ್ನುವ ಒಂದು document ತಂದಿದ್ದಾರೆ. They are giving certain incentives. There is no incentive in that ಅದರಲ್ಲಿ ಏನೂ major incentives ಇಲ್ಲ. ಯಾವ ಕೈಗಾರಿಕೆಗಳೂ ಬರುವುದಿಲ್ಲ. -You give sales tax exemption. ಒಂದು

ವೇಳೆ ಕೈಗಾರಿಕೆಗಳು ಆ ಪ್ರದೇಶದಲ್ಲಿ ಬರಬೇಕೆಂದರೆ ಒಂದೇ ಒಂದು ಮಾರ್ಗ ಇದೆ. ಅದೇನೆಂದರೆ, you give them tax holiday for five years or three years or two years or tax deferment for at least four to five years. ಅಂದರೆ ಮಾತ್ರ ಕೈಗಾರಿಕೆಗಳು ಬರುತ್ತವೆ. ಇಲ್ಲದಿದ್ದರೆ ಬರುವುದಿಲ್ಲ. ನಾನು ಮಂತ್ರಿಗಳನ್ನು ಕೇಳಿದ್ದಕ್ಕೆ ಅವರು ಸರ್ಕಾರಕ್ಕೆ ಹಣವೇ ಬರುವುದಿಲ್ಲವೆಂದು ಹೇಳಿದರು. ಸರ್ಕಾರಕ್ಕೆ 4 ವರ್ಷ ಹಣ ಬರುವುದಿಲ್ಲ. 4 ವರ್ಷ ಆದಮೇಲೆ ಸರ್ಕಾರಕ್ಕೆ ಮತ್ತೆ ಹಣ ಬರುತ್ತದೆ. ಆದರೆ, ನಾವು ಅಧಿಕಾರದಲ್ಲಿ ಇರುವುದಿಲ್ಲವೆಂದು ಮಂತ್ರಿಗಳು ಹೇಳುತ್ತಾರೆ. ಅಂದರೆ, ಅವರ ಸರ್ಕಾರ ಇದ್ದಾಗ ಮಾತ್ರ ಬರಬೇಕೆಂದರೆ ಹೇಗೆ? ಕರ್ನಾಟಕ ರಾಜ್ಯದ ಸಮಗ್ರವಾದ ಅಭಿವೃದ್ಧಿ ಬಗ್ಗೆ ವಿಚಾರ ಮಾಡಬೇಕು. We should think of future. ನನ್ನ ಕಾಲದಲ್ಲಿ ಬಂದಿಲ್ಲವೆಂದರೆ ಹೇಗೆ? ಮುಂದಿನ ಪೀಳಿಗೆ ಗಾದರೂ ಒಳ್ಳೆಯದಾಗಬೇಕು ಎನ್ನುವ ವಿಚಾರವನ್ನು ಸರ್ಕಾರ ಮಾಡಬೇಕಲ್ಲವೇ? ಇವತ್ತು ಆದಾಯ ಬರುವುದಿಲ್ಲವೆಂದು ನಾವು incentive ಕೊಡದೆ investment ಮಾಡಲಿಕ್ಕೆ ಬಿಡದಿದ್ದರೆ ಹೇಗೆ? ರಾಜ್ಯದ ಭವಿಷ್ಯದ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಏಕೆಂದರೆ, ಜನರು ಈ ಕಡೆ ಗಮನಹರಿಸುತ್ತಿದ್ದಾರೆ. Rural Development ಬಗ್ಗೆ ಸರ್ಕಾರಕ್ಕೆ ಬಹಳ ಆಸಕ್ತಿ ಇದೆಯೆಂದು ಹೇಳುತ್ತಾರೆ. ಸಂತೋಷ. ನಮಗೂ ಕೂಡ ಅಷ್ಟೇ ಆಸಕ್ತಿ ಇದೆ. 224 ಕ್ಷೇತ್ರದಲ್ಲಿ ಸುಮಾರು 200 ಕ್ಷೇತ್ರಗಳು ಹಳ್ಳಿ ಪ್ರದೇಶಗಳಿಂದ ಕೂಡಿರುವ ಕ್ಷೇತ್ರಗಳಾಗಿವೆ. ಯಾವ ರೀತಿ ಅಭಿವೃದ್ಧಿ ಮಾಡಬೇಕೆನ್ನುವುದು ಎಲ್ಲಾ ಸರ್ಕಾರಗಳ ಚಿಂತನೆಯಾಗಿರಬೇಕು. ಈ ಸರ್ಕಾರ, ಹಿಂದಿನ ಸರ್ಕಾರ, ನೀವೇನು ಮಾಡಿದಿರಿ, ನಾವೇನು ಮಾಡಿದೆವು ಎಂದು ಹೇಳಿದರೆ ನಮ್ಮ ರಾಜ್ಯದ ಜನ ನಮ್ಮನ್ನು ಕ್ಷಮಿಸುವುದಿಲ್ಲ. ಹಿಂದೆ ನಾವು ತಪ್ಪು ಮಾಡಿದ್ದರೆ ಅದಕ್ಕೆ ನಾವು ಶಿಕ್ಷೆ ಅನುಭವಿಸುತ್ತಿದ್ದೇವೆ. ನಾವು ಅಧಿಕಾರದಲ್ಲಿದ್ದಾಗ ಒಳ್ಳೆಯದು ಮಾಡಬೇಕು. ನಾವು ಒಂದು ದಿನ ಅಧಿಕಾರದಲ್ಲಿದ್ದರೂ ಕೂಡ ನಾವೇನು effective ಆಗಿ ಮಾಡಿದ್ದೇವೆ ಎನ್ನುವುದನ್ನು ಜನರು ಗಮನಿಸುತ್ತಾರೆ. ಅದಕ್ಕೆ ನಾವು ಒಂದು ಯೋಜನೆ ಹಾಕಿಕೊಂಡು ಮುಂದಾಲೋಚನೆಯಿಂದ ಯಾವುದೇ ರಾಜ್ಯ ಅಭಿವೃದ್ಧಿಯಾಗಬೇಕಾದರೆ ನಾವು ಯಾವ ರೀತಿ plan ಮಾಡುತ್ತೇವೆ, ಯಾವ ರೀತಿಯಾಗಿ ಅದನ್ನು monitor ಅನುಷ್ಠಾನಗೊಳಿಸುತ್ತೇವೆ ಯಾವ ರೀತಿ ಅದಕ್ಕೆ ಹಣ ಕೊಡುತ್ತೇವೆ

ಯಾವ ರೀತಿ ಅದನ್ನು ಮಾಡುತ್ತೇವೆ ಎನ್ನುವುದು ಮುಖ್ಯ. Planning is the foremost thing. ಯಾವ ರೀತಿ Planning ಆಗುತ್ತಿದೆ ಎನ್ನುವ ಬಗ್ಗೆ ನಾನು ಕಳೆದ ಸದನದಲ್ಲಿ ಹೇಳಿದ್ದೇನೆ. Planning has been decentralized. ನೀವು ವ್ಯವಸ್ಥೆಯನ್ನು ಸರಿಪಡಿಸದೆ ಕಾರ್ಯಕ್ರಮಗಳು ಅನುಷ್ಠಾನಕ್ಕೆ ಬರುತ್ತವೆಂದು ಅಂದುಕೊಳ್ಳುವುದಕ್ಕಾಗುವುದಿಲ್ಲ. ಕಾರ್ಯಕ್ರಮ ಗಳು ಅನುಷ್ಠಾನಕ್ಕೆ ಬರಬೇಕಾದರೆ ಮೊದಲು ವ್ಯವಸ್ಥೆ ಸರಿಯಿರಬೇಕು. ಆ ವ್ಯವಸ್ಥೆ ಸರಿ ಇರಬೇಕಾದರೆ ನಾವೂ ಕೂಡ ಯಾವ ರೀತಿ plan ಮಾಡುತ್ತಿದ್ದೇವೆನ್ನುವುದು ಮುಖ್ಯ. ಇವತ್ತು Planning decentralization ಇಲ್ಲ. ನೀವು District Planning Committees ಮಾಡಿದ್ದೀರಿ. ಅವರಿಗೆ ಸಮರ್ಪಕವಾಗಿ ಕೆಲಸ ಕೊಡುತ್ತಿಲ್ಲ. Centralized plan ಬಗ್ಗೆ ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನನಗೆ ಖುಷಿ ಆಯಿತು. ನಾವು ಬೆಂಗಳೂರಿನಲ್ಲಿ ಜಿಲ್ಲೆಗಳಲ್ಲಿಯೇ ಕುಳಿತು MP, MLA ಗಳು ನಾವು Planning ಮಾಡುವ ಅವಶ್ಯಕತೆಯಿಲ್ಲ ಎಂದು ಹೇಳುತ್ತಿದ್ದೀರಿ, ಆದರೆ ಕಾರ್ಯರೂಪಕ್ಕೆ ತರುತ್ತಿಲ್ಲ. ಅದನ್ನು ಕಾರ್ಯರೂಪಕ್ಕೆ ತನ್ನಿ. We will support you for that. ಆದರೆ, ಅದನ್ನು ಕಾರ್ಯರೂಪಕ್ಕೆ ಯಾವ ರೀತಿ ತರಬೇಕೆನ್ನುವ ಬಗ್ಗೆ ಚರ್ಚೆಯಾಗಬೇಕಲ್ಲವೇ? ಎಲ್ಲಿಯವರೆಗೆ ನೀವು ಅಧಿಕಾರ ವಿಕೇಂದ್ರೀಕರಣ ಮಾಡುವುದಿಲ್ಲ, ಅಲ್ಲಿಯವರೆಗೆ ಅಭಿವೃದ್ಧಿ ಯಾಗಲಿಕ್ಕೆ ಸಾಧ್ಯವಿಲ್ಲ. They have to decentralize. ಬಹಳಷ್ಟು ಶಾಸಕರು ನನ್ನ ಜೊತೆ ಇದನ್ನು ಒಪ್ಪಲಿಕ್ಕಿಲ್ಲ. ಆದರೆ, ಯಾವುದೇ ಒಂದು ವ್ಯವಸ್ಥೆಯನ್ನು ವಿಕೇಂದ್ರೀಕರಣ ಮಾಡದಿದ್ದರೆ ನಾವು ಆ ವ್ಯವಸ್ಥೆಯನ್ನು ಸುಧಾರಣೆ ಮಾಡುವುದಕ್ಕಾಗುವುದಿಲ್ಲ. ಮುಖ್ಯಮಂತ್ರಿಯವರು ಭ್ರಷ್ಟಾಚಾರ ವಿಕೇಂದ್ರೀ ಕರಣವಾಗಿದೆ ಎನ್ನುವ ಒಂದು ಮಾತು ಹೇಳಿದರು. ನನಗೆ ಬಹಳ ನೋವಾಯಿತು. ಮೇಲೆ ಭ್ರಷ್ಟಾಚಾರ ಇದ್ದರೆ Planning ಎಲ್ಲಿ ವಿಕೇಂದ್ರೀ ಕರಣವಾಗಿದೆ? ಮೇಲೆ ಭ್ರಷ್ಟಾಚಾರ ಇಲ್ಲದಿದ್ದಿದ್ದರೆ ವಿಕೇಂದ್ರೀಕರಣ ಆಗುತ್ತಿರಲಿಲ್ಲ. ಅದಕ್ಕೆ ಭ್ರಷ್ಟಾಚಾರದ ನೆಪದಲ್ಲಿ ಪಂಚಾಯತ್‌ರಾಜ್ institutions ಅನ್ನು ನಾವು ಕೊಲೆ ಮಾಡುವುದಕ್ಕಾಗುವುದಿಲ್ಲ. It is a Constitutional body. ಈ ರಾಜ್ಯದಲ್ಲಿ ಒಳ್ಳೆಯ ರೀತಿಯಾಗಿ ಕಾರ್ಯಕ್ರಮ ಅನುಷ್ಠಾನವಾಗಬೇಕಾದರೆ we have to strengthen the Panchayat Raj

syatem. ನಾನು ಮಂತ್ರಿಯವರನ್ನು ಕೇಳುತ್ತೇನೆ. ಇದಕ್ಕೆ ಏನಾದರೂ amendment ತರಬೇಕೆನ್ನುವುದಾದರೆ ತನ್ನಿ. We will give suggestions. ಇವತ್ತು ನೆಗಡ ಬಂತು ಎಂದು ಮೂಗು cut ಮಾಡುವುದಕ್ಕಾಗುತ್ತದೆಯೇ? ವ್ಯವಸ್ಥೆಯನ್ನು ಯಾವ ರೀತಿ ಸುಧಾರಣೆ ಮಾಡುಬೇಕೆನ್ನುವುದನ್ನು ನಾವು ಖಂಡಿತ ವಿಚಾರ ಮಾಡಬೇಕು. ನಾವು ರಾಮರಾಜ್ಯ ಎಂದು ಹೇಳುತ್ತೇವೆ. ರಾಮರಾಜ್ಯ ಯಾವುದು? De-centralization ನಲ್ಲಿ main focus ಏನಿರಬೇಕೆಂದರೆ, ಗ್ರಾಮಸಭೆ ಇರಬೇಕು. ಗ್ರಾಮಸಭೆ ಒಂದು ಗ್ರಾಮದಲ್ಲಿ ಎಲ್ಲಾ ಸಮಾಜದ ಜನ ಸೇರಿಕೊಂಡು ಯಾವುದೇ ಕಾರ್ಯಕ್ರಮವನ್ನು ನಿಷ್ಪಕ್ಷಪಾತವಾಗಿ, ಬಡವರ ಪರವಾಗಿ ಸತ್ಯ ಮತ್ತು ನ್ಯಾಯದ ಪರವಾಗಿ ತೆಗೆದುಕೊಳ್ಳುವ ತೀರ್ಮಾನ ಮತ್ತು ಶಕ್ತಿ ಆ ಗ್ರಾಮಸಭೆ ಬಂದರೆ ಅದೇ ರಾಮರಾಜ್ಯ. ಆ ನಿಟ್ಟಿನಲ್ಲಿ ನಾವು ಪ್ರಯತ್ನಿಸಬೇಕಾದರೆ ಇವತ್ತು ಹಳ್ಳಿಗಳಲ್ಲಿ ಮನೆ ಕೊಡುವ ಸಂದರ್ಭದಲ್ಲಿ ಗ್ರಾಮ ಸಭೆ ಆದರೆ ಎಷ್ಟು ಗಲಾಟೆಯಾಗುತ್ತದೆಂದು ನನಗೆ ಗೊತ್ತಿದೆ. ಅಲ್ಲಿ ಈಗ ಸದ್ಯಕ್ಕೆ ನ್ಯಾಯ ಸಿಗತ್ತಿರಲಿಕ್ಕಿಲ್ಲ. ಆದರೆ, ನಮ್ಮ ಕನಸು ಏನು ಇದೆ, ನಮಗೆ ಒಂದು ಗುರಿ ಇರಬೇಕು ತಾನೆ? ನಿಜವಾದ ಪ್ರಜಾಪ್ರಭುತ್ವ ಯಾವುದು ಎಂದರೆ, ಸಾಮಾನ್ಯ ಜನರು ಸೇರಿ ಪರವಾಗಿ, ನ್ಯಾಯದ ಪರವಾಗಿ, ಬಡವರ ಪರವಾಗಿ ತೀರ್ಮಾನ ತೆಗೆದುಕೊಳ್ಳುವ ಶಕ್ತಿ ಆ ಒಂದು ಜ್ಞಾನ, ಸಹಾನುಭೂತಿ ಬಂದರೆ ಅದೇ ರಾಮರಾಜ್ಯ. ಆ ನಿಟ್ಟಿನಲ್ಲಿ ನಾವು ಪ್ರಯತ್ನಿಸಬೇಕಾದರೆ ಗ್ರಾಮಸಭೆ ಗಳನ್ನು ಬಲಪಡಿಸುವ ಪ್ರಯತ್ನ ಮಾಡಬೇಕು. ಪ್ರಯತ್ನಿಸದಿದ್ದರೆ ಹೇಗೆ ಆಗುತ್ತದೆ? ನಾನು ಒಪ್ಪುತ್ತೇನೆ. ಆ ಒಂದು ಸಂದರ್ಭ ಬರಲಿಕ್ಕೆ ಇನ್‌ನೂ ಇಪ್ಪತ್ತು ವರ್ಷ ಬೇಕಾಗಬಹುದು. ಆದರೆ ಇಪ್ಪತ್ತು ವರ್ಷಗಳ ನಂತರವೂ ರಾಮರಾಜ್ಯ ಕಲ್ಪಿಸಲಿಕ್ಕೆ ಸಾಧ್ಯವಿದೆ. ಅದು ಸಾಧ್ಯವೇ ಇಲ್ಲ ಎಂದು ಶಾಸಕರಾದ ನಾವೇ ಅದನ್ನು ನಮ್ಮ ಮುಷ್ಟಿಯಲ್ಲಿಟ್ಟುಕೊಂಡರೆ ಶಾಸಕರಾಗಿ ನಾವು ಇದೇನಾ ನ್ಯಾಯ ಮಾಡುವುದು? ನಮಗೆಲ್ಲ ರಾಜಕೀಯ ಹಿತಾಸಕ್ತಿಗಳಿವೆ. ನಾವು ಒಳ್ಳೆಯದು ಮಾಡಬೇಕೆನ್ನುವ ಉದ್ದೇಶವಿದ್ದರು ನಮ್ಮ ಕಾರ್ಯಕರ್ತರು ಮಾಡುವುದಕ್ಕೆ ಬಿಡುವುದಿಲ್ಲ. ನಾನು ಈ ಮಾತನ್ನು ಪಕ್ಷಭೇದ ಮರೆತು ಹೇಳುತ್ತಿದ್ದೇನೆ. ಸತ್ಯದ ಪರವಾಗಿ ಮಾಡಬೇಕೆನ್ನುವ ಮನಸ್ಸು ನಮ್ಮ ಹೃಯದಲ್ಲಿದೆ, ನಾವು ಯಾವುದೂ ತಪ್ಪು ಮಾಡಬಾರದು ಎಂದು ಪ್ರಯತ್ನ ಮಾಡಿದರೂ ಕೂಡ ನಮ್ಮ ಕಾರ್ಯಕರ್ತರು, ನಮ್ಮ

political compulsions ಮಾಡುವುದಕ್ಕೆ ಬಿಡುವುದಿಲ್ಲ. ಅದಕ್ಕೆ ನಿಜವಾದ ಅಧಿಕಾರ ಜನರ ಕೈಯಲ್ಲಿ ಇದ್ದು, ಸಾರ್ವಜನಿಕವಾಗಿ ಸೇರಿ ಒಳ್ಳೆಯ ನಿರ್ಣಯ ಮಾಡತಕ್ಕಂಥ ಒಂದು ಹಳ್ಳಿಯನ್ನು ಸೃಷ್ಟಿ ಮಾಡಿದರೆ ಅದೇ ರಾಮರಾಜ್ಯ. ಇರುವುದರಲ್ಲಿಯೇ ತೃಪ್ತಿಯಿಂದ ನಾವು ಹಂಚಿಕೊಂಡು ಇವತ್ತು ಯಾರು ನಮಗಿಂತ ಕೆಳಗೆ ಇದ್ದಾಎರ ಅವರಿಗೆ ಸಹಾಯ ಮಾಡುವ ಸಮಾಜ ಸೃಷ್ಟಿ ಮಾಡುವುದೇ ಪ್ರಜಾಪ್ರಭುತ್ವದ ಮುಖ್ಯ ಉದ್ದೇಶ. ಇದೇ ರಾಮರಾಜ್ಯ ನಮ್ಮ ಗಾಂಧೀಜಿಯವರು ಕಂಡಿರತಕ್ಕಂಥ ಕನಸು.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ತಾವು ಹೇಳಿದ ಹಾಗೆ ಕಾರ್ಯಕರ್ತರು ನಮ್ಮನ್ನು ಬಿಡುವುದಿಲ್ಲ ಎನ್ನುವ ಮಾತನ್ನು ಒಪ್ಪುತ್ತೇನೆ. ಒಂದೇ ಸಲ ನಾವು ಶಾಸಕರಾಗುತ್ತೇವೆಂದು ತೀರ್ಮಾನ ಮಾಡಿದರೆ ರಾಜ್ಯದಲ್ಲಿ ಎಷ್ಟೋ ಬದಲಾವಣೆ ಆಗುತ್ತದೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಗಾಂಧೀಜಿಯವರು ಕಂಡಿರತಕ್ಕಂಥ ಕನಸನ್ನು ನನಸು ಮಾಡಬೇಕಾದರೆ, ಈ ಪ್ರಜಾಪ್ರಭುತ್ವ ನಮಗೆ ಕೊಡಿಸಬೇಕು, ಸ್ವಾತಂತ್ರ್ಯ ನಮ್ಮ ದೇಶಕ್ಕೆ ಬರಬೇಕು, ಇಲ್ಲಿ ಯಾರು ಬಡವರು ಇದ್ದಾರೆ, ಯಾರು ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ, ಅವರಿಗೆ ಸ್ವಾಭಿಮಾನದ ಬದುಕು ಈ ದೇಶದಲ್ಲಿ ಸಿಗಬೇಕು ಎಂದರೆ, ಅಂಥ ಒಂದು ರಾಮರಾಜ್ಯವನ್ನು ಸೃಷ್ಟಿ ಮಾಡತಕ್ಕಂಥ ಪ್ರಯತ್ನ ನಾವು ಮಾಡಬೇಕು. ಇವತ್ತು ಅದು ನಮ್ಮ ಕೈಯಿಂದ ಆಗಲಿಕ್ಕಿಲ್ಲ. ಅದನ್ನು ನಮ್ಮ ಜೀವಿತ ಕಾಲದಲ್ಲಿ ನೊಡಲಿಕ್ಕೆ ಸಾಧ್ಯವಾಗಿದ್ದರೂ ಕೂಡ ಮುಂದಿನ ಪೀಳಿಗೆ ಅದರ ಫಲವನ್ನು ತಿನ್ನಬೇಕು ಎನ್ನುವ ಸದುದ್ದೇಶ ನಮ್ಮ ಹೃದಯದಲ್ಲಿದ್ದರೆ, ಈ ದೇಶದಲ್ಲಿ ಖಂಡಿತವಾಗಿ ಅಂಥ ರಾಮರಾಜ್ಯವಾಗಲಿಕ್ಕೆ ಸಾಧ್ಯವಿದೆ. ನಾವು ಪ್ರಯತ್ನ ಮಾಡಬೇಕಾಗಿದೆ. ಅದಕ್ಕೆ ಸರಿಯಾಗಿರುವ ಕಾನೂನುಗಳನ್ನು ತರಬೇಕು. ಏಕೆಂದರೆ, ಕಾನೂನುಗಳು ತರದೇ ಪ್ರಯತ್ನ ಮಾಡದೇ ತಾನೇ ಆಗುತ್ತದೆ ಎಂದು ಯಾರೂ ಭಾವಿಸಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಗ್ರಾಮ ಸಭೆಗಳನ್ನು ನಾವು ಮಾಡಬೇಕು. ಗ್ರಾಮ ಪಂಚಾಯಿತಿಗಳಿಗೆ, ತಾಲ್ಲೂಕು ಪಂಚಾಯಿತಿಗಳಿಗೆ, ಜಿಲ್ಲಾ ಪಂಚಾಯಿತಿಗಳಿಗೆ, ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ಈ ಒಂದು ಉದ್ದೇಶದ ಹಿನ್ನೆಲೆಯಲ್ಲಿ ಹೇಳುತ್ತಿದ್ದೇನೆ. ಗ್ರಾಮ ಸಭೆಯಲ್ಲಿ ನಿರ್ಣಯವಾದರೆ ಗ್ರಾಮ ಪಂಚಾಯಿತಿಯವರು ಖುಷಿ ಯಾಗಿರಲ್ಲ, ಗ್ರಾಮ ಪಂಚಾಯಿತಿಗೆ ಹೆಚ್ಚಿಗೆ ಅಧಿಕಾರ ಕೊಟ್ಟರೆ ತಾಲ್ಲೂಕು ಪಂಚಾಯಿತಿಯವರು ಖುಷಿಯಾಗಿರಲ್ಲ. ತಾಲ್ಲೂಕು ಪಂಚಾಯಿತಿಗೆ ಹೆಚ್ಚಿಗೆ

ಅಧಿಕಾರ ಕೊಟ್ಟರೆ ಜಿಲ್ಲಾ ಪಂಚಾಯಿತಿಯವರು ಏನ್ರೀ ನಮಗೆ ಅಧಿಕಾರ ಇಲ್ಲ ಎನ್ನುತ್ತಾರೆ, ಜಿಲ್ಲಾ ಪಂಚಾಯಿತಿಗೆ ಹೆಚ್ಚಿನ ಅಧಿಕಾರ ಕೊಟ್ಟರೆ ಶಾಸಕರು ನಮಗೆ ಏನು ಇದೆ ಎನ್ನುತ್ತಾರೆ. ಈ ರೀತಿಯಾದ ವ್ಯವಸ್ಥೆಯಲ್ಲಿ ನಾವು ಇನ್ನೂ ಎಷ್ಟು ದಿವಸ ಇರಬೇಕು? ಅದಕ್ಕಾಗಿ ಬದಲಾವಣೆ ಬರಲೇಬೇಕು. ಅದಕ್ಕೆ ನಾನು ವಿಕೇಂದ್ರೀಕರಣದ ಬಗ್ಗೆ ಹೇಳುವಾಗ ನಾವು ಸುಮ್ಮನೆ ಫ್ಯಾಷನ್‌ಬಲ್ ಆಗಿ ಎನೋ ನಮ್ಮ ಪಕ್ಷದ ಪಾಲಿಸಿ ತರಹ ಎಂದು ಹೇಳುತ್ತಿಲ್ಲ. ಆದರೆ, in the interest public, in the interest of democracy, ಈ ದೇಶಕ್ಕೆ democracy ಬಹಳ ಮುಖ್ಯ. ಹಿಂದೆ ಬ್ರಿಟಿಷರು ಕೂಡ ಹಾಗೆ ಹೇಳುತ್ತಿದ್ದು. ಭಾರತಕ್ಕೆ ಒಂದು ವೇಳೆ ನಾವು ಸ್ವಾತಂತ್ರ್ಯ ಕೊಟ್ಟು ಬಿಟ್ಟರೆ democracy ಯನ್ನು ಕೊಟ್ಟರೆ, ಅವರಿಗೆ ಆಳಿಕೊಳ್ಳುವುದಕ್ಕೆ ಅವರ ಕೈಯಲ್ಲಿ ಆಗುವುದಿಲ್ಲ, ಅವರಿಗೆ ಆ ಸಾಮರ್ಥ್ಯವಿಲ್ಲ ಎಂದು ಹೇಳುತ್ತಿದ್ದರು. ಆ ರೀತಿಯಾಗಿ ಅವರು ತಪ್ಪಾಗಿ ಭಾವಿಸಿದ್ದರು. ಅದಕ್ಕೆ ನಾವು ಇವತ್ತು ಡಿಸೈಡ್ ಮಾಡಬೇಕು. ನಾವು ಅಧಿಕಾರ ಅವರಿಗೆ ಕೊಡುವ ಪ್ರಯತ್ನ ಮಾಡಿದರೆ ಖಂಡಿತವಾಗಿ ನೀವು ಯಾವ ರೀತಿ democracy ಉಳಿಸುತ್ತೀರಿ? ಇವತ್ತು ನಮ್ಮ ದೇಶಕ್ಕೆ written constitution ಇದೆ ಎಂದು ನಮಗೊಂದು ಭದ್ರತೆ ಇದೆ. ದೇಶಗಳಿಗೆ written constitution ಇಲ್ಲ. Practives and procedures are more important there. But, ನಮ್ಮ ಹತ್ತಿರ written constitution ಇದೆ. ಬದ್ಧತೆ ಇದೆ. ಆದರೆ ಅದನ್ನು ಉಳಿಸಿಕೊಂಡು ಹೋಗಬೇಕು. ಪ್ರಜಾಪ್ರಭುತ್ವ ಎಂದರೆ second line leadership. ನಾನು ಶಾಸಕನಾಗಿದ್ದೇನೆ. ಇನ್ನೊಬ್ಬ ಯಾರಾದರೂ ಒಳ್ಳೆಯದಾಗಿ ಜನಪ್ರತಿನಿಧಿ ಯಾಗಿ ಬೆಳೆಯುತ್ತಿದ್ದಾರೆಂದು ಅವನಿಗೆ ಬೆಳೆಯಲಿಕ್ಕೆ ಬಿಡುವುದಿಲ್ಲ. ಏಕೆಂದರೆ, we are not allowing second line leadership. ಅದಕ್ಕಾಗಿಯೇ ಇವತ್ತು ಪಂಚಾಯತ್‌ರಾಜ್ ವ್ಯವಸ್ಥೆ ಬೇಕು. ಪ್ರಜಾಪ್ರಭುತ್ವ ಶಾಶ್ವತವಾಗಿ ನೆಲಸಬೇಕು. ನಾನು ಶಾಶ್ವತವಾಗಿ ಇಲ್ಲಿ ಇರುವುದಕ್ಕೆ ಆಗುವುದಿಲ್ಲ. ಯಾವ ಮನುಷ್ಯರೂ ಕೂಡ ಭೂಮಿಯ ಮೇಲೆ ಶಾಶ್ವತವಾಗಿ ಇರಲಿಕ್ಕೆ ಸಾಧ್ಯವಿಲ್ಲ. ಆದರೆ ಈ ಪ್ರಜಾಪ್ರಭುತ್ವದ ವ್ಯವಸ್ಥೆ ಉಳಿಯಬೇಕಾದರೆ ಅಥವಾ second line leadership ಬೆಳೆಸಬೇಕಾದರೆ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಾತ್ರ ಸಾಧ್ಯ. ಇಲ್ಲಾಂದ್ರೆ ತಮಗೆ ಗೊತ್ತಿದೆ. ಇವತ್ತು ಬರಿ ಎಂಎಲ್‌ಎ, ಎಂಪಿ. ಗಳು

ಇದ್ದರೆ, ಯಾರೂ ಆ ಕ್ಷೇತ್ರದಲ್ಲಿ ಒಳ್ಳೆಯ ಪ್ರಗತಿಪರವಾಗಿರತಕ್ಕಂಥ, ಜನಪರವಾಗಿರತಕ್ಕಂಥ ನಾಯಕರು ಬೆಳೆಯುವುದಕ್ಕೆ ಸಾಧ್ಯವಿದೆಯೆ? ಆದರೆ ಪ್ರಜಾಪ್ರಭುತ್ವದಲ್ಲಿ ನಾವು ಪಂಚಾಯತ್ ರಾಜ್‌ಗೆ ಒತ್ತು ಕೊಟ್ಟು, ಅವರಿಗೆ ಕೆಲಸ ಮಾಡುವ ಅವಕಾಶ ಕೊಟ್ಟರೆ ಖಂಡಿತವಾಗಿ ಅಲ್ಲಿ second line leadership ಬೆಳೆಯುತ್ತದೆ. second line leadership is very important for democracy, and for that at least we should promote Panchayth Raj. ಏಕೆಂದರೆ, democracy is basic ಎನ್ನುವುದು ಮುಖ್ಯವಿದೆ. ಅದಕ್ಕೆ ಪಂಚಾಯತ್ ರಾಜ್‌ನ್ನು ಉಳಿಸಿ ಅದನ್ನು ಬೆಳೆಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯ. ಏಕೆಂದರೆ ಪಂಚಾಯತ್ ರಾಜ್ ಮಿನಿಸ್ಟರ್ ಕೂಡ ಕೆಲವು ಅಮೆಂಡ್‌ಮೆಂಟ್ಸ್ ತರುತ್ತಾರೆ ಎನ್ನುವ ಬಹಳಷ್ಟು ಗುಲ್ಲು ಈ ರಾಜ್ಯದಲ್ಲಿ ಎದ್ದಿದೆ. ಅಂಥ ಯಾವುದೇ ಕೆಲಸ ಮಾಡಬಾರದು. ಪಂಚಾಯತ್ ರಾಜ್‌ಗೆ ಯಾವುದೇ ಒಳ್ಳೆಯ ಅಮೆಂಡ್‌ಮೆಂಟ್ಸ್ ತಂದರೆ ನಾವು ಸಹಕಾರ ಮಾಡುತ್ತೇವೆ. ಇರತಕ್ಕಂಥ ವ್ಯವಸ್ಥೆಯನ್ನು ಸುಧಾರಣೆ ಮಾಡುವುದಾದರೆ ನಾವೆಲ್ಲರೂ ಸಹಕರಿಸುವುದಕ್ಕೆ ಸಿದ್ಧರಿದ್ದೇವೆ. ಈಗ ಯಾವುದೋ ಒಂದು rural development, development ಎಂದರೆ ನೀವು ಕೇವಲ, ಮಾನ್ಯ ಮುಖ್ಯಮಂತ್ರಿಗಳು ಕೂಡ ನನ್ನ ಮನಸ್ಸಿನಲ್ಲಿರುವ ಮಾತನ್ನು ಹೇಳಿದರು. ಏನೆಂದರೆ, ಬರಿ ರೋಡ್, ಡ್ರೇನ್, ಅಲ್ಲಿ ಸವಲತ್ತುಗಳನ್ನು ಕೊಟ್ಟ ಮಾತ್ರಕ್ಕೆ ನಾವು ಎಂದು ಹೇಳುವುದಕ್ಕಾಗುವುದಿಲ್ಲ. ಅಲ್ಲಿರತಕ್ಕಂಥ ಜನರಿಗೆ ಸ್ವಾಭಿಮಾನದ ಬದುಕನ್ನು ಬದುಕುತಕ್ಕಂಥ ಅವರಿಗೆ ಎಲ್ಲಾ ರೀತಿಯಾದ ಭದ್ರತೆ, ಅದು ಎಜ್ಯುಕೇಷನಲ್ಲಿ ಆಗಿರಬಹುದು, ಅದು ಸಾಮಾಜಿಕವಾಗಿ ಆಗಿರಬಹುದು, ಎಲ್ಲಾ ರೀತಿಯಾದ ಭದ್ರತೆ ಮತ್ತು ಅಲ್ಲಿ ಒಬ್ಬ ಸಾಮಾನ್ಯವಾದ ಮನುಷ್ಯ ನಿರಾಳವಾದ ಜೀವನ ಸಾಗಿಸತಕ್ಕಂಥ ವಾತಾವರಣ ಕ್ರಿಯೇಟ್ ಮಾಡುವುದು ಕೂಡ ಅಷ್ಟೆ ಮುಖ್ಯ. ಅದಕ್ಕೆ ನಾವೇನು ಮಾಡುತ್ತಿದ್ದೇವೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅರವತ್ತು ವರ್ಷಗಳಾದರೂ ನಾವು ಏನು ಸಾಧನೆ ಮಾಡಿದ್ದೇವೆಂದರೆ, ಸಾಕಷ್ಟು ಸಾಧನೆ ಮಾಡಿದ್ದೇವೆ. ಸಾಧನೆ ಮಾಡಿಲ್ಲವೆಂದು ಯಾರೂ ಹೇಳುವುದಕ್ಕೆ ಆಗುವುದಿಲ್ಲ. ಈ ದೇಶದಲ್ಲಿ ಸಾಧನೆ ಮಾಡಿದ್ದೇವೆ. ಸಾಧನೆ ಮಾಡಿಲ್ಲವೆಂದು ಯಾರೂ ಹೇಳುವುದಕ್ಕೆ ಆಗುವುದಿಲ್ಲ. ಈ ದೇಶದಲ್ಲಿ ಸ್ವಾತಂತ್ರ್ಯ ಬಂದಂಥ ಸಂದರ್ಭದಲ್ಲಿ ಏನು ಪರಿಸ್ಥಿತಿ ಇತ್ತು ಎಂದು ಇಲ್ಲಿರುವ

ಎಲ್ಲಾ ಹಿರಿಯರಿಗೂ ಗೊತ್ತಿದೆ. ಇವತ್ತೇನು ಆಗಿದೆ, ಆದರೆ ಇನ್ನೂ ಆಗಬೇಕಾಗಿರುವುದು ಬಹಳ ಇದೆ. Poverty alleviation ಗೆ ನಾವು ಬಹಳ ಒತ್ತು ಕೊಡಬೇಕು. Today infrastructure and poverty alleviation should be the only criteria of the government. Infrastructure ಬಗ್ಗೆ ಆಮೇಲೆ ಹೇಳುತ್ತೇನೆ. ಈಗ Poverty alleviation ಬಗ್ಗೆ ಹೇಳುವುದಾದರೆ, I am coming to the subject. ಸರ್ಕಾರ ಏನು ಮಾಡುತ್ತಿದೆ ಎನ್ನುವುದನ್ನು ನೀವು ವಿಚಾರ ಮಾಡಿ. Poverty alleviation ನಲ್ಲಿ what is the programme of the state Government? There is no programme of State Government. I am not criticizing. It is a fact. ಏಕೆಂದರೆ Poverty alleviationನಲ್ಲಿ ಇರುವುದು ಒಂದೇ ಒಂದು ಏನೆಂದರೆ, ಅವರು ಕೊಟ್ಟಿರುವ ನಿಮ್ಮ ವಾರ್ಷಿಕ ವರದಿ, ನಿರ್ವಹಣೆ ಮುಂಗಡ ಪತ್ರ, ಮತ್ತು economic survery ಇದನ್ನು ಓದಿಯೇ ನಾನು ಹೇಳುತ್ತಿದ್ದೇನೆ. ನಾನೇನು ಸ್ವಂತ ಹೇಳುತ್ತಿಲ್ಲ. Poverty alleviationಗೆ state government ಹಾಕಿಕೊಂಡಿರುವ ಎರಡೇ ಎರಡು ಕಾರ್ಯಕ್ರಮ ಯಾವುದು ಎಂದರೆ, ಒಂದನೆಯದು SGSY, ಇನ್ನೊಂದು ಗ್ರಾಮ ಸ್ವರಾಜ್. ಇವೆರಡು ಕೇಂದ್ರ ಸರ್ಕಾರ ಮಾಡಿರುವ ಕಾರ್ಯಕ್ರಮ. ರಾಜ್ಯ ಸರ್ಕಾರದ್ದು RDPR ನಿಂದ ಯಾವುದೇ Poverty alleviation ಬಗ್ಗೆ ಕಾರ್ಯಕ್ರಮವಿಲ್ಲ. Social Welfare and Backward Class Department ನಲ್ಲಿರಬಹುದು. ಆದರೆ, ನೀವು RDPR ಯಿಂದ ಇವತ್ತು SGSY ಮತ್ತು ಗ್ರಾಮ ಸ್ವರಾಜ್ಯ ಬಿಟ್ಟರೆ ಯಾವುದೇ Poverty alleviation ಕಾರ್ಯಕ್ರಮವಿಲ್ಲ. Rural infrastructure ನಲ್ಲಿ ಇವತ್ತು ನೀವು ಏನು ಮಾಡುತ್ತಿದ್ದೀ. ಇದರಲ್ಲಿ ಒಂದು road ಒಂದು water, supply, ಒಂದು internal roads, drains, ಅಮೇಲೆ ಅಲ್ಲಿರುವ health, health facilities ಎಂದರೆ ANM sub-centre ಇದ್ದರೆ, PHC ಇದ್ದರೆ, ಇಲ್ಲಾಂದ್ರೆ ಅಲ್ಲಿರುವ ಶಾಲೆ. ಇವತ್ತು ಸರ್ವ ಶಿಕ್ಷಣ ಅಭಿಯಾನದಲ್ಲಿ ಬಹಳಷ್ಟು ಹಣ ಕೇಂದ್ರ ಸರ್ಕಾರ ಕೊಟ್ಟಿರುವುದರಿಂದ ಶಾಲೆಗಳ ಸಮಸ್ಯೆ ಇಲ್ಲ. ಇದು ತಮಗೆಲ್ಲರಿಗೂ ಗೊತ್ತಿದೆ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಈ ಸರ್ಕಾರ rural

connectivity ಗೆ roads ಮತ್ತು internal roads ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದೆ? Rural connectivityಗೆ ಸರ್ಕಾರ ಒಂದು ವರ್ಷಕ್ಕೆ ನಿಮ್ಮ annual report ನೋಡಿ ಹೇಳುತ್ತಿದ್ದೇನೆ, ಹೋದ ವರ್ಷ ಕೇವಲ 700 ಕೋಟಿ ರೂ. ಕೊಟ್ಟಿದೆ. ಹೋದ ವರ್ಷ 700, ಕೋಟಿ ರೂ. ಕೊಟ್ಟು ಈ ವರ್ಷ ಅದನ್ನು you have reduced it 500 crores. You have reduced the allocation for rural roads. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇದ್ದಾರೆ. ಅವರು ಅರ್ಥ ಮಾಡಿಕೊಳ್ಳಬೇಕು. ನಿಮ್ಮ ಇಲಾಖೆಯಲ್ಲಿ ರೋಡ್‌ಗೆ ಹೋದ ವರ್ಷ ಕೊಟ್ಟಿರತಕ್ಕಂಥ ಹಣಕ್ಕೆ ಮತ್ತು ಈ ವರ್ಷ ಕೊಟ್ಟಿರತಕ್ಕಂಥ ಹಣ ನೋಡಿದರೆ ಬಹಳ ಕಡಿಮೆ ಯಾಗಿದೆ. ಕಡಿತವಾಗಿ, ಆಯವ್ಯಯದಲ್ಲಿ ಕಡಿತವಾಗಿದೆ. ಹಿಂದೆ ನೀವು 750 ಕೋಟಿ ರೂ. ಕೊಟ್ಟಿದ್ದೀರಿ, ಈಗ ಅದು ಎಷ್ಟು ಆಗಿದೆ ಎಂದರೆ, I am really surprised. ಮಾನ್ಯ ಅಧ್ಯಕ್ಷರೆ ತಮಗೆ ಹೇಳಬೇಕಾದರೆ ತಾವು ದಾಖಲೆ ತೆಗೆದು ನೋಡಬೇಕು. ಈ ವರ್ಷ ಯಾವುದೇ ಹೊಸ ಕಾರ್ಯ ಕ್ರಮವಿಲ್ಲ. ಇವತ್ತು RDPR ನಿಂದ ಯಾವುದೇ ಹೊಸ ರೋಡ್ ಮಾಡುವ ಹಾಗೆ ಇಲ್ಲ. ನಾನು ಸುಮ್ಮನೆ ಹೇಳುತ್ತಿಲ್ಲ. ಡೈರೆಕ್ಷನ್ ಹೋಗಿದೆ. ಸರಕಾರಿ ಆದೇಶ ತಿಂದಿದ್ದೇನೆ. ಈ ಆದೇಶ ಓದಬೇಕು. Government has given an order to all the zilla panchayats not to take up any work. ಮಾನ್ಯ ಸಚಿವರೆ, ಈ ಆದೇಶ ನಿಮ್ಮ ಇಲಾಖೆಯಿಂದ ಹೊರಡಿಸಲಾಗಿದೆ. ಇದರಲ್ಲಿ ಏನು ಹೇಳಿದ್ದಾರೆಂದರೆ, ಈ ವರ್ಷ ಯಾವುದೇ ಕಾರ್ಯಕ್ರಮ ಗಳನ್ನು ತೆಗೆದುಕೊಳ್ಳಬೇಡಿ, ಹಿಂದಿನ ವರ್ಷ ಆಗಿರತಕ್ಕಂಥ ಸ್ಪಿಲ್‌ಓವರ್ ಕೆಲಸಕ್ಕೆ ಹಣ ಕೊಡಬೇಕೆಂದು ಹೇಳಿದ್ದೀರಿ. This is the fate of the R.D.P.R. ಈ ವರ್ಷ ಅಲೋಕೇಶನ್ ಇಲ್ಲದೆ ಇರುವುದರಿಂದ ಈ ವರ್ಷ ಹೊಸ ರಸ್ತೆಗಳನ್ನು ಮಾಡುವಂತಿಲ್ಲ. ಹಿಂದಿನ ವರ್ಷದ ಕೆಲಸಗಳಿಗೆ ಪೇಮೆಂಟ್ ಮಾಡುವುದಾದರೆ ಇವತ್ತು ಅಧಿವೇಶನ ಕರೆದು RDPR ಬಗ್ಗೆ ಚರ್ಚೆ ಮಾಡುವಂಥದ್ದು ಏನಿದೆ? ನೀವು ಹಣ ಕೊಡುವುದಾದರೆ, ಯಾವ ರೀತಿಯಾಗಿ ಮಾಡಬಹುದೆಂದು ನಾನು ಸಲಹೆ ಕೊಡುತ್ತೇನೆ without any extra burden to the State. ಒಟ್ಟು 200 ಕ್ಷೇತ್ರಗಳಿವೆ. ನಾನು ಹೇಳುವುದೇನೆಂದರೆ, ಮಾನ್ಯ ನಂಜುಂಡಪ್ಪನವರ ವರದಿಯನ್ನು ಬದಿಗಿಟ್ಟು,

200 ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತೇವೆಂದರೆ ನಾನು ನಿಮಗೆ ಒಂದು ಸಲಹೆ ಕೊಡುತ್ತೇನೆ. ನಿಮ್ಮ ಸರ್ಕಾರ ಬಂದು 1 ವರ್ಷ 4 ತಿಂಗಳಾಯಿತು. ಈ ಸರ್ಕಾರದ ಅವಧಿ ಇನ್ನು ಮೂರು ವರ್ಷ ಇದೆ. ನೀವು comprehensive planning ಮಾಡಿ. ಒಂದು ಕ್ಷೇತ್ರದಲ್ಲಿ ಕೇವಲ 50 ಕಿ.ಮೀ. ರೂರಲ್ ರೋಡ್ ಮಾಡಿ. 1 ಕಿ.ಮೀ.ಗೆ 20 ಲಕ್ಷ ರೂಪಾಯಿ ಎಂದು ನಿಮ್ಮ ಇಲಾಖೆಯವರು ಅಂದಾಜು ಮಾಡಿದ್ದಾರೆ. 12ನೇ ಹಣಕಾಸು ಆಯೋಗ ಪಿಎಂಜಿ ಯೋಜನೆಯಲ್ಲಿ ಪ್ರತಿವರ್ಷ 750 ಕೋಟಿ ರೂಪಾಯಿ ಗ್ರ್ಯಾಂಟ್, ಮತ್ತು ಸಿಎಂಎಸ್‌ಜಿವೈ, 5054 ಹಾಗೂ 3054 ಹೆಡ್‌ನಲ್ಲಿ ಕೊಡುವಂಥ 250 ಕೋಟಿ ರೂಪಾಯಿಗಳನ್ನು ಸೇರಿಸಿದರೆ 1000 ಕೋಟಿ ರೂಪಾಯಿ ಆಗುತ್ತದೆ ಮತ್ತೆ ನಬಾರ್ಡ್‌ನವರು ಒಂದು ಸಾವಿರ ಕೋಟಿ ಕೊಡುತ್ತಾರೆ. ನೀವು ಈ 2000 ಕೋಟಿ ರೂಪಾಯಿ ಹಣವನ್ನು ಒಂದೇ ಸಾರಿ ಬಿಡುಗಡೆ ಮಾಡಬೇಡಿ. ಆಯಾ ಜಿಲ್ಲೆಯಲ್ಲಿರತಕ್ಕಂಥ ಎಲ್ಲಾ ಕ್ಷೇತ್ರಗಳಲ್ಲಿ 50 ಕಿ.ಮೀ. ರಸ್ತೆ ಮಾಡಲು ಜಿಲ್ಲಾ ಪಂಚಾಯತ್ ಸದಸ್ಯರು ಮತ್ತು ಶಾಸಕರು ಸೇರಿ ಪ್ರತಿಯೊಂದು ಕ್ಷೇತ್ರದಲ್ಲಿ 50 ಕಿ.ಮೀ. ರಸ್ತೆ ಮಾಡುವುದಕ್ಕೆ ನೀವು ಒಂದು ಪ್ಲಾನ್ ಮಾಡಿದರೆ ನಿಮ್ಮಲ್ಲಿರತಕ್ಕಂಥ ಹಣದಲ್ಲಿಯೇ ಕೆಲಸ ಮಾಡಬಹುದು. 2000 ಕೋಟಿ ರೂಪಾಯಿಗಳಲ್ಲಿ ಈ ವರ್ಷ ಒಂದು ಸಾವಿರ ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೀರಿ. ಆದರೆ, ಇದರಿಂದ ಅಲ್ಲಿ ಪ್ರಾಪರ್ ಆಗಿ ಏನೂ ಕೆಲಸ ಆಗುವುದಿಲ್ಲ. ಮತ್ತೆ ಮುಂದಿನ ವರ್ಷ ಕೆಲಸ ಮಾಡುವುದಕ್ಕೆ ಹೋಗುತ್ತೀರಿ. ಆಗಲೂ ಸಹ ಪ್ರಾಪರ್ ಆಗಿ ಏನೂ ಕೆಲಸ ಆಗುವುದಿಲ್ಲ. ಆದ್ದರಿಂದ, ಒಂದು ಮತಕ್ಷೇತ್ರದಲ್ಲಿ 50 ಕಿ.ಮೀ. ರಸ್ತೆ ಮಾಡುವುದಕ್ಕೆ ನೀವು ಪ್ಲಾನ್ ಮಾಡಿ ಅದರ ಪ್ರಕಾರ ಹಣ ಬಿಡುಗಡೆ ಮಾಡಿದರೆ ಈ ಕೆಲಸ ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. We can work out. ಇವತ್ತಿನ ದಿವಸ ಬ್ಯಾಂಕ್‌ಗಳು ಸಾಲ ಕೊಡುವುದಕ್ಕೆ ತಯಾರಾಗಿದ್ದಾರೆ. ಎರಡು ವರ್ಷಗಳಲ್ಲಿ ಸಾಲ ತೀರಿಸಬಹುದು. ಜಿಲ್ಲಾ ಪಂಚಾಯತ್ ಕಾಯ್ದೆಗೆ ಅಮೆಂಡ್‌ಮೆಂಟ್ ತರಬಹುದು. ನೀವು ಅದರಲ್ಲಿ ಹೇಳಿ ಜಿಲ್ಲಾ ಪಂಚಾಯತ್‌ನ ಇಷ್ಟು ಕೆಲಸಗಳಿಗೆ ಲಿಂಕ್ ಡಾಕ್ಯುಮೆಂಟ್‌ನಲ್ಲಿ ಹಣ ರಿಲೀಸ್ ಮಾಡುತ್ತೇವೆ. ಆದ್ದರಿಂದ ಬ್ಯಾಂಕ್‌ಗಳ ಜೊತೆ ಟೈ ಅಪ್ ಮಾಡಿಕೊಂಡು ಈ ಒಂದು ಕಾರ್ಯಕ್ರಮವನ್ನು ಅನುಷ್ಠಾನ ಮಾಡಿ, ಎರಡು ಅಥವಾ ಮೂರು ವರ್ಷಗಳಲ್ಲಿ ಹಣವನ್ನು ನಾವು ಬ್ಯಾಂಕ್‌ಗಳಿಗೆ

ಮರುಪಾವತಿ ಮಾಡುವುದಾದರೆ, at a time investment is available. ಆದ್ದರಿಂದ, ಇದಕ್ಕೆ ಒಂದು ಅಮೆಂಡ್‌ಮೆಂಟ್ ತೆಗೆದುಕೊಂಡು ಬನ್ನಿ. ಆದರೆ, ಈಗ ಇರುವ ಪದ್ಧತಿಯಲ್ಲಿಯೂ ಕೂಡ ಲೋಪದೋಷಗಳಿವೆ. ಆದ್ದರಿಂದ, ಇದನ್ನು ಸರಿಪಡಿಸಬೇಕು. ಈಗ ಇದರಲ್ಲಿ ಏನಾಗಿದೆ ಎಂದರೆ, ಅವರಿಗೆ ಅಲೋಕೇಶನ್ ಕೊಟ್ಟು, ಹಣ ಬಿಡುಗಡೆಯನ್ನು quarterly ಮಾಡುತ್ತೇವೆ. ಆದರೆ, ಕೆಲಸ ಮಾಡುವಂಥ ಸಂದರ್ಭದಲ್ಲಿ ನಾವು ಹಣವನ್ನು ಬಿಡುಗಡೆ ಮಾಡುವುದಿಲ್ಲ. ಕಳೆದ ಸಾರಿ 1000 ಕೋಟಿ ರೂ. ಅಲೋಕೇಶನ್ ಮಾಡಿ 600 ಕೋಟಿ ರೂ. ಬಿಡುಗಡೆ ಮಾಡಿದ್ದೀರಿ. ಆದ್ದರಿಂದ, ಬ್ಯಾಂಕ್‌ಗಳ ಜೊತೆ ಟೈ ಅಫ್ ಮಾಡಿಕೊಳ್ಳಿ. Timely disbursement of funds is very important. ಆದ್ದರಿಂದ, ಒಂದು ಪ್ಲಾನ್ ಮಾಡಿ ಪ್ರತಿ ಮತ ಕ್ಷೇತ್ರದಲ್ಲಿ 50 ಕಿ.ಮೀ. ರಸ್ತೆ ಮಾಡುವುದಕ್ಕೆ 3 ವರ್ಷಗಳಲ್ಲಿ ಇರತಕ್ಕಂಥ ಅಲೋಕೇಶನ್ ನಲ್ಲಿಯೇ ಸಾಧ್ಯವಿದೆ. ಆದರೆ, ಅದಕ್ಕೆ proper planning and commitment ಬೇಕಷ್ಟೆ. ಇದನ್ನು ಮಾಡುವುದಕ್ಕೆ ಸಾಧ್ಯ ಇದೆ. ಏಕೆಂದರೆ ಇದಕ್ಕೆ ಹಣ ಇದೆ. ಈಗ ಇರತಕ್ಕಂಥ ಸಂಪನ್ಮೂಲಗಳ ಪ್ರಕಾರವೇ ನಾನು ಹೇಳುತ್ತಿದ್ದೇನೆ ಹೊರತು ಬೇರೆ ಏನೂ ಹೇಳುತ್ತಿಲ್ಲ. ಈಗ ನೀವು ಸುವರ್ಣ ಗ್ರಾಮಗಳೆಂದು ಮಾಡಿದ್ದೀರಿ. ಇದನ್ನು ನಾವು ಸ್ವಾಗತ ಮಾಡಿದ್ದೇವೆ. ಏಕೆಂದರೆ, we will always welcome any constructive work of the Government. ನೀವು ಸುವರ್ಣ ಗ್ರಾಮ ಯೋಜನೆ ಮಾಡಿದ್ದೀರಿ. ಇದನ್ನು ನಾವು ಸ್ವಾಗತ ಮಾಡಿದ್ದೇವೆ. ಆದರೆ, ಇದಕ್ಕೆ ಹಣ ಎಲ್ಲಿ ಬಿಡುಗಡೆ ಮಾಡಿದ್ದೀರಿ? ಸುವರ್ಣ ಗ್ರಾಮ ಯೋಜನೆಯ ಮೊದಲ ಕಂತಿನ ಪೂರ್ಣ ಹಣವನ್ನೆ ನೀವು ಇನ್ನೂ ಬಿಡುಗಡೆ ಮಾಡಿಲ್ಲ. ಇದರ ಬಗ್ಗೆ Comptroller & Auditor Generalರವರು comment ಮಾಡಿದ್ದಾರೆ. ಈ ಮಾಹಿತಿ ಯನ್ನು ತರುವುದನ್ನು ನಾನು ಮರೆತೆ. ಅವರು ಅದರಲ್ಲಿ ಏನು comment ಮಾಡಿದ್ದಾರೆಂಬುದನ್ನು ನೀವು ನೋಡಿ. You have not released the complete funds for first phase itself. ನೀವು 2nd , 3rd phase ಮಾಡಿದ್ದೀರಿ. ಮತ್ತೆ 4th pahse ಕೂಡ ಪ್ರಕಟಣೆ ಮಾಡಿದ್ದೀರಿ. ಇದನ್ನು ನಾವು ಸ್ವಾಗತ ಮಾಡುತ್ತೇವೆ. But, there is no budgetary allocation for that. ನೀವು ಸಕಾಲದಲ್ಲಿ ಹಣ ಬಿಡುಗಡೆ ಮಾಡದೆ ಇದ್ದರೆ ಯಾವುದೇ

ಕೆಲಸ ಸಕಾಲದಲ್ಲಿ ಆಗುವುದಕ್ಕೆ ಸಾಧ್ಯವಿಲ್ಲ. ಮತ್ತೆ ಇವತ್ತಿನ ಹಳ್ಳಿ ಪ್ರದೇಶದಲ್ಲಿ ಸಮಗ್ರವಾಗಿ ಅಭಿವೃದ್ಧಿ ಮಾಡತಕ್ಕಂಥ ಒಂದು ಪ್ಲಾನ್ ಮಾಡಬೇಕು. ಇವತ್ತಿನ ದಿವಸ 2500 ಜನಸಂಖ್ಯೆ ಇರತಕ್ಕಂಥ ಹಳ್ಳಿಗಳಿಗೆ ಸ್ವಚ್ಛ ಗ್ರಾಮ ಯೋಜನೆಯಲ್ಲಿ ಸೇರಿಸಿಕೊಳ್ಳಲಾಗಿತ್ತು. ಆದರೆ, ಈಗ ಆ ಸ್ವಚ್ಛಗ್ರಾಮ ಯೋಜನೆ ಇಲ್ಲ. ಆದ್ದರಿಂದ ಮಾನ್ಯ ಸಚಿವರು ಯಾವುದಾದರೊಂದು ಹೊಸ ಯೋಜನೆಯನ್ನು ತಂದು 1500 ಅಥವಾ 2000 ಜನಸಂಖ್ಯೆ ಇರತಕ್ಕಂಥ ಹಳ್ಳಿಗಳಿಗೆ 25 ರಿಂದ 30 ಲಕ್ಷ ರೂಪಾಯಿಗಳ ಕೆಲಸವನ್ನು at a time ಮಾಡಿದರೂ ಕೂಡ ಒಳ್ಳೆಯದಾಗುತ್ತದೆ. ಈ ರೀತಿಯಾಗಿ ಯೋಜನೆ ಹಾಕಿಕೊಂಡು ಕೆಲಸ ಮಾಡಿದರೆ ಹಳ್ಳಿಗಳಲ್ಲಿರತಕ್ಕಂಥ ಎಲ್ಲಾ ಕೆಲಸಗಳನ್ನು ನಾವು ಮಾಡಬಹುದು. NREG ಯಲ್ಲಿ ಸಾಕಷ್ಟು ಸ್ಕೋಪ್ ಇದೆ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಗಳು ಮತ್ತು RDPR ಮಂತ್ರಿಗಳು ಅಧಿಕಾರಿಗಳಿಗೆ ಇದರ ಬಗ್ಗೆ ಡೈರೆಕ್ಷನ್ ಕೊಡಬೇಕು. ಅದರಲ್ಲಿ ಏನಿದೆ ಎಂದರೆ, ನೀವು ಮೊದಲು ಎಲ್ಲಾ ಊರುಗಳಲ್ಲಿ ಚರಂಡಿ ಕೆಲಸ ಮಾಡಿ ಎಂದು ಇದೆ. ಎಲ್ಲಾ ಊರುಗಳು ಹೊಲಸು ಏತಕ್ಕೆ ಆಗುತ್ತಿವೆ ಎಂದರೆ, ಅಲ್ಲಿ proper drainage system ಇಲ್ಲ. ನೀವು ಉದ್ಯೋಗ ಖಾತರಿ ಯೋಜನೆ ಯಲ್ಲಿ ಬೇರೆ ಏನು ಕೆಲಸ ಮಾಡುವುದಕ್ಕೆ ಹೋಗಬೇಡಿ, ಮೊದಲು drain outlay ಮಾಡಿ ಅದಕ್ಕೊಂದು ಅಂದಾಜು ಮಾಡಿ ಕೆಲಸ ಮಾಡಿಸಿ. ಮೊದಲು drain ಮಾಡಿ ಆನಂತರ ರಸ್ತೆ ಮಾಡಬಹುದು. ಆದರೆ, ಅದರ ಬಗ್ಗೆ ಯಾರೂ ಗಮನಕೊಡುವುದಕ್ಕೆ ಸಿದ್ಧರಿಲ್ಲ. ಮೊದಲು drain ಮಾಡಿ ಎಂದು ನಾವು ಹೇಳಿದರೆ ಗೈಡ್‌ಲೈನ್ಸ್‌ನಲ್ಲಿ ಇಲ್ಲವೆಂದು ಹೇಳುತ್ತಾರೆ. ಗೈಡ್‌ಲೈನ್ಸ್‌ನಲ್ಲಿ ನೀವು ಮಾಡಬಹುದೆಂದು ಇದೆ. Storm water drainage and drains ಮಾಡಬಹುದೆಂದು ಇದೆ. ಉದ್ಯೋಗ ಖಾತರಿ ಯೋಜನೆ ಯಲ್ಲಿ ಎಷ್ಟು ಸ್ಕೋಪ್ ಇದೆಯೋ ಅಷ್ಟೂ ಕೂಡ ಇವತ್ತಿನ ದಿವಸ ಸಮರ್ಪಕವಾಗಿ ಬಳಕೆ ಆಗುತ್ತಿಲ್ಲ. ಬಳಕೆ ಏಕೆ ಆಗುತ್ತಿಲ್ಲವೆಂದರೆ, ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲವೆಂದು ಗೊತ್ತಾಗುತ್ತದೆ. ನನಗೆ ಖುಷಿಯಾಗಿರತಕ್ಕಂಥ ಒಂದು ವಿಷಯ ಏನೆಂದರೆ, Chief Justice of High Court and Judges of High Court are so much interested in this programme. In the interest of public ಅವರೇ ಒಂದು ಕಾರ್ಯಗಾರ ಕರೆದು ನನಗೂ

ಸ್ಪೀಕರ್ ಎಂದು ಕರೆದಿದ್ದರು. ನಾನು ಅಲ್ಲಿಗೆ ಹೋಗಿದ್ದೆ. ಅವರು ರಾಜ್ಯಮಟ್ಟದಲ್ಲಿ ಮಾತ್ರ ಈ ಒಂದು ಕಾರ್ಯಾಗಾರ ಮಾಡಿ ಮರೆತು ಹೋಗುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ, ಅವರು ಪ್ರತಿಯೊಂದು ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನ ಪ್ರತಿಯೊಂದು ಗ್ರಾಮಕ್ಕೆ ಹೋಗಿ Judges are promoting this scheme. We felt very happy. ಸರ್ಕಾರ ಮಾಡತಕ್ಕಂಥ ಕೆಲಸವನ್ನು ಇವತ್ತಿನದಿವಸ Judiciary ಮಾಡುವುದಕ್ಕೆ ಮುಂದಕ್ಕೆ ಬಂದಿದ್ದಾರೆಂದರೆ they are feeling that the Government is not acting properly. ಆದ್ದರಿಂದ, ಇದರ ಬಗ್ಗೆ ನೀವು ಗಮನಹರಿಸಿ ಇದಕ್ಕೊಂದು ಟಾರ್ಗೆಟ್ ಕೊಡಬೇಕು. ನಾನು ಮಂತ್ರಿಯವರಿಗೆ ಒಂದು ಸಲಹೆ ಕೊಟ್ಟಿದ್ದೆ. ಅದೇನೆಂದರೆ, ಪ್ರತಿಯೊಂದು ಗ್ರಾಮಪಂಚಾಯತ್‌ನಲ್ಲಿ ಕಡ್ಡಾಯವಾಗಿ 50 ಲಕ್ಷ ರೂಪಾಯಿ ಖರ್ಚು ಮಾಡಬೇಕೆಂಬ ಟಾರ್ಗೆಟ್‌ನ್ನು ನೀವು ಕೊಟ್ಟರೆ ಮಾತರ ಈ ಒಂದು ಯೋಜನೆಯನ್ನು ಮಾಡುವುದಕ್ಕೆ ಸಾಧ್ಯ ಇದೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ನನ್ನ ಮಾತನ್ನು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅದೇನೆಂದರೆ, ಇವತ್ತಿನಿಂದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಸ್ಟ್ರೈಕ್ ಇದೆ. ಕಂಪ್ಯೂಟರ್ ಆಪರೇಟರ್‌ಗಳನ್ನು ನೀವು ನೇಮಕ ಮಾಡಿಕೊಂಡಿದ್ದೀರಿ. ಈ ಹುದ್ದೆಯನ್ನು ಗ್ರಾಮಪಂಚಾಯಿತಿಯವರೆ ನೇಮಕ ಮಾಡಿಕೊಳ್ಳಬೇಕೆಂಬುದು ಕೇಂದ್ರ ಸರ್ಕಾರ ಹೇಳಿದೆ. ಆದರೆ, ಇವರನ್ನು ತೆಗೆದು ಕಿಯೋನಿಕ್ಸ್ ಅಥವಾ ಇನ್ನ್ಯಾರಿಗೋಗುತ್ತಿಗೆ ಕೊಡುತ್ತಿದ್ದೀರೆಂದು ಅವರೆಲ್ಲಾ ಇವತ್ತು ಸ್ಟ್ರೈಕ್ ಮಾಡುತ್ತಿದ್ದಾರೆ. ಇದರಿಂದ ಇವತ್ತು ಇಡೀ ರಾಜ್ಯದಲ್ಲಿ ಉದ್ಯೋಗ ಖಾತರಿ ಯೋಜನೆ ಬಂದ್ ಆಗುತ್ತದೆ. ಏಕೆಂದರೆ, ಇವರ್ಯಾರೂ ಅದಕ್ಕೆ co-operate ಮಾಡುತ್ತಿಲ್ಲ. ಈ ಹುದ್ದೆಗೆ outsource ಮಾಡಿಕೊಳ್ಳತಕ್ಕಂಥ ಅವಶ್ಯಕತೆ ಇದೆ ಎಂದು ನಾನು ತಿಳಿದುಕೊಳ್ಳುವುದಿಲ್ಲ. ಆದ್ದರಿಂದ, ಇದನ್ನು ದಯವಿಟ್ಟು outsource ಮಾಡಬೇಡಿ. ಏಕೆಂದರೆ, ಗ್ರಾಮಪಂಚಾಯಿತಿಯವರು ನೇಮಕ ಮಾಡಿಕೊಂಡಿರುವ computer operators ಅದೇ ಗ್ರಾಮಪಂಚಾಯಿತಿಗೆ ಸೇರಿದವರು ಇದ್ದಾರೆ. ಅವರಿಗೆ ಕಾಳಜಿ ಮತ್ತು ಕಳಕಳಿ ಇದೆ. ಆದ್ದರಿಂದ, ಈಗ ಏತಕ್ಕೋಸ್ಕರ ಕಿಯೋನಿಕ್ಸ್‌ಗೆ ಕೊಡುತ್ತಿದ್ದೀರಿ? ಕಿಯೋನಿಕ್ಸ್‌ರವರಿಗೆ ಏನು ಕಮಿಟ್‌ಮೆಂಟ್ ಇದೆ ಎಂಬುದು ನನಗೆ ಹೇಳಿ, ಅವರನ್ನು hire

ಮಾಡುತ್ತಾರೆ? ಮತ್ತೆ ಅವರೇಕೆ ಹಳ್ಳಿಯಲ್ಲಿ ಬಂದು ಇರುತ್ತಾರೆ? ನೀವು ಕೊಡುವ ಸಂಬಳಕ್ಕೆ ಅವರ್ಯಾರೂ ಕೆಲಸ ಮಾಡುವುದಕ್ಕೆ ಅಲ್ಲಿಗೆ ಬರುವುದಿಲ್ಲ. ಆದ್ದರಿಂದ ಆ ರೀತಿಯಾಗಿ ಮಾಡುವುದಕ್ಕೆ ಹೋಗಬೇಡಿ. ಅಲ್ಲಿರತಕ್ಕಂಥ ಜನರನ್ನು ಅಲ್ಲಿಯೇ ಮುಂದುವರೆಸಿ. ಅವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಉದ್ಯೋಗಖಾತರಿ ಯೋಜನೆಯಲ್ಲಿ ಒಂದರೆಡು ತಿಂಗಳಿಂದ ನಮ್ಮ ರಾಜ್ಯದಲ್ಲಿ ಬಹಳಷ್ಟು ಹಣ ಖರ್ಚಾಗಿದೆ. Udyog Khatari has made a big leap in this. ಆದ್ದರಿಂದ, ಅವರನ್ನು ತೆಗೆಯತಕ್ಕಂಥ ಅವಶ್ಯಕತೆ ಇಲ್ಲ. ಆ ರೀತಿಯಾಗಿ ಮಾಡುವುದಕ್ಕೆ ಹೋಗಬೇಡಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಒಂದು ವೇಳೆ ನೀವೇನಾದರೂ ಮಾಡುವುದಕ್ಕೆ ಹೋದರೆ ಉದ್ಯೋಗ ಖಾತರಿ ಯೋಜನೆ ನಿಂತು ಹೋಗುತ್ತದೆ. ಮುಂದೆ ಯಾರೂ ಕೂಡ ಕೆಲಸ ಮಾಡುವುದಿಲ್ಲ. ನಮ್ಮ ಗ್ರಾಮ ಪಂಚಾಯಿತಿಯಲ್ಲಿ functionaries proper ಆಗಿ ಇಲ್ಲ. Panchayat Development Officer ಆದ್ದರಿಂದ ಒಬ್ಬರನ್ನು ನೇಮಕ ಮಾಡಿಕೊಳ್ಳುತ್ತೇವೆಂದು ತಾವು ಹೇಳಿದ್ದೀರಿ. ಅದನ್ನು ನಾವು ಸ್ವಾಗತ ಮಾಡಿದ್ದೇವೆ. We appreciate and we welcome it. ಆದರೆ, ನೇಮಕಾತಿಯನ್ನು ಯಾವ ರೀತಿ ಮಾಡಿಕೊಳ್ಳುತ್ತೀದ್ದೀರಿ ಎಂಬುದನ್ನು ತಾವು ಗಮನಿಸಬೇಕು. ಕೆಪಿಎಸ್‌ಸಿ ಮೂಲಕ ನೇಮಕಾತಿ ಮಾಡಿಕೊಳ್ಳದೆ ನೀವುಗಳು ನೇರವಾಗಿ ನೇಮಕಾತಿ ಮಾಡಿಕೊಳ್ಳುತ್ತಿದ್ದು ಈ ಹುದ್ದೆಗೆ English and Computer education is compulsory ಎಂದು ಹೇಳಿದ್ದೀರಿ. English and Computer education is compulsory ಎಂದು ನೀವು ಮಾಡಿದರೆ ನಮ್ಮ ಹಳ್ಳಿ ಪ್ರದೇಶಲ್ಲಿರತಕ್ಕಂಥ ಮಕ್ಕಳಿಗೆ ಅವಕಾಶ ಸಿಗುವುದಿಲ್ಲ. That is a closed chapter. ಹಳ್ಳಿ ಪ್ರದೇಶಲ್ಲಿ ರತಕ್ಕಂಥ ಮಕ್ಕಳು ಎಲ್ಲಿಯವರೆಗೆ ಅಲ್ಲಿ ಬರುವುದಿಲ್ಲವೋ ಆಗ ಅವರುಗಳು ಊರಿನಲ್ಲಿದ್ದು ಕೆಲಸ ಮಾಡುವುದಿಲ್ಲ. ಆದ್ದರಿಂದ, ದಯವಿಟ್ಟು ಆ clause ತೆಗೆದು ಹಾಕಿ. Computer operator ಎಲ್ಲಾ ಕೆಲಸವನ್ನು ಮಾಡುತ್ತಾರೆ. ಆದ್ದರಿಂದ English ಅವಶ್ಯಕತೆ ಅಲ್ಲಿ ಏನಿದೆ ಎಂಬುದನ್ನು ತಾವು ಹೇಳಿ? ಆದ್ದೆಇಂದ, English ಕಡ್ಡಾಯವೆಂದು ಏತಕ್ಕೆ ಹೇಳುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಈ ರೀತಿಯಾದ ಸಲಹೆಯನ್ನು ಯಾವ ಅಧಿಕಾರಿ ನಿಮಗೆ ಕೊಟ್ಟಿದ್ದಾರೆಯೋ ಗೊತ್ತಿಲ್ಲ. English and Computer education is

compulsory ಎಂಬುದನ್ನು ತೆಗೆದು ಹಾಕಿ. ಒಂದು ವೇಳೆ ಅದನ್ನು ಇಟ್ಟರೆ ನಮ್ಮ ಪಂಚಾಯಿತಿಗಳು ಸುಧಾರಣೆ ಆಗುವುದಿಲ್ಲ. ಆದ್ದರಿಂದ, ಅದನ್ನು ತೆಗೆದು ಹಾಕಿ ಮಾಡಿದರೆ ಒಳ್ಳೆಯದು. ಮತ್ತೆ ಗ್ರಾಮಪಂಚಾಯಿತಿಯಲ್ಲಿ ಅನೇಕ ವರ್ಷಗಳಿಂದ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಕೆಲಸವನ್ನು ಮಾಡುತ್ತಿದ್ದಾರೆ. ಅವರಿಗೆ ಪ್ರಮೋಷನ್ ಸ್ಕೋಪ್ ಇಲ್ಲ. ಆದ್ದರಿಂದ, ಪ್ರಮೋಷನ್‌ನಲ್ಲಿ 33% ನಷ್ಟು ಸ್ಕೋಪ್ ಅವರಿಗೆ ಕೊಡಬೇಕು. ಏಕೆಂದರೆ, ಅನೇಕ ವರ್ಷಗಳ ಅನುಭವ ಅವರಿಗೆ ಇರುತ್ತದೆ. ನೀವು ಈ ರೀತಿಯಾಗಿ ಮಾಡಿದರೆ ಅವರೆಲ್ಲಾ ಬೀದಿಪಾಲಾಗುತ್ತಾರೆ. ಮತ್ತೆ ಗ್ರಾಮ ಪಂಚಾಯತ್‌ನಲ್ಲಿ ಪಂಪ್ ಆಪರೇಟರ್ಸ್ ಮತ್ತು ಬಿಲ್ ಕಲೆಕ್ಟರ್ಸ್ ಇದ್ದಾರೆ. ಇವತ್ತಿನದಿವಸ ಒಬ್ಬ ಗ್ರಾಮ ಪಂಚಾಯತ್ ಕಾರ್ಯದರ್ಶಿಗೆ ಮೂರು ಮೂರು ಗ್ರಾಮ ಪಂಚಾಯಿತಿಯ ಇನ್‌ಚಾರ್ಜ್ ಇದೆ. ಒಂದೊಂದು ಗ್ರಾಮ ಪಂಚಾಯತ್‌ಗೆ ನಾಲ್ಕು ದಿವಸಕ್ಕೊಂದು ಸಾರಿ ಈತ ಬರುತ್ತಾನೆ. ಉಳಿದ ಸಮಯದಲ್ಲಿ ಗ್ರಾಮ ಪಂಚಾಯತ್‌ನಲ್ಲಿ ಪಂಪ್ ಆಪರೇಟರ್ಸ್ ಮತ್ತು ಬಿಲ್ ಕಲೆಕ್ಟರ್ಸ್ ಮಾತ್ರ ಇರುತ್ತಾರೆ. ಬಿಲ್ ಕಲೆಕ್ಟರ್‌ಗಳು ವಿದ್ಯಾವಂತರಾಗಿದ್ದರೆ ಅವರು ಮುಂದಕ್ಕೆ ಬರುವುದಕ್ಕೋಸ್ಕರ ಪ್ರಮೋಷನ್‌ಗೆ ಅವಕಾಶ ಕೊಡಿ. ನಾವು ಯಾವುದೇ ಕೆಲಸವನ್ನು ಮಾಡಬೇಕಾದರೆ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟು ಕೊಂಡು ಮತ್ತು ಎಲ್ಲರ ಆಸಕ್ತಿಯನ್ನು protect ಮಾಡುವಂಥ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಕೇವಲ ಅಧಿಕಾರಿಗಳ ಸಲಹೆ ಮೇಲೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ತಾವು ಜನರ ಪರವಾಗಿ, ರೈತರ ಪರವಾಗಿ, ಬಡವರ ಪರವಾಗಿರತಕ್ಕಂಥ ನಿಲುವು ತೆಗೆದುಕೊಳ್ಳಬೇಕಾದರೆ, ಖಂಡಿತವಾಗಿ ಜನರ ಪರವಾದಂಥ ವಿಚಾರವನ್ನು ನಾವೂ ಕೂಡ ಮಾಡಬೇಕಾಗುತ್ತದೆ. ಅದಕ್ಕಾಗಿ ಇಂಗ್ಲಿಷನ್ನು ತೆಗೆಯಬೇಕು. Computer education ತೆಗೆಯ ಬೇಕು. ಅಲ್ಲಿರುವವರಿಗೆ internal promotionಗೆ ಅವಕಾಶವನ್ನು ಮಾಡಿ ಕೊಡಬೇಕು. ಇವೆಲ್ಲಾ ಮಾಡಿ ಕೊಡದಿದ್ದರೆ ಇವತ್ತು ಎಲ್ಲಾ ಗ್ರಾಮ ಪಂಚಾಯಿತಿಯ ನೌಕರರು ಸ್ಟ್ರೈಕ್ ಮೇಲೆ ಇದ್ದಾರೆ. ಗ್ರಾಮ ಪಂಚಾಯಿತಿ ಯವರು ಸ್ಟ್ರೈಕ್‌ಗೆ ಒಂದು ವೇಳೆ ಹೋದರೆ ಉದ್ಯೋಗ ಖಾತರಿ ಯೋಜನೆ ಆದರೆ ಬರದ ಬಗ್ಗೆ ಏನು ಕೆಲಸವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಸ್ವಲ್ಪ ಬದಲಿಸಬೇಕು. ಬರ ಪರಿಹಾರದಲ್ಲಿ ನೀವು ಹಣವನ್ನು ಕೊಟ್ಟಿದ್ದೀರಿ.

ಅದಕ್ಕೆ employment generationಗೆ scope ಇಲ್ಲವೆಂದು ಹೇಳಿದ್ದೀರಿ. ದಯವಿಟ್ಟು ಅದನ್ನು ಬದಲಾವಣೆ ಮಾಡಬೇಕು. ಉದ್ಯೋಗ ಖಾತರಿ ಯೋಜನೆಯನ್ನೂ ಕೂಡ ಮಾಡೋಣ. ಎಲ್ಲಿ ಉದ್ಯೋಗ ಖಾತರಿಯಲ್ಲಿ 40–60 match ಆಗುತ್ತಿಲ್ಲ, ಅಲ್ಲಿ convergenceಗೆ, material componentಗೆ, ಇದಕ್ಕೆ ಹಣ ಉಪಯೋಗ ಮಾಡುವುದಕ್ಕೆ ಗ್ರಾಮ ಪಂಚಾಯತಿಗೆ ಹಣವನ್ನು ಕೊಡಿ. ಉದ್ಯೋಗ ಖಾತರಿ convergence ಮಾಡಿ ಬೇರೆ ಬೇರೆ ಇಲಾಖೆಯಿಂದ ಇರುವ ಕಾರ್ಯಕ್ರಮವನ್ನು ನೀವು ಇವತ್ತು ಅದನ್ನು ಮಾಡಿದರೆ ಉದ್ಯೋಗ ಖಾತರಿ ಯೋಜನೆಯಲ್ಲಿ 3000 ಏಕೆ 6000 ಕೋಟಿ ರೂ.ಗಳನ್ನು ನಾವು ಖರ್ಚು ಮಾಡುವುದಕ್ಕೆ ಸಾಧ್ಯವಿದೆ. ಈ ಉದ್ಯೋಗ ಖಾತರಿಯನ್ನು ಬಳಸಿಕೊಂಡು ನಮ್ಮ ನಮ್ಮ productivity of the land increase ಮಾಡುವುದಕ್ಕೆ ಸಾಧ್ಯವಿದೆ. ಏಕೆಂದರೆ ಎಲ್ಲಾ ಕಡೆ ಬದು ಹಾಕುತ್ತಿದ್ದೇವೆ. Land levelingಗೆ scope ಇಲ್ಲ. ಸ್ವಲ್ಪ ಸರಳೀಕರಣ ವನ್ನು ಮಾಡಿ land levelingಗೆ scope ಮಾಡಿ ಕೊಡಿ. ಇವತ್ತು land productivity invrease ಆಗಬೇಕಾದರೆ land level ಇರುವುದು ಬಹಳ ಮುಖ್ಯವಾಗಿದೆ. ಅದಕ್ಕೆ ನೀವು ಅವಕಾಶವನ್ನು ಮಾಡಿ ಕೊಡಿ. ಇವತ್ತು ಡ್ರೈ ಪ್ರದೇಶದಲ್ಲಿ ಎಸ್.ಸಿ:ಎಸ್.ಟಿ. ಯವರಿಗೆ ಬಾವಿಯನ್ನು ತೋಡಿಕೊಳ್ಳುವುದಕ್ಕೆ ಅವಕಾಶವಿದೆ. ಅದನ್ನು ಸಾಮಾನ್ಯ ವರ್ಗದ ರೈತರಿಗೂ ಅವಕಾಶವನ್ನು ಮಾಡಿ ಕೊಡಿ. ಬದು ಹಾಕುವುದರಲ್ಲಿ ಎಲ್ಲಾ ರೈತರಿಗೆ ನೀವು ಅವಕಾಶವನ್ನು ಮಾಡಿ ಕೊಡಿ. ಇದನ್ನು ಮಾಡಿ ಕೊಟ್ಟರೆ ಏನಾಗುತ್ತದೆಂದರೆ, ಜನಪರವಾಗಿ ಇವತ್ತು ನಮಗೆ ಇರತಕ್ಕಂಥ Agriculture land productivity increase ಆಗುತ್ತದೆ. ರೈತ ಇವತ್ತು ಕೃಷಿ ಒಂದು ಆದಾಯಕರವಾಗಿರತಕ್ಕಂಥ ವ್ಯವಸಾಯವೆಂದು ಅಂದುಕೊಂಡಾಗ ಮಾತ್ರ ಅವನು ಕೃಷಿಯಲ್ಲಿ ಇರುವುದಕ್ಕೆ ಸಾಧ್ಯವಿದೆ. ಇದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಒಂದು ವೇಳೆ ಇದನ್ನು ನೀವು ಅರ್ಥ ಮಾಡಿಕೊಳ್ಳದೆ ಹೋದರೆ ಏನು ಸಾಧ್ಯವಿಲ್ಲ. ಏಕೋ ಇವತ್ತು ಇಲ್ಲಿ PWD ಮಂತ್ರಿಗಳು ಇಲ್ಲ.

ಅಧ್ಯಕ್ಷರು : ನೀವು ಮಾತನಾಡುತ್ತಿರುವುದು one hour ಆಯಿತು. ನೀವು 4–5 ಜನ ಮಾತನಾಡಿ. ಆಮೇಲೆ ಯಾರಾದರೂ ಶಾಸಕರು ಅವಕಾಶ ಸಿಕ್ಕಿಲ್ಲವೆಂದರೆ I am not responsible. ಏಕೆಂದರೆ ನೀವು ನಿಮ್ಮ

ಲಿಮಿಟ್‌ನ್ನು ಹಾಕಿಕೊಳ್ಳಬೇಕಾಗುತ್ತದೆ. ನಿಮ್ಮದೇ ಪಕ್ಷದ 4–5 ಜನ ಶಾಸಕರಿಗೆ ಅವಕಾಶ ಸಿಗುವುದಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಚರ್ಚೆಗೆ ಕರೆದಿರತಕ್ಕಂಥವರು ಅವಕಾಶ ಕೊಟ್ಟು ಇನ್ನು ಎರಡು ದಿವಸ extend ಮಾಡಿ ಸ್ವಾಮಿ ಹಾಗಾದರೆ ಚರ್ಚೆಯನ್ನು ಮಾಡುವುದು ಬಿಡಿ.

ಅಧ್ಯಕ್ಷರು : ಬಿಡಿ. ನೀವು ಲಿಮಿಟ್ ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಅವರು ಇನ್ನು ಒಂದು ತಾಸು ಮಾತನಾಡಲಿ. ನೀವು ಇನ್ನು ಒಂದು ತಾಸು ಮಾತನಾಡಿ. ನಿಮಗೆ ಅವಕಾಶ ಕೊಡುತ್ತೇನೆ. ಉಳಿದವರು ಅವಕಾಶ ಸಿಕ್ಕಲ್ಲವೆಂದು ಕೊನೆಗೆ ನಮ್ಮನ್ನು ಬ್ಲೇಮ್ ಮಾಡಬೇಡಿ. ಇನ್ನು ಒಂದು ತಾಸು ಮಾತನಾಡಿ. I am sorry. ಈ ರೀತಿ ಮಾತನಾಡುವುದಾದರೆ ಎಲ್ಲರೂ ಮಾತನಾಡಬೇಕೆಂದು ಹೇಳುತ್ತಾರೆ. ಒಂದೊಂದು ಪಕ್ಷದಿಂದ 15–20 ಜನ ಶಾಸಕರ ಲಿಸ್ಟ್ ಕೊಟ್ಟಿದ್ದೀರಿ. ಎಲ್ಲರಿಗೂ ಅವಕಾಶವನ್ನು ಕೊಡಬೇಕೆಂದು ಹೇಳುತ್ತಿದ್ದೀರಿ. ಅವಕಾಶ ಸಿಗದಿರುವಾಗ ನಮಗೆ ಅವಕಾಶ ಕೊಟ್ಟಿಲ್ಲವೆಂದು ಹೇಳುತ್ತೀರಿ. ಲಾಸ್ಟ್‌ಗೆ 5 ನಿಮಿಷ ಕೊಡಿ ಎಂದು ಕೇಳುತ್ತಾರೆ.

(ಗೊಂದಲ)

ಅಧ್ಯಕ್ಷರು : ಒಂದು ತಾಸು ಆಯಿತು. ನಾನು fifteen minutes time limit ಹಾಕಿದ್ದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : 15 ನಿಮಿಷ ಎಂದು ಲಿಮಿಟ್ ಮಾಡಬೇಡಿ. ಅರ್ಧರ್ಧ ಗಂಟೆ ಕೊಡಿ.

ಅಧ್ಯಕ್ಷರು : ಇವತ್ತು ಸಾಯಂಕಾಲವರೆಗೆ ಟೈಮ್ ಇದೆ.

ಶ್ರೀ ಸಿ.ಟಿ. ರವಿ : 60 ವರ್ಷದಿಂದ ಇದನ್ನು ಪರಿಹಾರ ಮಾಡಿದ್ದರೆ ಈ ಸಮಸ್ಯೆಯೇ ಇರುತ್ತಿರಲಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಈಗ ಅಧಿಕಾರವನ್ನು ಕೊಟ್ಟಿದ್ದಾರೆ. ಪರಿಹಾರವನ್ನು ಈಗ ಮಾಡಿ. ಹಾಗಾದರೆ ಚರ್ಚೆಗೆ ಏಕೆ ಅವಕಾಶವನ್ನು ಕೊಟ್ಟಿದ್ದೀರಿ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, please. ಶ್ರೀ ಹೆಚ್.ಸಿ. ಬಾಲಕೃಷ್ಣರವರೆ, ಏಕೆ ಆ ರೀತಿ ಮಾಡುತ್ತೀರಿ? ನಾನು ನಿಮ್ಮ ಹತ್ತಿರ ಇಷ್ಟೇ ವಿನಂತಿಯನ್ನು

ಮಾಡುವುದು. ಹೆಚ್ಚು ಜನ ಶಾಸಕರು ಮಾತನಾಡಬೇಕು ಎನ್ನುವುದು ಮಾನ್ಯ ಸಿದ್ಧರಾಮಯ್ಯರವರದ್ದು ಮತ್ತು ಎಲ್ಲ ಹಿರಿಯರ ಅಪೇಕ್ಷೆ. ನಮ್ಮಲ್ಲಿ ಬಹಳ ಜನ ಇದರಲ್ಲಿ ಪಕ್ಷಾತೀತವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು ಎನ್ನುವುದಕ್ಕೋಸ್ಕರ ಮೂರು ದಿವಸ ಈ ಚರ್ಚೆ ಮಾಡುತ್ತಿರುವಂಥದ್ದು. ಆಯಾಯ ಪಾರ್ಟಿಗೆ ಸಮಯವನ್ನು ನಿಗದಿ ಮಾಡಿ. ಅವರು ಏನು ಬೇಕಾದರೂ ಹಂಚಿಕೊಳ್ಳಲಿ. ಅವರು ಮಾತನಾಡಲಿ ಸಾಯಂಕಾಲ 8 ಗಂಟೆಯವರೆಗೆ ನಾವು ಕುಳಿತುಕೊಳ್ಳುವುದಕ್ಕೆ ಸಿದ್ಧವಿದ್ದೇವೆ. ಆದರೆ ಹೆಚ್ಚು ಜನರಿಗೆ ಅವಕಾಶ ಸಿಗುವುದಕ್ಕೆ ನೀವು ನಿಮ್ಮ ಸದಸ್ಯರಿಗೆ ಹೇಳಿ. ನಮ್ಮ ಯಾವ ಸದಸ್ಯರು 15 ನಿಮಿಷದ ಮೇಲೆ ಮಾತನಾಡುವುದಿಲ್ಲ. ಅಂದರೆ ಹೆಚ್ಚು ಜನ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ. ಸಮಯವನ್ನು ಆ ಪಕ್ಷದವರಿಗೆ ಬಿಟ್ಟು ಬಿಡಿ. ನಾವು ಸಾಯಂಕಾಲ ಬೇಕಾದರೆ 7 ಗಂಟೆ ಯವರೆಗೆ ಕುಳಿತುಕೊಳ್ಳೋಣ. 7 ಗಂಟೆ ಮೇಲೆ ಇನ್ನೊಂದು ಸಭೆ ಇದೆ.

ಅಧ್ಯಕ್ಷರು : ಆದರೆ ಲಿಮಿಟೇಶನ್ ಹಾಕಿಕೊಂಡರೆ ಅಡ್ಡಿ ಇಲ್ಲ. ರಾತ್ರಿ 8–9 ಗಂಟೆ ಮೇಲೆ 4–5 ಜನ 5 ನಿಮಿಷ ಅವಕಾಶ ಕೊಡಿ ಎಂದು ಮಾತನಾಡುತ್ತಾರೆ. ಒಬ್ಬರೇ ಒಂದೆರಡು ತಾಸು ಮಾತನಾಡಿ ಬಿಟ್ಟರೆ, opportunity ಸಿಗುವುದು 4–5 ಜನರಿಗೆ ಅಷ್ಟೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಇನ್ನು 10 ನಿಮಿಷದಲ್ಲಿ ಮಾತನಾಡಿ ಮುಗಿಸಿ ಬಿಡುತ್ತೇನೆ. ಎಡು ವಿಷಯ ಗಳು ಇವೆ. ನೀವು·ಬೇಕಾದರೆ ಕೇಳಿ. ಯಾರಾದರೂ ಹೇಳಲಿ, ನಿರುಪಯುಕ್ತ ವಾಗಿರುವಂಥದ್ದನ್ನು ನಾನು ಒಂದನ್ನೂ ಮಾತನಾಡಿಲ್ಲ. ರಾಜಕೀಯವಾಗಿ ಒಂದನ್ನೂ ಮಾತನಾಡಿಲ್ಲ.

ಅಧ್ಯಕ್ಷರು : ನೀವು ರಾಜಕೀಯವಾಗಿ ಮಾತನಾಡಿದ್ದೀರೆಂದು ಯಾರು ಹೇಳಿಯೇ ಇಲ್ಲ. ಲಿಮಿಟೇಶನ್ ಹಾಕಿಕೊಳ್ಳಿ ಎಂದು ಅಷ್ಟೇ ಹೇಳಿರುವುದು.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಇವತ್ತು ಈ ಸದನದಲ್ಲಿ ಏನು ಮಾತನಾಡಿದ್ದೇನೆ ಅದು ದಾಖಲೆಯಲ್ಲಿ ಇದೆ. ನಾನು ಆ ಕಡೆ ಬೆಂಚಲ್ಲಿ ಬಂದು implement ಮಾಡದಿದ್ದರೆ ನೀವು ಬಂದು ನನ್ನ ಕಿವಿ ಹಿಡಿದು ಕೇಳಿ. ಸುಮ್ಮನೆ ನಾವು ಸಲಹೆಯನ್ನು ಕೊಡುತ್ತಿಲ್ಲ. ನಾವು ಅಧಿಕಾರಕ್ಕೆ ಬಂದರೆ ಅದನ್ನು ನಾವು implement ಮಾಡಿ ತೋರಿಸುತ್ತೇವೆ.

ಹಿಂದೆ ಮಾಡಿದ್ದನ್ನು ನೀವು ಹೇಳಬೇಡಿ. ನಾನು ನನ್ನ ಮಾತನ್ನು ಹೇಳುತ್ತಿದ್ದೇನೆ. ಕೆಲವೇ ಕೆಲವು ಸಲಹೆಗಳನ್ನು ನಾನು ಹೇಳುತ್ತೇನೆ. ಪ್ರಮುಖವಾಗಿ ನಾನು ಮೂರೇ ವಿಷಯಗಳ ಬಗ್ಗೆ ಮಾತನಾಡುತ್ತೇನೆ. ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ನೈರ್ಮಲ್ಯ. ಇವತ್ತು ಏನಾಗಿದೆ, ಗ್ರಾಮೀಣ ನೈರ್ಮಲ್ಯವನ್ನು ಕಾಪಾಡುವುದಕ್ಕೆ ನಮಗೆ ಸಾಧ್ಯವಾಗುತ್ತಿಲ್ಲ ಇವತ್ತು communicable diseases ನಿಂದಾಗಿ ನಮ್ಮ ಜನ ಈ ಯುಗದಲ್ಲಿ ಸಾಯುತ್ತಿದ್ದಾರೆ. ಯುವ ರೀತಿಯಾಗಿರತಕ್ಕಂಥ ವ್ಯವಸ್ಥೆಯನ್ನು ನಾವು ನಿರ್ಮಾಣ ಮಾಡಬೇಕು? ಇದಕ್ಕೆ ಏನು ಪರಿಹಾರ? ಇವತ್ತು ಗ್ರಾಮೀಣ ನೈರ್ಮಲ್ಯ ಬಹಳ ಮುಖ್ಯ. ಅದಕ್ಕಾಗಿ ನಾನು ಒಂದು ಸಲಹೆಯನ್ನು ಕೊಟ್ಟಿದ್ದೇನೆ. ನೀವು internal drainage ಅನ್ನು ಉದ್ಯೋಗ ಖಾತರಿಯಲ್ಲಿ ಮಾಡಿಸಿ. ಆಮೇಲೆ ಶೌಚಾಲಯ ಬಗ್ಗೆ. ಯಾವುದೇ ಹಳ್ಳಿಗಳಿಗೆ ನಾವು ಹೋಗಲಿ. ಹೆಣ್ಣು ಮಕ್ಕಳ ಮೊದಲನೆಯ ಬೇಡಿಕೆ, ನಮಗೆ ಶೌಚಾಲಯವಿಲ್ಲ. "ನಮಗೆ ಶೌಚಾಲಯ ಬೇಕು". ಎಂದು ಹೇಳುತ್ತಾರೆ. ನಮಗೆ ಬಹಳ ದುಃಖವಾಗುತ್ತಿದೆ. ಏಕೆಂದರೆ, ಅದಕ್ಕೆ ಯಾವುದೇ ಸ್ಕೀಂ ಇಲ್ಲ. ಕೇಂದ್ರ ಸರ್ಕಾರದ Total Sanitation Programme ಇದೆ. ಆದರೆ ನಿಮ್ಮದು ಎಷ್ಟು percentage ಬಳಕೆಯಾಗಿದೆ. ಅದರಲ್ಲಿ 30% utilization ಇಲ್ಲ. ಅದರಲ್ಲಿ ಏನು ತೊಂದರೆ ಇದೆ ಎಂದರೆ, ನೀವು 2000 ರೂ.ಗಳನ್ನು ಕೊಡುತ್ತಿದ್ದೀರಿ. ನೀವು ಸಾಮೂಹಿಕ ಶೌಚಾಲಯವನ್ನು ಮಾಡಿದರೆ open ಶೌಚಾಲಯಕ್ಕೆ ಇಂಜನೀಯರಿಂಗ್ ಡಿಪಾರ್ಟ್‌ಮೆಂಟ್‌ದವರು ಅವಕಾಶವನ್ನು ಕೊಡುತ್ತಿಲ್ಲ. open ಶೌಚಾಲಯಕ್ಕೆ ನೀರು ಹಾಕಬೇಕು. ಅದಕ್ಕೆ maintenance ಬೇಕು. ಹಾಗಾದರೆ ಏನು ಮಾಡಬೇಕು? Individual ಶೌಚಾಲಯ ಮಾಡತಕ್ಕಂಥದ್ದು, ನೀವು ಸರ್ಕಾರದಿಂದ Individual ಮನೆಗೆ ಹಣ ಕೊಡಬೇಕು. ಯಾರು BPL ಕಾರ್ಡುದಾರರಿದ್ದಾರೆ ಅವರೆಲ್ಲರಿಗೂ ಕೂಡ ನೀವು 5–8 ಸಾವಿರ ರೂ.ಗಳ ಒಂದು estimate ಮಾಡಿಸಿ. ಇದು ಬಹಳ ಅಗತ್ಯ ಇರುವುದರಿಂದ 75% ಸಬ್ಸಿಡಿ ಕೊಡಿ. ಹೆಲ್ತ್‌ನಲ್ಲಿ ನಾವು ಯಾವುದ್ಯಾವುದಕ್ಕೋ ಹಣವನ್ನು ಉಪಯೋಗಿಸುತ್ತಿದ್ದೇವೆ, ಅದರಲ್ಲಿ ಶೇಕಡ 50ರಷ್ಟು ಹಣವನ್ನು ಉಳಿಸಬಹುದು. ಬೇರೆ ಬೇರೆಯದಕ್ಕೆ ನಮ್ಮ ಸರ್ಕಾರದ ಹಣ ಖರ್ಚಾಗುತ್ತಿದೆ. ಇವತ್ತು ಹಳ್ಳಿಯ ನೈರ್ಮಲ್ಯವನ್ನು ನಾವು ಕಾಪಾಡಿದರೆ 50%

communicable diseases ಕಡಿಮೆ ಆಗುವ ಸಾಧ್ಯವಿದೆ. ಇದನ್ನು ಮಾಡತಕ್ಕಂಥ ಅವಶ್ಯಕತೆ ಇದೆ. ಸರ್ಕಾರ ಇದಕ್ಕೆ ಐದು ಸಾವಿರ ಇರಲಿ, ಎಂಟು ಸಾವಿರ ಇರಲಿ, ಹಣವನ್ನು ಫಿಕ್ಸ್ ಮಾಡಿ 75% ನೀವು ಮಾಡಿ, 25 individual ಆಗಿ ಹಾಕಿಕೊಂಡರೆ ಇವತ್ತು ಏನಾದರೂ ಸುಧಾರಣೆ ಆಗುವುದಕ್ಕೆ ಸಾಧ್ಯವಿದೆ, ಇಲ್ಲದಿದ್ದರೆ ಸುಧಾರಣೆ ಆಗುವುದಕ್ಕೆ ಸಾಧ್ಯವಿಲ್ಲ. ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಈಗ ಸದನದಲ್ಲಿ ಇಲ್ಲ. ಈ ವರ್ಷ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸವೇ ಇಲ್ಲ. ಏಕೆಂದರೆ ನಮ್ಮ ರಾಜ್ಯದಲ್ಲಿ MDRs, State Highways, National Highways ಎಷ್ಟು ಇವೆ, ಅವೆಲ್ಲವೂ ಇವತ್ತು ದುಸ್ಥಿತಿಯಲ್ಲಿವೆ. ಅದಕ್ಕೆ ನೀವು ಏನು ಪ್ಲಾನ್ ಮಾಡಿದ್ದೀರಿ? ನಿಮ್ಮ MDRs, State Highways ಗೆ ನೀವು ಏನಾದರೂ ಒಂದು ಪ್ಲಾನ್ ಮಾಡಿ. ಇವತ್ತು ನಿಮ್ಮ ರೂರಲ್ ರೋಡ್ ಬಗ್ಗೆ ಹೇಳಿದೆ. 1,40,000 ಕಿ.ಮೀ. ನಿಮ್ಮ ರೂರಲ್ ರೋಡ್ಸ್‌ಗಳು ಇವೆ. ಅದರಲ್ಲಿ 80,000 ಕಿ.ಮೀ. ಮಡ್ ರೋಡ್ ಇದೆ. ನೀವು ಇದಕ್ಕೆ ಏನಾದರೊಂದು ಪ್ಲಾನ್ ಮಾಡಿ. ವರ್ಷಕ್ಕೆ 50 ಕಿ.ಮೀ. ಎಂದು ಪ್ಲಾನ್ ಮಾಡಿ. ಬೇರೆ Head of Accountsನಲ್ಲಿ ಸ್ವಲ್ಪ ಸ್ವಲ್ಪ ಹಣ ಕೊಡುವುದರಿಂದ ಸಮಗ್ರವಾಗಿ ಯಾವುದೇ ಅಭಿವೃದ್ಧಿ ಆಗುತ್ತಿಲ್ಲ. ನೀವು ಪ್ಲಾನ್ ಮಾಡಿ ಏನೆಂದರೆ, ಈ ವರ್ಷ ಈ ಕ್ಷೇತ್ರದಲ್ಲಿ 10 ಕಿ.ಮೀ. ಆದರೂ ಪಕ್ಕಾ ರೋಡ್ ಮಾಡುವುದಕ್ಕೆ ಬೇಕಾದಷ್ಟು ಹಣವನ್ನು ಕೊಡಿ. ಪ್ಲಾನ್ ಮಾಡಿದರೆ ಅದು ಆಗುತ್ತದೆ. 5 ವರ್ಷದ ಒಂದು ಪ್ಲಾನ್ ಮಾಡಿ. ನಿಮ್ಮ ಸರ್ಕಾರಕ್ಕೆ ಇನ್ನೂ ನಾಲ್ಕು ವರ್ಷ ಇದೆ. ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ನಮ್ಮ ಭಾಗದಲ್ಲಿ ಸ್ವಲ್ಪ ರೂರಲ್ ರೋಡ್ಸ್‌ಗಳನ್ನು, MDR ಎಂದು ಅಪ್‌ಗ್ರೇಡ್ ಮಾಡಿದರು. ಆದರೆ ಅದಕ್ಕೆ ಆಯವ್ಯಯದಲ್ಲಿ ಹಣ ಇಲ್ಲ. ಹೆಸರು ಅಪ್‌ಗ್ರೇಡ್ ಆಗಿದೆ ವಿನಾ ಹಣ ಇಲ್ಲ. ಅದಕ್ಕೆ ಪ್ಲನ್ ಮಾಡಬಹುದು. ಇವತ್ತು ಲೋಕೋಪಯೋಗಿ ಮಂತ್ರಿಗಳು ಇಲ್ಲ, ನಾನು ಯಾವಾಗಲೂ ಅವರ ಎದುರಿಗೆ ಹೇಳುತ್ತಿರುತ್ತೇನೆ. There is no transparency in PWD. ಹಣ ಪಾವತಿ ಯಾವ ರೀತಿ ಆಗುತ್ತದೆಂದರೆ, ಯಾರು percentage ಕೊಡುತ್ತಾರೆ ಮೊದಲು ಅವರಿಗೆ ಹಣ ಪಾವತಿ ಆಗುತ್ತದೆ. ಭ್ರಷ್ಟಾಚಾರವನ್ನು ನೀವು ನಿಯಂತ್ರಣ ಮಾಡದೆ ಹೋದರೆ ಈ ರಾಜ್ಯದಲ್ಲಿ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವೇ ಇಲ್ಲ. ಈ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡಲೇಬೇಕು; ಅದು ಯಾವುದೇ ಸರ್ಕಾರ

ಇರಲಿ. ನೀವು ಮಾಡದೇ ಹೋದರೆ ಯಾವ ರೀತಿ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆ? ಅದಕ್ಕೆ ಲೋಕೋಪಯೋಗಿ ಇಲಾಖೆಯಲ್ಲಿ Major District Road and State Highway ಗೆ ಈ ವರ್ಷ ಹಣ ಇಲ್ಲ. ಏಕೆಂದರೆ, ಹೋದ ವರ್ಷ ನಿಮ್ಮ ಅಲೋಕೇಶನ್ ಏನಿತ್ತು, ಈ ವರ್ಷ allocation has been reduced. RDPR Road ಗೆ ಹಣ reduce ಆಗಿದೆ. PWD ಯಲ್ಲಿ ನಿಮಗೆ allocation reduce ಆಗಿದೆ. ಯಾವ ರೀತಿಯಲ್ಲಿ ನೀವು ಅಭಿವೃದ್ಧಿಯನ್ನು ಮಾಡುತ್ತೀರಿ. ಹೋದ ವರ್ಷ ತೆಗೆದುಕೊಂಡಿರುವ ಕಾಮಗಾರಿಗಳಿಗೆ spillover bills ಕೊಡಬೇಕು. ಅಷ್ಟೆ. ಈ ಸಾರಿ ಹಣ ಏನು ಇಲ್ಲ. ಈ allocation increase ಮಾಡಿ. ನೀವು ಏನು ಮಾಡಬೇಕೆಂದರೆ, ಈ ವರ್ಷ ಇಷ್ಟು MDR upgrade ಮಾಡುತ್ತೇವೆ. ಪ್ರತಿಯೊಂದು ಕ್ಷೇತ್ರದಲ್ಲಿ MDRನ್ನು 25 ಕಿ.ಮೀ. upgrade ಮಾಡಿ. State highway 10–20 ಕಿ.ಮೀ. ರಸ್ತೆಯನ್ನು increase ಮಾಡಿ. ಅಭಿವೃದ್ಧಿ ಮಾಡುವುದಕ್ಕೆ ನಿಮ್ಮ ಕಡೆ planning ಇಲ್ಲ. ಇನ್ನು ಕೊನೆಯದಾಗಿ, Water supply ವಿಚಾರದ ಬಗ್ಗೆ ಹೇಳುತ್ತೇನೆ. ಇವತ್ತು Water supply ನಮ್ಮ ರಾಜ್ಯದಲ್ಲಿ Rural Gap-99 ಎಂದು ಸರ್ವೆ ಮಾಡಿದ್ದಾರೆ. ಅಂದರೆ less than 20 LPCD ಕೊಡತಕ್ಕಂತಹ ಹಳ್ಳಿಗಳ ಬಗ್ಗೆ ತಾವು ಏನು plan ಮಾಡಿದ್ದೀರಿ? Chemically affected villages ಕುರಿತು ಏನು Plan ಮಾಡಿದ್ದೀರಿ? Water supply is the basic need. ಇದನ್ನು ನೀವು ಸರಿಯಾಗಿ ಕೊಟ್ಟರೆ ಅಲ್ಲಿ ಯಾವುದೇ communicable diseases ಇರುವುದಿಲ್ಲ. ಶೇಕಡ 50 ರಷ್ಟು ಒಂದು ಹಳ್ಳಿಯ ಆರೋಗ್ಯವನ್ನು ಕಾಪಾಡಬೇಕಾದರೆ ಮೊದಲು ಶುದ್ಧವಾಗಿರುವಂತಹ ಕುಡಿಯುವ ನೀರನ್ನು ಮೊದಲು ನಾವು ಕೊಡಬೇಕು. Water supply ಬಗ್ಗೆ ನೀವು ಯಾವ ರೀತಿಯಾಗಿ plan ಮಾಡುತ್ತಿದ್ದೀರಿ? ಇವತ್ತು ನಾವು ಇಷ್ಟು ವರ್ಷದಿಂದ water supply ಮಾಡಿಕೊಂಡು ಬಂದಿದ್ದೇವೆ. ಆದರೆ ಈ ಸಮಸ್ಯೆಯು ಹಾಗೆಯೇ ಇದೆ ನಿಮಗೆ ಗೊತ್ತೇ? ನೀವು ಯಾವ ಪೈಪ್ಸ್‌ನ್ನು use ಮಾಡುತ್ತಿದ್ದೀರಿ? ಇವತ್ತು bore-well maintenanceನ್ನು ತಾವು ಗ್ರಾಮ ಪಂಚಾಯಿತಿಗೆ ಕೊಡುತ್ತಿದ್ದೀರಿ ನೀವು ಅವರಿಗೆ maintenance ಮಾಡುವುದಕ್ಕೆ ಹಣವನ್ನು ಕೊಡುವುದಿಲ್ಲ. ನೀವು

ಪ್ರತಿ ವರ್ಷ 700 ರೂಪಾಯಿಗಳನ್ನು ಒಂದು ಬೋರ್‌ವೆಲ್‌ಗೆ ಕೊಟ್ಟರೆ ಅದು ಆಗುವುದಿಲ್ಲ. Piped water supply ಮತ್ತು mini-Water supply maintenance ಅನ್ನು ಗ್ರಾಮ ಪಂಚಾಯಿತಿಗಳಿಗೆ ಕೊಟ್ಟಿದ್ದೀರಿ. ಅದರ ನಿರ್ವಹಣೆಯನ್ನು ಮಾಡುವುದಕ್ಕೆ ನೀವು ಎಷ್ಟು ಹಣವನ್ನು ಕೊಟ್ಟಿದ್ದೀರಿ? ಅಲ್ಲಿ ಮೋಟಾರ್ ಸುಟ್ಟುಹೋದರೆ ಅದನ್ನು ರಿಪೇರಿ ಮಾಡುವುದಕ್ಕೆ ಹಣವಿಲ್ಲ. ಅದಕ್ಕೆ ನೀವು Piped water supply mini-Water supply maintenanceಗೆ ಗ್ರಾಮಪಂಚಾಯಿತಿಗೆ ಹೆಚ್ಚಿಗೆ ಹಣವನ್ನು ಕೊಡಿ. ನಿಮಗೆ 50% headache ಕಡಿಮೆಯಾಗುತ್ತದೆ. ಅಲ್ಲಿ Water Supply Infrastructure ಇದೆ. ಆದರೆ ಅಲ್ಲಿ ಮೋಟಾರ್ ಸುಟ್ಟಿದೆ. ಅದನ್ನು ರಿಪೇರಿ ಮಾಡುವುದಕ್ಕೆ ಹಣವಿಲ್ಲ. ಅದಕ್ಕಾಗಿ ಇವತ್ತು ಅಲ್ಲಿ ಕೆಲಸಗಳು ಆಗುತ್ತಿಲ್ಲ. ಅಲ್ಲಿ ಜನರೆಲ್ಲರು ಅಲ್ಲಿ water supply ಸರಿಯಾಗಿಲ್ಲವೆಂದು ಹೇಳುತ್ತಿದ್ದಾರೆ. ನೀವು ಸ್ವಲ್ಪ ನೋಡಿ, Powerಗೆ ನೀವು maintenanceಗೆ ಹಣವನ್ನು ಕೊಡದೆ ಇರುವುದಕ್ಕೆ ಇವತ್ತು ಈ ಸಮಸ್ಯೆಯಾಗುತ್ತಿದೆ. ಇನ್ನು ಎರಡನೆಯದಾಗಿ ಈ implementation ನಲ್ಲಿ ನೀವು Piped water supply ಎಷ್ಟು ತೆಗೆದುಕೊಳ್ಳುತ್ತೀರಿ, mini water supply ತೆಗೆದುಕೊಳ್ಳುತ್ತೀರಿ? ನೀವು ಯಾವ ರೀತಿಯಾದ pipeನ್ನು ಮಾಡುತ್ತಿದ್ದೀರಿ? ನೀವು third class companyಗಳ ಪೈಪ್ ಅನ್ನು use ಮಾಡುತ್ತಿದ್ದೀರಿ. ನಿಮ್ಮ ಅಧಿಕಾರಿಗಳಿಗೆ ಎಷ್ಟು ಸಾರಿ ಹೇಳಿದರೂ ಕೂಡ ಅವರಿಗೆ ಜ್ಞಾನ ಬರುವುದಿಲ್ಲ. ನೀವು ಮಾರ್ಕೇಟ್‌ನಲ್ಲಿರುವಂತಹ best quality pipeನ್ನು ನೀವು use ಮಾಡಿ. Finolex ಇದೆ, Jain ಇದೆ, Supreme ಇದೆ, which is the best, ರೈತ ತನ್ನ ಹೊಲಕ್ಕೆ ಯಾವುದನ್ನು use ಮಾಡುತ್ತಾನೋ ಅದನ್ನು ತಾವು use ಮಾಡಿ. ನೀವು ಯಾವುದೋ ಹೆಸರೆ ಕೇಳದೆ ಇರುವಂತಹ ಪೈಪ್ಸ್ ಅವು. ಅದನ್ನು ಕಾಲಿನಲ್ಲಿ ಒದ್ದರೆ ಅದು ಒಡೆದು ಹೋಗುತ್ತದೆ. ಅದಕ್ಕೆ ಈ ದಿನ ಈ ಸ್ಥಿತಿ ಇರುವುದು. ನೀವು ಒಂದು ಪಾಲಿಸಿಯನ್ನು ಮಾಡಿ. ಈ best quality pipeನ್ನು use ಮಾಡಿ ಎಂದು ನೀವು ಒಂದು ಆದೇಶವನ್ನು ಮಾಡಿ. ನಿಮಗೆ ಯಾರು ಬೇಡವೆಂದು ಹೇಳಿದ್ದಾರೆ? ಇವತ್ತು ಯಾವ ಯಾವ Motors ಅನ್ನು use ಮಾಡುತ್ತಾರೆಂದರೆ, ಅದು ಒಂದೇ ವರ್ಷದಲ್ಲಿ ಕೆಟ್ಟುಹೋಗುತ್ತದೆ.

Cromtopn Greaves ಇದೆ, Atlanta ಇದೆ, ಒಳ್ಳೆಯ best quality motorನ್ನು ಮಾರ್ಕೆಟಿನಿಂದ ಪಡೆದು use ಮಾಡಿ. ಇದನ್ನು ಪಡೆಯುವ ಬಗ್ಗೆ ನಿಮ್ಮ ಆರ್‌ಡಿಪಿಆರ್ ಇಲಾಖೆಗೆ ಏನಾಗಿದೆ? ನೀವು btransparency ಯಲ್ಲಿ ಕೂಡ tender ಕರೆದಾಗಲೂ ಕೂಡ you should insist that quality is very important. ನೀವು qualityಯನ್ನೇ insist ಮಾಡದೆ ಹೋದರೆ ಯಾವ ರೀತಿ ಮಾಡುವುದಕ್ಕಾಗುತ್ತದೆ? ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಹಣವನ್ನು ಕೊಡುತ್ತೀರಿ. ಆದರೆ quality ಕೆಲಸ ಆಗುತ್ತಿದೆಯೇ? ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ಅದೇನೆಂದರೆ, ಅಧಿಕಾರಿಗಳು ಕೆಲಸವನ್ನು ಮಾಡುತ್ತಿಲ್ಲ, ಎಲ್ಲವನ್ನು NGOsಗೆ ಕೊಟ್ಟು ಬಿಡೋಣವೆಂದು ಹೇಳಿದರು. ತಾವು ಆ ರೀತಿಯಾಗಿ ಮಾಡುವುದಕ್ಕೆ ಹೋಗಬೇಡಿ. ಆ ರೀತಿಯಾಗಿ ಮಾಡಿದರೆ ಈ ವ್ಯವಸ್ಥೆಯನ್ನು ಕಿತ್ತು ಹಾಕಬೇಕಾಗುತ್ತದೆ. ಇಲ್ಲಿ ಒಬ್ಬರು ಮತ್ತೊಬ್ಬರು NGOಗಳು ಒಳ್ಳೆಯವರು ಇರಬಹುದು. ಬಹಳಷ್ಟು ಜನ ಖದೀಮರು ಅಲ್ಲಿ ಇರುತ್ತಾರೆ. ಅದಕ್ಕಾಗಿ ನಮ್ಮ ವ್ಯವಸ್ಥೆಯನ್ನೆ ನಾವು ಸರಿಯಾದಂತಹ ಮಾರ್ಗಕ್ಕೆ ಒಯ್ಯುವಂತಹ ಪ್ರಯತ್ನವನ್ನು ಮಾಡೋಣ. ಮತ್ತೆ ಇನ್ನೊಂದು ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ದಯವಿಟ್ಟು ಆ ಮಾತನ್ನು ತಾವು ಎಲ್ಲಿಯೂ ಕೂಡ ಆಡಬಾರದು. ಏನೆಂದರೆ ಅಧಿಕಾರ ವಿಕೇಂದ್ರೀಕರಣ, ಭ್ರಷ್ಟಾಚಾರ ವಿಕೇಂದ್ರೀಕರಣ ಎಂದು ತಾವು ಹೇಳುವುದಕ್ಕೆ ಹೋಗಬೇಡಿ. ಏಕೆಂದರೆ, ಇವತ್ತು ಭ್ರಷ್ಟಾಚಾರ ಮೇಲೆದ್ದಿರುವ ಕಾರಣ ವಿಕೇಂದ್ರೀಕರಣವಾಗಿರಬಹುದು. ಅದರಲ್ಲಿ ಏನೇ ಲೋಪದೋಷಗಳು ಇದ್ದರೂ ಸಹ ಸರಿಪಡಿಸುವಂತಹ ಕೆಲಸವನ್ನು ನಾವು ಮಾಡೋಣ. ನೀವು amendments ತನ್ನಿ ನಾವು suggest ಮಾಡುತ್ತೇವೆ. ಈಗ ಇರತಕ್ಕಂತಹ ವ್ಯವಸ್ಥೆ ಯಾವ ರೀತಿಯಾಗಿ ನಾವು ಸರಿಯಾಗಿ ಮಾಡಬೇಕೆನ್ನುವುದರ ಬಗ್ಗೆ ನಾವು ಮತ್ತು ನೀವು ಸೇರಿ ಒಂದು ಒಳ್ಳೆಯ ವ್ಯವಸ್ಥೆಯನ್ನು ಹುಟ್ಟುಹಾಕು ವುದರ ಬಗ್ಗೆ ನಾವು ಯಾವತ್ತು ಕೂಡ ನಿಮಗೆ ಸಹಕಾರವನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ. ಆದರೆ ಸರ್ಕಾರ ಕೇವಲ ಸದನವನ್ನು ಕರೆದು ಡಿಸ್‌ಕಸ್ ಮಾಡಿ ನಾವು ಯಾವುದೇ ಹಣವನ್ನು ಕೊಡದೇ ಹೋದರೆ ಈ ರಾಜ್ಯದ ಜನ ಎಂದೂ ಕೂಡ ಈ ಸರ್ಕಾರವನ್ನು ಕ್ಷಮಿಸುವುದಿಲ್ಲ. ನಾನು ಈ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನೀವು

ಸದನವನ್ನು ಕರೆದಿದ್ದೀರಿ. ನಾವು ಈ ಬಗ್ಗೆ ಸಲಹೆಯನ್ನು ಕೊಟ್ಟಿದ್ದೇವೆ. ನೀವು ಅದನ್ನು ಅನುಷ್ಠಾನವನ್ನು ಮಾಡದೆ ಹೋದರೆ ಈ ರಾಜ್ಯದ ಜನರು ನಿಮ್ಮನ್ನು ಕ್ಷಮಿಸುವುದಿಲ್ಲ. ನೀವು ಇದನ್ನು implement ಮಾಡಲೇಬೇಕು. ನೀವು ಏನು ಮಾಡಿದ್ದೀರಿ. ನೀವು ಡಾ. ನಂಜುಂಡಪ್ಪನವರ ವರದಿಯಲ್ಲಿ 2500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅದರಲ್ಲಿ ಎಷ್ಟು ಹಣ ಖರ್ಚಾಗಿದೆ? ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಗಮನವನ್ನು ಕೊಡಬೇಕು. ನಾನು last time Guburga ಗೆ ಬಂದಾಗ ಅವರಿಗೆ ಮನವಿಯನ್ನು ಮಾಡಿದ್ದೆ. ನೀವು ಒಂದು ಸಾರಿ ಡಾ. ನಂಜುಂಡಪ್ಪನವರ ವರದಿಯನ್ನು review ಮಾಡಿ. ಏಕೆಂದರೆ, ಹೊಸ ಪ್ಲಾನ್ ಯಾವುದೂ ಇಲ್ಲ. ಅದರಲ್ಲಿ on-going Schemeಗೆ ಅದರಲ್ಲಿ ದುಡ್ಡು ಕೊಟ್ಟರೆ ಡಾ.ನಂಜುಂಡಪ್ಪನವರ ವರದಿಯ ಅನುಷ್ಠಾನಕ್ಕೆ ಹಣವನ್ನು ಕೊಟ್ಟಿದ್ದೀರೆಂದು ಹೇಗೆ ಹೇಳುವುದಕ್ಕಾಗುತ್ತದೆ? ಇಲ್ಲಿಯವರೆಗೆ ಬಜೆಟ್ presenation ಆಗಿ six months ಆಯಿತು. ಇವತ್ತು ಡಾ.ನಂಜುಂಡಪ್ಪನವರ ವರದಿಯಲ್ಲಿ 2500 ಕೋಟಿ ರೂಪಾಯಿಗಳಲ್ಲಿ ಒಂದೂ ಕೂಡ action plan ಆಗಲಿಲ್ಲ. six monthsನಲ್ಲಿ action plan ಆಗಲಿಲ್ಲವೆಂದರೆ ನೀವು ಯಾವಾಗ implementation ಮಾಡುತ್ತೀರಿ? ಇದರ ಬಗ್ಗೆ ಹೇಳಿ ನನಗೆ. ನೀವು ಅಲ್ಲಿ ಪ್ಲಾನ್ ಮಾಡಿಲ್ಲ. Implementation ಎಲ್ಲಿಂದ ಬರುತ್ತದೆ? ಆಮೇಲೆ ತಾವು On-Going Schemeಗೆ ತಾವು ಹಣವನ್ನು ಬಿಡುಗಡೆ ಮಾಡುವುದು, ಆಮೇಲೆ ಖರ್ಚು ಮಾಡಿದ್ದೇವೆಂದು ಹೇಳುವುದು. Who is monitoring this? Who is responsible for this? ಮಾನ್ಯ ಮುಖ್ಯಮಂತ್ರಿಗಳು ಮತ್ತು ಎಲ್ಲಾ ಸಚಿವರು, ನಂಜುಂಡಪ್ಪನವರ ವರದಿಯಲ್ಲಿ ಇಷ್ಟು ಹಣವನ್ನು ಕೊಟ್ಟಿದ್ದೇವೆಂದು ಹೇಳಬೇಕಾದರೆ ಅದರಲ್ಲಿ ಎಷ್ಟು ಸದುಪಯೋಗವಾಗಿದೆ ಎಂಬುದನ್ನು ಹೇಳಬೇಕು. ನಾನು Principal Secretary ಯವರ ಹತ್ತಿರ ಹೋಗಿದ್ದೆ. I don't want to name. ಅವರು ನಮಗೆ ಈ ಬಗ್ಗೆ ಆದೇಶ ಬಂದಿಲ್ಲವೆಂದು ಹೇಳಿದರು. ನಾನು ಬುಕ್ ಹಿಡಿದುಕೊಂಡು ಹೋಗಿದ್ದೆ. ಅಲ್ಲಿ ಬುಕ್ ಇದೆ. Special Development Plan ಇದರಲ್ಲಿ ನಿಮ್ಮ ಇಲಾಖೆಗೆ ಇಷ್ಟು ಹಣ ಬಂದಿದೆ, ಏನು action plan ಮಾಡಿದ್ದೀರೆಂದು ಕೇಳಿದೆ, ಇಲ್ಲಾ

ಅವೆಲ್ಲವೂ On-going Schemeಗೆ ಹೋಗುತ್ತದೆಯಲ್ಲಾ ಎಂದು ಹೇಳಿದರು. ಹೊಸದನ್ನು ಮಾಡಬೇಕಾದರೆ ಇದರ ಬಗ್ಗೆ ಯಾವ ಆದೇಶವೂ ಬಂದಿಲ್ಲವೆಂದು ಹೇಳಿದರು. ಈ ರೀತಿಯಾಗಿ ಹೇಳಿದರೆ ನಾವು ಏನು ಮಾಡಬೇಕು? ನಾವು ಯಾರ ಹತ್ತಿರ ಹೋಗಿ ಕೇಳಬೇಕು? Action plan ಮಾಡುವುದಕ್ಕೆ ನಮಗೆ ಆದೇಶ ಬಂದಿಲ್ಲವೆಂದು Principal Secretary ಯವರು ಹೇಳಿದ ಮೇಲೆ ನಾವು ಯಾರ ಹತ್ತಿರ ಹೋಗಬೇಕು? ನೋಡಿ ಅವರು ಈ ರೀತಿಯಾಗಿ ಹೇಳುತ್ತಿದ್ದಾರೆಂದು ನಾನು Ministerರವರಿಗೆ ಹೇಳಿದೆ. ಅದಕ್ಕೆ ಅವರು ಅವರಿಗೆ ಗೊತ್ತಿಲ್ಲವೆಂದು ಹೇಳಿದರು. ಇದು ಆಗಿ 6 ತಿಂಗಳು ಆಯಿತು. ಮೊಟ್ಟ ಮೊದಲನೆಯದು ನೀವು ಭ್ರಷ್ಟಾಚಾರವನ್ನು ನಿಯಂತ್ರಣವನ್ನು ಮಾಡಿ. ಇವತ್ತು ನಮ್ಮ ನಮ್ಮ ರಾಜಕೀಯ ತೀಟೆಗಳಿಗೆ ಏನು ಮಾಡುತ್ತಿದ್ದೇವೆಂದರೆ, ಅವರು ಹೇಳಿರುವುದು ಒಂದು, ಇವರು ಹೇಳಿರುವುದು ಒಂದು, ಮಿನಿಟ್ಸ್ ಹಾಕುವುದು, ಭ್ರಷ್ಟ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಳಗಳಿಗೆ ತರುವುದು. ಆಮೇಲೆ ಅವರು ಬಂದು ಭ್ರಷ್ಟಾಚಾರವನ್ನು ಮಾಡುವುದು. ಮಾನ್ಯ ಮುಖ್ಯಮಂತ್ರಿಗಳೆ, ನೀವು ಭ್ರಷ್ಟ ಅಧಿಕಾರಿಗಳನ್ನು ಎಲ್ಲಿಯವರೆಗೆ ನೀವು ಅಂಕೆಯಲ್ಲಿ ಇಡುವುದಿಲ್ಲ ಅಲ್ಲಿಯವರೆಗೆ ರಾಜ್ಯವನ್ನು ಅಭಿವೃದ್ಧಿ ಮಾಡುವುದಕ್ಕಾಗುವುದಿಲ್ಲ. ಮೊದಲು ನೀವು ಭ್ರಷ್ಟ ಅಧಿಕಾರಿಗಳಿಗೆ ತಕ್ಕ ಪಾಠವನ್ನು ಕಲಿಸಿ. ಒಳ್ಳೆಯ ಪ್ರಾಮಾಣಿಕವಾದಂತಹ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಳಗಳಿಗೆ ತನ್ನಿ. ಆಗ ಮಾತ್ರ ಏನಾದರೂ ಮಾಡುವುದಕ್ಕೆ ಸಾಧ್ಯ. ಇದನ್ನು ನೀವು ಮಾಡದೆ ಸುಮ್ಮನೆ ಈ ಬಗ್ಗೆ ನಾವು ಸಲಹೆಯನ್ನು ಕೊಟ್ಟಿದ್ದೇವೆ. we are open for advice. ಯಾವುದೇ ವಿಷಯದಲ್ಲಿ ನಾವು 24 hours in the interest of public ಕೆಲಸವನ್ನು ಮಾಡತಕ್ಕಂತಹ ಜನ. ನೀವು ಯಾವುದೇ ವಿಷಯದ ಬಗ್ಗೆ ಏನೇ ಸಲಹೆಯನ್ನು ಕೇಳಿ ನಾವು ಕೊಡುವುದಕ್ಕೆ ತಯಾರಿದ್ದೇವೆ in the interest of public ಯಾರು ಕೂಡ ವಿಶ್ವಾಸಕ್ಕೆ ತೆಗೆದುಕೊಳ್ಳುವುದಕ್ಕೆ ತಯಾರು ಇಲ್ಲ. ನೀವು ruling party MLA ಕ್ಷೇತ್ರಕ್ಕೆ ಒಂದು, Opposition Party MLA ಕ್ಷೇತ್ರಕ್ಕೆ ಒಂದು ಈ ರೀತಿಯಾಗಿ ಮಾಡುವುದಕ್ಕೆ ಹೋಗಬೇಡಿ. ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಆಗಿದೆ ಎಂದು ಹೇಳಿದ್ದಾರೆ. 'ಹಿಂದೆ ಈ ರೀತಿಯಾಗಿದೆ, ನಾನು ಅದನ್ನು ಮರೆತಿದ್ದೇನೆ.'

ಎಂದು ಹೇಳಿದರು ಅದನ್ನು ಕೇಳಿ ಖುಷಿಯಾಯಿತಿ. ಈ ಮನೆಯಲ್ಲಿ ಯಾರು ಆಯ್ಕೆಯಾಗಿ ಬಂದಿದ್ದಾರೆ ಅವರಿಗೆ ನೀವು ಗೌರವವನ್ನು ಕೊಡಿ. ಹಿಂದೆ ಏನಾದರೂ ತಪ್ಪಾಗಿದ್ದರೆ ಅದಕ್ಕೆ ನಾವು ಕಾರಣರಲ್ಲವಲ್ಲ ಅದರಿಂದ ರಾಜ್ಯದ ಜನರಿಗೆ ಏಕೆ ಮೋಸವಾಗುತ್ತಿದೆ? ಅದಕ್ಕೆ ನೀವು ಬೇರೆಯವರ ಮಾತನ್ನು ಕೇಳಿ transferಗಳನ್ನು ಮಾಡುವುದಕ್ಕೆ ಹೋಗಬೇಡಿ. ನೀವು Opposition MLAಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ನಾವು ಏಕೆ co-operate ಮಾಡುವುದಿಲ್ಲ ನೋಡಿ. ವಿಶ್ವಾಸ ಎಂದರೆ, ನೀವು ಒಳ್ಳೆಯ ಅಧಿಕಾರಿಗಳನ್ನು ಕೇಳಿದರೆ ಅವರನ್ನು ಕಿತ್ತು ಹಾಕುವುದು. ಯಾರೋ ನಮ್ಮ ಎದುರುಗಡೆ ಚುನಾವಣೆಯಲ್ಲಿ ನಿಂತು ಸೋತಿರುವಂತಹ ಎಂಎಲ್ಎ ಕ್ಯಾಂಡಿಡೇಟ್‌ಗಳು ಶಿಫಾರಸ್ಸು ಮಾಡಿರುವಂತಹವರನ್ನು postings ಮಾಡಿರುವುದು. ಅವರು ಪೂರ್ಣ ಭ್ರಷ್ಟರು. ಅವರು ಯಾವುದೆ ಒಂದು Public interestನಲ್ಲಿ Co-operation ಮಾಡುವುದಿಲ್ಲ. ಮತ್ತೇ ಯಾವ ರೀತಿಯಾಗಿ ಆಡಳಿತ ನಡೆಯುವುದಕ್ಕೆ ಸಾಧ್ಯ? ನಾವು ಏನು ಮಾಡಬೇಕು? ನಾವು ಇಲ್ಲಿಗೆ ಬಂದು ನಿಮ್ಮನ್ನು ಬೈಯಬೇಕು. ನಮ್ಮ ಕೆಲಸ ಏನೆಂದರೆ ನಾವು ಇಲ್ಲಿಗೆ ಬರುವುದು; ನಿಮಗೆಲ್ಲಾ ಬೈಯುತ್ತಾ ಕುಳಿತುಕೊಳ್ಳುವುದು. ಅಲ್ಲಿರುವಂತಹ ಅಧಿಕಾರಿಗಳು Public interest ಇರುವವರು ಅದಕ್ಕೆ co-operate ಮಾಡಲಿ. ನಾವು ಅವರ ಹತ್ತಿರ ಏನೂ expect ಮಾಡುವುದಿಲ್ಲ. ನೀವು ಅದನ್ನು ಮಾಡದೆ ಹೋದರೆ ನಾವು ಇದನ್ನೇ ಮಾಡಬೇಕಾಗುತ್ತದೆ. ಒಂದು ಒಳ್ಳೆಯ ವಾತಾವರಣ ಈ ರಾಜ್ಯದಲ್ಲಿ ಸೃಷ್ಟಿಯಾಗಬೇಕಾದರೆ ಸರ್ಕಾರವು ಜನಪರವಾದಂತಹ ಕೆಲಸವನ್ನು ಮಾಡಬೇಕಾದರೆ ನೀವು ಎಲ್ಲಾ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳ ಬೇಕಾಗುತ್ತದೆ. ನಿಮ್ಮ transferನ್ನು ನೋಡಿದೆ. ಪೊಲೀಸ್‌ನಲ್ಲಿ ಪ್ರಾಧಿಕಾರ ವನ್ನು ಮಾಡಿದ್ದಾರೆ. ಆದರೆ ನೀವು ಮತ್ತೆ transferನ್ನು ಮಾಡಿದ್ದೀರಿ. ನೀವು ಎಲ್ಲಿಯವರೆಗೆ Police Departmentನಲ್ಲಿ ಅಧಿಕಾರಿಗಳಿಗೆ free handನ್ನು ಕೊಡುವುದಿಲ್ಲ, ಒಳ್ಳೆಯ ಜನರನ್ನು police stationನಲ್ಲಿ ಹಾಕುವುದಿಲ್ಲ ಅಲ್ಲಿಯವರೆಗೆ ನೀವು ಭ್ರಷ್ಟಾಚಾರವನ್ನು ತಡೆ ಯುವುದಕ್ಕಾಗುವುದಿಲ್ಲ; ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದು ನಿಲ್ಲುವುದಿಲ್ಲ. ಅವರಿಗೆ free handನ್ನು ಕೊಟ್ಟು, ಒಳ್ಳೆಯ officersನ್ನು ಕೊಡಿ, ಅವರನ್ನು ಹಾಕಿದರೆ

ಖಂಡಿತವಾಗಿಯೂ ವ್ಯವಸ್ಥೆಯಲ್ಲಿ ಸುಧಾರಣೆ ಯಾಗುವುದಕ್ಕೆ ಸಾಧ್ಯವಿದೆ. ಒಬ್ಬ ಸಾಮಾನ್ಯ ಮನುಷ್ಯ ಗ್ರಾಮೀಣ ಪ್ರದೇಶದಲ್ಲಿರುವಂತಹ ಮನುಷ್ಯ ಅವನಿಗೆ ಏನೂ influence ಇಲ್ಲ. ಅವನು ನೆಮ್ಮದಿಯಾಗಿ ಬದುಕಬೇಕಾದರೆ ಒಳ್ಳೆಯವರು ಒಳ್ಳೆಯ ಸ್ಥಾನದಲ್ಲಿದ್ದರೆ ಮಾತ್ರ ಸಾಧ್ಯವಾಗುತ್ತದೆ.

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಮಾನ್ಯ ಅಧ್ಯಕ್ಷರೆ, Point of order. ಮಾನ್ಯ ಸದಸ್ಯರು ಪದೇ ಪದೇ ಮಾತನಾಡುವಾಗ ಗ್ರಾಮೀಣ ಅಧಿಕಾರಿಗಳು, ಒಳ್ಳೆಯ ಪೊಲೀಸ್ ಅಧಿಕಾರಿಗಳು ಎಂದು ಹೇಳಿ ಮಾತನಾಡುತ್ತಿದ್ದಾರೆ. ನಿಜವಾದರೆ ಅಧಿಕಾರಿಗಳಲ್ಲಿ ಪ್ರಾಮಾಣಿಕವಾದಂತಹ ಅಧಿಕಾರಿಗಳು ಯಾರು? ಅಧಿಕಾರಿಗಳಲ್ಲಿ ಒಳ್ಳೆಯ ಪೊಲೀಸ್ ಅಧಿಕಾರಿಗಳು ಯಾರು? ಅದನ್ನು ಇವರು ನಿರ್ಣಯ ಮಾಡುತ್ತಾರೋ ಅದರ ಬಗ್ಗೆ ಯಾವ ರೀತಿಯಾಗಿ ನಿರ್ಣಯ ಮಾಡಬೇಕೋ ಅವರು ಪ್ರಾಮಾಣಿಕ ಅಧಿಕಾರಿಗಳು ಎನ್ನುವುದಕ್ಕೆ ಅವರಿಗೆ ಇರುವಂತಹ ಮಾನದಂಡವೇನು?

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ನಿಮ್ಮ ಕಾಲದಲ್ಲಿರುವ ಮಾತ್ರ ಪ್ರಾಮಾಣಿಕರು. ಈಗ ಕೆಲಸವನ್ನು ಮಾಡುತ್ತಿರುವವರು ಅಪ್ರಮಾಣಿಕರೇ?

ಶ್ರೀ ಬಿ.ಸಿ. ಪಾಟೀಲ್ : ಅಲ್ಲಿಗೆ ಪ್ರಾಮಾಣಿಕವಾದಂತಹ ಅಧಿಕಾರಿಗಳನ್ನು ಹಾಕಬೇಕು.

ಅಧ್ಯಕ್ಷರು : ಮಾನ್ಯ ಪಾಟೀಲ್‌ರವರೆ, ತಾವು ಕುಳಿತುಕೊಳ್ಳಿ.

ಶ್ರೀ ಬಿ.ಸಿ. ಪಾಟೀಲ್ : ಯಾವ ಯಾವ ಅಧಿಕಾರಿಗಳು ಎಲ್ಲೆಲ್ಲಿ ಹೋಗಬೇಕೆಂದು ಮೊದಲೇ fix ಆಗಿದೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಸದಸ್ಯರು ಹೊಸದಾಗಿ ಆಯ್ಕೆಯಾಗಿ ಬಂದಿದ್ದಾರೆ.

(ಗೊಂದಲ)

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಅವರು ಮಾತನಾಡಿರುವ ಬಗ್ಗೆ ನಾನು ಹೇಳುತ್ತಿದ್ದೇನೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು yield ಆಗಿಲ್ಲ

ಅಧ್ಯಕ್ಷರು : ಮಾನ್ಯ ಬಿ.ಸಿ.ಪಾಟೀಲ್‌ರವರೆ ತಾವು ಕುಳಿತುಕೊಳ್ಳಿ.

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಗ್ರಾಮೀಣಾಭಿವೃದ್ಧಿ ಬಗ್ಗೆ ಕೃಷಿಯ ಬಗ್ಗೆ ಶಾಸಕರ ಕ್ಷೇತ್ರದ ಬಗ್ಗೆ ಅವರು ಮಾತನಾಡಿದರು. ಈಗ stationಗಳಲ್ಲಿ ಕೆಲಸ ಮಾಡುತ್ತಿರುವಂತಹ ಪೊಲೀಸ್ ಅಧಿಕಾರಿಗಳು ಅಪ್ರಮಾಣಿಕರೇ? ಅಥವಾ ಯಾರು ದಕ್ಷರಲ್ಲವೇ? ಯಾರು ಅದಕ್ಷರೆ, ಇವರ ಉದ್ದೇಶದಲ್ಲಿ ಅಧಿಕಾರಿಗಳಿಗೆ ಮಾನದಂಡವೇನು? ಯಾವ ಆಧಾರದ ಮೇಲೆ ಇವರು ಪ್ರಾಮಾಣಿಕರು, ಅಪ್ರಮಾಣಿಕರು ಎಂದು ಅಥವಾ ದಕ್ಷರು, ಅದಕ್ಷರು ಎನ್ನುವುದನ್ನು ಇವರು ಅಳೆಯುತ್ತಾರೆನ್ನುವುದನ್ನು ಇವರು ಈಗ ಸ್ಪಷ್ಟಪಡಿಸಬೇಕು.

(ಗೊಂದಲ)

ಶ್ರೀ ಬಿ.ಸಿ. ಪಾಟೀಲ್ : ವಿರೂಪಾಕ್ಷಪ್ಪನವರು ಪ್ರಾಮಾಣಿಕ ಅಧಿಕಾರಿಗಳು ಯಾರು ಎಂದು ಕೇಳಿದರು. ವರ್ಗಾವಣೆಗೆ ಯಾರು ಕಡಿಮೆ ದುಡ್ಡು ಕೊಟ್ಟು ವರ್ಗಾವಣೆಯನ್ನು ಮಾಡಿಸಿಕೊಂಡಿರುತ್ತಾರೆ, ಅವರೇ ಪ್ರಾಮಾಣಿಕ ಅಧಿಕಾರಿಗಳು. ಯಾರು ಹೆಚ್ಚಿಗೆ ಹಣ ಕೊಟ್ಟು ಆ postಗೆ ಹೋಗುತ್ತಾರೋ ಅವರೇ ಭ್ರಷ್ಟ ಅಧಿಕಾರಿಗಳು ಎಂದು ಅವರೇ ತೀರ್ಮಾನ ಮಾಡಿಕೊಳ್ಳಲಿ ಗೊತ್ತಾಗುತ್ತದೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಅದರ ಬಗ್ಗೆ ನಾವೇನು ಹೇಳಲಿಕ್ಕೆ ಹೋಗುವುದಿಲ್ಲ. ಇವತ್ತು ಪೊಲೀಸ್ ಇಲಾಖೆಯಲ್ಲಿ ಒಂದು ಪಟ್ಟಿ ಇರುತ್ತದೆ, ಡಿ.ಸಿ.ಯವರಿಗೂ ಗೊತ್ತಿರುತ್ತದೆ, Who is a good officer and who is a bad officer ಎಂದು. ಎಲ್ಲಾ ಇಲಾಖೆಯಲ್ಲಿಯೂ ರಿಪೋರ್ಟ್ ಇರುತ್ತದೆ. ಬಹುಶಃ ಅವರಿಗೆ ಗೊತ್ತಿಲ್ಲ ಅನ್ನಿಸುತ್ತದೆ. ಅವರ ಸಿ.ಆರ್. ಇರುತ್ತದೆ. ಅವರ ಮೇಲಾಧಿಕಾರಿಗಳಿಗೆ ಅದು ಗೊತ್ತಿರುತ್ತದೆ. ಅದಕ್ಕೆ ನಾನು ಹೇಳುತ್ತಿರುವುದು, ಅವರಿಗೆ free hand ಕೊಟ್ಟರೆ ಅವರು ಒಳ್ಳೆಯ ಅಧಿಕಾರಿಗಳನ್ನು ಪೋಸ್ಟ್ ಮಾಡುತ್ತಾರೆ. ನೀವು ಅಧಿಕಾರಿಗಳನ್ನು ಒಳ್ಳೆಯ ರೀತಿಯಲ್ಲಿ ಪೋಸ್ಟ್ ಹೋದರೆ ಇಲ್ಲಿನ ವ್ಯವಸ್ಥೆಯನ್ನು ಸರಿಮಾಡಲಿಕ್ಕೆ ಸಾಧ್ಯವಿಲ್ಲ. ಆರ್.ಡಿ.ಪಿ.ಆರ್. ಆದೇಶವೇನಿದೆ, ಅದರಲ್ಲಿ ಬಂದಿರತಕ್ಕಂಥ ಹಣವನ್ನು ಎಲ್ಲಾ Action Plan ಮಾಡಬಾರದೆಂದು ಬಂದಿರತಕ್ಕಂಥ ಆರ್.ಡಿ.ಪಿ.ಆರ್. ಆದೇಶವನ್ನು ತಕ್ಷಣವಾಗಿ ಹಿಂದಕ್ಕೆ ತೆಗೆದುಕೊಳ್ಳಬೇಕು. ಗ್ರಾಮೀಣಾಭಿವೃದ್ಧಿಯಲ್ಲಿ ನೇಮಕಾತಿಯಲ್ಲಿ ಇವತ್ತು ನಮ್ಮ ಹಳ್ಳಿ ಪ್ರದೇಶದ

ಮಕ್ಕಳಿಗೆ ನ್ಯಾಯ ಸಿಗಬೇಕು ಎಂಬ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡಬೇಕೆಂಬ ಮಾತನ್ನು ಹೇಳಿ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಸನ್ಮಾನ್ಯ ಅಧ್ಯಕ್ಷರೆ, ತಾವು ಗ್ರಾಮೀಣ ಮತ್ತು ಕೃಷಿ ಚರ್ಚೆಯಲ್ಲಿ ಪಾಲ್ಗೊಳ್ಳಲಿಕ್ಕೆ ಅವಕಾಶ ಮಾಡಿದ್ದಕ್ಕಾಗಿ ಮೊದಲಿಗೆ ತಮಗೆ ವಂದಿಸುತ್ತೇನೆ. ನಮ್ಮ ಕರ್ನಾಟಕ ರಾಜ್ಯ ದೇಶದಲ್ಲೇ 8ನೇ ಸ್ಥಾನದಲ್ಲಿದೆ. ಸುಮಾರು ಐದು ಕೋಟಿ ಇಪ್ಪತ್ತು ಲಕ್ಷ ಜನಸಂಖ್ಯೆಯನ್ನು ಹೊಂದಿರುವಂತಹ ರಾಜ್ಯ. ಅದಲ್ಲದೆ ಶೇಕಡ 66 ರಷ್ಟು ಜನ ಗ್ರಾಮೀಣ ಭಾಗದಲ್ಲಿ ವಾಸ ಮಾಡುತ್ತಾರೆ. ಇವತ್ತು ಸಾಕ್ಷರತಾ ಪ್ರಮಾಣವನ್ನು ನಾವು ತೆಗೆದುಕೊಂಡರೆ 67.04 ನಲ್ಲಿ ಕರ್ನಾಟಕ ರಾಜ್ಯದ ಸಾಕ್ಷರತಾ ಪ್ರಮಾಣ ಇದೆ. ಹಾಗಾಗಿ ಯಾವುದೇ ಒಂದು ರಾಜ್ಯ ಅಭಿವೃದ್ಧಿಯ ದಿಕ್ಕಿನಲ್ಲಿ ಹೋಗ ಬೇಕಾದರೆ ಸಾಕ್ಷರತಾ ಪ್ರಮಾಣವನ್ನು ನಾವು ಹೆಚ್ಚು ಮಾಡಬೇಕಾಗುತ್ತದೆ. ಶಿಕ್ಷಣ ಎಲ್ಲಿರುತ್ತದೆ, ಅಲ್ಲಿ ಸರ್ವಾಂಗೀಣ ಅಭಿವೃದ್ಧಿಯನ್ನು ನಾವು ಕಾಣುತ್ತೇವೆ. ಆ ಕಾರಣಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಶಿಕ್ಷಣದ ಅಭಿವೃದ್ಧಿ ಗೋಸ್ಕರ ನೂರಕ್ಕೆ ನೂರರಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊ ಳ್ಳುವುದು ಅವಶ್ಯಕ ಎಂಬುದು ನನ್ನ ಒಂದು ಭಾವಣೆ. ಇದು ಸ್ವತಂತ್ರದ ಪೂರ್ವದಲ್ಲಿಯೂ ಕೂಡ, ಮತ್ತು ಸ್ವಾತಂತ್ರ್ಯ ಬಂದ ನಂತರ ಭಾರತಕ್ಕೆ ಸಂವಿಧಾನದ ಮೂಲಕ ಶಿಕ್ಷಣ ಕೊಡಬೇಕೆಂದು ನಮ್ಮ ಸಂವಿಧಾನದಲ್ಲಿದ್ದರೂ ಕೂಡ ಅದು ಅಜಾಗರೂಕತೆಯಿಂದ ಆ ಒಂದು ವ್ಯವಸ್ಥೆ ಆಗಿಲ್ಲ. ಆ ಕಾರಣಕ್ಕಾಗಿ ಇನ್ನು ಮುಂದಾದರೂ ಕೂಡ ಬಿಗಿಯಾದ ಕ್ರಮವನ್ನು ಹಾಗೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಆ ಕಾರಣಕ್ಕಾಗಿ ಇವತ್ತು ಮೊದಲನೆಯದಾಗಿ ಶಿಕ್ಷಣಕ್ಕೆ ಆದ್ಯತೆಯನ್ನು ಕೊಡಬೇಕೆಂದು ನಾನು ಒತ್ತಾಯಿಸುತ್ತೇನೆ.

(ಈ ಹಂತದಲ್ಲಿ ಅಧ್ಯಕ್ಷ ಪೀಠವನ್ನು ಮಾನ್ಯ ಉಪಾಧ್ಯಕ್ಷರು ಅಲಂಕರಿಸಿದರು)

ಅದಲ್ಲದೆ ಇವತ್ತು ರಾಜ್ಯದಲ್ಲಿ ನಾವು ಕೃಷಿಯನ್ನು ಅಭಿವೃದ್ಧಿ ಪಡಿಸಬೇಕಾಗುತ್ತದೆ. ಕೃಷಿಗೆ ಸುಮಾರು 30 ಲಕ್ಷ ಹೆಕ್ಟೇರ್‌ನಲ್ಲಿ ಇವತ್ತು ನಾವು ಯೋಗ್ಯವಾದ ಬೆಳೆಯನ್ನು ಬೆಳೆಯಲಿಕ್ಕೆ ಜಮೀನು ಯೋಗ್ಯವಿದೆ ಎಂದು ವರದಿಯಿದೆ, ಇಲ್ಲಿ ಹೆಚ್ಚು ಪಾಲು ಕರ್ನಾಟಕ ರಾಜ್ಯದ ಒಣ ಪ್ರದೇಶ ಅಂದರೆ ಖುಷ್ಕಿ ಆಧಾರಿತ ಪ್ರದೇಶವಿರುವುದರಿಂದ ಶೇಕಡವಾರು ನೀರಾವರಿ ತೆಗೆದು

ಕೊಂಡರೆ ಸುಮಾರು 26–27 ಪ್ರತಿಶತ ಶೇಕಡವಾರು ನೀರಾವರಿಯನ್ನು ಪಡೆದುಕೊಂಡಿದ್ದೇವೆ. ಹಾಗಾಗಿ ರೈತ ಒಣ ಭೂಮಿಯಲ್ಲಿ ಬೇಸಾಯವನ್ನು ಮಾಡಬೇಕೋ ಅಥವಾ ಬಿಡಬೇಕೋ ಎಂಬ ಒಂದು ಜಿಜ್ಞಾಸೆಯಲ್ಲಿ ರೈತ ಇದ್ದಾನೆ. ಅದನ್ನು ಬಿಟ್ಟರೆ ಬೇರೆ ಗತಿಯಲ್ಲಿ ಎಂದೂ ಕೂಡ ನಾವು ಭಾವಿಸುತ್ತೇವೆ. ಹಾಗಾಗಿ ನಾವು ಪತ್ರಿಕೆಯಲ್ಲಿ ಬಹಳ ಕಡೆ ಗಮನಿಸುತ್ತೇವೆ. ವಾಸ್ತವಾಂಶವನ್ನು ಕೂಡ ಗಮನಿಸಿದಾಗ ಗ್ರಾಮೀಣ ಭಾಗವನ್ನು ಬಿಟ್ಟು ಎಲ್ಲಾ ರೈತರೂ ಕೂಡ ಇವತ್ತು ಪಟ್ಟಣದ ಕಡೆ ಹೋಗುತ್ತಿದ್ದಾರೆ. ಅಲ್ಲಿ ಅರೆಬರೆ ವಿದ್ಯಾವಂತರು, PUC, SSLC, ಶಿಕ್ಷಣ ಪಡೆದಂತಹವರು ಆ ಕೃಷಿಯಲ್ಲಿ ತೊಡಗುತ್ತಿಲ್ಲ, ಅವರಿಗೆ ಆಸಕ್ತಿ ಇಲ್ಲ, ಕಾರಣವೇನೆಂದರೆ ಕೃಷಿ ಲಾಭದಾಯಕ ವಲ್ಲವೆಂಬ ಒಂದು ತೀರ್ಮಾನಕ್ಕೆ ರೈತ ಬಂದಿದ್ದಾನೆ. ಆ ಕಾರಣಕ್ಕಾಗಿ ಈಗ ರಾಜ್ಯದಲ್ಲಿರತಕ್ಕಂಥ ನೀರಾವರಿ ಸಂಪನ್ಮೂಲವನ್ನು ಹೆಚ್ಚು ಮಾಡಬೇಕಾಗುತ್ತದೆ. ಸುಮಾರು ಮೂರುಸಾವಿರಕ್ಕಿಂತ ಹೆಚ್ಚು ಟಿ.ಎಂ.ಸಿ. ನೀರನ್ನು ನಮ್ಮ ಎಲ್ಲಾ ನದಿಗಳ ಇಳುವರಿಯನ್ನು ನಾವು ನೋಡಿದಾಗ ಇವತ್ತು 1600 ಟಿ.ಎಂ.ಸಿ. ನೀರನ್ನು ನಾವು ರಾಜ್ಯದಲ್ಲಿ ಬಳಕೆ ಮಾಡಿಕೊಳ್ಳುತ್ತೇವೆ. ಕರ್ನಾಟಕ ರಾಜ್ಯದಲ್ಲಿ ನೀರಾವರಿ ಪ್ರದೇಶ ಸುಮಾರು 30.00 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಾಣುತ್ತೇವೆ. ಇನ್ನೂ ಕೂಡ 30.00 ಲಕ್ಷ ಹೆಕ್ಟೇರ್ ಅನ್ನು ಈ ರಾಜ್ಯದಲ್ಲಿ ನೀರಾವರಿಗೆ ಅಳವಡಿಸಲಿಕ್ಕೆ ಸಾಧ್ಯವಿದೆ, ಆ ಕಾರಣಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ವಿನಂತಿಸುತ್ತೇನೆ. ಅನೇಕ ಕಾರ್ಯಕ್ರಮ ಗಳನ್ನು ನಾವು ಮಾಡಬೇಕಾಗಿದೆ, ಆದರೆ ಅವನ್ನೆಲ್ಲಾ ನಾವು ಸ್ವಲ್ಪಮಟ್ಟಿಗೆ ಬದಿಗಿರಿಸಬೇಕಾಗಿದೆ. ನಿನ್ನೆ ಆಂಧ್ರ ಪ್ರದೇಶದ ಮುಖ್ಯಮಂತ್ರಿ ದಿವಂಗತ ರಾಜಶೇಖರ ರೆಡ್ಡಿಯವರ ಬಗ್ಗೆ ನಾವೆಲ್ಲಾ ಗುಣಗಾನ ಮಾಡಿದೆವು. ಅವರ ಬಗ್ಗೆ ಏಕೆ ಗುಣಗಾನ ಮಾಡಿದೆವು ಅಂದರೆ ನೀರಾವರಿಗೆ ಹೆಚ್ಚು ಆದ್ಯತೆಯನ್ನು ಕೊಡುವಂಥ ಕೆಲಸವನ್ನು ಮಾಡಿದರು. ಅವರು ತಮ್ಮ ಸರ್ಕಾರದ ಐದು ವರ್ಷದ ಅವಧಿಯಲ್ಲಿ ಸುಮಾರು 80.00 ಲಕ್ಷ ಹೆಕ್ಟೇರ್‌ಗೆ ನೀರನ್ನು ಕೊಡುವಂಥ ಕೆಲಸ ಮಾಡಿದ್ದರಿಂದ ಜನ ಅವರ ಬಗ್ಗೆ ಅಷ್ಟೊಂದು ಅನುಕಂಪ, ಅಭಿಮಾನವನ್ನು, ಗೌರವವನ್ನು ಸೂಚಿಸಿದ್ದನ್ನು ನಾವು ಮಾಧ್ಯಮದ ಮೂಲಕ ನೋಡಿದ್ದೇವೆ. ಆ ಕಾರಣಕ್ಕಾಗಿ ಮಾನ್ಯ ಮುಖ್ಯ ಮಂತ್ರಿಯಲ್ಲಿ ವಿನಂತಿ ಮಾಡುತ್ತೇನೆ. ಅವರು ಕೂಡ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ, ರೈತ ಕುಟುಂಬದಿಂದ ಬಂದಿರುವಂಥವರು, ರೈತರ ಬಗ್ಗೆ ಕಾಳಜಿ ಇದೆ, ಆ ಕಾರಣಕ್ಕಾಗಿ

ಆಯವ್ಯಯದಲ್ಲಿ ಒದಗಿಸುವಂಥ ಅನುದಾನವನ್ನು ಹೆಚ್ಚು ಮಾಡಬೇಕಾಗಿತ್ತು. ತಾವು ಕೊಟ್ಟಿರುವಂಥದ್ದು ಇವತ್ತು ಕೇವಲ 3,000 ಕೋಟಿ ರೂ.ಗಳು ಅನೇಕ ಯೋಜನೆಗಳು ಇನ್ನೂ 1600 ಟಿ.ಎಂ.ಸಿ. ನೀರನ್ನು ಬಳಕೆ ಮಾಡಬೇಕಾದರೆ ಆಯವ್ಯಯದಲ್ಲಿ ಸುಮಾರು ಹತ್ತು ಸಾವಿರ ಕೋಟಿ ರೂ.ಗಳ ಹಣವನ್ನಾದರೂ ಇಡಬೇಕಾಗುತ್ತದೆ. ಇಲ್ಲದಿದ್ದರೆ ವ್ಯರ್ಥವಾಗುತ್ತದೆ. ಇಡೀ ರಾಜ್ಯದ ರೈತರು ಇವತ್ತು ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾರೆ. ಅವರ ಬದುಕು ಹೇಗೆ ಎನ್ನುವುದು ಯಾರಿಗೂ ಕೂಡ ಗೋಚರಿಸುತ್ತಿಲ್ಲ. ನಾವು ಕೂಡ ಏನೂ ಮಾಡಲಿಕ್ಕಾಗುತ್ತಿಲ್ಲ. ಸರ್ಕಾರ ಕೂಡ ನೆರವಿಗೆ ಬರಲಿಕ್ಕಾಗುತ್ತಿಲ್ಲ. ಆ ಕಾರಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಸ್ವಲ್ಪ ಮಟ್ಟಿಗೆ ಮೊಟಕುಗೊಳಿಸಿ ರಾಜ್ಯದಲ್ಲಿ ನೀರಾವರಿಗೆ ನೀವು ಆದ್ಯತೆಯನ್ನು ಕೊಡಬೇಕೆಂದು ಒತ್ತಾಯಿ ಸುತ್ತೇನೆ. ಉದಾಹರಣೆಗೆ ಹೇಳುವುದಾದರೆ ಇವತ್ತು ನಮ್ಮ ಬಿ-ಸ್ಕೀಮ್ ನೀರನ್ನು ಬಳಸಿಕೊಳ್ಳುವುದು ಒಂದು ಕಡೆ, ಎ-ಸ್ಕೀಂನಲ್ಲಿ ಪಡೆದಿರತಕ್ಕಂಥ ಕರ್ನಾಟಕ ರಾಜ್ಯದ ನೀರಿನ ಪಾಲನ್ನು ನಾವು ಪಡೆದುಕೊಳ್ಳಲಿಕ್ಕಾಗುತ್ತಿಲ್ಲ ಎಂದರೆ ಇಂಥ ನಾಚಿಕೆಗೇಡು ಯಾರಿಗೂ ಇಲ್ಲವೆಂದು ನಾವು ಭಾವಿಸ ಬೇಕಾಗುತ್ತದೆ. ಆಂಧ್ರದವರು ಮತ್ತು ತಮಿಳುನಾಡಿನವರು ಹೇಗೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ನಮ್ಮ ಉನ್ನತ ಮಟ್ಟದ ನೀರಾವರಿ ಅಧಿಕಾರಿ ಗಳನ್ನು ಕೇಳಿದರೆ ಅವರು ಕಾನೂನಿನ ತೊಡಕನ್ನು ಹೇಳುತ್ತಾರೆ, ತಾಂತ್ರಿಕ ದೋಷವನ್ನು ಹೇಳುತ್ತಾರೆ. ಆದರೆ ಇವತ್ತು ಪ್ರಾಜೆಕ್ಟ್‌ಗಳನ್ನು ನಿರ್ಮಾಣ ಮಾಡುವುದಕ್ಕೆ ನಮಗೆ ಏನು ತೊಂದರೆ ಇದೆ. ಬಿ-ಸ್ಕೀಮ್ ನೀರನ್ನು ಇವತ್ತು ಕೃಷ್ಣ ನದಿ ನೀರನ್ನು ನಾವು ಇನ್ನೂ ಕೂಡ ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಲು ಆಗುತ್ತಾ ಇಲ್ಲ. ಅನೇಕ ಯೋಜನೆಗಳನ್ನು ಮುಗಿಸಿದರೂ ಕೂಡ ನಾವು ಇವತ್ತು ಕೆನಾಲ್‌ಗಳನ್ನು, distribution lineಗಳನ್ನು ಜಮೀನಿಗೆ ನೀರನ್ನು ಕೊಡತಕ್ಕ ಹಂತಕ್ಕೆ ನಾವು ತಲುಪಿಲ್ಲ ಎಂಬುದನ್ನು ನೋಡಿದಾಗ ನಿಜವಾಗಿಯೂ ಅಂತಹ ಆದ್ಯತೆಗಳನ್ನು ನೀವು ಕೊಡಬೇಕಾಗುತ್ತದೆ. ನೀರಾವರಿಗೆ ಆದ್ಯತೆ ಕೊಟ್ಟರೆ ಇವತ್ತು ರೈತ ಅರ್ಧ ಬದುಕುತ್ತಾನೆ ಮತ್ತು ಅವನು ಗ್ರಾಮೀಣ ಮಟ್ಟದಲ್ಲಿ ನೆಲೆಸುತ್ತಾನೆ, ಆರ್ಥಿಕ ಭದ್ರತೆಯನ್ನು ಗುರುತಿಸಿಕೊಳ್ಳುತ್ತಾನೆ, ಸ್ವಾವಲಂಬಿ ಬದುಕನ್ನು ಕಟ್ಟುತ್ತಾನೆ ಎಂಬುದನ್ನು ತಾವು ಗಮನಿಸಬೇಕಾಗುತ್ತದೆ. ಆ ದಿಸೆಯಿಂದ ಮಾನ್ಯ ಮುಖ್ಯಮಂತ್ರಿಗಳು ಇವತ್ತು ನೀರಾವರಿಗೆ ಒತ್ತು ಕೊಡತಕ್ಕಂಥದ್ದನ್ನು ಮಾಡಬೇಕೆಂಬ ಒತ್ತಾಯ

ವನ್ನು ನಾನು ಮಾಡುತ್ತೇನೆ. ಇನ್ನು ಗ್ರಾಮೀಣ ಮಟ್ಟದಲ್ಲಿ Horticulture ಬೆಳೆ ಕೂಡ, ಶೇಕಡವಾರು ಬಹಳ ಉತ್ಪಾದನೆಯನ್ನು ಕೊಡುತ್ತದೆ, ಅದರಲ್ಲಿಯೂ ಕೂಡ ಬಂಡವಾಳವನ್ನು ಹಾಕುವಂಥ ವ್ಯವಸ್ಥೆಗೆ ರೈತನಲ್ಲಿ ಆರ್ಥಿಕ ಅನುದಾನ ಇಲ್ಲ. ಆ ಕಾರಣಕ್ಕಾಗಿ ಬ್ಯಾಂಕುಗಳಿಂದ ಸಕಾಲದಲ್ಲಿ ಇವತ್ತು ಸಿಗುವಂತಹ ವ್ಯವಸ್ಥೆಯನ್ನು ನೀವು ತರಬೇಕಾಗುತ್ತದೆ. ಶೇಕಡ 13ರಷ್ಟು horticulture ಬೆಳೆಯನ್ನು ಬೆಳೆಯುತ್ತಿದ್ದೇವೆ. ಅನೇಕ ಒಣ ಪ್ರದೇಶದಲ್ಲೂ ಕೂಡ ಆ ಬೆಳೆಗೆ ಪ್ರೋತ್ಸಾಹ ಕೊಡಬೇಕು ಒಣ ಭೂಮಿಯಲ್ಲಿ ಕೂಡ ಬೆಳಯಲಿಕ್ಕೆ ಅವಕಾಶವಿದೆ. ಆ ಕಾರಣಕ್ಕಾಗಿ ವಿಜ್ಞಾನಿಗಳು ಮತ್ತು ರೈತರ ಸಂಯೋಗವನ್ನು ಇವತ್ತು co-ordinate ಮಾಡಿ, ಅವರ ಸಭೆಗಳನ್ನು ಕರೆದು ಅವರಿಗೆ ತಿಳಿವಳಿಕೆಯನ್ನು ಕೊಡತಕ್ಕದ್ದನ್ನು ತೋಟಗಾರಿಕೆ ಇಲಾಖೆಯಲ್ಲಿ ಕೂಡ ತಾವು ಮಾಡಿದಾಗ ಈ ರಾಜ್ಯದ ಅದಾಯವನ್ನು ಹೆಚ್ಚಿಸಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇನ್ನು ರೈತರಿಗೆ ಏನು ನೇರವಾಗಿ ಸಂಪರ್ಕ ಇರತಕ್ಕಂತದ್ದು, ಅಂದರೆ ಅಂತರ್ಜಲ ಅಂತರ್ಜಲವನ್ನು ಉಪಯೋಗ ಮಾಡಿಕೊಂಡು IP ste ಮೇಲೆ ಬದುಕುವ ರೈತರ ಬಾಳು ಅತ್ಯಂತ ದುಸ್ಥಿತಿಯಲ್ಲಿದೆ. ಮಾನ್ಯ KPTCL ಮಂತ್ರಿಗಳು ಅದಕ್ಕೆ ಕಾರಣ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ system ಅನ್ನು improve ಮಾಡತಕ್ಕದ್ದನ್ನು, ಎಲ್ಲಿ ತಾಂತ್ರಿಕ ದೋಷ ಇದೆ ಎನ್ನುವುದನ್ನು ಕೂಡ ಇವರು ಪತ್ತೆ ಹಚ್ಚ ಬೇಕಾಗಿದೆ. ಅದನ್ನು ಮಾನ್ಯ ಈಶ್ವರಪ್ಪನವರು ಮಾಡುತ್ತಾ ಇಲ್ಲ. ಇವತ್ತು ಅನೇಕ ಕಡೆ TC ಗಳು fail ಆಗುತ್ತಿವೆ. ಆ TCಗಳು ಏಕೆ fail ಆಗುತ್ತಿವೆ? ನೀವು ಇವತ್ತು free ಆಗಿ ವಿದ್ಯುತ್ ಅನ್ನು ಕೊಡತ್ತೇವೆ ಎಂದು ರಾಜ್ಯದಲ್ಲಿ ಘೋಷಣೆ ಮಾಡಿದ್ದೀರಿ ಈಗ ಮೊದಲು ಅಧಿಕೃತ ಇರತಕ್ಕ ಪಂಪ್‌ಸೆಟ್‌ಗಳು, ಅನಧಿಕೃತವಾಗಿರತಕ್ಕ ಪಂಪ್‌ಸೆಟ್‌ಗಳನ್ನು ನೀವು ಮೊದಲು ಸರ್ವೆ ಮಾಡಿಸಬೇಕಾಗುತ್ತದೆ.

ಅದಕ್ಕೆ ಅನುಗುಣವಾಗಿ ಟಿ.ಸಿ.ಗಳನ್ನು ನೀವು sanction ಮಾಡಿಸ ಬೇಕಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಇವತ್ತು replacement ಮಾಡುತ್ತಾರೆ, ಮಾರನೆಯ ದಿನ ಅದು ಬರ್ನ್ ಆಗುತ್ತದೆ. ಒಂದು ಕಡೆ ಸರ್ಕಾರ ಇವತ್ತು ಹಣಕಾಸಿನ ದುಸ್ಥಿತಿಯನ್ನು ಅನುಭವಿಸುತ್ತಿದೆ, ಮತ್ತೊಂದು

ಕಡೆ ರೈತ ವಿಫಲನಾಗುತ್ತಾನೆ. ಇವತ್ತು ವಿದ್ಯುತ್ ಮಂತ್ರಿಗಳು ಮಾನ್ಯ ಈಶ್ವರಪ್ಪನವರು ಅನುಭವಿಗಳಿದ್ದಾರೆ. ಅದನ್ನು ಅವರು ಸರ್ವೆ ಮಾಡಿಸ ಬೇಕಾಗುತ್ತದೆ. ಇವತ್ತು ಎಷ್ಟು transformerಗಳನ್ನು ಅಳವಡಿಸಬೇಕಾಗಿದೆ? ಇನ್ನೂ ನೀವು 3 ತಾಸು ಕರೆಂಟ್ ಕೊಡುತ್ತೀರೋ ಅಥವಾ 6 ತಾಸು ಕರೆಂಟ್ ಕೊಡುತ್ತೀರೋ ಅದು ಬೇರೆ. ವಿದ್ಯುತ್ ಏನು ಉತ್ಪಾದನೆ ಯಾಗುತ್ತದೆ ಅದರ ಅನುಪಾತದಲ್ಲಿ ನೀವು ವಿದ್ಯುತ್ ಅನ್ನು ಸರಬರಾಜು ಮಾಡುತ್ತಿದ್ದೀರಿ. ಆದರೆ, ಸಿಸ್ಟಮ್‌ನ ಬಗ್ಗೆ ನೀವು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿಲ್ಲ. ನಾವು ಇವತ್ತು daily ಬೆಳಿಗ್ಗೆ ಎದ್ದರೆ ನಮ್ಮ ಭಾಗದಲ್ಲಿರತಕ್ಕಂಥ IP set ಉಪಯೋಗಿಸತಕ್ಕಂಥ ರೈತರು ಇವತ್ತು ನಮ್ಮ ಟಿ.ಸಿ. fail ಆಗಿದೆ, 100 KV fail ಆಗಿದೆ, 63 KV fail ಆಗಿದೆ ಎಂದು ಹೇಳುತ್ತಾರೆ. ಇವತ್ತು ನಮಗೆ ನೀವು ಟಿ.ಸಿ.ಗಳನ್ನು supply ಮಾಡದೇ ಇದ್ದರೆ ಹೇಗೆ? ಈಗಾಗಲೇ 10 ದಿವಸಗಳಿಂದ ನಮ್ಮ ಬೆಳೆಗಳಿಗೆ ನೀರನ್ನು ಕೊಡುವುದಕ್ಕೆ ಆಗಿಲ್ಲ. ಆ ಬೆಳೆಗೆ ಇವತ್ತು ಗೊಬ್ಬರ ಹಾಕಿದ್ದೇವೆ. ಇವತ್ತು ನಾವು ಕಳೆ ತೆಗೆದಿದ್ದೇವೆ. ನಮ್ಮ ಶ್ರಮ ಅದರಲ್ಲಿದೆ. ಇವತ್ತು ಬೆಳೆ ಉಳಿಸಿ ಕೊಳ್ಳಬೇಕಾದರೆ ಟಿ.ಸಿ. ಬೇಕು ಎಂದು ರೈತ ಒತ್ತಾಯ ಮಾಡುತ್ತಾನೆ. ನಾವು ಇವತ್ತು ಸಂಬಂಧಪಟ್ಟಂಥ Executive Engineer ಇರಬಹುದು, AEE ಇರಬಹುದು, ಅವರನ್ನು consult ಮಾಡಿದರೆ ನಮಗೆ ಟಿ.ಸಿ. ಸಪ್ಲೈ ಆಗುತ್ತಿಲ್ಲ, oil supply ಆಗುತ್ತಿಲ್ಲ, ಹೆಚ್ಚುವರಿ ಟಿ.ಸಿ.ಗಳನ್ನು ಮಂಜೂರು ಮಾಡುವುದಕ್ಕೆ ನಮಗೆ ಅಧಿಕಾರವಿಲ್ಲ ಎನ್ನುವ ಮಾತನ್ನು ಹೇಳುವುದನ್ನು ನೋಡಿದರೆ ಮಾನ್ಯ ಈಶ್ವರಪ್ಪನವರು review ಮಾಡಬೇಕಾಗುತ್ತದೆ. ಇವತ್ತು ಅರ್ಧ ರೈತರು ನಿಮ ಶಕ್ತಿಯ ಮೇಲೆ ಬದುಕಬೇಕಾಗಿದೆ. ಆ ಕಾರಣಕ್ಕಾಗಿ ನಿಮಗೆ ಏನಾದರೂ ಪುಣ್ಯ ಬರಬೇಕಾದರೆ ಅಥವಾ ನಿಮ್ಮ ಮನಸ್ಸಿಗೆ ಒಪ್ಪಬೇಕಾದರೆ, ತಮ್ಮ ಬದುಕಿನ ಸಾರ್ಥಕತೆಯ ಅರಿವು ನಿಮಗೆ ಇರಬೇಕಾದರೆ ಈ ಕೆಲಸವನ್ನು ನೀವು ಮೊದಲು ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆ ಕಾರಣಕ್ಕಾಗಿ ಈ ಎರಡು ಕೆಲಸಗಳನ್ನು ನೀವು ಸರಿ ಮಾಡಿದರೆ ಅರ್ಧದಷ್ಟು ಇವತ್ತು ರೈತ ಅಲ್ಲೇ ಬದುಕನ್ನು, ಒಕ್ಕಲುತನದ ಆಸಕ್ತಿಯನ್ನು ತೋರಿಸುವುದಕ್ಕೆ ಸಾಧ್ಯವಾಗುತ್ತದೆ. ಆ ಕಾರಣಕ್ಕಾಗಿ ಸರ್ಕಾರ ಆ ದಿಸೆಯಲ್ಲಿ ಕೆಲಸ ಮಾಡಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತೇನೆ. ಇನ್ನು ಕುಡಿಯುವ ನೀರಿನ ಬಗ್ಗೆ

ಹೇಳುವುದಾದರೆ ಇವತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ ಮಂತ್ರಿಗಳು surface water ಕೊಡುತ್ತೇವೆ ಎಂದು ರಾಜ್ಯ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳು ಘೋಷಣೆಗಳನ್ನು ಮಾಡುತ್ತಾರೆ. Surface water ಎಲ್ಲಿದೆ? ನೀರಾವರಿ ಮಾಡುವುದಕ್ಕೆ ಕುಡಿಯುವ ನೀರನ್ನು surface water ಎಂದು ತೆಗೆದುಕೊಂಡು ಹೋಗಿ fluoride contents ಇಲ್ಲದಿರುವ ಶುದ್ಧವಾದ ನೀರನ್ನು ಕೊಡುತ್ತೇವೆಂದು ಹೇಳಿರುವ ವಾದವನ್ನು ನಾವು ಒಪ್ಪುತ್ತೇವೆ. ಆದರೂ ಕೂಡ ಗ್ರಾಮೀಣ ಭಾಗದಲ್ಲಿರತಕ್ಕಂಥ ಹಿಂದಿನ ಕೆರೆಗಳನ್ನು ಉಳಿಸಿಕೊಳ್ಳುವಂಥ ಕೆಲಸವನ್ನು ನಾವು ಮಾಡಬೇಕಾಗಿದೆ. ಎಲ್ಲಾ ನೀರನ್ನು ಕುಡಿಯುವುದಕ್ಕೆ ಕೊಟ್ಟು ನೀವು ರೈತರ ಜಮೀನಿಗೆ ನೀರು ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಅಂತಹ concept ಈ ಸರ್ಕಾರಕ್ಕೆ ಇವತ್ತು ಬೇಕಾಗಿದೆ. ಆ ಚಿಂತನೆ ಆಗಬೇಕಾಗಿದೆ. ಉನ್ನತ ಮಟ್ಟದ ಅಧಿಕಾರಿಗಳ ಸಲಹೆ ಮತ್ತು ನಿಮ್ಮ ವಿಚಾರಗಳು ಅಲ್ಲಿ ಸ್ಪಂದಿಸಿದಾಗ ಅಂತಹ ಕಾರ್ಯಕ್ರಮಗಳನ್ನು ಅಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ನಾವು ನಿರಂತರವಾಗಿ ಜಿಲ್ಲಾ ಪಂಚಾಯಿತಿ ವ್ಯವಸ್ಥೆಯನ್ನು ನೋಡುತ್ತೇವೆ. ಈ ವರ್ಷ ಕುಡಿಯುವ ನೀರಿನ ಒಂದು ಹೊಸ ಸ್ಕೀಂ ಮಂಜೂರು ಆಗುತ್ತದೆ. Next year water source ಇಲ್ಲದೇ dry up ಆದರೆ ಮತ್ತೆ ಸ್ಕೀಂ sanction ಆಗಬೇಕು ಅಂತ proposal ಕೊಡುತ್ತೇವೆ. ಹಣ ಇವತ್ತು waste ಆಗಿ ಖರ್ಚಾಗುತ್ತಿದೆ. ಆದರೆ, ಆ ಜ್ವಲಂತ ಸಮಸ್ಯೆ ಬಗೆಹರಿಯುತ್ತಿಲ್ಲ. ಆ ಕಾರಣಕ್ಕಾಗಿ ಮಾನ್ಯ RDPR ಮಂತ್ರಿಗಳಿದ್ದಾರೆ, ಅವರದು ಒಂದು concept ಇದೆ. ಆ ಕೆಲಸವನ್ನು ನೀವು ಮಾಡಬೇಕಾಗುತ್ತದೆ. ಎಲ್ಲೆಲ್ಲಿ ಕೆರೆಗಳ ಮೂಲಕ ನೀರನ್ನು ಸಂಗ್ರಹ ಮಾಡುವುದಕ್ಕೆ ಸಾಧ್ಯವಿದೆ, ಆ ಕೆರೆಗಳಿಗೆ ಇವತ್ತು ನೀರು ತುಂಬಿಸುವಂಥ ಕೆಲಸ ಕೂಡ ಆಗಬೇಕಾಗಿದೆ. ಇವತ್ತು ಬರಗಾಲವನ್ನು ನೋಡುತ್ತಿದ್ದೇವೆ, ಮಳೆಯ ಅಭಾವವನ್ನು ನೋಡುತ್ತಿದ್ದೇವೆ. ಇವೆಲ್ಲವನ್ನೂ ನೋಡಿದಾಗ ಕೆರೆಗಳಿಗೆ ನೀರನ್ನು ತುಂಬಿಸುವಂಥ ಕೆಲಸ ಮಾಡಿದರೆ ಅಲ್ಲಿರತಕ್ಕಂಥ surroundings ಗೆ, ಮತ್ತು IP set ಗಳ ಬೋರ್‌ವೆಲ್‌ಗಳಲ್ಲಿ yield ಕೂಡ increase ಆಗುತ್ತದೆ. ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ. ಈ ಎಲ್ಲಾ ವಿಚಾರಗಳನ್ನು ನೀವು ಅಳವಡಿಸಿಕೊಂಡು ಕುಡಿಯುವ ನೀರಿನ ಯೋಜನೆ ಗಳನ್ನು ಹಾಕಿಕೊಳ್ಳಬೇಕೆಂದು ನಾನು

ಒತ್ತಾಯ ಮಾಡುತ್ತೇನೆ. ಗ್ರಾಮೀಣ ಭಾಗದಲ್ಲಿ ಹೋಗಿ IP set ಇರುವಂಥ ಒಬ್ಬರ ಮನೆಯನ್ನು ನೋಡಿದರೆ ಅವನ ಮನೆ ಚೆನ್ನಾಗಿದೆ ಅವನು ಆರ್.ಸಿ.ಸಿ. ಹಾಕಿಕೊಂಡಿದ್ದಾನೆ, ಅಂಗಳಕ್ಕೆ ಒಳ್ಳೆಯ ಕಲ್ಲುಗಳನ್ನು ಹಾಕಿಕೊಂಡಿದ್ದಾರೆ ಎಂದರೆ ಅವನ ಬೋರ್‌ವೆಲ್‌ನಲ್ಲಿ ನೀರಿದೆ ಎಂದು ನಮಗೆ ಅನುಭವ ಬರುತ್ತದೆ. ಎಲ್ಲಾ ರೈತ ಕುಟುಂಬಗಳು ಇವತ್ತು ಒಣ ಭೂಮಿ ಇರುವುದರಿಂದ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ, ಬಿತ್ತನೆ ಮಾಡುವುದಕ್ಕೆ ಆಗುತ್ತಿಲ್ಲ, ಬೆಳೆ ಬರುತ್ತಿಲ್ಲ. ಒಂದು ಕಡೆ IP set ಅನ್ನು ಉಳಿಸಿ ಕೊಳ್ಳಬೇಕಾದರೆ ಇವೆಲ್ಲಾ ಏನು ಇವತ್ತು water sourceನ, ಮಳೆ ಕುಯಿಲಿನ ಈ ಎಲ್ಲಾ ಯೋಜನೆಗಳಿಗೆ, ನಾವು ಇವತ್ತು ಉಪಯುಕ್ತವಾದ ಕೆಲಸಕ್ಕೆ, ಹಣ ಒದಗಿಸಬೇಕಾಗುತ್ತದೆ. ಆ ಕಾರಣಕ್ಕಾಗಿ ಇವತ್ತು ಸರ್ಕಾರ ಇಂತಹ ಕೆಲಸವನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನೂ ಬೇರೆ ಅನೇಕ ವಿಚಾರಗಳಿವೆ. ಈಗ ಆಸ್ಪತ್ರೆ ಬಗ್ಗೆ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಅನೇಕ ಕಡೆ ನಾವು ಇವತ್ತು PHU, PHC sanction ಮಾಡುತ್ತೇವೆ. 30 ಬೆಡ್ ಇರುವ ಆಸ್ಪತ್ರೆಯಲ್ಲಿ 50 ಬೆಡ್ ನಿರ್ಮಾಣ ವಾಗುತ್ತದೆ, 100 ಬೆಡ್ ಆಗುತ್ತದೆ, 250 ಬೆಡ್ ಇರುವ ಆಸ್ಪತ್ರೆಗಳು ಇವತ್ತು ನಿರ್ಮಾಣವಾಗುತ್ತದೆ. ಆದರೆ, ಎಲ್ಲಿಯೂ ಕೂಡ ವೈದ್ಯರ ಸಂಪೂರ್ಣವಾದ ನೇಮಕಾತಿ ಆಗುತ್ತಿಲ್ಲ. ಅಲ್ಲಿರತಕ್ಕಂಥ staff ಗಳನ್ನು ತುಂಬುವಂಥ ಕೆಲಸವಾಗುತ್ತಿಲ್ಲ. ಇವತ್ತು 108 Ambulance ಯೋಜನೆ ಯನ್ನು ಅತ್ಯುತ್ತಮ ಯೋಜನೆಯೆಂದು ನಾವು ಕರೆಯುತ್ತೇವೆ. ಆದರೆ, ಅಲ್ಲಿ ರೋಗಿಗಳು ಹೋದರೆ ಡಾಕ್ಟರ್‌ಗಳೇ ಇರುವುದಿಲ್ಲ. ವೈದ್ಯರನ್ನು ತುಂಬುವಂಥ ಕೆಲಸವಾಗಬೇಕಾಗಿದೆ. ಇವತ್ತು ಪಟ್ಟಣ ಪ್ರದೇಶದಲ್ಲಿ ವೈದ್ಯರಿಲ್ಲವೆಂದರೆ, ಇನ್ನು ನೆಪಕ್ಕೆ ಮಾತ್ರ ಗ್ರಾಮೀಣ ಮಟ್ಟದಲ್ಲಿ PHC ಗಳಿವೆ; ಅವನ್ನು ನಾವು ನೋಡಬೇಕಾಗಿದೆ. ಆರೋಗ್ಯದ ಬಗ್ಗೆ ಕಾಳಜಿ ಇದ್ದರೆ ವೈದ್ಯರನ್ನು ತುಂಬುವಂಥ ಕೆಲಸವನ್ನು ಮಾಡಿ, ಇದು ಬಹಳ ಪ್ರಾಮುಖ್ಯವಾದಂಥ ವಿಚಾರ. ಇವತ್ತು ವೈದ್ಯರು ಏನು ಮಾಡುತ್ತಿದ್ದಾರೆ ಎಂದರೆ ಗ್ರಾಮೀನ ಮಟ್ಟದಲ್ಲಿ ಸೇವೆಯನ್ನು ಸಲ್ಲಿಸುವುದಕ್ಕೆ ತಯಾರಿಲ್ಲ. ಬಹಳ pressure ಮಾಡಿದರೆ ಒಂದು ಸಲ ತಾಲ್ಲೂಕು ಮಟ್ಟಕ್ಕೆ ಹಾಕಿಸಿಕೊಳ್ಳುತ್ತಾರೆ, ಮತ್ತೊಂದು ಸಲ ಏನೋ ಮಾಡಿದರೆ ಜಿಲ್ಲಾ ಕೇಂದ್ರಕ್ಕೆ ಬರುತ್ತಾರೆ. ಅದಕ್ಕೂ ಮೀರಿ ಮಂತ್ರಿಗಳದು ಹಾಗೂ ಶಾಸಕರ pressure ಜಾಸ್ತಿಯಾದರೆ VRS

ತೆಗೆದುಕೊಳ್ಳುತ್ತಾರೆ. ಇದಕ್ಕೆ ಕಾನೂನಿನ ಕಟ್ಟಳೆಯನ್ನು ಇವತ್ತು ಸರ್ಕಾರ ಹಾಕಿಕೊಳ್ಳಬೇಕಾಗುತ್ತದೆ. ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕಾದರೆ ಸರ್ಕಾರ ಎಷ್ಟೊಂದು ಜವಾಬ್ದಾರಿ ಹೊತ್ತುಕೊಂಡು ಅವರಿಗೆ ಹಣ ವ್ಯಯ ಮಾಡಿರುತ್ತದೆ. ಒಬ್ಬರು ನಾಗರೀಕ ಬದುಕನ್ನು ಕಟ್ಟಲಿ, ರಾಜ್ಯವನ್ನು ಅಭಿವೃದ್ಧಿ ಮಾಡಲಿ ಎಂಬ concept ಮೇಲೆ ಅವರಿಗೆ ಶಿಕ್ಷಣವನ್ನು ಕೊಡಲಾಗಿರುತ್ತದೆ. ಅವರಿಗೆ ಒಂದು concept ಬೇಕಾಗುತ್ತದೆ. ಅವರೂ ಕೂಡ ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡಬೇಕಾಗುತ್ತದೆ. ಅಲ್ಲಿನ ಜನರ ಆರೋಗ್ಯವನ್ನು ರಕ್ಷಣೆ ಮಾಡಬೇಕಾಗುತ್ತದೆ. ಆದರೆ, ಒಂದು ವರ್ಷವೂ ಕೂಡ ಅವರು ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸುವುದಕ್ಕೆ ತಯಾರಿಲ್ಲ. ಇದಕ್ಕೆ ಒಂದು ಕಾನೂನನ್ನು ತೆಗೆದು ಕೊಂಡು ಬನ್ನಿ. ಯಾರೇ ಇವತ್ತು ಹೊಸದಾಗಿ appoint ಆದರೆ, ಒಂದು-ಎರಡು ವರ್ಷ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಬೇಕೆಂದು ಕಾನೂನು ಮಾಡಿ. ಈ ರೀತಿಯ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಬೀಡಾಡಿದನಗಳು, ಕತ್ತೆಗಳು ಮಲಗುವಂಥ ವಾತಾವರಣವನ್ನು ಅನೇಕ ಆಸ್ಪತ್ರೆಗಳಲ್ಲಿ ನಾವು ನೋಡುತ್ತಿದ್ದೇವೆ. ಆ ಕಾರಣಕ್ಕಾಗಿ ಮಾನ್ಯ ಆರೋಗ್ಯ ಮಂತ್ರಿಗಳು ಇವತ್ತು ಯುವಕರು ಆಗಿದ್ದಾರೆ, ಅವರಿಗೆ ಒಂದು ಕಳಕಳಿಯಿದೆ. ಆಸ್ಪತ್ರೆಗಳ ಬಗ್ಗೆ ಈ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಇಂತಹ ಒಳ್ಳೆಯ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸಭೆ ಕರೆದಿದ್ದಾರೆ. ಆದರೆ, ಅದಕ್ಕನು ಗುಣವಾಗಿ ಮುಂದಿನ ಬಜೆಟ್‌ನಲ್ಲಿ ನೀರಾವರಿಗೆ ಹೆಚ್ಚು ಹಣಕಾಸನ್ನು ಕೊಡತಕ್ಕಂಥ ಕೆಲಸವಾಗಬೇಕು. ಇದರ ಜೊತೆಗೆ ರೈತರಿಗೆ ಸರಿಯಾದ ಸಂದರ್ಭದಲ್ಲಿ ಬಿತ್ತನೆ ಬೀಜ ಹಾಗೂ ಗೊಬ್ಬರವನ್ನು ಪೂರೈಕೆ ಮಾಡುವಂಥಾದ್ದು ಆಗಬೇಕಾಗಿದೆ. ಬಿತ್ತನೆ ಬೀಜಗಳಿಗೆ ಸಂಬಂಧಪಟ್ಟಂತೆ ಕುಲಾಂತರ ತಳಿಗಳು ಬಂದ ನಂತರ ಸರ್ಕಾರದವರೇ ಬಿತ್ತನೆ ಬೀಜಗಳನ್ನು ಕೊಡಬೇಕಾಗುತ್ತದೆ. ಅವರು ಏನು ಮಳೆಯಾಗಿದೆ ಅಥವಾ ನೀರು ಹಾಯಿಸಿಕೊಂಡು ನಾನು ಬಿತ್ತನೆ ಬೀಜ ಬಿತ್ತುತ್ತೇನೆ ಎಂದರೆ ಸಮಯಕ್ಕೆ ಅನುಗುಣವಾಗಿ ಬಿತ್ತನೆ ಮಾಡತಕ್ಕಂಥ ಅವಕಾಶ ಇವತ್ತು ರೈತನಿಗೆ ಇಲ್ಲ. ಹಿಂದೆಲ್ಲಾ ರೈತ ತಾನೇ ಸಂಪಾದಿಸಿದಂಥ, ಬೆಳೆದಂಥ ಬೆಳೆಯನ್ನು ಕ್ರೋಢೀಕರಿಸಿ ಬೀಜಗಳನ್ನು ತಯಾರು ಮಾಡಿಕೊಳ್ಳುತ್ತಿದ್ದ. ಆದರೆ, ಇವತ್ತು ಕುಲಾಂತರ ತಳಿ ಬಂದ ನಂತರ, ಇವತ್ತು

ಪ್ರೈವೇಟ್ ಕಂಪನಿಯವರು research ಮಾಡಿ ತಳಿಗಳನ್ನು ಬಿಡುತ್ತಿದ್ದಾರೆ. ಆದರೆ, ಕೃಷಿ ವಿಶ್ವವಿದ್ಯಾನಿಲಯದವರು ಏನೂ ಕೆಲಸವನ್ನು ಮಾಡುತ್ತಿಲ್ಲ. ಆ ನಿಟ್ಟಿನಲ್ಲಿ ಇವತ್ತು ಕೃಷಿ ಮಂತ್ರಿಗಳು ಕೆಲಸ ಮಾಡಬೇಕಾಗಿದೆ. ಬೆಂಗಳೂರು ಹಾಗೂ ಧಾರವಾಡ ವಿಶ್ವವಿದ್ಯಾನಿಲಯಗಳಲ್ಲಿ ಇವತ್ತು research ಮಾಡತಕ್ಕಂಥ ಹಣದ ಬಳಕೆಯಾಗಬೇಕಾಗಿದೆ. ನಾವು ಇವತ್ತು ದಾಳಿಂಬೆ ಬೆಳೆ ಬಗ್ಗೆ ಪ್ರಶ್ನೆ ಮಾಡಬೇಕಾಗುತ್ತದೆ. ಇವತ್ತು ದಾಳಿಂಬೆ ಬೆಳೆಗೆ disease ಬಂದಿದೆ. ಈ ದುಂಡಾಣು ರೋಗವನ್ನು ನಿಯಂತ್ರಣ ಮಾಡಬೇಕಾದರೆ researchಗೆ ಏನು ಹಣ ವ್ಯಯ ಮಾಡಿದ್ದೀರಿ ಎಂದು ಕೇಳಿದರೆ ಅದಕ್ಕೆ ಅವರು ಒಂದು ಕೋಟಿ ಹಣವನ್ನು ಬಿಡುಗಡೆ ಮಾಡಿದ್ದೇವೆ ಎನ್ನುವ ಮಾತನ್ನು ಉತ್ತರದಲ್ಲಿ ಹೇಳಿದರು. ಈ ಒಂದು ಕೋಟಿ ಹಣವನ್ನು ಬಿಡುಗಡೆ ಮಾಡಿದ್ದೇವೆ ಎನ್ನುವ ಮಾತನ್ನು ಉತ್ತರದಲ್ಲಿ ಹೇಳಿದರು. ಈ ಒಂದು ಕೋಟಿ ಏತಕ್ಕೆ ಸಾಕಾಗುತ್ತದೆ? research ಮಾಡುವುದಕ್ಕೆ ಸಾಧ್ಯವಿದೆಯೆ? ಕಾರಣದಿಂದ ಪ್ರೈವೇಟ್‌ನವರು ಒಂದು ಹೊಸ ತಳಿಯನ್ನು ಒಂದು–ಎರಡು ವರ್ಷಗಳಲ್ಲಿ ಹೊರಕ್ಕೆ ತರುತ್ತಾರೆ. ಆದರೆ, ರಾಜ್ಯಸರ್ಕಾರದ ಕೃಷಿ ವಿಜ್ಞಾನಿಗಳು ಅಂತಹ ಕೆಲಸವನ್ನು ಮಾಡುವುದಕ್ಕೆ ತಯಾರಿಲ್ಲ. ಅವರಿಗೆ ನೀವು ಹೆಚ್ಚು ಹಣವನ್ನು ಒದಗಿಸಿದಾಗ ಮಾತ್ರ ಇಂತಹ ಉತ್ತಮವಾದ ಬಿತ್ತನೆ ಬೀಜಗಳನ್ನು ಅವರು ತರುವುದಕ್ಕೆ ಸಾಧ್ಯವಾಗುತ್ತದೆ. ಆ ಕಾರಣದಿಂದ ರೈತನಿಗೆ ಸಕಾಲದಲ್ಲಿ ಸಾಲ ಸಿಗುವಂಥಾದ್ದು, ಉತ್ತಮವಾದ ಬಿತ್ತನೆ ಬೀಜಗಳ ಪೂರೈಕೆ ಆಗುವಂಥಾದ್ದು ಹಾಗೂ ರೈತರಿಗೂ ಕೂಡ ಇವತ್ತು ನೀವು ನಿಮ್ಮದೇ ಆದಂಥ ಬಿತ್ತನೆ ಬೀಜಗಳನ್ನು ಸಂಗ್ರಹ ಮಾಡಬೇಕು ಹಾಗೂ ನೀವೇ ಅದನ್ನು ಬೆಳೆಯಬೇಕು ಎನ್ನುವ ಸಲಹೆ ಕೊಡುವಂಥ ಕೆಲಸ ಮಾಡಬೇಕು ಎಂದು ಮಾನ್ಯ ಉಪಾಧ್ಯಕ್ಷರಲ್ಲಿ ವಿನಂತಿ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮುಂದಿನ ದಿನಮಾನಗಳಲ್ಲಿ ಕೃಷಿಗೆ ಒತ್ತು ಕೊಡುವಂಥಾದ್ದು, ಗ್ರಾಮೀಣ ಭಾಗದಲ್ಲಿ ಇವತ್ತು ಸುವರ್ಣ ಗ್ರಾಮೋದಯದ ಕನಸು ಏನಿದೆಯೆಲ್ಲಾ ಆ ಕನಸಿಗೆ ಇನ್ನೂ ಜಾಸ್ತಿ ಒತ್ತು ಕೊಡಬೇಕಾಗುತ್ತದೆ. ಇವತ್ತು ಪಿ.ಯು.ಕಾಲೇಜಿಗೆ ಬರತಕ್ಕಂಥ ವಿದ್ಯಾರ್ಥಿಗಳ ಬಗ್ಗೆ ನಾವು ಹೇಳುವುದಾದರೆ ಶೇಕಡ 11ರಷ್ಟು ಮಾತ್ರ ನಮ್ಮ ದೇಶದಲ್ಲಿ ಉನ್ನತ ಶಿಕ್ಷಣವನ್ನು ಪಡೆಯುವುದಕ್ಕೆ ಸಾಧ್ಯವಾಗಿದೆ. ಇನ್ನೂ ಕೂಡ ನಾವು 20–25ರ ಶೇಕಡಾವಾರಿಗೆ ಹೋಗಬೇಕಾದರೆ ಗ್ರಾಮೀಣ ಮಟ್ಟದಲ್ಲಿ ಹಾಸ್ಟೆಲ್‌ಗಳನ್ನು

ಮಂಜೂರು ಮಾಡಬೇಕಾಗುತ್ತದೆ. ಅಲ್ಲಿ ಹಾಸ್ಟೆಲ್‌ಗಳಿಲ್ಲ. ಒಂದು ಕಡೆ ನಾವು ಬಿಸಿಯೂಟದ ವ್ಯವಸ್ಥೆ ಹೇಗೆ ಮಾಡಿದ್ದೇವೆ ಅದೇ ರೀತಿ ಹಾಸ್ಟೆಲ್‌ಗಳನ್ನು ಕೂಡ ನೀವು ತೆರೆಯ ಬೇಕಾಗುತ್ತದೆ. ನಮ್ಮ ಕೊಪ್ಪಳದಂಥ ಒಂದು ಪಟ್ಟಣದಲ್ಲಿ ಹಾಸ್ಟೆಲ್‌ಗಳನ್ನು ಕೂಡ ನೀವು ತೆರೆಯಬೇಕಾಗುತ್ತದೆ. ನಮ್ಮ ಕೊಪ್ಪಳದಂಥ ಒಂದು ಪಟ್ಟಣದಲ್ಲಿ ಇವತ್ತು ಕಾಲೇಜು ಹಾಸ್ಟೆಲ್‌ಗಳಲ್ಲಿ ಇರುವಂಥ ವಿದ್ಯಾರ್ಥಿಗಳ ಸಂಖ್ಯೆ ಎಂದರೆ 800 ಮಕ್ಕಳು. ಅಲ್ಲಿ 160 ಮಕ್ಕಳಿಗೆ ಮಾತ್ರ ಅವಕಾಶವಿದೆ. ಎಲ್ಲ ಮಕ್ಕಳೂ ಕೂಡ dropout ಆಗುವಂಥ ವ್ಯವಸ್ಥೆ ಬರುತ್ತಿದೆ.

ಆ ಕಾರಣಕ್ಕಾಗಿ, ಕಳಕಳಿಯನ್ನು ಇಟ್ಟುಕೊಂಡು ನೀವು ಮೊದಲು ಹಾಸ್ಟೆಲ್‌ಗಳನ್ನು ಕೊಡಿ. ಅವರು ಪಟ್ಟಣಕ್ಕೆ ಬರಲಿಕ್ಕೆ ಆಗುತ್ತಿಲ್ಲ. ಅಲ್ಲಿ ಯಾವಾಗ ಮಕ್ಕಳಿಗೆ ಶಿಕ್ಷಣ ಸಿಗುತ್ತದೆಯೆಂದು ರೈತರಿಗೆ ಅಥವಾ ಗ್ರಾಮೀಣ ಜನರಿಗೆ ಭಾವಣೆ ಬಂದರೆ, ಅಲ್ಲೇ ಅವರು ವಾಸ ಮಾಡುತ್ತಾರೆ. ಅಂತಹ ಯೋಜನೆಗಳನ್ನು ಇಟ್ಟುಕೊಂಡು ಒಂದು ವ್ಯವಸ್ಥೆಗೆ ಮುಂದಾಗಬೇಕೆಂದು ಹೇಳಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಅಪ್ಪಚ್ಚು ರಂಜನ್ (ಮಡಿಕೇರಿ) : ಮಾನ್ಯ ಉಪಾಧ್ಯಕ್ಷರೆ, ಮೊದಲನೆಯದಾಗಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆ ಮಾಡಲಿಕ್ಕೆ ಮತ್ತು ಅದಕ್ಕೆ ಪರಿಹಾರ ಕಂಡು ಕೊಳ್ಳಲು ಒಂದು ದಿಟ್ಟತನದ ಹೆಜ್ಜೆಯನ್ನು, ಎದೆಗಾರಿಕೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ ಎಂದು ಹೇಳಿದರೂ ಕೂಡ ತಪ್ಪಾಗಲಾರದು. ನಾನು ಕಳೆದ 12 ವರ್ಷಗಳಿಂದ ಈ ವಿಧಾನಸಭೆಯಲ್ಲಿದ್ದೇನೆ. ಯಾವ ಸಂದರ್ಭದಲ್ಲಿಯೂ ಕೂಡ ಗ್ರಾಮೀಣ ಮಟ್ಟದ ಜನರ ಅಭಿವೃದ್ಧಿ ಯಾಗಬೇಕು, ಅವರು ಮುಂದೆ ಬರಬೇಕೆನ್ನುವ ಚಿಂತನೆಯನ್ನು ಮಾಡಿದಂಥ ಯಾವುದೇ ಸರ್ಕಾರ ಕೂಡ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಆದರೆ ಇವತ್ತು ಚರ್ಚೆಗೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ ಕೇವಲ ರಾಜ್ಯದಲ್ಲಿ ಮಾತ್ರ ಈ ಚರ್ಚೆಯಾದರೆ ಸಾಲದು. ಕೇಂದ್ರ ಸರ್ಕಾರದಲ್ಲೂ ಕೂಡ ಈ ಚರ್ಚೆಯಾಗಬೇಕಾಗುತ್ತದೆ. ಅದರ ಜೊತೆಗೆ ಗ್ರಾಮೀಣಾಭಿವೃದ್ಧಿಗೆ ಸೇರುವಂಥ ಕೆಲವು ಇಲಾಖೆಗಳೂ ಕೂಡ ಸೇರಬೇಕಾಗುತ್ತದೆ. ಅದು

ಪಂಚಾಯತ್ ರಾಜ್ ಮಂತ್ರಿಗಳಿಗೆ ಸಂಬಂಧಪಟ್ಟ ಇಲಾಖೆ ಇರಬಹುದು, ಕೃಷಿ ಇಲಾಖೆ ಇರಬಹುದು, ತೋಟಗಾರಿಕೆ ಇಲಾಖೆ ಇರಬಹುದು, ನೀರಾವರಿ ಇಲಾಖೆ ಇರಬಹುದು, ವಿದ್ಯುಚ್ಛಕ್ತಿ ಇಲಾಖೆ ಇರಬಹುದು ಮತ್ತು ಸಾರಿಗೆ ಇಲಾಖೆ ಇರಬಹುದು. ಇಷ್ಟು ಇಲಾಖೆಗಳೂ ಕೂಡ ಸೇರಬೇಕಾಗುತ್ತದೆ. ಇಷ್ಟು ಇಲಾಖೆಗಳೂ ಸೇರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚಿಂತನೆ ಮಾಡುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ನನ್ನ ಒಂದು ಸಲಹೆ ಏನೆಂದರೆ, ಮೊದನೆಯದಾಗಿ ಇವತ್ತು ಇರುವಂಥ ಏನು ಈ ಆರು ಇಲಾಖೆಗಳಿವೆ, ಈ ಆರು ಇಲಾಖೆಗಳ ಕಾರ್ಯದರ್ಶಿಗಳನ್ನು ಸೇರಿಸುವುದರ ಜೊತೆಗೆ, ಒಬ್ಬರು ಎಂ.ಬಿ.ಎ. ಆದಂತಹ qualified ಇದ್ದಂಥವರನ್ನು ಸೇರಿಸಿ, ಒಬ್ಬರು ಸಿ.ಎ. ಆದಂಥವರನ್ನು ಸೇರಿಸಿ ಇದಕ್ಕೆ separate ಆದಂತಹ ಕಮಿಟಿ ಮಾಡಿ ತೀರ್ಮಾನ ಮಾಡುವಂಥ ಕೆಲಸ ವನ್ನು ಮಾಡಬೇಕಾಗುತ್ತದೆ. ಇವತ್ತು ಏನಾಗುತ್ತಿದೆ ಎಂದರೆ. Production, demand, supply and marketing ಈ ನಾಲ್ಕು ವಿಚಾರದಲ್ಲೂ ಕೂಡ ಚಿಂತನೆ ಮಾಡಬೇಕಾಗುತ್ತದೆ. ಈ ನಾಲ್ಕು ವಿಚಾರಗಳಲ್ಲಿ ಚಿಂತನೆ ಮಾಡಿದಾಗ ಮಾತ್ರ ರೈತ ಮತ್ತು ಕೃಷಿಕ ಉಳಿದುಕೊಳ್ಳುವ ಪರಿಸ್ಥಿತಿ ಯಾಗುತ್ತದೆ. ಇದನ್ನೂ ಕೂಡ ನಾವು ಚಿಂತನೆ ಮಾಡಬೇಕಾಗುತ್ತದೆ. ಏಕೆಂದರೆ, ಮಾನ್ಯ ಸದಸ್ಯರು ಮಾತನಾಡುವಂಥ ಸಂದರ್ಭದಲ್ಲಿ ಹೇಳಿದರು, ಯಾವುದಕ್ಕೆ ಹೆಚ್ಚು ರೇಟ್ ಸಿಗುತ್ತದೆ ಅದನ್ನು ಬೆಳೆಸುವುದಕ್ಕೆ ನಾವು ಹೋಗುತ್ತೇವೆ. ಬೆಳೆಸುವುದಕ್ಕೆ ಹೋದಾಗ ಹೆಚ್ಚು Production ಆಗುತ್ತದೆ. ಆ Production ನಿಂದ ರೇಟ್ ಕೂಡ ಬಿದ್ದುಹೋಗುತ್ತದೆ. Demand ಇರರುವುದಿಲ್ಲ. ರೇಟ್ ಕೂಡ ಬಿದ್ದು ಹೋಗುತ್ತದೆ. ಈ ನಿಟ್ಟಿನಲ್ಲಿ ನನ್ನ ಚಿಂತನೆ ಏನೆಂದರೆ, ನಿಜವಾಗಿಯೂ ಇಷ್ಟು ಕಮಿಟಿ ಮಾಡಿ ದಿನದಿನಕ್ಕೂ ಮಾರ್ಕೆಟ್ ಯಾವ ರೀತಿ ನಡೆಯುತ್ತದೆ, ಯಾವುದಕ್ಕೆ demand ಇದೆ, ಯಾವ ರೀತಿ ಅದನ್ನು ಬೆಳೆಸಬೇಕು, ಎನ್ನುವ ಚಿಂತನೆಯನ್ನು ಮಾಡುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಹಾಗಿದ್ದಾಗ ಮಾತ್ರ ರೈತನ ಪರಿಸ್ಥಿತಿ ಮೇಲೆತ್ತುವುದಕ್ಕೆ ಸಾಧ್ಯವಾಗುತ್ತದೆ. ಕಳೆದ ಸಲ ಸನ್ಮಾನ್ಯ ಮುಖ್ಯಮಂತ್ರಿಗಳು ಕೆಲವಾರು ದೇಶಗಳಿಗೆ ಎಲ್ಲರನ್ನು ಕಳುಹಿಸಿದ್ದಾರೆ. ನಾವೂ ಕೂಡ ಹಲವಾರು ದೇಶಗಳಿಗೆ ಭೇಟಿ ಕೊಟ್ಟಿದ್ದೇವೆ. ಆದರೆ ನಮ್ಮಲ್ಲಿರುವಂಥ human power ಏನಿದೆ ಅದನ್ನು ನಾವು utilize ಮಾಡಿರುವುದು ಕಡಿಮೆ

ಎಂದು ನನಗನಿಸುತ್ತದೆ. ಚೈನಾ ಬಹಳಷ್ಟು ಜನಸಂಖ್ಯೆ ಇರುವ ದೇಶವೆಂದು ನಾವು ಹೇಳುತ್ತೇವೆ. ನಿಜ ಚೈನಾದಲ್ಲಿ ಬಹಳಷ್ಟು ಜನಸಂಖ್ಯೆ ಇದೆ. ಆದರೆ, ಆ human power ಅನ್ನು ಯಾವ ರೀತಿ utilize ಮಾಡಿಕೊಂಡಿದ್ದಾರೆನ್ನುವುದನ್ನು ನಾವು ಅಲ್ಲಿ ನೋಡಬೇಕಾಗುತ್ತದೆ. ಈ worldನಲ್ಲಿ ಎಲ್ಲಾ ಜಾಗದಲ್ಲೂ ಚೈನೀಸ್ ಇದ್ದಾರೆ, ಎಲ್ಲಾ ಕೆಲಸವನ್ನು ಮಾಡಲಿಕ್ಕೆ ತಯಾರಿದ್ದಾರೆ, ಅದಕ್ಕೆ ಸರಿಯಾದ support ಅವರಿಗೆ ಕೊಡುವಂಥ ಕೆಲಸವನ್ನು ಸರ್ಕಾರ ಮಾಡಿದೆ. ನಮ್ಮಲ್ಲಿ ಅದು ಕಡಿಮೆ ಯಾಗಿದೆ ಎಂದು ಹೇಳಿದರೂ ಕೂಡ ತಪ್ಪಾಗಲಾರದೆಂದು ನಾನು ತಿಳಿದು ಕೊಂಡಿದ್ದೇನೆ. ಇವತ್ತು ಭಾರತ ದೇಶ ಕೂಡ ಅಷ್ಟೆ; ಕರ್ನಾಟಕ ಕೂಡ ಅಷ್ಟೆ; ನಮ್ಮ ರಾಜ್ಯದಲ್ಲಿ ಸುಮಾರು 70 ಪರ್ಸೆಂಟ್ ಅಷ್ಟು ರೈತಾಪಿ ಜನರಿದ್ದಾರೆ. ದೇಶದಲ್ಲಿಯೂ ಕೂಡ ಸುಮಾರು 70 ಪರ್ಸೆಂಟ್ ಅಷ್ಟು ರೈತಾಪಿ ಜನರಿದ್ದಾರೆ. ಆದರೆ ಹಳ್ಳಿಗಳನ್ನು ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಹಳ್ಳಿಯ ಜನರ ಪರಿಸ್ಥಿತಿಯನ್ನು ನಾವು ಮೇಲೆತ್ತಲು ಸಾಧ್ಯವಾಗಲಿಲ್ಲ. ಎಷ್ಟು ಹಣವನ್ನು ನಾವು ತೊಡಗಿಸಿದರೂ ಕೂಡ ಅದು ಸರಿಯಾದ ರೀತಿಯಲ್ಲಿ ವಿನಿಯೋಗವಾಗಲಿಲ್ಲ ಎಂಬ ಕೊರಗು ಇದೆ. ಇದಕ್ಕೆ ನಾವು ಚಿಂತನೆಯನ್ನು ಮಾಡಬೇಕಾಗುತ್ತದೆ. ಯಾವುದೇ ಸಂದರ್ಭದಲ್ಲಿ ನಾವು ಬಜೆಟ್ ಅನ್ನು ಮಾಡಿ ಹಣವನ್ನು ವಿನಿಯೋಗಿಸುವ ಸಂದರ್ಭದಲ್ಲಿ ಅದಕ್ಕೆ responsibility ಅನ್ನು fix ಮಾಡುವಂಥ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಯಾವ ರೀತಿ responsibility ಎಂದು ಹೇಳಿದರೆ, ಉದಾಹರಣೆಗೆ ಕುಡಿಯುವ ನೀರಿನ ಬಗ್ಗೆ ಹೇಳುತ್ತೇನೆ. ಆ ಕುಡಿಯುವ ನೀರನ್ನು ಕೊಡುವಂಥ ಸಂದರ್ಭದಲ್ಲಿ ನಾವು ಬೋರ್‌ವೆಲ್ ತೆಗೆಯುತ್ತೇವೆ, ಇಲ್ಲವೇ ಹೊಳೆಯ ನೀರನ್ನು ತೆಗೆಯುತ್ತೇವೆ, ಇಲ್ಲವೇ ಕೆರೆಕಟ್ಟೆಗಳ ನೀರನ್ನು ಉಪಯೋಗಿಸುತ್ತೇವೆ. ಆದರೆ ಅಲ್ಲಿಯ ತಾಂತ್ರಿಕ ರಿಪೋರ್ಟ್ ಕೊಡುವವರು, ಈ ನೀರನ್ನು ನಾವು ಟ್ಯಾಪ್ ಮಾಡಿದರೆ, ಕುಡಿಯುವ ನೀರನ್ನು ಕೊಟ್ಟರೆ, ಇದರಲ್ಲಿ ಇಷ್ಟು ಜನಸಂಖ್ಯೆ ನೀರನ್ನು ಕುಡಿಯಬಹುದು, ಇಷ್ಟು ನಮಗೆ ಬೇಕಾಗುತ್ತದೆ, ಇನ್ನು ಹತ್ತು ವರ್ಷಕ್ಕೆ ಎಷ್ಟು ಬೇಕಾಗುತ್ತದೆ ಎನ್ನುವ ಚಿಂತನೆಯನ್ನು ಮಾಡುವುದಿಲ್ಲ. ಏಕೆಂದರೆ, ಉದಾಹರಣೆಗೆ ನಮ್ಮ ಸೋಮವಾರಪೇಟೆ ತಾಲ್ಲೂಕಿನದ್ದೇ ಹೇಳುತ್ತೇನೆ. ಇವತ್ತು ಕುಡಿಯುವ ನೀರಿಗೋಸ್ಕರವಾಗಿ ಆರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ನಾನು ಆ ತಾಂತ್ರಿಕ

ಇಂಜಿನಿಯರ್ ಯಾರಿದ್ದಾರೆ ಅವರನ್ನು ಕರೆಯಿಸಿ ಮಾತನಾಡಿದ್ದೇನೆ. ಮಾತನಾಡಿದಂಥ ಸಂದರ್ಭದಲ್ಲಿ, ಇಷ್ಟು ಸಾವಿರ ಜನಸಂಖ್ಯೆಗೆ ಈ ನೀರನ್ನು ಕುಡಿಯಬಹುದೆಂದು ಅವರು ಹೇಳಿದರು. ಆದರೆ ಮುಂದಿನ ದಿನಗಳಲ್ಲಿ ಏನು ಮಾಡಬಹುದು ಎಂಬ ಚಿಂತನೆ ಇಲ್ಲ. ಆದರೆ ಅಲ್ಲಿಯ power ಏನಿದೆ, ನೀರನ್ನು ಪಂಪ್ ಮಾಡುವಂಥ machine ಏನಿದೆ ಅದು ಎಷ್ಟು ಗಂಟೆಗಳ ಕಾಲ ಕೆಲಸ ಮಾಡಬೇಕಾಗುತ್ತದೆಂದು ಕೇಳಿದೆ. ಆಗ ಅವರು minimum 20 hours run ಮಾಡಬೇಕಾಗುತ್ತದೆಂದು ಹೇಳಿದರು. ನಿಜವಾಗಿಯೂ 20 ಗಂಟೆಗಳ ಕಾಲ power ಇರುತ್ತದೆಯೇ? 20 ಗಂಟೆಗಳಲ್ಲಿ ನೀರನ್ನು ಪಂಪ್ ಮಾಡುವುದಕ್ಕೆ ಸಾಧ್ಯವಿದೆಯೇ? ನಾವು ಅದನ್ನು ಚಿಂತನೆ ಮಾಡಬೇಕಾಗುತ್ತದೆ. ನಮಗೆ 10 ಗಂಟೆ ಕಾಲ power ಸಿಗುವಂಥ ಸಂದರ್ಭದಲ್ಲಿ ಅದಕ್ಕೆ ತಕ್ಕಂತೆ ನಾವು ಕೆಲಸವನ್ನು ಮಾಡಬೇಕಾಗುತ್ತದೆ. ಯಾರು ತಾಂತ್ರಿಕವಾಗಿ ರಿಪೋರ್ಟ್ ಕೊಟ್ಟರು ಅದು ತಪ್ಪಾದಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂಥ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಅಧಿಕಾರಿಗಳು ಭ್ರಷ್ಟಾಚಾರದೊಳಗೆ ಇದ್ದಾರೆ ಎನ್ನುವ ವಿಚಾರವಾಗಿ ನಮ್ಮ ಸದಸ್ಯರೊಬ್ಬರು ಹೇಳುತ್ತಿದ್ದರು. ಒಂದು ಸಲ ಅಧಿಕಾರಿಗಳು ನೇಮಕವಾದರೆ ಅವರು 30 ವರ್ಷಗಳ ಕಾಲ ಕೆಲಸ ಮಾಡಬೇಕಾಗುತ್ತದೆ. ಆದರೆ ಶಾಸಕರಾದ ನಮಗೇನಿದೆ? ಕೇವಲ ಐದು ವರ್ಷಕ್ಕೊಂದು ಸಲ ನಾವು ಪರೀಕ್ಷೆಯನ್ನು ಬರೆಯಬೇಕಾಗುತ್ತದೆ. ಅದೂ ಪರೀಕ್ಷೆಯನ್ನು ನಾವೇ ಬರೆಯುತ್ತೇವೆಯೆ? ನಮ್ಮ ಜನ ಬರೆಯಬೇಕಾಗುತ್ತದೆ. ಅದಕ್ಕೆ ತಕ್ಕಂತೆ ನಾವು ನಡೆಯಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಇರುವಂಥ ಅಧಿಕಾರಿಗಳನ್ನು ಉಪಯೋಗಿಸಿ ನಾವು ಅವರಿಂದ confidence ತೆಗೆದುಕೊಂಡು, confidence ನಿಂದ ಕೆಲಸವನ್ನು ಮಾಡಲಿಕ್ಕೆ ನಾವು ಕಲಿಯಬೇಕಾಗುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳನ್ನು ಒಂದೊಂದು ವರ್ಷಕ್ಕೆ ವರ್ಗಾವಣೆ ಮಾಡುವುದು ಆಗುತ್ತಿರುತ್ತದೆ. ಅದು ಆಗಬಾರದು. ಕನಿಷ್ಠ ಪಕ್ಷ ಮೂರು ವರ್ಷ ಒಂದು ಜಾಗದಲ್ಲಿ ಇರುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಅವರ ಸಿ.ಆರ್. ಅನ್ನು ವೆರಿಫೈ ಮಾಡುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಒಳ್ಳೆಯ ಅಧಿಕಾರಿಗಳೆಂದು ಯಾರಿದ್ದಾರೆ, ಅದೇ ಅಧಿಕಾರಿಗಳಿಂದ ಕೆಲಸವನ್ನು ಮಾಡಿಸುವುಂಥ ಕೆಲಸವನ್ನು ಮಾಡಬೇಕಾಗುತ್ತದೆ. ಕೆಲವು ಸಂದರ್ಭದಲ್ಲಿ ಹೇಳುತ್ತೇವೆ, ಈ

ವಿಧಾನಸಭೆಗೆ ಗೆದ್ದು ಬರುವಂಥವರು ಒಂದು ರೀತಿಯಲ್ಲಿ ಪುಣ್ಯವಂತರಾಗಿರಬೇಕು. 124 ಸೀಟುಗಳನ್ನು ಮಾತ್ರ ನಾವು ಗೆದ್ದು ಬರುತ್ತೇವೆ. ಆದರೆ ಕೆಲವು ಸಂದರ್ಭದಲ್ಲಿ ಏನಾಗುತ್ತದೆಯೆಂದರೆ, ಕಳೆದ ಸಲ ಬಜೆಟ್ ಮಂಡನೆ ಮಾಡುವಂಥ ಸಂದರ್ಭದಲ್ಲಿ, ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ, ಬೇಡಿಕೆಗಳ ಬಗ್ಗೆ ಯಾವುದೇ ಸಂದರ್ಭದಲ್ಲೂ ಚರ್ಚೆ ಮಾಡಲಿಲ್ಲ. ಯಾವುದೋ ಸಣ್ಣಪುಟ್ಟ ತೊಡಕುಗಳನ್ನಿಟ್ಟುಕೊಂಡು ಚರ್ಚೆಗೆ ಅವಕಾಶವನ್ನೇ ಕೊಡಲಿಲ್ಲ. ಚರ್ಚೆಗೆ ಅವಕಾಶವನ್ನೇ ಕೊಡದೇ ಅದೇ ರೀತಿ ಪಾಸ್ ಆಗುವ ಕೆಲಸವಾಯಿತು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಅವರು ಸಲಹೆಗಳನ್ನು ಕೊಡುತ್ತಿದ್ದಾರೆಯೋ ಅಥವಾ ಸದನದ ನಡಾವಳಿ ಬಗ್ಗೆ ಮಾತನಾಡುತ್ತಿದ್ದಾರೋ ಗೊತ್ತಾಗಲಿಲ್ಲ.

ಶ್ರೀ ಅಪ್ಪಚ್ಚು ರಂಜನ್ : No, no, ನಾವು ಎಲ್ಲವನ್ನೂ ತಿದ್ದುಕೊಳ್ಳುವಂಥಾದ್ದು ಆಗಬೇಕಾಗುತ್ತದೆ. ಏಕೆಂದರೆ, ನಾವು ಈ ಸದನದಲ್ಲಿ ಬಂದು ಸಮಯವನ್ನು ವ್ಯರ್ಥ ಮಾಡುವಂಥ ಕೆಲಸವನ್ನು ಮಾಡಬಾರದು. ಯಾರೇ ಆಗಲಿ, ಯಾವುದೇ ವಿಚಾರ ಬಂದಾಗ, ನಿಜವಾಗಿಯೂ ಯಾವುದು ಭ್ರಷ್ಟಾಚಾರವಾಗಿದೆ, ಯಾವುದು ಆಗಿಲ್ಲ ಅದಕ್ಕೆ ಸರಿಯಾದ, ಪೂರಕ ಮಾಹಿತಿಯನ್ನು ತೆಗೆದುಕೊಂಡು ಮಾಡುವಂಥಾದ್ದು ಆಗಬೇಕಾಗುತ್ತದೆ. ಅದನ್ನು ಬಿಟ್ಟು ಸುಮ್ಮನೆ ನಮ್ಮ ಸಮಯವನ್ನು ವ್ಯರ್ಥ ಮಾಡುವಂಥಾದ್ದು ಆಗಬಾರದು ಮತ್ತು ಒಂದು ರೀತಿಯಲ್ಲಿ ನಮ್ಮ ಮೈಗೆ ಕೆಸರನ್ನು ನೀವು ಎರಚುವುದು, ನಿಮ್ಮ ಮೈಗೆ ನಾವು ಕೆಲಸರನ್ನು ಎರಚುವುದು, ಆಗಬಾರದು. ಕೆಸರನ್ನು ಎರಚಿಕೊಂಡು ಪರಿಸ್ಥಿತಿ ಏನಾಗಿದೆಯೆಂದರೆ, ಶಾಸಕರ ಬಗ್ಗೆ ಬಹಳ cheap ಆಗಿ ಮಾತನಾಡುವಂಥಾದ್ದು ಆಗುತ್ತದೆ. ಇದನ್ನೂ ಕೂಡ ನಾವು ಚಿಂತನೆ ಮಾಡಬೇಕಾಗುತ್ತದೆ. ಎಂ.ಎಲ್.ಎ. ಎಂದರೆ ಕಮಿಷನ್ ತೆಗೆದು ಕೊಳ್ಳುತ್ತಾರೆ ಎನ್ನುವ ಪರಿಸ್ಥಿತಿಯಾಗಿಬಿಟ್ಟಿದೆ. ಪ್ರಾಮಾಣಿಕ ಎಂ.ಎಲ್.ಎ. ಗಳಿಗೂ ಕೂಡ ಬೆಲೆ ಇಲ್ಲವೆನ್ನುವ ಪರಿಸ್ಥಿತಿಯಾಗಿದೆ. ಇದನ್ನೂ ಕೂಡ ನಾವು ಚಿಂತನೆ ಮಾಡಬೇಕಾಗುತ್ತದೆ. ಅದರ ಜೊತೆಗೆ ನಾವು ಇವತ್ತು ವಿಧಾನಸಭಾ ಸದಸ್ಯರಿದ್ದೇವೆ. ಯಾರು ಪ್ರಾಮಾಣಿಕವಾಗಿ ಕೆಲಸವನ್ನು ಮಾಡುತ್ತಾರೋ ಅಂತಹ ಅಧಿಕಾರಿಗಳನ್ನು ಬೆನ್ನು ತಟ್ಟುವಂಥ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಾವು ಕೆಲಸ ಮಾಡಿದಾಗ

ನಿಜವಾಗಿಯೂ ಗ್ರಾಮೀಣಾಭಿವೃದ್ಧಿಯಾಗಲು ಸಾಧ್ಯ. ಇವತ್ತು ನಾನು ಮಾತನಾಡುವಾಗ Production, Demand, Supply and Rate ಬಗ್ಗೆ ಹೇಳಿದೆ. MBA ಜ್ಞಾನವಿರುವ ಒಬ್ಬರು ಪ್ರತಿ ದಿವಸದ ಮಾರುಕಟ್ಟೆಯಲ್ಲಿ ಜರುಗುವ ಪ್ರಕ್ರಿಯೆ ಕುರಿತು ಚಿಂತನೆ ನಡೆಸುವ ವ್ಯವಸ್ಥೆ ಮಾಡಬೇಕಾಗುತ್ತದೆ. ಯಾವ್ಯಾವ ಸಾಮಗ್ರಿಗಳಿಗೆ ಏನೇನು ಬೆಲೆ ಇದೆ, ಹಣ್ಣು-ಹಂಪಲು ಇರಬಹುದು, ಯಾವುದೇ ಪದಾರ್ಥಗಳಿರಬಹುದು, ಅವುಗಳನ್ನು ಬೆಳೆದಾಗ ನಮ್ಮ ಕೊರತೆ ಏನಿದೆ, ಅದನ್ನು ತಿಳಿದುಕೊಳ್ಳುವ ಚಿಂತನೆ ಮಾಡಬೇಕಾಗುತ್ತದೆ.

ಇದರ ಜೊತೆಗೆ, ಗದ್ದೆ ಹೊಂದಿರುವವರು ಹೆಚ್ಚು ಬೆಲೆ ಸಿಗುತ್ತದೆಂದು ಶುಂಠಿ ಬೆಳೆಯಲು ಹೊರಟ್ಟಿದ್ದಾರೆ. ಶುಂಠಿಗೆ ಬೆಲೆ ಹೆಚ್ಚಿದೆ ಎಂದರೆ ಎಲ್ಲರೂ ಶುಂಠಿ ಬೆಳೆಯಬೇಕಾಗಿತ್ತು. ಆದರೆ, ಶುಂಠಿ ಬೆಲೆ ಕುಸಿತವಾಯಿತು. ಇದರಿಂದ ರೈತರು ಕೂಡ ಕಂಗಾಲಾಗುವ ಪರಿಸ್ಥಿತಿ. ಅವನು ಸಾಲದಲ್ಲಿ ಮುಳುಗುವ ಪರಿಸ್ಥಿತಿ ಕೂಡ ಬರುತ್ತದೆ. ಇದಕ್ಕೋಸ್ಕರ ಯಾವುದೇ ಸಂದರ್ಭದಲ್ಲಿ ಹೊರದೇಶದಲ್ಲಿ ಯಾವ ಪರಿಸ್ಥಿತಿ ಇದೆ ಎಂಬುದನ್ನು ನೋಡಿದಾಗ ಯಾವ ಬೆಳೆ ಅಮೆರಿಕಾದಲ್ಲಿ ಬೆಳೆಯುತ್ತಾರೋ, ಅದರ ಹೊರತಾಗಿ ಬೇರಾವುದೇ ಬೆಳೆಯನ್ನು ಅಲ್ಲಿನ ಜಮೀನಿನಲ್ಲಿ ಬೆಳೆಯಲು ಅವಕಾಶ ನೀಡುವುದಿಲ್ಲ. ಅಲ್ಲಿರುವ ರೈತ ತನ್ನ ಜಮೀನಿನಲ್ಲಿ ಟೊಮ್ಯಾಟೋ ಬೆಳೆಯುವುದಿದ್ದರೆ, ಅದನ್ನೇ ಬೆಳೆಯಬೇಕಾಗುತ್ತದೆ. ಗೋಧಿ ಬೆಳೆಯುವುದಿದ್ದರೆ, ಗೋಧಿಯನ್ನೇ ಬೆಳೆಯಬೇಕಾಗುತ್ತದೆ. ಆತ ಪರ್ಯಾಯ ಬೆಳೆ ಬೆಳೆಯಲು ಸಾಧ್ಯವಿಲ್ಲ. ಮತ್ತು ಅಲ್ಲಿನ ಸರ್ಕಾರ ಅದಕ್ಕೆ ಅವಕಾಶವನ್ನೂ ಕೊಡುವುದಿಲ್ಲ. ಅಲ್ಲಿರುವ ರೈತರಿಗೆ ಯಾವ ರೀತಿಯ ಸೆಕ್ಯೂರಿಟಿ ಇದೆಯೆಂದರೆ, ಒಬ್ಬ ರೈತ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದಿದ್ದಾಗ ಸರ್ಕಾರವೇ ಆತನ ಸಹಾಯಕ್ಕೆ ಧಾವಿಸುತ್ತದೆ. ಸರ್ಕಾರ ಮತ್ತು ಇನ್‌ಶ್ಯೂರೆನ್ಸ್ ಕಂಪನಿಯವರು ಬಂದು ರೈತ ಇಂತಹ ಬೆಳೆ ಬೆಳೆದಿದ್ದಾನೆ, ಒಂದು ಎಕರೆಗೆ ಇಷ್ಟು ಪ್ರಮಾಣದಲ್ಲಿ ಬೆಳೆ ಬರಬೇಕಾಗಿತ್ತು, ಕಡಿಮೆಯಾಗಿದೆ, ಇವನ ದುಡಿತಕ್ಕೆ ಎಷ್ಟು ಹಣ ಕೊಡಬೇಕು ಎನ್ನುವ ಚಿಂತನೆ ಮಾಡಿ ಇನ್‌ಶ್ಯೂರೆನ್ಸ್ ಕಂಪನಿಯವರು ಆ ರೈತನಿಗೆ ನಷ್ಟವುಂಟಾದರೆ, ನಷ್ಟವನ್ನು ಭರಿಸುವ ವ್ಯವಸ್ಥೆ ಇದೆ. Individual Insurance ಕೂಡ ಮಾಡಿದ್ದಾರೆ. ಈ ವ್ಯವಸ್ಥೆಯನ್ನು ಇಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರ ಮಾಡಬೇಕಾಗುತ್ತದೆ. ಹಾಗಾದಾಗ

ಮಾತ್ರ ರೈತ ಮುಂದೆ ಬರಲು ಸಾಧ್ಯವಾಗುತ್ತದೆ, ಗ್ರಾಮ ಅಭಿವೃದ್ಧಿಯಾಗುತ್ತದೆ ಜೊತೆಗೆ ಕೃಷಿ ಕೂಡ ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ. ಇದರ ಬಗ್ಗೆಯೂ ಚಿಂತನೆ ಮಾಡಬೇಕಾಗುತ್ತದೆ.

ಇವತ್ತು ಹೆಚ್ಚಿನ ಪ್ರಮಾಣದಲ್ಲಿ ಮಳೆ ಬೀಳುವ ಪ್ರದೇಶಗಳಿವೆ, ಉದಾಹರಣೆಗೆ ಕೊಡಗು. ನಮ್ಮಲ್ಲಿ ಬಹಳಷ್ಟು ಪ್ರಮಾಣದಲ್ಲಿ ಮಳೆ ಬೀಳುತ್ತದೆ. ಮಳೆ ಬಿದ್ದ ಸಂದರ್ಭದಲ್ಲಿ top soil ಏನಿದೆ, ಭೂಮಿಯ ಮೇಲಿನ ಫಲವತ್ತಾದ ಗೊಬ್ಬರವೆಲ್ಲವೂ ನೀರನಲ್ಲಿ ಕೊಚ್ಚಿ ಹೋಗಿ ಸಮುದ್ರ ಸೇರುವ ಪರಿಸ್ಥಿತಿ ಇದೆ. ಅದಕ್ಕೋಸ್ಕರವೇ Minor Irrigation ಬಗ್ಗೆ ಹೇಳಿದೆ. ಇವತ್ತು ಐದೂ ಇಲಾಖೆಗಳು ಒಂದಾಗಬೇಕಾಗುತ್ತದೆ. ಹಾಗಾದಾಗ ಮಾತ್ರ ಕೃಷಿ ಮತ್ತು ಗ್ರಾಮ ಉದ್ಧಾರವಾಗಲು ಸಾಧ್ಯ. ಫಲವತ್ತಾದ ಮಣ್ಣನ್ನು ಉಳಿಸುವ ಕೆಲಸವನ್ನು ನಾವು ಮಾಡಬೇಕಾಗುತ್ತದೆ. Minor Irrigationಗೆ ಹೆಚ್ಚು ಒತ್ತು ನೀಡುವ ಕೆಲಸ ಮಾಡಬೇಕಾಗುತ್ತದೆ. Minor Irrigationನಲ್ಲಿ ಕೆರೆ–ಕಟ್ಟೆಗಳನ್ನು ತೋಡುವ ಕೆಲಸ ಮಾಡಬೇಕಾಗುತ್ತದೆ. ಕೆರೆ–ಕಟ್ಟೆಗಳಲ್ಲಿ ನೀರು ನಿಲ್ಲಿಸುವ ವ್ಯವಸ್ಥೆಯಾಗಬೇಕು. ಇವತ್ತು ಬೋರ್‌ವೆಲ್‌ಗಳ ಪರಿಸ್ಥಿತಿ ಏನಾಗಿದೆಯೆಂದರೆ, ಸುಮಾರು 400ರಿಂದ 500 ಮೀಟರ್‌ಗಳಷ್ಟು ಆಳ ಕೊರೆದರೂ ನೀರು ಸಿಗುವುದಿಲ್ಲ. ನೀರಿನ ಮಟ್ಟ ಬಹಳಷ್ಟು ಕುಸಿದಿದೆ. ನೀರಿನ ಮಟ್ಟ ಮೇಲೆತ್ತಲು ಮತ್ತು ಬೋರ್‌ವೆಲ್‌ಗಳು ಚಾರ್ಜ್ ಆಗಬೇಕಾದರೆ, ಕೆರೆ–ಕಟ್ಟೆಗಳನ್ನು ಕಟ್ಟುವ ವ್ಯವಸ್ಥೆ ಮಾಡಿ ನೀರು ಉಳಿಸುವ ಕೆಲಸವಾದಾಗ ಬೋರ್‌ವೆಲ್‌ಗಳು ಚಾರ್ಜ್ ಆಗುವುದಲ್ಲವೆ, ನೀರಿನ ಮಟ್ಟವೂ ಮೇಲೇರುತ್ತದೆ. ಈ ಕೆಲಸ ನಾವು ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಚಿಂತನೆಯಾಗಬೇಕು.

ಇದರ ಜೊತೆಗೆ, ಗ್ರಾಮೀಣ ಭಾಗದಿಂದ ನಗರ ಪ್ರದೇಶಗಳಿಗೆ ಜನರು ವಲಸೆ ಬರುತ್ತಿದ್ದಾರೆ. ಇವತ್ತು ಬೆಂಗಳೂರು ನಗರದಲ್ಲಿ ಅಂದಾಜು 80 ಲಕ್ಷದಷ್ಟು ಜನರಿದ್ದಾರೆಂದು ಕಾಣುತ್ತದೆ. ನಾನು 1994ರಲ್ಲಿ ಬೆಂಗಳೂರಿಗೆ ಬರಬೇಕಾದರೆ, ಬೆಂಗಳೂರು ನಗರದ ಜನಸಂಖ್ಯೆ 45 ಲಕ್ಷವೆಂದು ಹೇಳುತ್ತಿದ್ದರು. ಇವತ್ತು 80 ಲಕ್ಷಕ್ಕೆ ತಲುಪಿದೆ. ಏಕೆ ಪಟ್ಟಣ ಪ್ರದೇಶಗಳಿಗೆ ಜನರು ವಲಸೆ ಬರುತ್ತಿದ್ದಾರೆ? ಇದರ ಬಗ್ಗೆ ಚಿಂತನೆಯಾಗಿದೆಯೇ? ರಸ್ತೆಗಳಲ್ಲಿ ಏಕೆ ಅಪಘಾತಗಳು ಹೆಚ್ಚಾಗುತ್ತಿದೆ? ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಏಕೆ ಅಪಘಾತಗಳಾಗುತ್ತಿವೆ ಎಂದರೆ, ಬೆಂಗಳೂರು

ನಗರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಜನರು ಬಂದು ಸೇರುತ್ತಿದ್ದಾರೆ. ಅದನ್ನು ತಡೆಗಟ್ಟಲು ಗ್ರಾಮೀಣ ಭಾಗಗಳಲ್ಲಿ ನಾವು ಮೂಲ ಸೌಕರ್ಯಗಳನ್ನು ಒದಗಿಸಿಕೊಡುವ ಕೆಲಸ ಮಾಡಬೇಕಾಗುತ್ತದೆ. ಸಾರಿಗೆ ವ್ಯವಸ್ಥೆ ಕಲ್ಪಿಸಿ ಕೊಡಬೇಕಾಗುತ್ತದೆ. ಇವತ್ತು ಮೈಸೂರಿನಿಂದ ಬೆಂಗಳೂರಿಗೆ ಹತ್ತು ರೈಲುಗಳನ್ನು ಸಂಚರಿಸುವ ವ್ಯವಸ್ಥೆ ಮಾಡಿದಲ್ಲಿ ರಸ್ತೆಗಳಲ್ಲಿ ವಾಹನಗಳ ಸಂಖ್ಯೆ ಕಡಿಮೆಯಾಗುತ್ತದೆ. ತನ್ಮೂಲಕ ರಸ್ತೆ ಅಪಘಾತಗಳು ಕಡಿಮೆ ಯಾಗುತ್ತದೆ. ಮೈಸೂರು, ಹಾಸನ, ತುಮಕೂರು ಇರಬಹುದು, ಬೆಂಗಳೂರು ಹತ್ತಿರವಿರುವ ಪಟ್ಟಣಗಳಿಗೆ 2 lane, 4 lane ವ್ಯವಸ್ಥೆ ಮಾಡಿದರೆ ಅಪಘಾತ ಕೂಡ ಕಡಿಮೆಯಾಗುತ್ತದೆ ಮತ್ತು ಪಟ್ಟಣಕ್ಕೆ ಜನರು ಬರುವುದೂ ಕಡಿಮೆ ಯಾಗುತ್ತದೆ. ಈ ಬಗ್ಗೆ ಚಿಂತನೆಯಾಗಬೇಕಾಗುತ್ತದೆ.

ನಾವು ಯುರೋಪ್‌ಗೆ ಪ್ರವಾಸ ಹೋದ ಸಂದರ್ಭದಲ್ಲಿ ನೋಡಿದೆವು. ಸಮಾರು 2,000 ಕಿಲೊಮೀಟರ್‌ಗಳನ್ನು by road ಸಂಚರಿಸಿದ್ದೇವೆ. ನಾವು ಹೋಗುವಾಗಲೇ by road ಹೋಗುವುದೆಂದು ಹೇಳಿದ್ದೆ. ಹಾಗೆ by road ಹೋದ ಸಂದರ್ಭದಲ್ಲಿ ಯಾವುದೇ ಜಮೀನಿನಲ್ಲಾಗಲಿ, ಯಾವುದೇ ಪ್ರದೇಶಗಳಲ್ಲಾಗಲಿ, 2–3 ಜನರಿಗಿಂತಲೂ ಹೆಚ್ಚಿನ ಜನರು ಕೆಲಸ ಮಾಡುವುದನ್ನು ನೋಡಲಿಲ್ಲ. ಎಲ್ಲವೂ ಮಾಹಿತಿ ಮತ್ತು ತಂತ್ರಜ್ಞಾನದ latest technology ಉಪಯೋಗಿಸಿ ಅಧಿಕ ಇಳುವರಿ ತೆಗೆಯುವ ವ್ಯವಸ್ಥೆ ಅಲ್ಲಿ ಜಾರಿಗೆ ತಂದಿದ್ದಾರೆ. ಅಲ್ಲಿನ ಜಮೀನಿನಲ್ಲಿ ಒಂದಿಬ್ಬರು ಮಾತ್ರ ಕೆಲಸ ಮಾಡುವವರಿದ್ದರು. ಆದರೆ, ನಮ್ಮ ಕೊಡಗಿನಲ್ಲಿರ ಬಹುದು, ಕರ್ನಾಟಕ ರಾಜ್ಯದಲ್ಲಿರಬಹುದು, 40 ಕಿಲೋಮೀಟರ್‌ಗಳಷ್ಟು ದೂರ ರಸ್ತೆಯಲ್ಲಿ ಸಂಚರಿಸಿದರೆ ಸುಮಾರು ಜನಸಂಖ್ಯೆ ಕಾಣಬಹುದು. ತೋಟಗಳಲ್ಲೂ ಜನರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುವುದನ್ನು ನಾವು ಕಾಣಬಹುದಾಗಿದೆ. ಇದಕ್ಕೆ ಯಂತ್ರೋಪಕರಣಗಳನ್ನು ಉಪಯೋಗಿಸುವುದು, latest technology ಉಪಯೋಗಿಸಿ ಅಧಿಕ ಇಳುವರಿ ಪಡೆಯುವುದು ಮತ್ತು ಕಡಿಮೆ ಖರ್ಚಿನಲ್ಲಿ ಸಂಶೋಧನೆ ಕೈಗೊಳ್ಳುವ ಕುರಿತಂತೆ ಚಿಂತನೆ ನಡೆಸ ಬೇಕಾಗುತ್ತದೆ. ಸಂಶೋಧನೆ ನಡೆಸಿ ವರದಿ ನೀಡುವ ವ್ಯವಸ್ಥೆ ಮಾಡಬೇಕಾಗುತ್ತದೆ. ಇದನ್ನು ಕಾರ್ಯಗತಗೊಳಿಸುವ ಕೆಲಸ ಮಾಡಬೇಕಾ ಗುತ್ತದೆ. ಇದರ ಬಗ್ಗೆ ಕೇಂದ್ರ ಸರ್ಕಾರ ಕೂಡ ಚಿಂತನೆ ಮಾಡಬೇಕಾಗುತ್ತದೆ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ

ಎರಡೂ ಸೇರಿ ಚಿಂತನೆ ಮಾಡಿದರೆ ಕಾರ್ಯಗತವಾಗಲು ಅವಕಾಶವಾಗುತ್ತದೆ. ಆ ನಿಟ್ಟಿನಲ್ಲಿ ನಾವು ಚಿಂತನೆ ಮಾಡಬೇಕಾಗುತ್ತದೆ. ಈ ಕೆಲಸ ನಾವು ಮಾಡಬೇಕಾಗುತ್ತದೆ.

ಇನ್ನು ಕಾಫಿ ಬೆಳೆಗಾರರ ಕುರಿತು ಹೇಳುವುದಾದರೆ, ಕೊಡಗು, ಚಿಕ್ಕಮಗಳೂರು, ಹಾಸನ ಇರಬಹುದು. ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದ್ದು, ನಮ್ಮ ಚರಿತ್ರೆಯಲ್ಲಿ ಕಳೆದ ಮೂವತ್ತು ವರ್ಷಗಳ ಹಿಂದೆ ಕೇಳಿದ್ದೆವು ಎಂದು ಹೇಳುತ್ತಿದ್ದಾರೆ. ಕೆಆರ್‌ಎಸ್‌ನಲ್ಲಿ 80 ಅಡಿಗಳಷ್ಟು ನೀರು ಇದ್ದುದು, 124 ಅಡಿಗಳಷ್ಟು ನೀರು ಕೇವಲ 5 ದಿವಸಗಳಲ್ಲಿ ತುಂಬಿರುವುದನ್ನು ನಾವು ಪತ್ರಿಕೆಗಳಲ್ಲಿ ನೋಡಿದ್ದೇವೆ. ಅಷ್ಟು ಮಳೆಯಾಗಿರುವುದರಿಂದ ಪರಿಸ್ಥಿತಿ ಏನಾಗಿದೆಯೆಂದರೆ, ಕಾಫಿ ಎಲ್ಲವೂ droppings ಆಗಿ, ಕಾಫಿ ಬೆಳೆಗಾರರ ಪರಿಸ್ಥಿತಿ ಹೇಗಿದೆಯೆಂದರೆ, ಕಳೆದ ವರ್ಷ ಗೊಬ್ಬರ ಹಾಕಿದಷ್ಟು ಕಾಫಿಗೆ ದರ ಸಿಗಲಿಲ್ಲ. ಬಹಳಷ್ಟು ಕಷ್ಟದಲ್ಲಿರುವ ಸಂದರ್ಭದಲ್ಲಿ ಕಾಫಿ ಬೆಳೆಗಾರನ ಬಗ್ಗೆಯೂ ಚಿಂತನೆ ಮಾಡಬೇಕಾಗುತ್ತದೆ. ಕಾಫಿ ಬೆಳೆಗಾರರಿಗೆ ಪರಿಹಾರ ಕೊಡುವ ವ್ಯವಸ್ಥೆ ಆಗಬೇಕಾಗಿದೆ. ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಚಿಂತನೆ ಮಾಡಬೇಕಾಗುತ್ತದೆ. ಕಾಫಿ ಬೆಳೆಯು ನೇರವಾಗಿ ಕೇಂದ್ರ ಸರ್ಕಾರದ ಹತೋಟಿಗೆ ಬರುವುದರಿಂದ ಕೇಂದ್ರ ಸರ್ಕಾರ ಕೂಡ. ಗಮನ ಕೊಡಬೇಕು. ಸನ್ಮಾನ್ಯ ಸಿದ್ದರಾಮಯ್ಯನವರೆ, ಇವತ್ತು ಕೇಂದ್ರದಲ್ಲಿ ತಮ್ಮದೇ ಸರ್ಕಾರ ಇದೆ. ತಮ್ಮ ಸರ್ಕಾರದ ಗಮನ ಸೆಳೆದು ಕಾಫಿ ಬೆಳೆಗಾರರ ಬವಣೆಯನ್ನು ನೀಗಿಸುವ ಕೆಲಸ ತಾವು ಮಾಡಬೇಕಾಗುತ್ತದೆ. ಆ ನಿಟ್ಟಿನಲ್ಲಿ ತಾವು ಚಿಂತನೆ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಕಾಫಿ ಬೆಳೆಯನ್ನು ರಫ್ತು ಮಾಡುವ ವ್ಯವಸ್ಥೆ ಮಾಡುತ್ತೇವೆ. ರಫ್ತು ಮಾಡಿದ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಇದರ ನೇರ ಹೊಣೆಗಾರಿಕೆ ಬರುತ್ತದೆ. ಇದನ್ನು ಕೂಡ ಚಿಂತನೆ ಮಾಡಬೇಕು. ಇವತ್ತು ಗ್ರಾಮೋದ್ಧಾರವಾದರೆ ನಮ್ಮ ದೇಶ ಉದ್ಧಾರವಾಗುತ್ತದೆ. ಆ ರೀತಿಯಲ್ಲಿ ನಮ್ಮ ಚಿಂತನೆಯಾಗಬೇಕೆಂದು ಹೇಳುತ್ತೇನೆ.

ಇವತ್ತು ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳಲು ಹೋಗುವುದಿಲ್ಲ. *"ಕಿಸಾನ್ ಬಚ್ ಗಯೇಗಾ ತೋ ದೇಶ್ ಬಚೇಗಾ".* ರೈತ ಉದ್ಧಾರವಾದರೆ ದೇಶ ಉಳಿಯುತ್ತದೆ. **"ಗಾಂವ್ ಬಚ್ ಗಯೇಗಾ ತೋ ದೇಶ್ ಬಚೇಗಾ".** ಗ್ರಾಮ ಉದ್ಧಾರವಾಗಲಿಲ್ಲವೆಂದರೆ, ದೇಶವೂ ಉಳಿಯುವುದಿಲ್ಲ. ಈ ನಿಟ್ಟಿನಲ್ಲಿ ತಾವೆಲ್ಲರೂ ಏನು ಬೆಳಕು ಚೆಲ್ಲುತ್ತಿದ್ದೀರಿ, ಅದು ಕೇವಲ ಪುಸ್ತಕದಲ್ಲಿ ಮಾತ್ರ

ಉಳಿಯಬಾರದು. ಇದರ ಬಗ್ಗೆ ಆಳವಾದ ಅಧ್ಯಯನ ನಡೆಸಬೇಕು. ತನ್ಮೂಲಕ ಇದಕ್ಕೆ ಸೂಕ್ತ ವ್ಯವಸ್ಥೆ ತಂದಲ್ಲಿ ರೈತರು ಮತ್ತು ಗ್ರಾಮ ಉದ್ಧಾರವಾಗುತ್ತದೆ. ಇದರ ಜೊತೆಗೆ, ಪಟ್ಟಣ ಪ್ರದೇಶಗಳಿಗೆ ಜನರು ವಲಸೆ ಬರುವುದನ್ನು ತಡೆಗಟ್ಟಲು ಚಿಂತನೆ ಮತ್ತು ವಿದ್ಯೆಗೆ ಸಂಬಂಧಿಸಿದಂತೆ ವಿದ್ಯಾಕೇಂದ್ರಗಳನ್ನು ಕೇವಲ ಬೆಂಗಳೂರಿನಲ್ಲಿ ಮಾತ್ರ ಕ್ರೋಢೀಕರಿಸದೆ, ಸಣ್ಣಪುಟ್ಟ ಪಟ್ಟಣಗಳಲ್ಲಿ ಇಂಜಿನಿಯರಿಂಗ್ ಕಾಲೇಜ್ ಇರಬಹುದು, ಮೆಡಿಕಲ್ ಕಾಲೇಜ್ ಇರಬಹುದು, ಎಂಬಿಎ ಕಾಲೇಜ್ ಇರಬಹುದು, ನರ್ಸಿಂಗ್ ಕಾಲೇಜ್ ಇರಬಹುದು, ಎಲ್ಲವನ್ನೂ scattering ಆಗುವ ವ್ಯವಸ್ಥೆ ಮಾಡಿ. ಎಲ್ಲವನ್ನೂ ವಿಕೇಂದ್ರೀಕರಣಗೊಳಿಸಿದಾಗ ಮಾತ್ರ ಗ್ರಾಮೋದ್ಧಾರ ವಾಗಲು ಸಹಾಯಕವಾಗುತ್ತದೆ. ಆ ನಿಟ್ಟಿನಲ್ಲಿ ನಮ್ಮ ಸರ್ಕಾರ ಮುಂದೆ ಹೋಗಬೇಕು. ಇದನ್ನು ಸಾಧಿಸುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಎದೆಗಾರಿಕೆ ತೋರಿಸಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚಿಸುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೂ, ಎಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ. ಧನ್ಯವಾದಗಳು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆಯೇ ವಿಶೇಷವಾಗಿ ಚರ್ಚೆ ಮಾಡಬೇಕು, ನಮ್ಮ ರಾಜ್ಯ ಸರ್ಕಾರ ಇದಕ್ಕೆ ವಿಶೇಷವಾಗಿ ಹೆಚ್ಚು ಒತ್ತುಕೊಟ್ಟು ಸಾಕಷ್ಟು ಬದಲಾವಣೆಗಳನ್ನು ಮಾಡಬೇಕು, ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿರುವುದರಿಂದ ಅವರಿಗೆ ಹೆಚ್ಚಿನ ಕಾಳಜಿ ಇದೆಯೆಂದು ಈ ಅಧಿವೇಶನವನ್ನು ಕರೆದಿದ್ದಾರೆ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಈಗಾಗಲೇ ಸಾಕಷ್ಟು ಬೆಳಕನ್ನು ಚೆಲ್ಲತಕ್ಕಂಥ, ಸಲಹೆಗಳನ್ನು ಅಭಿಪ್ರಾಯಗಳನ್ನು ಹಿರಿಯ ಸದಸ್ಯರುಗಳು ವ್ಯಕ್ತಪಡಿಸಿದ್ದಾರೆ. ನಾನಾದರೂ ಕೂಡ ಈ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ಇತರೆ ವಿಚಾರಗಳನ್ನು ತಿಳಿಸುವುದಕ್ಕೆ ಪ್ರಯತ್ನ ಪಡುತ್ತೇನೆ. ಗ್ರಾಮೀಣಾಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಹೌಸಿಂಗ್ ಕೂಡಾ ಸೇರಿಕೊಂಡಿದೆ. ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮವು ರಾಜ್ಯದಲ್ಲಿ ಗ್ರಾಮೀಣ ಭಾಗದ ಜನರಿಗೆ ಆಶ್ರಯ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆಗಳ ಮೂಲಕ ಮನೆಗಳನ್ನು ನಿರ್ಮಾಣ ಮಾಡುತ್ತಿದ್ದಾರೆ, ಆದರೆ ಅದು ಕೇವಲ ಘೋಷಣೆಯಾಗುತ್ತಿದೆ. ಈ ಸರ್ಕಾರ ಈ ವರ್ಷದಲ್ಲಿ

5 ಲಕ್ಷ ಮನೆಗಳನ್ನು 3 ಲಕ್ಷ ಮನೆಗಳನ್ನು ನಿರ್ಮಾಣ ಮಾಡುತ್ತೇವೆ, ಇಷ್ಟನ್ನು ಪೂರ್ಣಗೊಳಿಸಿದ್ದೇವೆ ಎನ್ನತಕ್ಕ ಮಾಹಿತಿಯನ್ನು ಕೊಡುತ್ತಿರುತ್ತಾರೆ. ಆದರೆ ವಾಸ್ತವಿಕವಾಗಿ ನೋಡಿದಾಗ ಗ್ರಾಮೀಣ ಭಾಗದಲ್ಲಿ ನಾವು ನಿರೀಕ್ಷೆ ಮಾಡಿದಂತೆ ಅಥವಾ ಸರ್ಕಾರ ಘೋಷಣೆ ಮಾಡಿರುವ ಪ್ರಕಾರ ಮನೆಗಳ ನಿರ್ಮಾಣ ಕಾರ್ಯವಾಗಿರುವುದಿಲ್ಲ. ಅದಕ್ಕೆ ಹಲವಾರು ಕಾರಣಗಳಿವೆ, ಏಕೆಂದರೆ ಮನೆಗಳ ಆಯ್ಕೆ ಮಾಡುವ ಅಧಿಕಾರವನ್ನು ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಬೇಲೂರು ಘೋಷಣೆ ಪ್ರಕಾರ, 73ನೇ ತಿದ್ದುಪಡಿಯ ಪ್ರಕಾರ ಕೊಟ್ಟಿದ್ದೇವೆ. ಅಲ್ಲಿ ಆಯ್ಕೆ ಮಾಡತಕ್ಕ ಫಲಾನುಭವಿಗಳಿಗೇ ಮನೆ ನಿರ್ಮಾಣ ಮಾಡುತಕ್ಕಂಥ ಕೆಲಸವನ್ನು ನಾವು ವಹಿಸಿರುವುದರಿಂದ ಎಷ್ಟೋ ಕಡೆ ಅವರಿಗೆ ಸ್ವಶಕ್ತಿ ಇಲ್ಲದಿರುವುದರಿಂದ ನಿರ್ಮಾಣದ ಕೆಲಸ ಸ್ಥಗಿತವಾಗಿದೆ. ಕಳೆದ 2–3 ವರ್ಷಗಳ ಹಿನ್ನೆಲೆಯನ್ನು ಗಮನಹರಿಸಿದರೆ ಸುಮಾರು 1 ಲಕ್ಷಕ್ಕಿಂತ ಹೆಚ್ಚು ಮನೆಗಳು ವಿವಿಧ ಹಂತಗಳಲ್ಲಿ ನಿಂತಿರತಕ್ಕದ್ದನ್ನು ವಸತಿ ಇಲಾಖೆಯ ಸಚಿವರ ಉತ್ತರದಲ್ಲೇ ನಾವು ಗಮನಿಸಬಹುದಾಗಿದೆ. ಆ ರೀತಿ ಒಂದು ಲಕ್ಷಕ್ಕಿಂತ ಹೆಚ್ಚು ಮನೆಗಳು ವಿವಿಧ ಹಂತದಲ್ಲಿ ನಿಂತಿರುವ ಸಂದರ್ಭದಲ್ಲಿ ಹೊಸ ಮನೆಗಳನ್ನು ಮಂಜೂರು ಮಾಡವುದರಲ್ಲಿ ಅಷ್ಟೊಂದು ಅರ್ಥವಿಲ್ಲ. ಹಿಂದಿನ ವರ್ಷ ಹಳೆಯ ಮನೆಗಳು ಏಕೆ ನಿಂತಿವೆ, ಈಗ ಮನೆಗಳಿಗೆ ಕೊಡುವ ಹಣವನ್ನು 30 ಸಾವಿರದಿಂದ 40 ಸಾವಿರಕ್ಕೆ ಮೊನ್ನೆಯ ಬಜೆಟ್‌ನಲ್ಲಿ ಜಾಸ್ತಿ ಮಾಡಿದ್ದೀರಿ. ಇನ್ನು ಮುಂದೆ ಮಾಡುವ ಮನೆಗಳಿಗೆ 40 ಸಾವಿರದಲ್ಲಿ ಮಾಡತಕ್ಕ ಪ್ರಯತ್ನ ಮಾಡಬಹುದು. ಆದರೆ ಈ ಹಿಂದೆ 20–25 ಸಾವಿರ ರೂಪಾಯಿಯಲ್ಲಿ ಪ್ರಾರಂಭವಾಗಿರುವಂಥ ಮನೆಗಳು ಪೂರ್ಣಗೊಳ್ಳುವುದಕ್ಕೆ ಅವಕಾಶವೇ ಇರುವುದಿಲ್ಲ. ಅದಕ್ಕೂ ಸರ್ಕಾರ ಗ್ರಾಮೀಣಾಭಿವೃದ್ಧಿ ಯೋಜನೆಯಲ್ಲಿ, ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಷನ್‌ಗೆ ಸಹಾಯಧನದ ರೂಪದಲ್ಲಿ ಅವರಿಗೆ 5–10 ಸಾವಿರ ರೂಪಾಯಿಗಳನ್ನು ಕೊಟ್ಟು ಉತ್ತೇಜನ ಮಾಡಿ ಮನೆಗಳನ್ನು ಪೂರ್ಣ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಆ ಕೆಲಸವನ್ನು ಮಾಡದಿದ್ದರೆ ಆ ಮನೆಗಳೆಲ್ಲಾ ಅರ್ಧದಲ್ಲೇ ನಿಂತಿರುತ್ತವೆ. ಹೊಸ ಮನೆಗಳು ಒಂದಷ್ಟು ಚಾಲ್ತಿಯಲ್ಲಿ ಬರುತ್ತವೆ. ನಿನ್ನೆ ಸಂತಾಪ ಸೂಚನೆ ಮಂಡಿಸುವಾಗ ಮಾನ್ಯ ರಾಜಶೇಖರರೆಡ್ಡಿಯವರ ಬಗ್ಗೆ ಬಹಳಷ್ಟು ಜನ ಮಾತನಾಡುವಾಗ ಹೇಳಿದರು. ಇವತ್ತು ಆಂಧ್ರದಲ್ಲಿ ಬಜೆಟ್‌ನಲ್ಲಿ 5 ಸಾವಿರ ಕೋಟಿ ರೂಪಾಯಿ ಗಳನ್ನು ಹೌಸಿಂಗ್‌ಗಾಗಿಯೇ ಇಟ್ಟಿದ್ದಾರೆ. ಆದರೆ ನಮ್ಮಲ್ಲಿ ಇಟ್ಟಿರುವುದು

ಕೇವಲ 700–800 ಕೋಟಿ ರೂಪಾಯಿ. ಇದು ಎಲ್ಲಿಗೆಲ್ಲಿಗೆ ಹೋಲಿಕೆ ಯಾಗುತ್ತದೆ? ಆಂಧ್ರದಲ್ಲಿ ನಿವೇಶನಗಳನ್ನು ಖರೀದಿ ಮಾಡುವುದಕ್ಕೇ ಒಂದು ಸಾವಿರ ಕೋಟಿ ರೂಪಾಯಿಗಳನ್ನಿಟ್ಟು ಎಲ್ಲೆಲ್ಲಿ ನಿವೇಶನವಿಲ್ಲ ಅಲ್ಲಿ open market priceನಲ್ಲಿ ಜಮೀನು ಖರೀದಿ ಮಾಡಿ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಿ ಮೂರೂವರೆ ಚದರದ ಒಂದು ಮನೆ ಮಾಡಲು 54 ಸಾವಿರ ರೂಪಾಯಿಗಳನ್ನು ನಿಗದಿ ಪಡಿಸಿದ್ದಾರೆ. ಆದರೆ ನಮ್ಮಲ್ಲಿ 25–30 ಸಾವಿರ ರೂ.ಗಳಿಂದ ಈಗ 40 ಸಾವಿರ ರೂ.ಗೆ ಬಂದಿದೆ. ಇವತ್ತಿನ construction cost ಇಟ್ಟಿಗೆ, ಸಿಮೆಂಟ್, ಕಬ್ಬಿಣ ಮತ್ತು ಮರದ ಬೆಲೆ ಏನಿದೆ ಅದಕ್ಕೆ ಅನುಗುಣವಾಗಿ ಮನೆಗಳ ಬೆಲೆಯನ್ನು ಸರ್ಕಾರ ನಿಗದಿಪಡಿಸಿದರೆ ಆಗ ಒಳ್ಳೆಯ ಗುಣಮಟ್ಟದ, ಹತ್ತಾರುವರ್ಷ ಬಾಳಿಕೆ ಬರತಕ್ಕ ಮನೆಗಳನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹಿಂದೆ 30 ಸಾವಿರ ರೂ. ಇವತ್ತು ಈಗ 40 ಸಾವಿರ ರೂ.ಗೆ ಜಾಸ್ತಿ ಮಾಡಿದ್ದೇವೆ ಅದೊಂದೇ ಹೆಗ್ಗಳಿಕೆ ಎಂದು ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದಾದರೆ ನಿರ್ಮಾಣ ಮಾಡುವ ಮನೆ ಹೆಚ್ಚು ದಿವಸ ಬಾಳಿಕೆ ಬರುವುದಿಲ್ಲ. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಫಲಾನುಭವಿ ಆಯ್ಕೆಯಾಗಬೇಕಾದರೆ ಏನೇನು ಒಳಸಂಚು ನಡೆಯುತ್ತದೆ ಎಂಬುದು ತಮಗೆಲ್ಲರಿಗೂ ಗೊತ್ತೇ ಇದೆ. ಅವನಿಗೆ paymentನ್ನು cheque systemನಲ್ಲೆ ಕೊಟ್ಟಿದ್ದರೂ ಕೂಡ ಅವನಿಗೆ ಪೂರ್ಣ ಪ್ರಮಾಣದಲ್ಲಿ ಹಣ ತಲುಪುವಲ್ಲಿ ಏನೇನು ವ್ಯತ್ಯಾಸವಾಗುತ್ತದೆ ಅವುಗಳನ್ನು ಕೂಡ ಗಮನದಲ್ಲಿಟ್ಟು ಕೊಂಡು ಹೆಚ್ಚಿನ ರೀತಿಯಲ್ಲಿ ಕೊಡಬೇಕು. ಆಂಧ್ರದಲ್ಲಿ ಫಲಾನುಭವಿಗೆ ಬ್ಯಾಂಕ್‌ನಿಂದ 17 ಸಾವಿರ ರೂಪಾಯಿ ಸಾಲ ಕೊಡಿಸುತ್ತಾರೆ. 13 ಸಾವಿರ ಸಬ್ಸಿಡಿಯೆಂದು ಕೊಡುತ್ತಾರೆ. beneficiary contribution 5 ಸಾವಿರ ರೂಪಾಯಿ. Bath-room and toilet ನಿರ್ಮಾಣ ಮಾಡಿಕೊಳ್ಳುವುದಕ್ಕೆ ನಿರ್ಮಲ ಗ್ರಾಮ ಯೋಜನೆಯಲ್ಲಿ 3500 ರೂಪಾಯಿ ಇದೆ. ಅದನ್ನೂ ಬಳಕೆ ಮಾಡಿಕೊಳ್ಳಬಹುದು. Self-help group ಮೂಲಕ additional loan ಅಂತ 20 ಸಾವಿರ ರೂಪಾಯಿ ಕೊಟ್ಟು, ಒಟ್ಟು 54 ಸಾವಿರದಲ್ಲಿ ಒಂದು ಮನೆ ನಿರ್ಮಾಣ ಮಾಡುತ್ತಾರೆ. ಆ ರೀತಿ ಯೋಜನೆಯನ್ನು ನಮ್ಮ ರಾಜ್ಯದಲ್ಲೂ ತರಲು ಪ್ರಯತ್ನ ಮಾಡಿದರೆ ಗುಣಮಟ್ಟದ ಮತ್ತು ಹೆಚ್ಚು ಪರಿಣಾಮಕಾರಿಯಾದ ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ರಾಜ್ಯದಲ್ಲಿ ಸುಮಾರು 65 ಲಕ್ಷ ವಸತಿ ಹೀನರಿದ್ದಾರೆಂದು ಗುರುತಿಸಿದ್ದಾರೆ.

ಇವರಿಗೆ 3–4 ವರ್ಷದಲ್ಲಿ ಮನೆ ಕಟ್ಟಿಸಬೇಕೆಂದರೆ ಒಂದು ವರ್ಷದಲ್ಲಿ 21 ಲಕ್ಷ ಮನೆ ಕಟ್ಟಿಸಬೇಕಾಗುತ್ತದೆ. ವರ್ಷಕ್ಕೆ 3–4 ಲಕ್ಷದಂತೆ ಮನೆ ಕಟ್ಟಿಸಿ ಕೊಂಡು ಹೋದರೆ ಇದು never ending. ಎಷ್ಟೇ ಸರ್ಕಾರ ಬಂದು ಎಷ್ಟೇ ವರ್ಷವಾದರೂ, ಈ ಯೋಜನೆ ನಿರಂತರವಾಗಿ ನಡೆಯುತ್ತಿರುತ್ತದೆಯೇ ಹೊರತು, ಏಕ ಕಾಲಕ್ಕೆ ವಸತಿ ರಹಿತ ರಾಜ್ಯವಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಅಪ್ಪಚ್ಚು ರಂಜನ್ : ಮಾನ್ಯ ಕಂದಾಯ ಸಚಿವರು ಇಲ್ಲೇ ಇದ್ದಾರೆ. ದಯಮಾಡಿ 94(ಸಿ)ಗೆ ಒಂದು ತಿದ್ದುಪಡಿಯನ್ನು ತಂದು ಯಾರು ಸರ್ಕಾರಿ ಜಾಗದಲ್ಲಿ ದರಖಾಸ್ತು ಮಾಡಿಕೊಂಡು ಕುಳಿತಿದ್ದಾರೆ ಅವರಿಗೆ ಮೂರೂಮುಕ್ಕಾಲು ಸೆಂಟ್ಸ್ ಜಾಗವನ್ನು ಕೊಡುವ ವ್ಯವಸ್ಥೆಯನ್ನು ಮಾಡಿದರೆ ನಿಜವಾಗಿಯೂ ಬಡವರಿಗೆ ಮನೆ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ತಾವು ಚಿಂತನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಈ ಮನೆಗಳ ನಿರ್ವಹಣೆ ಮಾಡುವ ವ್ಯವಸ್ಥೆಯನ್ನು ಗ್ರಾಮ ಪಂಚಾಯಿತಿಗೆ ಕೊಟ್ಟುಬಿಟ್ಟಿದ್ದಾರೆ. 70 ಲಕ್ಷದಿಂದ ಒಂದು ಕೋಟಿ ರೂಪಾಯಿಯವರೆಗೆ ಈ ರೀತಿಯ ಮನೆಗಳನ್ನು ಕಟ್ಟಿಸುವ ಸಲುವಾಗಿ ಫಲಾನುಭವಿಗಳಿಗೆ ಕೊಡುವ ಹಣವನ್ನು ಒಂದೊಂದು ಗ್ರಾಮಪಂಚಾಯಿತಿಗೆ ನೀಡುತ್ತೇವೆ. ಇದನ್ನು ಮಾನೀಟರಿಂಗ್ ಮಾಡಲು ಒಂದು ಏಜೆನ್ಸಿ ಇಲ್ಲ. ಜಿಲ್ಲಾಪಂಚಾಯಿತಿಯ ಇಂಜಿನಿಯರಿಂಗ್ ಇಲಾಖೆ ಯವರಿಗೇ ಆ ಮನೆ ಪೂರ್ಣಗೊಂಡಿದೆಯೇ ಇಲ್ಲವೇ ಎಂದು ಎರಡು ಮೂರು ಹಂತದಲ್ಲಿ ಹೋಗಿ ಚೆಕ್ ಮಾಡುವ ಅಧಿಕಾರವಿದೆ. ಆದರೆ, ಎಷ್ಟೊಂದು ದೊಡ್ಡ ಪ್ರಮಾಣದಲ್ಲಿ ಯೋಜನೆ ರಾಜ್ಯದಲ್ಲಿ ಜಾರಿಯಲ್ಲಿದ್ದರೂ ಅದನ್ನು ಸ್ಥಳೀಯ ಮಟ್ಟದಲ್ಲಿ ನಿರ್ವಾಹಣೆ ಮಾಡುವುದಕ್ಕೆ, ಯಾವ ರೀತಿಯಾಗಿ ಪಿ.ಹೆಚ್.ಇ. ಡಿವಿಜನ್‌ನನ್ನು ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯಲ್ಲೇ ಕುಡಿಯುವ ನೀರಿಗೆ ಬೇರೆ ಕಾಮಗಾರಿಗಳಿಗೆ ನೇಮಕ ಮಾಡಿದೆ, ಅದೇ ರೀತಿ ಈ ಮನೆಗಳನ್ನು ನಿರ್ಮಾಣ ಮಾಡತಕ್ಕ, ಅದನ್ನು ಸೂಪರ್‌ವೈಸ್ ಮಾಡತಕ್ಕ ವ್ಯವಸ್ಥೆಗೆ ರಾಜೀವ್‌ಗಾಂಧಿ ವಸತಿ ನಿಗಮವೇನು ರಾಜ್ಯ ಮಟ್ಟದಲ್ಲಿದೆ ಅದರ ಯೂನಿಟ್‌ಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲೂ ಮಾಡುವ ವ್ಯವಸ್ಥೆ ಆಗಬೇಕು. ಆಗ ಪೂರ್ಣ ಜವಾಬ್ದಾರಿ ಅವರ ವ್ಯಾಪ್ತಿಯಲ್ಲಿರುತ್ತದೆ. ಗುಣಮಟ್ಟದ ಮನೆಗಳು ಮತ್ತು ಹೆಚ್ಚಿನ ಪ್ರಮಾಣದಲ್ಲಿ ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ರೀತಿ ವ್ಯವಸ್ಥೆ

ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿದರೆ ಒಳ್ಳೆಯದು. ಕೇಂದ್ರ ಸರ್ಕಾರದ ಅರಣ್ಯ ಸಚಿವಾಲಯ ಹೊರತಂದಿರುವ ವರದಿಯ ಪ್ರಕಾರ ರಾಜಾಸ್ಥಾನ ಹೊರತುಪಡಿಸಿದರೆ ಕರ್ನಾಟಕವೇ ಅತೀ ಹೆಚ್ಚು ಫ್ಲೋರೈಡ್ ಮಿಶ್ರಿತ ಅಂತರ್ಜಲ ಹೊಂದಿರುವ ರಾಜ್ಯವಾಗಿದೆ. ಸುಮಾರು 20 ಜಿಲ್ಲೆಗಳು ನಮ್ಮ ರಾಜ್ಯದಲ್ಲಿ ಫ್ಲೋರೈಡ್ ಅಂಶವಿರುವ ನೀರನ್ನು ಹೊಂದಿದೆಯೆಂದು ಕೇಂದ್ರ ಸರ್ಕಾರದ ವರದಿಯಲ್ಲೇ ತಿಳಿಸಿದ್ದಾರೆ. ಇಂಥ ಸ್ಥಿತಿಯಲ್ಲಿ ಮತ್ತು 600–700 ಅಡಿಯವರೆಗೆ ಕೊಳವೆ ಬಾವಿಯನ್ನು ತೆರೆಯುವಂಥ ಸಂದರ್ಭ ಇರುವಾಗ, ಯಾವುದೇ ಗ್ರಾಮ ತೆಗೆದುಕೊಂಡರೂ ಕನಿಷ್ಠ 15–20ಕ್ಕಿಂತ ಕಡಿಮೆ ಕೊಳವೆ ಬಾವಿಗಳು ಇಲ್ಲದಿರುವ ಗ್ರಾಮ ಸಿಕ್ಕುವುದಿಲ್ಲ. ಏಕೆಂದರೆ ಬಾವಿಗಳು ಬತ್ತಿಹೋಗುತ್ತಿರುತ್ತವೆ, ಮತ್ತೆ ಮತ್ತೆ ಕೊರೆಯುತ್ತಿರುತ್ತಾರೆ. ಹಿಂದೆ 1998–99ರಲ್ಲಿ 500–600 ಕೋಟಿ ರೂ.ಗಳನ್ನು ಕುಡಿಯುವ ನೀರಿಗೆ ವೆಚ್ಚ ಮಾಡಿದ್ದರು.

ಇವತ್ತು 2009–10ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಅನುದಾನ ಮತ್ತು ರಾಜ್ಯ ಸರ್ಕಾರದ್ದು ಎರಡೂ ಸೇರಿದರೆ 1200 ಕೋಟಿ ರೂ.ಗಳ ಹಣವನ್ನು ವೆಚ್ಚ ಮಾಡುತ್ತಿದ್ದೀರಿ. ಇಷ್ಟೆಲ್ಲಾ ಮಾಡಿದರೂ ಕೂಡ ಕುಡಿಯುವ ನೀರಿನ ಸಮಸ್ಯೆ ಯಾವುದೇ ಗ್ರಾಮದಲ್ಲಿ ಇಲ್ಲ ಮತ್ತು ನೀರು ಸಮರ್ಪಕವಾಗಿ ದೊರೆಯುತ್ತಿದೆ ಎಂಬ ವ್ಯವಸ್ಥೆಯನ್ನು ಇವತ್ತು ನಾವು ಎಲ್ಲೂ ಕೂಡ ಕಾಣಲಿಕ್ಕೆ ಸಾಧ್ಯವಾಗುತ್ತಿಲ್ಲ ಇದಕ್ಕೆ ಪರಿಹಾರ ಕಾಣಬೇಕಾದರೆ ನದಿ ಮೂಲದ ಕುಡಿಯುವ ನೀರಿನ ವ್ಯವಸ್ಥೆಯನ್ನು ನಾವು ಆದಷ್ಟು ಎಲ್ಲಾ ಗ್ರಾಮೀಣ ಭಾಗಕ್ಕೆ ತರುವಂತಹ ಪ್ರಯತ್ನ ಮಾಡಬೇಕು. ಈಗ ಏನಾಗಿದೆ ಎಂದರೆ, ಸಾಕಷ್ಟು ಯೋಜನೆಗಳನ್ನು ಸಂಪುಟದಲ್ಲಿ ಅನುಮೋದನೆ ಮಾಡಿ, ಕೇಂದ್ರ ಸರ್ಕಾರದ Sub-mission ಯೋಜನೆ ಅಡಿ ಹಣ ಕೋರಿ ಪ್ರಸ್ತಾವನೆ ಕಳುಹಿಸುತ್ತಿರುತ್ತೀರಿ. ಆದರೆ ಅದೆಲ್ಲೋ ಕೇಂದ್ರ ಸರ್ಕಾರದಲ್ಲಿ ಕುಳಿತಿರುತ್ತದೆ. ಈ ವರ್ಷದಿಂದ ಕೇಂದ್ರ ಸರ್ಕಾರ ರಾಜೀವ್ ಗಾಂಧಿ drinking water sub-mission ಯೋಜನೆಯ ಪೂರ್ಣ ಹಣವನ್ನು ರಾಜ್ಯಕ್ಕೆ ಕೊಡುತ್ತದೆ. ಯಾವ ಯೋಜನೆಗೆ ಬೇಕೋ, ಅದಕ್ಕೆ ಅದನ್ನು ವಿತರಣೆ ಮಾಡತಕ್ಕ ಅಧಿಕಾರವನ್ನು ಕೇಂದ್ರ ರಾಜ್ಯ ಸರ್ಕಾರಕ್ಕೆ ಕೊಟ್ಟಿದೆ. ನನಗೆ ಗೊತ್ತಿರುವ ಹಾಗೆ ಸುಮಾರು 50ರಿಂದ 60 ಪ್ರಾಜೆಕ್ಟ್‌ಗಳು ಬಾಕಿ ಇವೆ. ಕೆರೆಯಿಂದ ನೀರನ್ನು ಗ್ರಾಮೀಣ ಭಾಗಕ್ಕೆ ಕೊಡುವಂತಹ ಯೋಜನೆ ಇರಬಹುದು ಅಥವಾ ನದಿ

ಮೂಲದಿಂದ ಗ್ರಾಮೀಣ ಭಾಗದ ಜನರಿಗೆ ನೀರು ಕೊಡುವಂತಹ ಯೋಜನೆ ಇರಬಹುದು, ಇವುಗಳೆಲ್ಲಾ ಹಾಗೆಯೇ ಸ್ಥಗಿತಗೊಂಡು ಕುಳಿತಿವೆ. ನಮ್ಮ priority ಏನಿದ್ದರೂ ಬರೀ ಕೊಳವೆ ಬಾವಿಗಳ revival schemeಗಷ್ಟೇ ಸೀಮಿತವಾಗಿದೆ. ಬೋರ್‌ವೆಲ್ ತೆಗೆದು, ಪೈಪ್‌ಲೈನ್ ಹಾಕಿ, ಟ್ಯಾಂಕ್ ಕಟ್ಟಿಸಿ ನೀರು ಕೊಡುತ್ತಿದ್ದೇವೆ. ಆ ಬೋರ್‌ವೆಲ್ dry ಆಯಿತೆಂದರೆ, ಪುನಃ ಇನ್ನೊಂದು ಬೋರ್‌ವೆಲ್ ತೆಗೆದು, ಅದಕ್ಕೊಂದು ಪೈಪ್‌ಲೈನ್ ಹಾಕಿಸಿ ನೀರು ಕೊಡುತ್ತಿದ್ದೇವೆ. ಇದು ನಿರಂತರವಾಗಿ ನಡೆಯುತ್ತಿದೆ. ಜಿಲ್ಲಾ ಪಂಚಾಯಿತಿ ಯವರು action plan ಮಾಡುತ್ತಾರೆ, ಗ್ರಾಮ ಪಂಚಾಯಿತಿಯವರು payment ಮಾಡುತ್ತಾರೆ. ಇಲ್ಲಿ ಇಬ್ಬರಿಗೂ tussle ಇದೆ. ಜಿಲ್ಲಾ ಪಂಚಾಯಿತಿಯವರು ಆ ಗ್ರಾಮದ ಅಗತ್ಯಕ್ಕನುಗುಣವಾಗಿ ಇದು ಆಗಬೇಕಾಗಿದೆಯೇ ಎಂದು ನೋಡಿರುವುದಿಲ್ಲ. ಯೋಜನೆ ಪೂರ್ಣಗೊಂಡ ಮೇಲೆ ಗ್ರಾಮ ಪಂಚಾಯಿತಿಗೆ ಅದರ hand over ಆಗುತ್ತದೆ. ಗ್ರಾಮ ಪಂಚಾಯಿತಿಗೆ ಆ scheme hand over ಮಾಡಿದ ಮೇಲೆ, ಅದನ್ನು manitain ಮಾಡತಕ್ಕವರು ಗ್ರಾಮ ಪಂಚಾಯಿತಿಯವರೇ ಆಗಿದ್ದಾರೆ. ಗ್ರಾಮ ಪಂಚಾಯಿತಿಯವರಿಗೆ ಅವರ ಯೋಜನೆಗಳಿಗೆ ಅನುಗುಣವಾಗಿ ನಾವು ಹಣವನ್ನು ಕೊಡುವುದಿಲ್ಲ. Universal ಆಗಿ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ 3ರಿಂದ 5 ಲಕ್ಷ ರೂ.ಗಳವರೆಗೆ ಇವತ್ತು ನಾವು ಕೊಡುತ್ತಿದ್ದೇವೆ. ಅದರಲ್ಲಿ KPTLCಗೆ ಕೊಡುವಂತಹ ಬಿಲ್ ಅನ್ನು ಕಟ್ ಮಾಡಿದರೆ, ಅಲ್ಪ ಸ್ವಲ್ಪ ಹಣ ಮಾತ್ರವೇ ಅವರಿಗೆ ಸಿಗುತ್ತದೆ. Tax collection ಚೆನ್ನಾಗಿ ಆಗಿದ್ದರೆ, ಗ್ರಾಮ ಪಂಚಾಯಿತಿ ಕೆಲಸ ನಡೆಯುತ್ತದೆ, ಇಲ್ಲದಿದ್ದರೆ ಇಲ್ಲ. ಯಾವ್ಯಾವ ಗ್ರಾಮ ಪಂಚಾಯಿತಿಗಳಲ್ಲಿ ಯಾವ್ಯಾವ ಯೋಜನೆಗಳಿವೆ ಮತ್ತು ಆ ಗ್ರಾಮ ಪಂಚಾಯಿತಿಗಳಲ್ಲಿ water supply schemes ಎಷ್ಟು ಬರುತ್ತದೆ? ಮತ್ತು ಅಲ್ಲಿ ಹೆಚ್ಚುವರಿ ಸ್ಕೀಮ್‌ಗಳು ಏನೇನು ನಡೆಯುತ್ತಿವೆ ಅದರ maintenanceಗೆ ಎಷ್ಟು ಹಣ ಬೇಕು ಎನ್ನುವುದರ ಬಗ್ಗೆ ಸವಿಸ್ತಾರವಾದ ವರದಿಯೊಂದನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯವರು ಇದುವರೆಗೂ ಸಿದ್ಧ ಮಾಡಿಲ್ಲ. Universal ಆಗಿ, ಅದು ಒಂದು ಗ್ರಾಮದ ಪಂಚಾಯಿತಿ ಇರಬಹುದು ಅಥವಾ 10 ಗ್ರಾಮದ ಪಂಚಾಯಿತಿ ಇರಬಹುದು, ಎಲ್ಲದಕ್ಕೂ ಕೂಡ ಒಂದೇ ಮಾನದಂಡವನ್ನು ಅನುಸರಿಸಿ

ಅನುದಾನ ಬಿಡುಗಡೆ ಮಾಡುತ್ತಿರುವುದು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಮರ್ಪಕವಾಗಿ ಕೆಲಸ ನಡೆಯದೇ ಇರುವುದಕ್ಕೆ ಕಾರಣವಾಗುತ್ತಿದೆ. ಯಾವ ರೀತಿ ನೀವು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮುಖಾಂತರ ನಗರ ಪ್ರದೇಶಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ನಿರ್ವಹಣೆ ಮಾಡುತ್ತಿದ್ದೀರೋ, ಅದೇ ರೀತಿ ಗ್ರಾಮ ಪಂಚಾಯಿತಿ ಮಟ್ಟದಲ್ಲೂ ಮಾಡಬೇಕು. ಗ್ರಾಮೀಣಾಭಿವೃದ್ಧಿ ಸಚಿವರು ಏಕೋ ನಾನು ಮಾತನಾಡಲಿಕ್ಕೆ ಶುರು ಮಾಡಿದ ಮೇಲೆ, ಹೊರಗಡೆ ಹೋಗಿದ್ದಾರೆ. ಅವರು ಬಹಳ powerfull ಸಚಿವರಾಗಿರುವುದರಿಂದ, ನಾವು ಮಾತನಾಡುವುದನ್ನು ಅವರು ಸ್ವಲ್ಪ ಕೇಳಿಸಿಕೊಂಡಿದ್ದರೆ, ಬೇಗ ನಮಗೆ ಅದು ಕಾರ್ಯಗತ ವಾಗುತ್ತದೆ ಎನ್ನುವಂತಹ ವಿಶ್ವಾಸವಿದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಆ ಇಲಾಖೆಯನ್ನು ನಾನು ಬಹಳ ಬಲಯುತ ಮಾಡಬೇಕು ಎನ್ನುವಂತಹ ವಿಶೇಷ ಕಾಳಜಿಯನ್ನು ವ್ಯಕ್ತಪಡಿಸುತ್ತಿರುವುದರಿಂದ, ನಾನು ಆ ರೀತಿ ಹೇಳಿದೆ. ಅವರು ಒಬ್ಬರೇ ಮಹಿಳಾ ಮಂತ್ರಿ ಇರುವ ಕಾರಣಕ್ಕೂ ಕೂಡ ಹೀಗೆ ಹೇಳಿದೆ. ಮಾನ್ಯ ಕಾರಜೋಳ ಸಾಹೇಬರೆ, Karnataka Urban Water Supply and Dsainage Board, KUWSDB ಏನಿದೆ, ಅದೇ ಮಾದರಿಯಲ್ಲಿ ನೀವು 'ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ' ಎಂದು ಮಾಡಿ 'ನಗರ' ಎನ್ನುವುದನ್ನು ಅದರಿಂದ ತೆಗೆದು ಹಾಕಿ. ಅದನ್ನೇ ಮಾಡಿ. ಈಗ ಉದಾಹರಣೆಗೆ ನಮ್ಮ ಗುಂಡ್ಲುಪೇಟೆಗೆ ಕಬಿನಿಯಿಂದ ನೀರು ಕೊಡುತ್ತಿದ್ದೀರಿ. ಟೌನ್ ಜೊತೆಗೆ ಮಾರ್ಗದಲ್ಲಿ ಬರುವಂತಹ 27 ಹಳ್ಳಿಗಳಿಗೂ ನೀರು ಕೊಡುತ್ತಿದ್ದೇವೆ. ಟೌನ್‌ದು ಮಾತ್ರ ನಾವು ನೋಡಿ ಕೊಳ್ಳುತ್ತೇವೆ, ಹಳ್ಳಿಗಳದ್ದು ನಾವು ನೋಡುವುದಿಲ್ಲ ಎಂದರೆ ಹೇಗೆ? ಒಂದೇ ಸಿಸ್ಟಮ್‌ನಲ್ಲಿ ಅದು implement ಆಗಬೇಕು. ಅದೇ ತರಹ, ಕಾವೇರಿಯಿಂದ ಚಾಮರಾಜನಗರಕ್ಕೆ ನೀರು ಕೊಡುತ್ತೇವೆ. ಉದಾಹರಣೆಗೆ ಹೇಳುವುದಾದರೆ, ಈಗ ಮಾನ್ಯ ಸಿದ್ದರಾಮಯ್ಯನವರು ಅವರ ಕ್ಷೇತ್ರದ ಕೌಲಂದೆ ವ್ಯಾಪ್ತಿಯ 45 ಹಳ್ಳಿಗಳಿಗೆ ನೀರು ಕೊಡುವಂತಹ ಯೋಜನೆಯೊಂದಕ್ಕೆ ಚಾಲನೆ ನೀಡಿದರು. ಇದರ ನಿರ್ವಹಣೆಯನ್ನು ನೀವು again ಜಿಲ್ಲಾ ಪಂಚಾಯಿತಿಗೆ ಕೊಟ್ಟರೆ, ಜಿಲ್ಲಾ ಪಂಚಾಯಿತಿಯಿಂದ ಇದನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರಿಗೆ routine work ಇರುತ್ತವೆ. ಜಿಲ್ಲಾ ಪಂಚಾಯಿತಿ ಮೆಂಬರ್‌ಗಳು, ತಾಲ್ಲೂಕು ಪಂಚಾಯಿತಿ ಮೆಂಬರ್‌ಗಳು

ಮತ್ತು ಗ್ರಾಮ ಪಂಚಾಯಿತಿ ಮೆಂಬರ್‌ಗಳು, ಅವರಿವರ ಹಿಂದೆ ಓಡಾಡುವು ದರಿಂದ ಇಂಜಿನಿಯರ್‌ಗಳಿಗೆ ಸಮಯವಿರುವುದಿಲ್ಲ. ಇದರ ಜೊತೆಗೆ ಅವರು ಬೇರೆ ಬೇರೆ ಕಾಮಗಾರಿಗಳನ್ನೂ ಸಹ ನೋಡಿಕೊಳ್ಳಬೇಕಾಗುತ್ತದೆ. ಇದಲ್ಲದೆ NREGA schemes workಗಳನ್ನೂ ಸಹ ಅವರೇ monitor ಮಾಡಬೇಕು. ಈ ಕಾರಣಕ್ಕೋಸ್ಕರ ಈ ನದಿ ಮೂಲದ ಕುಡಿಯುವ ನೀರಿನ ಯೋಜನೆ ಗಳೇನಿವೆ, ಅವುಗಳಿಗಂದೇ ಪ್ರತ್ಯೇಕವಾದ ನಿಗಮವೊಂದನ್ನು ಸ್ಥಾಪನೆ ಮಾಡಿ, ಅದರ ಮುಖಾಂತರ ನಿರ್ವಹಣೆ ಮಾಡತಕ್ಕಂಥ ವ್ಯವಸ್ಥೆಯಾದರೆ, ಸಮರ್ಪಕವಾಗಿ ಕೆಲಸ ನಡೆಯುತ್ತದೆ. ಆ ದಿಕ್ಕಿನಲ್ಲಿ ಸ್ವಲ್ಪ ಸರ್ಕಾರ ಯೋಚನೆ ಮಾಡುವುದು ಒಳ್ಳೆಯದು ಎಂಬುದು ನನ್ನ ಅಭಿಪ್ರಾಯವಾಗಿದೆ. ಈಗ ಏನಾಗಿದೆ ಎಂದರೆ, 250–300 ಕೋಟಿ ರೂ.ಗಳಷ್ಟು ಹಣ ಕುಡಿಯುವ ನೀರು ಮುಂತಾದವುಗಳಿಗಾಗಿ ಪಂಚಾಯಿತಿಗಳಿಗೆ ಸರ್ಕಾರ ಕೊಡುತ್ತಿದೆ. ಇದರಲ್ಲಿ ಏನಾಗಿದೆ ಎಂದರೆ, ಗ್ರಾಮ ಪಂಚಾಯಿತಿಗಳಿಗೆ ಇದನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಅಲ್ಲಿ water-man ನೇಮಕ, ವಿದ್ಯುತ್ ಬಿಲ್ ಪಾವತಿ, ನೀರು ಸೋರುವಿಕೆ ತಡೆಗಟ್ಟುವುದು ಮತ್ತು ನಿರ್ವಹಣೆ ಮಾಡುವುದು, ಇದೆಲ್ಲಾ ಕಷ್ಟವಾಗುತ್ತದೆ. ಆದ್ದರಿಂದ, ಕ್ರಿಯಾ ಯೋಜನೆಯನ್ನು ಜಿಲ್ಲಾ ಪಂಚಾಯಿತಿ ಮಾಡುವುದರ ಬದಲು, ಅದನ್ನು ಗ್ರಾಮ ಪಂಚಾಯಿತಿಗೇ ಕೊಟ್ಟು ಬಿಡಿ. ಆಗ ಅವರು ಆ ಪಂಚಾಯಿತಿಗೆ ಏನು ಬೇಕೋ, ಅದಕ್ಕೆ ಕ್ರಿಯಾ ಯೋಜನೆ ಮಾಡುತ್ತಾರೆ, ಅದರ ನಿರ್ವಹಣೆ ಯನ್ನೂ ಸಹ ಅವರೇ ಮಾಡುತ್ತಾರೆ. ಕ್ರಿಯಾ ಯೋಜನೆ ಮಾಡುವವರು ಒಂದು, ಅದರ ನಿರ್ವಹಣೆ ಮಾಡುವವರು ಇನ್ನೊಂದು ಆಗಿರುವುದರಿಂದ, ಸ್ಥಳೀಯವಾಗಿ ಗೊಂದಲವಾಗಿದೆ. ಇದನ್ನು ನಿವಾರಣೆ ಮಾಡಬೇಕು. ಉದಾಹರಣೆಗೆ ಹೇಳುವುದಾದರೆ, ನಮ್ಮ ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸುಮಾರು 300ಕ್ಕೂ ಹೆಚ್ಚು ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಯೊಂದನ್ನು ಜಾರಿಗೆ ತರಬೇಕೆಂದು ಹಿಂದೆಯೇ ಮಾನ್ಯ ಧರ್ಮಸಿಂಗ್‌ರವರ ನೇತೃತ್ವದ ಸರ್ಕಾರ ಇದ್ದಾಗ......

ಶ್ರೀ ಬಿ.ಸಿ. ಪಾಟೀಲ್ : ಇಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ನಡೆಯುತ್ತಿದೆ. ಆದರೆ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಲ್ಲ, ಮಾನ್ಯ ಕೃಷಿ ಮಂತ್ರಿಗಳಿಲ್ಲ ಮತ್ತು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಲ್ಲ.

ಯಾರಿಗೋಸ್ಕರ ಈ ಚರ್ಚೆ ನಡೆಯುತ್ತಿದೆ? ಚರ್ಚೆ ನಡೆಯುವಾಗ ಸಂಬಂಧಪಟ್ಟ ಮಂತ್ರಿಗಳೇ ಇಲ್ಲವೆಂದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಸರ್ಕಾರ ವಿಶೇಷ ಆಸಕ್ತಿಯಿಂದಲೇ ಸದನದಲ್ಲಿ ಈ ವಿಷಯದ ಚರ್ಚೆ ನಡೆಯುತ್ತಿದೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಸಚಿವರನ್ನು ಕರೆಸುತ್ತೇನೆ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ : ಇಲ್ಲಿ ನಡೆಯುತ್ತಿರುವ ಚರ್ಚೆ ಬಗ್ಗೆ ಮಾನ್ಯ ಮಂತ್ರಿಗಳಿಗೆ ಎಷ್ಟು ಕಾಳಜಿ ಇದೆ ಎಂಬುದನ್ನು ನಾವು ಆಗಿನಿಂದಲೂ ನೋಡುತ್ತಿದ್ದೇವೆ. ಮಾನ್ಯ ಕಾರಜೋಳ್‌ರವರೊಬ್ಬರು ಮಾತ್ರ ಚರ್ಚೆಯನ್ನು ಕೇಳಿಸಿಕೊಳ್ಳುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈಗ ಸದನಕ್ಕೆ ಆಗಮಿಸಿದ್ದಾರೆ. ದಯವಿಟ್ಟು ನಿಮ್ಮ ಚರ್ಚೆಯನ್ನು ಮುಂದುವರೆಸಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ : ಇದು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆಗೆ ಕರೆದಿರುವ ಐತಿಹಾಸಿಕ ಅಧಿವೇಶನ ಎನ್ನುತ್ತಿದ್ದೀರಿ. ಆದರೆ ಮಾನ್ಯ ಮಂತ್ರಿಗಳಿಲ್ಲ. ಇದರಿಂದ ನಿಮಗೆ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಇರುವ ಕಾಳಜಿ ಗೊತ್ತಾಗುತ್ತಿದೆ. ಇದನ್ನು ನಾಡಿನ ಜನರೂ ಕೂಡ ನೋಡುತ್ತಿದ್ದಾರೆ.

(ಗೊಂದಲ)

ಶ್ರೀ ಅಪ್ಪಚ್ಚು ರಂಜನ್ : ಸದನದಲ್ಲಿ 8 ಜನ ಮಂತ್ರಿಗಳಿದ್ದಾರೆ. ನಿಮಗೆ ಇನ್ನೇನು ಬೇಕು?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಮಹದೇವ ಪ್ರಸಾದ್‌ರವರು ಮಾತನಾಡುತ್ತಾ ಬಹಳ ಅಮೂಲ್ಯವಾಗಿರತಕ್ಕ ಸಲಹೆಗಳನ್ನು ಕೊಟ್ಟರು. ನಗರ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಒಂದು ಬೋರ್ಡ್ ಇದೆ, ಅದೇ ರೀತಿ ಹಳ್ಳಿ ಮಟ್ಟಕ್ಕೆ en-route villagesಗೆ ಸಹಾಯ ಮಾಡುವುದಕ್ಕೋಸ್ಕರ

ಅದಕ್ಕೊಂದು separate ನಿಗಮವನ್ನು ಮಾಡಿ ಎಂಬ ಬಹಳ ಅಮೂಲ್ಯವಾದ ಸಲಹೆಯನ್ನು ಅವರು ಕೊಟ್ಟರು. ಸರ್ಕಾರ ಇದರ ಬಗ್ಗೆ ಕೇಳಬೇಕು ಮತ್ತು ಅದನ್ನು implement ಮಾಡಬೇಕು. ಪ್ರತಿ ಬಾರಿಗೂ ಹೀಗಾಗುತ್ತಿದೆ. ಇವತ್ತು ಬೆಳಿಗ್ಗೆಯಿಂದಲೇ ಮೂರು ಬಾರಿ ಈ ರೀತಿಯಾಗಿದೆ. ಮಾನ್ಯ ಕಂದಾಯ ಸಚಿವರು ಏನೂ ಪರವಾಗಿಲ್ಲವೆಂದು ಹೇಳುತ್ತಾರೆ. ನನಗನಿಸುತ್ತದೆ, ಎಲ್ಲೋ ಒಂದು ಕಡೆ ಇದು ಸರಿಯಲ್ಲ. ಕ್ಯಾಬಿನೆಟ್ responsibility ಇಲ್ಲವೆಂದು ನಾನು ಹೇಳುತ್ತಿಲ್ಲ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ನಡೆಯುತ್ತಿರುವುದರಿಂದ concerned ಸಚಿವರು ಸದನದಲ್ಲಿ ಇರಬೇಕು. ಪಾಪ! ಮೇಡಮ್ ಅವರಂತೂ ಕುಳಿತೇ ಇರುತ್ತಾರೆ. ಆದರೆ ಕೃಷಿ ಸಚಿವರಂತೂ ಪತ್ತೆಯೇ ಇಲ್ಲ. ಎಲ್ಲೋ ಒಂದು ಕಡೆ ನನಗನಿಸುತ್ತದೆ. ಪ್ರತಿ ಸಂದರ್ಭದಲ್ಲೂ ಈ ರೀತಿ interrupt ಮಾಡುವುದರ ಬದಲು, ಮಂತ್ರಿಗಳಿಗೆ ಒಂದು code of conduct ಅನ್ನು ತರುವಂತಹ ಅವಶ್ಯಕತೆ ಇದೆಯೇ ಎಂದು ನನಗಂತೂ ಅನುಮಾನ ಬರುತ್ತಿದೆ. ಅದನ್ನು ನಾನು ತಮ್ಮ ವಿವೇಚನೆಗೆ ಬಿಡುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡುತ್ತಾ ಹೇಳುತ್ತಿದ್ದೆ, ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 139 ಗ್ರಾಮಗಳಿವೆ, ಚಾಮರಾಜನಗರ ಜಿಲ್ಲೆಯಲ್ಲಿ 168 ಗ್ರಾಮಗಳಿವೆ, ಅಂದರೆ, ಎಂಟೈರ್ ತಾಲ್ಲೂಕಿನ ಎಲ್ಲಾ ಹಳ್ಳಿಗಳಿಗೆ gravitational ಫೋರ್ಸ್‌ನಲ್ಲಿ ನದಿ ಮೂಲದಿಂದ ಕುಡಿಯುವ ನೀರಿನ ಒಂದು ಯೋಜನೆ ಇದೆ, ಮಾನ್ಯ ಧರ್ಮ್‌ಸಿಂಗ್‌ರವರ ನೇತೃತ್ವದ ಸರ್ಕಾರದ ಅವಧಿಯಲ್ಲಿ ಇದನ್ನು ಕ್ಯಾಬಿನೆಟ್ ಅಪ್ರೂವಲ್ ಮಾಡಿ. ಯೋಜನೆ ರೂಪಿಸಿ ಕಳುಹಿಸಿ ಕೊಟ್ಟಿದ್ದರು. ನಿಮಗೆ ಗೊತ್ತಿರುವ ಹಾಗೆ ಇವೆರಡೂ ನೀರಾವರಿ ಇಲ್ಲದೇ ಇರುವಂತಹ ತಾಲ್ಲೂಕುಗಳು. ನಾವು ಇವತ್ತು ದಿವಂಗತ ನಜೀರ್‌ಸಾಬ್‌ರವರನ್ನು ನೆನೆಸಿಕೊಳ್ಳಬೇಕಾಗುತ್ತದೆ. ದಿವಂಗತ ನಜೀರ್‌ಸಾಬ್‌ರವರು ಈ ಪಂಚಾಯತ್ ರಾಜ್ ವ್ಯವಸ್ಥೆ ರಾಷ್ಟ್ರದಲ್ಲಿ ಮತ್ತು ರಾಜ್ಯದಲ್ಲಿ ಇಷ್ಟೊಂದು ಬಲಿಷ್ಠವಾಗಿ ಬೆಳೆಯಬೇಕಾದರೆ ಮೂಲವಾಗಿ ಅವರು ಪ್ರೇರಣೆ ಮಾಡಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿದಂತಹವರು. ನೀರ್‌ಸಾಬ್ ಎಂದು ಹೇಳಿ ಅವರು ಪ್ರಾಣ ಬಿಟ್ಟಂತಹವರು. ಅವರ ತಾಲ್ಲೂಕಿನಲ್ಲಿ ನಾವು ಯಾವ ಊರಿಗೆ ಹೋದರೂ 80 ಅಡಿಗೆ ನೀರು ಬರುತ್ತಿದ್ದುದು ಇವತ್ತು 600 ರಿಂದ

700 ಅಡಿಗೆ ಹೋದರೂ ನೀರು ಬರದೆ ಇರುವಂತಹ ಪರಿಸ್ಥಿತಿ ಇದೆ. ಯಾವುದೇ ನದಿ ಮೂಲ ಇಲ್ಲದೆ ಇರತಕ್ಕಂತಹ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಯೋಜನೆ ಮಾಡಬೇಕೆಂದು ನಾವು ನಾಲ್ಕಾರು ವರ್ಷಗಳ ಹಿಂದೆ ಒಂದು ಯೋಜನೆ ಮಾಡಿದರೆ, ಇದುವರೆಗೆ ಅದನ್ನು ಜಾರಿಗೆ ತರತಕ್ಕಂತಹ ಒಂದು ಪ್ರಯತ್ನವನ್ನು ನಾವು ಮಾಡಿಲ್ಲ. ಜಮೀನಿಗೆ ನೀರು ಕೊಡಿ ಎಂದು ನಮ್ಮ ಕ್ಷೇತ್ರದವರು ಕೇಳುವುದಕ್ಕೆ ತಯಾರಿಲ್ಲ. ಏಕೆಂದರೆ ಭೂಮಿಗೆ ನದಿ ನೀರು ಬರುವುದಿಲ್ಲವೆಂದು ಗೊತ್ತಿದೆ. ಕನಿಷ್ಠ ಕುಡಿಯವುದಕ್ಕಾದರೂ ನಮಗೆ ನದಿ ನೀರು ತಂದು ಕೊಡಲಿ ಎಂಬ ಆಶಾಭಾವನೆ ಜನಗಳಲ್ಲಿ ಇರುವಾಗ, ಅದಕ್ಕೆ ಸ್ಪಂದಿಸತಕ್ಕಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. ಈಗಾಗಲೇ ನಾನು ಹೇಳಿದೆ, ಫ್ಲೋರೈಡ್ ಕಂಟೆಂಟ್ಸ್ ಇರತಕ್ಕಂತಹ 20 ಜಿಲ್ಲೆಗಳಲ್ಲಿ ಚಾಮರಾಜನಗರರ ಜಿಲ್ಲೆ ಕೂಡ ಒಂದು ಎಂದು ಕೇಂದ್ರದ ವರದಿಯಲ್ಲಿ ಹೇಳಿದ್ದಾರೆ. ಇಂತಹ ಯೋಜನೆಗಳನ್ನು ಜಾರಿಗೆ ತರತಕ್ಕಂತಹ ಪ್ರಯತ್ನ ನೀವು ಮಾಡಬೇಕು. ಕೇಂದ್ರದ ಸರ್ವೆ ಪ್ರಕಾರ ಇನ್ನು 10 ವರ್ಷಗಳಲ್ಲಿ ಬೋರ್‌ವೆಲ್‌ಗಳಿಂದ ನೀರನ್ನು ಪಡೆಯುವುದು ಕೂಡ ದುರ್ಲಭ ಆಗುತ್ತದೆ ಎನ್ನುವ ಒಂದು ವರದಿ ಇದೆ. 500 ರಿಂದ 600 ಅಡಿ ಕೆಳಗಡೆ ಹೋದಂತಹ ಕಾಲಕ್ಕೆ ಅದು ಕಲುಷಿತ ನೀರಾಗಿ, ಆರೋಗ್ಯಕ್ಕೆ ಹಾನಿಕರ ಆಗುತ್ತದೆ. ಫ್ಲೋರೈಡ್ ಕಂಟೆಂಟ್ಸ್ ಬಗ್ಗೆ ಕೊಟ್ಟಿರುವ ಮಾಹಿತಿ ಪ್ರಕಾರ 37.7 ದಶಲಕ್ಷ ಜನರು ಪ್ರತಿ ವರ್ಷ ನೀರಿನಿಂದ ಬರುವ ರೋಗಗಳಿಂದ ನರಳುತ್ತಿದ್ದಾರೆ. ಇದರಲ್ಲಿ 75 ರಷ್ಟು ಜನ ಐದು ವರ್ಷದ ಕೆಳಗಿನ ಮಕ್ಕಳು. ಈ ತರಹ ಪರಿಸ್ಥಿತಿಯಲ್ಲಿ ನಾವು ಬೆಳೆಯುವಂತಹ ಮಕ್ಕಳಿಗೆ ಈ ರೀತಿಯ ನೀರನ್ನು ಕೊಡುವಂತಹ ವ್ಯವಸ್ಥೆ ಮುಂದೆ ಆಗಬಾರದು ಎನ್ನುವುದಾದರೆ ನಾವು ಈಗಿನಿಂದಲೇ ನದಿ ನೀರನ್ನು ಎಲ್ಲಾ ಕಡೆ ಕೊಡುವಂತಹ ಯೋಜನೆಗಳನ್ನು ಆದಷ್ಟು ಹೆಚ್ಚಿನ ರೀತಿಯಲ್ಲಿ ಜಾರಿಗೆ ತರಬೇಕು. ಹಾಲಿ ಸರ್ಕಾರದ ಮುಂದೆ ಮಂಜೂರಾಗಿರುವಂತಹ ಯೋಜನೆ ಗಳೇನಿವೆ, ಅವುಗಳನ್ನು ಒಂದು ಟೈಮ್‌ಬೌಂಡ್ ಪ್ರೋಗ್ರಾಂನಲ್ಲಿ ಅನುಷ್ಠಾನಕ್ಕೆ ತರುವಂತಹ ಪ್ರಯತ್ನವನ್ನು ಸರ್ಕಾರ ಮಾಡಬೇಕು. ಮಲೆಮಹದೇಶ್ವರ ಬೆಟ್ಟಕ್ಕೆ ಎಲ್ಲರೂ ಬಹಳ ಭಕ್ತಿಯಿಂದ, ಭಯದಿಂದ, ಶ್ರದ್ಧೆಯಿಂದ ಹೋಗಿ ಪೂಜೆ ಸಲ್ಲಿಸುವಂತಹ ವ್ಯವಸ್ಥೆ ಇದೆ. ತಮಿಳುನಾಡು, ಕರ್ನಾಟಕ ಹಾಗೂ ಆಂಧ್ರಪ್ರದೇಶದ ಜಿಲ್ಲೆಗಳಿಂದ ಲಕ್ಷಾಂತರ ಜನ ಭಕ್ತಾದಿಗಳು ಅಲ್ಲಿಗೆ ಬರುತ್ತಾರೆ. ಐದು ವರ್ಷಗಳಿಂದ ಅಲ್ಲಿ ಒಂದು ಕುಡಿಯುವ ನೀರಿನ

ಯೋಜನೆಗೆ ಮಂಜೂರಾತಿ ಮಾಡಿ ಅದಕ್ಕೆ ಹಣ ಒದಗಿಸಿ, ಕೆಲಸ ಮಾಡಿಸುವುದಕ್ಕೆ ಸಾಧ್ಯವಾಗಿಲ್ಲ. ಸರ್ಕಾರದಿಂದ ಎಲ್ಲಾ ರೀತಿಯ ಅನುಮೋದನೆಗಳು ದೊರಕಿವೆ. ಕೇಂದ್ರ ಸರ್ಕಾರದಿಂದ ಬರಬೇಕಾದ Environment Clearance ಕೂಡ ಸಿಕ್ಕಿದೆ. ಅದನ್ನು ನಾವು ಜಾರಿಗೆ ಮಾಡುವುದಕ್ಕೆ ಪ್ರಯತ್ನ ಮಾಡದೆ ಅಧಿವೇಶನ ಕರೆದಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರೂ ಕೂಡ ನಮ್ಮ ಸಮ್ಮುಖದಲ್ಲಿ ಸಭೆ ಮಾಡಿ ಅನೌನ್ಸ್ ಮಾಡಿ ಒಂದು ವರ್ಷದ ಮೇಲಾಯಿತು. ಇವತ್ತಿನವರೆಗೂ ಅದನ್ನು ಕಾರ್ಯಗತ ಮಾಡುವುದಕ್ಕೆ ಆಗದೆ, ವಿಶೇಷ ಅಧಿವೇಶನದಲ್ಲಿ ಗ್ರಾಮೀಣಾ ಭಿವೃದ್ಧಿ ಇಲಾಖೆ ಬಗ್ಗೆ ಚರ್ಚೆ ಮಾಡಿ ಸಲಹೆ ಕೊಡಿ ಎಂದರೆ ಹೇಗೆ? ಇರುವಂತಹ ಯೋಜನೆಗಳನ್ನು ಜಾರಿಗೆ ತರುವಂತಹ ಒಂದು ಪ್ರಯತ್ನ ಮಾಡಿದರೆ ಬಹುಶಃ ಜನ ನೆನೆಸಿಕೊಳ್ಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು ನಮ್ಮ ಪರವಾಗಿ, ಗ್ರಾಮೀಣ ಜನರ ಪರವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ನೆನೆಸುತ್ತಾರೆ. ಇಲ್ಲದಿದ್ದರೆ ಘೋಷಣೆಗಳ ಸರ್ಕಾರ ಆಗುತ್ತದೆಯೇ ಹೊರತು, ಇದು ಕಾರ್ಯರೂಪಕ್ಕೆ ಬರುವಂತಹ ಕೆಲಸ ಆಗುವುದಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಉದ್ಯೋಗ ಖಾತರಿ ಯೋಜನೆಯಲ್ಲಿ ಏನಾಗಿದೆ ಅಂದರೆ ನಮ್ಮ ಭಾಗದಲ್ಲಿ ಬಹಳ ಕಡಿಮೆ ಆಗುತ್ತಿದೆ. ಇದಕ್ಕೆ ಕಾರಣವೇನೆಂದರೆ, ಕೆಲಸ ತೆಗೆದುಕೊಳ್ಳುವ ವಿಧಾನ ಇದೆಯಲ್ಲಾ ಅದರಲ್ಲಿ Central Government Guidelines ಪ್ರಕಾರ ಇಷ್ಟಿಷ್ಟು ಪರ್ಸೆಂಟ್ ಅಂತರ್ಜಲ social forestryಗೆ 50% ರಸ್ತೆ ನಿರ್ವಹಣೆಗೆ 10% ಈ ತರಹ ಕೆಲವು ಪರ್ಸೆಂಟೇಜ್‌ವೈಸ್ ನಿಗದಿ ಮಾಡಿದ್ದಾರೆ. Water-Shed programme ಗಳಿಗೆ ಇಷ್ಟು, forest programme ಗಳಿಗೆ ಇಷ್ಟು ಎಂದು ನಿಗದಿಪಡಿಸಿದ್ದಾರೆ. ನಮ್ಮಲ್ಲಿ ಜನರಿಗೆ ಹೆಚ್ಚು ಬೇಡಿಕೆ ಇರುವಂಥದ್ದು ಸ್ಮಶಾನಕ್ಕೆ ಹೋಗುವಂತಹ ದಾರಿ, ಜಮೀನಿಗೆ ಹೋಗುವ ದಾರಿ, ಅಥವಾ ಕೆರೆಗೆ ಹೋಗುವ ದಾರಿ, ಈ ತರಹ ಸಣ್ಣ ಸಣ್ಣ ಓಣಿಗಳನ್ನು ರಸ್ತೆಗಳನ್ನಾಗಿ ಮಾರ್ಪಾಡು ಮಾಡತಕ್ಕಂತಹ ಕೆಲಸಕ್ಕೆ ಹೆಚ್ಚಿನ ಬೇಡಿಕೆ ಇದೆ. ಆದರೆ ಆ ಬೇಡಿಕೆಗೆ ಅನುಗುಣವಾಗಿ ಯೋಜನೆಗಳನ್ನು ರೂಪಿಸತಕ್ಕಂತಹ ವ್ಯವಸ್ಥೆ ನಿಮ್ಮ ಈ ಗೈಡ್‌ಲೈನ್ಸ್‌ನಲ್ಲಿ ಇಲ್ಲ. ಹಾಗಾಗಿ ನಮ್ಮ ಭಾಗದಲ್ಲಿ ಹೆಚ್ಚಿನ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಇದನ್ನು

ನೀವು ಶೇಕಡ 20 ಮಾಡಿ, ಮೇನ್ ರೋಡ್‌ಗಳಿಗೆ 10% ಇನ್ನಿತರೆ ಸಣ್ಣ ಪುಟ್ಟ ರಸ್ತೆಗಳಿಗೆ 10% ಹೀಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಅದನ್ನು 40% ಗೆ ಹೆಚ್ಚಿಸತಕ್ಕಂತಹ ಒಂದು ವ್ಯವಸ್ಥೆಯನ್ನು ನಮ್ಮ ರಾಜ್ಯದ ವ್ಯಾಪ್ತಿಯಲ್ಲಿ ತಾವು ಮಾಡುವುದಕ್ಕೆ ಪ್ರಯತ್ನ ಮಾಡಿ. ಆಗ ಹೆಚ್ಚಿನ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ.

(ಈ ಹಂತದಲ್ಲಿ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

Agriculture labousers ಏನು ಇದರಲ್ಲಿ ನೋಂದಾಯಿಸಿರುವವರು ಇದ್ದಾರೆ ಅವರು ಇದರಲ್ಲಿ involove ಆಗುತ್ತಾರೆ. ಏಕೆಂದರೆ ಅವರ ಜಮೀನುಗಳಿಗೆ ಹೋಗತಕ್ಕಂತಹ ರಸ್ತೆಗಳು ಓಣಿಗಳನ್ನು ದುರಸ್ತಿ ಮಾಡುವುದಕ್ಕೆ ಅವಕಾಶ ಇದೆ. ಅದನ್ನು ಈ ಯೋಜನೆಯಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. 82 ರೂ. ಕೊಡುವ ಬಗ್ಗೆ ಕೇಂದ್ರ ಸರ್ಕಾರ ಏನು ಹೇಳಿದೆ, ಈಗಾಗಲೇ ಮಾನ್ಯ ಪ್ರಧಾನ ಮಂತ್ರಿಗಳು ಅದನ್ನು 100 ರೂ. ಗೆ ಹೆಚ್ಚಿಸುತ್ತೇವೆಂದು ಹೇಳಿದ್ದಾರೆ. ಆ ಆದೇಶ ಜಾರಿಗೆ ಬರುವವರೆಗೆ 82 ರೂ. ಜೊತೆಗೆ 20 ರಿಂದ 30 ರೂ. ರಾಜ್ಯ ಸರ್ಕಾರದ ವತಿಯಿಂದ ಅಷ್ಟು ಕೊಡುವುದಕ್ಕೆ ಪ್ರಯತ್ನ ಮಾಡಿ ಆಗ ಪ್ರೋತ್ಸಾಹ ಧನ ಎಂದು ಕೊಟ್ಟು ಲೇಬರರ್ಸ್ ಹೆಚ್ಚು involove ಆಗುವುದಕ್ಕೆ ಸಾಧ್ಯವಾಗುತ್ತದೆ. ನೀವು ಹೇಗೆ 82ರೂ. ಯಿಂದ 116ಕ್ಕೆ ಹೆಚ್ಚಿಸಬೇಕೆಂದು ಹೇಳಿದ್ದೀರಿ, ಅದನ್ನು ಕೇಂದ್ರದಿಂದ ಕೊಡುವವರೆಗೆ ಕಾಯುವ ಬದಲು ನೀವೇ ಅದನ್ನು ನಿಮ್ಮ ರಾಜ್ಯ ಸರ್ಕಾರದ ಅನುದಾನದಲ್ಲಿ ಕೊಟ್ಟರೆ ಹೆಚ್ಚು ಪರಿಣಾಮಕಾರಿಯಾಗಿ ಆಗುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಬೇಲೂರು ಘೋಷಣೆ ಪ್ರಕಾರ ಪಡಿತರ ವಿತರಣೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಇದೆ. ನಿಮ್ಮ ಪಂಚಾಯತ್ ರಾಜ್ ಇಲಾಖೆ ಮುಖಾಂತರ ವಿತರಣೆ ಮಾಡತಕ್ಕಂತಹ ವ್ಯವಸ್ಥೆ ಇರುವುದು. ಆಹಾರ ಇಲಾಖೆಗೆ ಪ್ರತ್ಯೇಕವಾದ ಒಂದು Directorate ಇದ್ದರೂ ಕೂಡ distribution system ಏನಿದೆ ಅದು ಪಂಚಾಯತ್ ರಾಜ್ ಇಲಾಖೆ ಮುಖಾಂತರ ನಡೆಯತಕ್ಕಂತಹ ವ್ಯವಸ್ಥೆ ಇರುವಂಥದ್ದು. ಹಿಂದೆ ನಾನು ಸಚಿವನಾಗಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ಪ್ರತಿ ಕುಟುಂಬಕ್ಕೆ ಒಂದು ಪಡಿತರ ಚೀಟಿ ಇರಬೇಕು, ಅದು ಒಂದು ವೈಜ್ಞಾನಿಕವಾದ ರೀತಿಯಲ್ಲಿ

ಇರಬೇಕು, 2005ರಲ್ಲಿ computerized system ನಲ್ಲಿ card ಇರಬೇಕೆಂಬ ಆಲೋಚನೆಯಲ್ಲಿ ಒಂದು ಸಮೀಕ್ಷೆ ಮಾಡಿಸಿದೆವು. ಗಣಕೀಕರಣ ಯೋಜನೆ ಯಶಸ್ವಿಯಾಗಿ ಅನುಷ್ಠಾನಗೊಳಿಸಬೇಕೆಂದು ನಾವು ಏನು ಪ್ರಾರಂಭ ಮಾಡಿದೆವೋ ಆ ಕುಟುಂಬದಲ್ಲಿ 12 ವರ್ಷಗಳಿಗಿಂತ ಮೇಲ್ಪಟ್ಟ ವ್ಯಕ್ತಿಗಳು ಏನಿರುತ್ತಾರೆ ಅದರದೆಲ್ಲಾ ಒಂದು ಬಯೋ ಮೆಟ್ರಿಕ್ಸ್ ಅಂದರೆ ಫಿಂಗರ್ ಪ್ರಿಂಟ್ಸ್ ತೆಗೆದುಕೊಂಡು ಅವರ photography ಪಡೆದು ಅವರಿಗೆ ಒಂದು ಪರ್ಮನೆಂಟ್ ಕಾರ್ಡನ್ನು ಕೊಡಬೇಕು, ಮಿಸ್‌ಯೂಸ್ ಆಗುವುದನ್ನು ತಡೆಗಟ್ಟಬೇಕು ಎನ್ನುವ ಉದ್ದೇಶದಿಂದ ಮಾಡಿದಂತಹ ಒಂದು ಯೋಜನೆ. ಎಲ್ಲಾ ಇಲಾಖೆಗಳ ಡೇಟಾ ಬೇಸ್ ಏನಿದೆ, ಅದನ್ನೆಲ್ಲ ಬಳಸಿಕೊಂಡು ಪರ್ಮನೆಂಟ್ ಕಾರ್ಡು ನೀಡಬೇಕೆಂದ ಪ್ರಯತ್ನ ಆಗಿದೆ. 2005 ಆಗಿ 2009ರಲ್ಲಿ ನಾವು ಇದ್ದೇವೆ. ಇನ್ನೂ ಪೂರ್ವ ಪ್ರಮಾಣದ ಕಾರ್ಡನ್ನು ವಿತರಣೆ ಮಾಡತಕ್ಕಂತಹ ಕೆಲಸ ಸರ್ಕಾರದಿಂದ ಆಗಿಲ್ಲ. ಸಮಗ್ರ ಗ್ರಾಮೀಣ ಗಣಕೀಕರಣ ಯೋಜನೆಯಡಿ RDS Rural Data System ಪ್ರಕಾರ ಎಲ್ಲಾ ಇಲಾಖೆಗಳ ಮಾಹಿತಿ ಸಾರ್ವಜನಿಕ ಮಾಹಿತಿ ವ್ಯವಸ್ಥೆಗಾಗಿ ಏನು ಮಾಡಿದ್ದೆವು, ಅದು ಇವತ್ತಿನವರೆಗೂ ಜನರಿಗೆ ತಲುಪತಕ್ಕಂತಹ ವ್ಯವಸ್ಥೆ ಆಗಲಿಲ್ಲ. ಅದನ್ನು ಕೂಡಲೇ ಮಾಡಬೇಕು. ಆಗ ಅವರು ಯಾವುದೇ ಇಲಾಖೆಯಲ್ಲಿ ಯಾವುದೇ ಸೌಲಭ್ಯಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ನಾವು ತಾತ್ಕಾಲಿಕ ಪಡಿತರ ಚೀಟಿ, ನೆಮ್ಮದಿ ಕೇಂದ್ರದ ಪಡಿತರ ಚೀಟಿ ಆ ಗೊಂದಲದಲ್ಲಿಯೇ ಇನ್ನೂ ತೇಲಾಡುತ್ತಿದೇವೆಯೇ ಹೊರತು ಅದರಿಂದ ಹೊರಗೆ ಬರುವಂತಹ ಪ್ರಯತ್ನ ಈ ಸರ್ಕಾರದಿಂದ ಆಗಲಿಲ್ಲ. ನಾವು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಪರಿಣಾಮಕಾರಿಯಾಗಿ ಆಗಬೇಕೆಂದು ನ್ಯಾಯಬೆಲೆ ಅಂಗಡಿಗಳಲ್ಲಿ ಬಾರ್ ಕೋಡೆಡ್ ಕೂಪನ್ ಬಳಸಬೇಕೆಂದು ಒಂದು ಪ್ರಸ್ತಾವನೆ ಇಟ್ಟಿದ್ದೆವು. ಸರ್ಕಾರ ಕೂಡ ಅದಕ್ಕೆ ಒಪ್ಪಿಗೆ ಕೊಟ್ಟಿತ್ತು. ಇವತ್ತಿನವರೆಗೆ ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಈ ಬಾರ್ ಕೋಡೆಡ್ ಕೂಪನ್ ಮುಖಾಂತರ ಪಡಿತರ ವಿತರಣೆ ಮಾಡತಕ್ಕಂತಹ ವ್ಯವಸ್ಥೆ ಆಗಲಿಲ್ಲ. ಅದರಿಂದ ಪಡಿತರ ಪದಾರ್ಥಗಳ ದುರ್ಬಳಕೆ ಆಗುವುದನ್ನು ತಡೆಗಟ್ಟುವುದಕ್ಕೆ ನ್ಯಾಯಬೆಲೆ ಅಂಗಡಿ ಹಂತದಲ್ಲಿ ಸಾಧ್ಯವಾಗುತ್ತದೆ. ಪಡಿತರ ಕಾರ್ಡ್ ಹೋಲ್ಡರ್ ಬಾರ್ ಕೋಡೆಡ್ ಕೂಪನ್ ಅನ್ನು ನ್ಯಾಯಬೆಲೆ ಅಂಗಡಿಗೆ ಕೊಡುವುದರ ಮುಖಾಂತರ ಮಧ್ಯವರ್ತಿಗಳು ಯಾರೇ ಹೋಗಿ ಅಲ್ಲಿ ಬಳಕೆ

ಮಾಡುವುದು ತಪ್ಪುತ್ತದೆ. ನ್ಯಾಯಬೆಲೆ ಅಂಗಡಿಯವನ್ನೂ ಕೂಡ ಆ ಪಡಿತರದಾರನ ಹೆಸರಿನಲ್ಲಿ ಆ ಪಡಿತರವನ್ನು ಬೇರೆ ಕಡೆಗೆ ದುರುಪಯೋಗ ಪಡಿಸುವುದನ್ನು ತಡೆಗಟ್ಟಬಹುದು.

ಈ ರೀತಿ ಹಿಂದಿನ ಅವಧಿಯಲ್ಲಿ ಮಾಡಿರುವಂತಹ ಸಾಕಷ್ಟು ಸಲಹೆಗಳನ್ನು ಜಾರಿಗೆ ತರುವಂತಹ ಪ್ರಯತ್ನ ಆಗಲ್ಲ. ನಾನು ಮಂತ್ರಿಯಾಗಿದ್ದಾಗ ಆಹಾರ ಧಾನ್ಯ ಸಾಗಾಣಿಕೆ ವಾಹನಗಳು ಏನಿವೆ ಅವುಗಳಿಗೆ device ಅಳವಡಿಸಿ management tracking sysstem ಎಂದು ತರುವುದಕ್ಕೆ ಪ್ರಯತ್ನ ಮಾಡಿದೆ. Food Corporation ನಿಂದ ಏನು ನ್ಯಾಯ ಬೆಲೆ ಅಂಗಡಿಗಳಿಗೆ ಸಗಟಾಗಿ ಆಹಾರ ಪದಾರ್ಥಗಳು ಹೋಗುತ್ತವೆ ಅದು ಮಧ್ಯದಲ್ಲಿ misuse ಎಲ್ಲೂ ಆಗದೇ ಇರುವ ಹಾಗೆ ಈ ಒಂದು device ಅನ್ನು ಪ್ರತಿ ಲಾರಿಗಳನ್ನು ಅಳವಡಿಸಿ ಅದರ ಮುಖಾಂತರ monitor ಮಾಡುವಂತಹ ಒಂದು ವ್ಯವಸ್ಥೆಯನ್ನು ಜಾರಿಗೊಳಿಸುವುದಕ್ಕೆ ಪ್ರಯತ್ನ ಮಾಡಿದ್ದೆವು. ಅದರ ಬಗ್ಗೆ ಇವತ್ತಿನವರೆಗೆ ಏನೂ ಆಗಿಲ್ಲ. ಏನಿದ್ದರೂ ನಾವು ಅಕ್ಕಿ ಕೊಡುವುದು, ನ್ಯಾಯ ಬೆಲೆ ಅಂಗಡಿ ಮತ್ತು ಕಾರ್ಡ್ ಕೊಡುವುದು ಇಷ್ಟೇ ಚರ್ಚೆ Food Department ನಲ್ಲಿ ನಡೆಯುತ್ತಿದೆಯೇ ಹೊರತು, ಆ ಇಲಾಖೆಯ ವ್ಯವಸ್ಥೆಯನ್ನು ಸುಧಾರಣೆ ಮಾಡತಕ್ಕಂತಹ ಯೋಜನೆಯ ಬಗ್ಗೆ ಚರ್ಚೆಯಾಗಿದ್ದನ್ನು ನಾವು ನೋಡಿಲ್ಲ ಮತ್ತು ಅದರ ಬಗ್ಗೆ ಕ್ರಮ ಕೈಗೊಂಡಿದ್ದ ಕೂಡ ಇದುವರೆಗೆ ಎಲ್ಲೂ ನೋಡಲಿಲ್ಲ. ಹಾಗಾಗಿ ಈಗ ಏನಾಗಿದೆ ಎಂದರೆ ಈ ಅಕ್ಷಯ ಯೋಜನೆಯಲ್ಲಿ Piolt project ಎಂದು ಹೇಳಿ ಗುಂಡ್ಲುಪೇಟೆ, ಮೈಸೂರು ಮತ್ತು ಸುಳ್ಯ ತಾಲ್ಲೂಕಿನಲ್ಲಿ ಗಣಕೀಕೃತ photo cardಗಳನ್ನು ಪೂರ್ಣಗೊಳಿಸಿ ಸುಮಾರು ಎರಡು ವರ್ಷವಾಯಿತು. ಕನಿಷ್ಠ ಆ ತಾಲ್ಲೂಕು ಗಳಲ್ಲಾದರೂ ಈ photo cardಗಳನ್ನು, permanent card ಗಳನ್ನು ಕೊಡತಕ್ಕಂತಹ ಕೆಲಸ ಇವತ್ತಿನವರೆಗೂ ಆಗಿಲ್ಲ. ರಾಜ್ಯಾದ್ಯಂತ ಇಷ್ಟೆಲ್ಲಾ photography ಮಾಡಿ ಮುಗಿಸಿದ್ದರೂ ಸಹ permanent card ಅನ್ನು ಕೊಡುವ ವ್ಯವಸ್ಥೆಗೆ ಇವತ್ತಿನವರೆಗೂ ಚಾಲ್ತಿ ಕೊಟ್ಟಿಲ್ಲ. ಇದು ಏನು ಆಗುತ್ತದೆ? ನೋಡಿ ಇದಕ್ಕೆ ಕಾರಣವೇನೆಂದರೆ ನೀವು permanent card ಕೊಡದೇ ಇರುವುದರಿಂದ ಈ ಗೊಂದಲ ಹೀಗೆ ಮುಂದುವರೆಯುತ್ತದೆ. ಮತ್ತೆ ಆಗಾಗ ಆದೇಶ ಕೊಡುವುದು. ಇಲ್ಲೊಂದು ಆದೇಶವಿದೆ ಮಾನ್ಯ

ಅಧ್ಯಕ್ಷರೆ, ನೀವೇನು ಮಾಡಿದಿರಿ ಎಂದರೆ ರಾಜ್ಯದಲ್ಲಿ 11,99,700 ಅಂತ್ಯೋದಯ ಕಾರ್ಡು, 66,33,000 ಅಕ್ಷಯ ಕಾರ್ಡ್‌ಗಳು, 47,46,000 ಬಿ.ಪಿ.ಎಲ್. ಕಾರ್ಡ್ ಇವಿಷ್ಟೂ ಸೇರಿ 1,25,79,000 ಕಾರ್ಡ್‌ಗಳನ್ನು ವಿವಿಧ ಹಂತದಲ್ಲಿ ರಾಜ್ಯದಲ್ಲಿ ಕೊಟ್ಟಿದ್ದೀರಿ. ಇದು ಸಾಲದು ಎಂದು ನೆಮ್ಮದಿ ಕೇಂದ್ರಗಳ ಮುಖಾಂತರ ತಾವು 34,36,000 ಅರ್ಜಿಗಳನ್ನು ತೆಗೆದು ಕೊಂಡಿದ್ದೀರಿ. 28,44,000 ನೆಮ್ಮದಿ ಕಾರ್ಡ್‌ಗಳು ಎಂದು ಹೇಳಿ ಹೊಸ ಕಾರ್ಡ್ ಸಿಸ್ಟಮ್ ಬಂದಿದೆ. ಇದು ಏನು ಹೇಳುತ್ತದೆ ಎಂದರೆ 73ನೇ ಪ್ರಕಾರ ಯಾವುದೇ ಸರ್ಕಾರದ ಫಲಾನುಭವಿಯನ್ನು ಆಯ್ಕೆ ಮಾಡಬೇಕಾದರೆ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಬೇಕೆಂದು ಸಂವಿಧಾನವೇ ಹೇಳಿಬಿಟ್ಟಿದೆ. ಇದೇನೂ ಸರ್ಕಾರದ Circular ಅಲ್ಲ. ನೀವು 28,44,000 ಜನರಿಗೆ ನೆಮ್ಮದಿ ಕಾರ್ಡ್ ಕೊಟ್ಟಿದ್ದೀರಲ್ಲ, ಸರ್ಕಾರ ಯಾವರೀತಿ ಎಡವುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆಯಾಗಿ ಹೇಳುವುದಕ್ಕೆ ಬಯಸುವುದು. ಈಗ ಸಂವಿಧಾನಕ್ಕೆ ನಾವೆಲ್ಲರೂ ಗೌರವಿಸಬೇಕು. ಅದರ ಅಡಿಯಲ್ಲೇ ನಾವೆಲ್ಲರೂ ಕೆಲಸ ನಿರ್ವಹಿಸುತ್ತಿರುವುದು. ಯಾವುದೇ ಫಲಾನುಭವಿಯ ಆಯ್ಕೆಯಾಗಬೇಕಾದರೆ ಗ್ರಾಮ ಸಭೆಯಲ್ಲಿ ಆಗಬೇಕು. ಈಗ ನಾವು ಮನೆಗಳನ್ನು ಏಕೆ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡುತ್ತೇವೆ? ಸಂವಿಧಾನದ ಚೌಕಟ್ಟಿನಲ್ಲಿ ಅದಕ್ಕೆ ಅವಕಾಶವಿದೆ. ಅದೇ ರೀತಿ ನೀವು ಮೂರು ರೂಪಾಯಿಗೆ ಅಕ್ಕಿಯನ್ನು ಕೊಡುವಂತಹದ್ದು ಏನಿದೆ ಅಂದರೆ ಅವನು ಸರ್ಕಾರದ ಫಲಾನುಭವಿ ಯಾಗುತ್ತಾನೆ. ಅವನ ಆಯ್ಕೆಯೂ ಸಹ ಗ್ರಾಮ ಸಭೆಯಲ್ಲಿ ಆಗಬೇಕು. ನೀವು ನೆಮ್ಮದಿ ಕೇಂದ್ರದಲ್ಲಿ ಅರ್ಜಿ ತೆಗೆದುಕೊಂಡು ಒಂದು affidavit ತೆಗೆದುಕೊಂಡು ಅವರಿಗೆ ಕಾರ್ಡ್ ಕೊಟ್ಟು ಅವರಿಗೆ ಪಡಿತರ ವಿತರಣೆ ಮಾಡುತ್ತಿದ್ದೀರಲ್ಲ? ಈ ವ್ಯವಸ್ಥೆ ಕಾನೂನು ಬದ್ಧವಾಗಿದೆಯೇ ಎಂದು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇವತ್ತು ಅಂತ್ಯೋದಯ, ಅಕ್ಷಯ, ನೆಮ್ಮದಿ ಕೇಂದ್ರ ಈ ಎಲ್ಲಾ ಸೇರಿದರೆ ರಾಜ್ಯದಲ್ಲಿ ಬಿ.ಪಿ.ಎಲ್ ಕಾರ್ಡ್‌ಗಳ ಸಂಖ್ಯೆ 1,06,77,234 ಇದೆ. ಎ.ಪಿ.ಎಲ್. ಮತ್ತು ಬಿ.ಪಿ.ಎಲ್ ಎರಡೂ ಸೇರಿದರೆ 1,54,23,431 ಜನರಿಗೆ ಇವತ್ತು ಕಾರ್ಡ್ ಕೊಟ್ಟಿದ್ದೀರಿ. ನಮ್ಮ ಸರ್ವ ಕುಟುಂಬ ಸಮೀಕ್ಷೆ ಪ್ರಕಾರ 2001 census ಪ್ರಕಾರ ಇರತಕ್ಕಂತಹದ್ದು 1,02,00,000 ಕುಟುಂಬ ಅಥವಾ ನಾವು ಸರ್ವ ಕುಟುಂಬ ಸಮೀಕ್ಷೆ ಪ್ರಕಾರ ಹೋದರೂ ಸಹ 1,18,00,000 ನಮ್ಮ

ಕುಟುಂಬಗಳ ಸಂಖ್ಯೆ ಇರುವುದು. ಆದರೆ ಇವತ್ತು ನಾವು ಕಾರ್ಡ್ ವಿತರಣೆ ಮಾಡಿರುವ ಎ.ಪಿ.ಎಲ್, ಬಿ.ಪಿ.ಎಲ್. ಮತ್ತು ನೆಮ್ಮದಿ ಕೇಂದ್ರ ಎಲ್ಲ ಸೇರಿ 1,54,00,000. ಇದಕ್ಕೇನಾದರೂ ಒಂದು ಮಾನದಂಡವಿದೆಯೇ? ರಾಜ್ಯ ಸರ್ಕಾರದ planning ಏನಾದರೂ ಇದೆಯೇ? ಇದನ್ನು ಒಂದು streamlineಗೆ ತರಬೇಕು. ಏಕೆಂದರೆ ಇವತ್ತು ಕೇಂದ್ರ ಸರ್ಕಾರ ಪ್ರತಿ ಕುಟುಂಬಕ್ಕೆ 25 ಕೆ.ಜಿ. ಯಂತೆ ಮೂರು ರೂಪಾಯಿಗೆ ಅಕ್ಕಿ ಕೊಡುತ್ತೇವೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದ ಪ್ರಕಾರ ನಮ್ಮ ರಾಜ್ಯದಲ್ಲಿ 37 ಲಕ್ಷ ಬಿ.ಪಿ.ಎಲ್. ಕುಟುಂಬಗಳು ಇರುವುದು. ಅಂದರೆ ಈಗ ಜನಕ್ಕೆ ನೀವು 1,06,00,000 ಕೊಡುವುದಕ್ಕೆ ಹೋಗುವಾಗ ತಲೆಗೆ ನಾಲ್ಕು ಕೆ.ಜಿ.ಯಂತೆ unit systemನಲ್ಲಿ ಕೊಡುತ್ತಿದ್ದೀರಿ. ಕೇಂದ್ರ ಸರ್ಕಾರದ 25 ಕೆ.ಜಿ.ಯಂತೆ ಕೊಡಬೇಕು ಎಂದು ಹೇಳುತ್ತದೆ. ಒಂದು ಕುಟುಂಬಕ್ಕೆ 35 ಕೆ.ಜಿ. ಪಡಿತರ ವಿತರಣೆ ನೀವು ಮಾಡಲೇಬೇಕು ಎಂದು ಸುಪ್ರೀಮ್ ಕೋರ್ಟ್ ಆದೇಶ ಕೂಡ ಇದೆ. ಇವೆಲ್ಲ ಇರುವಾಗ ಈ ಪಡಿತರ ವಿತರಣೆಯನ್ನು ನೀವು ಮಾಡುತ್ತಿರತಕ್ಕಂತಹದ್ದು ಎಷ್ಟು ಗೊಂದಲದಲ್ಲಿದೆ? ಇದಕ್ಕೆ ಒಂದು ತಜ್ಞರ ಸಮಿತಿಯನ್ನಾದರೂ ನೇಮಿಸಿ ಸುಧಾರಣೆ ಮಾಡತಕ್ಕಂತಹ ಕಾರ್ಯಕ್ರಮವೇನಾದರೂ ಎರಡು ವರ್ಷಗಳಿಂದ ಸರ್ಕಾರ ಮಾಡಿದೆಯೇ? ಏನೇನೂ ಮಾಡದೆ ಇದನ್ನು ಗೊಂದಲದಿಂದ ಇನ್ನೂ ಗೊಂದಲಕ್ಕೆ ಹೆಚ್ಚಿಸಿಕೊಳ್ಳುವಂತಹ ವ್ಯವಸ್ಥೆ ಸರ್ಕಾರ ಮಾಡುತ್ತಿದೆ. ಸರ್ಕಾರಕ್ಕೆ ಕೊನೆಯದಾಗಿ ಒಂದು ಮಾತು ಹೇಳಬೇಕಾದರೆ ದಿನಾಂಕ: 05.08.2009 ರಲ್ಲಿ ಮಾನ್ಯ ತುಮಕೂರು ಜಿಲ್ಲಾಧಿಕಾರಿಗಳು ಒಂದು ಸಭೆಯನ್ನು ನಡೆಸುತ್ತಾರೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆ, ಉಪ ನಿರ್ದೇಶಕರು, ಆಹಾರ ಮತ್ತು ಸ್ಥಳೀಯ ಅಧಿಕಾರಿಗಳು ಇರುತ್ತಾರೆ. ಅಲ್ಲಿ ಏನು ಹೇಳುತ್ತಾರೆ ಎಂದರೆ ಒಂದು chart ಹಾಕಿ ಕೊಟ್ಟು ಬಿಟ್ಟಿದ್ದಾರೆ. ಪ್ರಥಮ ಹಂತದಲ್ಲಿ ಅಕ್ಷಯ ಯೋಜನೆಯಡಿಯಲ್ಲಿ ವಿತರಿಸಲಾದ ಬಿ.ಪಿ.ಎಲ್. ಕುಟುಂಬಗಳಲ್ಲಿ ಶೇಕಡ 20 ರಷ್ಟು, ಅಂದರೆ, ಹಿಂದೆ ಕೊಟ್ಟಿರುವಂತಹ ಕಾರ್ಡ್‌ಗಳಲ್ಲಿ 20% ನೆಮ್ಮದಿ ಕೇಂದ್ರಗಳ ಮೂಲಕ, ನೆಮ್ಮದಿ ಕೇಂದ್ರ ನಿಮ್ಮ ಒಂದು ಅಭಿಲಾಶೆಯಂತೆ ಜನರಿಗೆ ಕೊಡುವಂತಹ ಯೋಜನೆ. ನಾವು ಎಲ್ಲಾ ಕುಟುಂಬಗಳಿಗೆ ಬೇಗ ಪಡಿತರ ಚೀಟಿ ವಿತರಣೆ ಮಾಡಬೇಕೆಂದು ತರಾತುರಿಯಲ್ಲಿ ಕೊಟ್ಟಂತಹ ಕಾರ್ಡ್‌ಗಳು. ಅವುಗಳ ಬಗ್ಗೆ ಸರ್ಕಾರ ಏನು ಹೇಳುತ್ತಾರೆಂದರೆ, ನೆಮ್ಮದಿ

ಕೇಂದ್ರಗಳ ಮೂಲಕ ವಿತರಿಸಲಾದ ಬಿ.ಪಿ.ಎಲ್. ಪಡಿತರ ಚೀಟಿಗಳಲ್ಲಿ ಶೇಕಡ 80ರಷ್ಟನ್ನು ಎಲ್ಲಾ ತಾಲ್ಲೂಕುಗಳಲ್ಲಿ ಮತ್ತು ತುಮಕೂರು ನಗರ ಪ್ರದೇಶಗಳಲ್ಲಿ ಪತ್ತೆ ಮಾಡಿ ರದ್ದುಪಡಿಸಲು ಈಗಾಗಲೇ ಗುರಿ ನಿಗದಿ ಪಡಿಸಿದೆ. ಅಂದರೆ ರಾಜ್ಯ ಸರ್ಕಾರ ಏನು ನೆಮ್ಮದಿ ಕೇಂದ್ರಗಳ ಮೂಲಕ 24,00,000 ಕಾರ್ಡ್‌ಗಳನ್ನು ಕೊಟ್ಟಿದೆ ಅದರಲ್ಲಿ 80% cut ಮಾಡಿ ಎಂದು ಹೇಳಿದ್ದಾರೆ. ಇದು ನಿಜವಾಗಿಯೂ ಬಡವರ ಬಗ್ಗೆ ಕಾಳಜಿ ಇಟ್ಟುಕೊಂಡು ಕೊಟ್ಟಂತಹ ಕಾರ್ಡ್‌ಗಳೋ ಅಥವಾ ಇನ್ನೇನಾದರೂ ಒಂದು ಸಂದರ್ಭ ವನ್ನು ಪಾರು ಮಾಡಿಕೊಳ್ಳುವುದಕ್ಕೆ ವಿತರಣೆ ಮಾಡಿದಂತಹ ಕಾರ್ಡ್‌ಗಳೋ ಎನ್ನುವುದರ ಬಗ್ಗೆ ಈ ಸರ್ಕಾರದ ಕಳಕಳಿಯನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಈ ರೀತಿ ಸರ್ಕಾರ ಕಾಲಕಾಲಕ್ಕೆ ಬೇಕಾದ ರೀತಿಯಲ್ಲಿ ಆದೇಶಗಳನ್ನು ಮಾಡಿ ಜಾರಿಗೊಳಿಸಿ ಅದರ ನಂತರ ಅದನ್ನು ಮಾರ್ಪಾಡು ಮಾಡತಕ್ಕಂತಹ ಪ್ರಯತ್ನಗಳನ್ನು ಮಾಡುವುದರಿಂದ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ ಮತ್ತು ಜನರಿಗೂ ಒಂದು ರೀತಿ ಗೊಂದಲ ನಿರಂತರವಾಗಿ ಇರುವಂತಹ ವ್ಯವಸ್ಥೆ ಆಗುತ್ತದೆ. ಪಡಿತರ ಚೀಟಿ ಎಲ್ಲರಿಗೂ ಬೇಕಾದಂತಹದ್ದು. ಹಾಗಾಗಿ ಈ ವಿಚಾರದಲ್ಲಿ ಸರ್ಕಾರ ಸ್ವಲ್ಪ ಕಳಕಳಿ ಇಟ್ಟುಕೊಂಡು ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡಿದರೆ ಜನರಿಗೆ ನಾವು ನೇರವಾಗಿ ಸರ್ಕಾರದ ಸವಲತ್ತುಗಳನ್ನು ತಲುಪಿಸಬಹುದು. ಇಲ್ಲವೆಂದರೆ ಯೋಜನೆಗಳು ಬರೀ ಘೋಷಣೆಗಳಾಗಿರುತ್ತವೆಯೇ ಹೊರತು ಕೆಳಮಟ್ಟದಲ್ಲಿ ಜನರನ್ನು ತಲುಪಿಸುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಬಹಳ ದುಗುಡದಿಂದ ಹಾಗೂ ಬಹಳ ಕಳಕಳಿಯಿಂದ ಈ ಅಧಿವೇಶನದ ಉದ್ದೇಶದ ಬಗ್ಗೆ ಹೇಳಿದ್ದಾರೆ. ನಾನು ಈಗ ಏನು ಎರಡು ಮೂರು ಇಲಾಖೆಗಳ ಬಗ್ಗೆ ಸಲಹೆ ರೂಪದಲ್ಲಿ ಹೇಳಿದ್ದೇನೆ ಅದನ್ನು ಕಾರ್ಯರೂಪದಲ್ಲಿ ತರುವುದಾದರೆ ಸರ್ಕಾರಕ್ಕೆ ಮುಂದಿನ ದಿನಗಳಲ್ಲಿ ಒಳ್ಳೆಯ ಹೆಸರು ಬರುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಜನರಿಗೂ ಕೂಡ ಒಂದು ನೆಮ್ಮದಿಯ ವಾತಾವರಣವಾಗುತ್ತದೆ. ಇಲ್ಲದಿದ್ದರೆ ಸರ್ಕಾರ ಹೇಳುವುದು ಒಂದಾದರೆ ಜನರ ಪರಿಸ್ಥಿತಿ ಒಂದಾಗುತ್ತದೆ. ಆ ದೃಷ್ಟಿಯಲ್ಲಿ ಇದನ್ನು ಕಾರ್ಯರೂಪಕ್ಕೆ ತರಬೇಕು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು : ಈಗ ಒಂದು ಪ್ರಕಟಣೆ ಇದೆ. ಈಗ ಏನು ಚರ್ಚೆ ನಡೆಯುತ್ತಿದೆ, ಅದಕ್ಕೆ ಒಂದು time Limitation fix ಮಾಡುತ್ತಿದ್ದೇನೆ. ಎಲ್ಲರೂ ಸಹಕಾರ ಕೊಡಬೇಕು ಎಂದು ಬೆಳಿಗ್ಗೆ ಮನವಿ ಮಾಡಿದೆ. ಈಗ ಸಮಯ ನಿಗದಿ ಮಾಡಿರುವುದನ್ನು ಎಲ್ಲರಿಗೂ ಹೇಳಿ ಬಿಡುತ್ತೇನೆ. ನಿನ್ನೆಯಿಂದ ಏನು ಚರ್ಚೆ ಪ್ರಾರಂಭವಾಗಿದೆ, ನಿನ್ನೆಯಿಂದ ಇವತ್ತಿನವರೆಗೂ ಮಾತನಾಡಿದವರನ್ನು ಸೇರಿಸಿಕೊಂಡು ಸಮಯವನ್ನು calculation ಮಾಡಿದ್ದೇನೆ.

ದಿನಾಂಕ: 09.09.2009 ರಿಂದ ಸದನದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಕುರಿತು ನಡೆಯುತ್ತಿರುವ ಚರ್ಚೆಗೆ ವಿವಿಧ ಪಕ್ಷಗಳಿಗೆ ಈ ಕೆಳಕಂಡಂತೆ ಸಮಯಾವಕಾಶವನ್ನು ನಿಗದಿಪಡಿಸಿದೆ. ಭಾರತೀಯ ಜನತಾ ಪಕ್ಷಕ್ಕೆ ಸಂಖ್ಯೆ ಪ್ರಕಾರ ಏಳೂವರೆ ಗಂಟೆ ಸಮಯಾವಕಾಶವನ್ನು ಕೊಡಬೇಕು. ಅವರಿಗೆ ಆರು ಗಂಟೆ ಸಮಯಾವಕಾಶವನ್ನು ನಿಗದಿ ಮಾಡಿದ್ದೇನೆ. ಕಾಂಗ್ರೆಸ್ ಪಕ್ಷಕ್ಕೆ ಐದು ಗಂಟೆ ಕೊಡಬೇಕಾಗಿತ್ತು, ಅವರಿಗೆ ಆರು ಗಂಟೆ ಸಮಯಾವಕಾಶವನ್ನು ನಿಗದಿ ಮಾಡಿದ್ದೇನೆ. ಜೆಡಿ(ಎಸ್) ಪಕ್ಷಕ್ಕೆ ಎರಡು ಗಂಟೆ ಇತ್ತು, ಅವರಿಗೆ ಎರಡೂವರೆ ಗಂಟೆ ಸಮಯಾವಕಾಶವನ್ನು ಕೊಟ್ಟಿದ್ದೇನೆ. ಎಲ್ಲಾ ಒಟ್ಟು ಹದಿನಾಲ್ಕೂವರೆ ಗಂಟೆ ಆಗುತ್ತದೆ. ನಾಳೆ ಮಧ್ಯಾಹ್ನ ಒಂದು ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದು ಸೇರಿ ಎರಡು ಗಂಟೆಯವರೆಗೆ ಎಂದು ಲೆಕ್ಕಾಚಾರ ಮಾಡಿದರೆ ಇಷ್ಟು ಅವಧಿ ಬೇಕಾಗುತ್ತದೆ ಎಂದು ನಾನು ನಿಗದಿ ಮಾಡಿದ್ದೇನೆ. ದಯವಿಟ್ಟು ಎಲ್ಲಾ ಸದಸ್ಯರು ಇದಕ್ಕೆ ಸಹಕಾರ ಕೊಡಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈಗ ನಾವು ಚರ್ಚೆಯನ್ನು ಮಧ್ಯಾಹ್ನ ಮುಂದುವರೆಸೋಣ. ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 2.00 ಗಂಟೆಗೆ ಮುಕ್ತಾಯಗೊಂಡು ಮತ್ತೆ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3 ಗಂಟೆ 23 ನಿಮಿಷಕ್ಕೆ ಸಮಾವೇಶಗೊಂಡಿತು.)

(ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು.)

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಚೈನಾ ಪ್ರವಾಸ ಮಾಡಿದ ಮೇಲೆ ಅವರಲ್ಲಿ ಸ್ಫೂರ್ತಿ ಮೂಡಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಉತ್ತಮವಾದ ಸುಮಾರು 76 subjcet ಗಳನ್ನು ತಂದಿದ್ದಾರೆ. ಇದರ ಜೊತೆಗೆ, ವಿಶೇಷವಾಗಿ ಈ ಬಾರಿ ನಾವೂ ಸಹ ವಿದೇಶ ಪ್ರವಾಸ ಮಾಡಲಿಕ್ಕೆ ತಾವು ಅನುಕೂಲ ಮಾಡಿಕೊಟ್ಟು ಅಲ್ಲಿನ ಆಡಳಿತ, ಅಲ್ಲಿನ ಕಾನೂನಿನ ಬಗ್ಗೆ, ಅಲ್ಲಿನ ಪರಿಸರ ಮತ್ತು ಬೆಳವಣಿಗೆ ಬಗ್ಗೆ ತಿಳಿಯಲು ಶಾಸಕರೆಲ್ಲರಿಗೂ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೆ ನಾನು ವೈಯಕ್ತಿಕವಾಗಿ ತಮಗೆ ಮತ್ತು ಮಾನ್ಯ ಮುಖ್ಯಮಂತ್ರಿಯವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. 76 ವಿಷಯಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಪ್ರಸ್ತಾಪಮಾಡಿದ್ದಾರೆ. ಇದು ಬಹಳ ಅರ್ಥಪೂರ್ವವಾದ ವಿಚಾರಧಾರೆ ಯಾಗಿದೆ. ವಿರೋಧ ಪಕ್ಷದವರಾದ ನಮಗೆ ಇದರ ಬಗ್ಗೆ ಮೆಚ್ಚುಗೆ ಇದೆ. ಈ 76 ಅಂಶಗಳೂ ಸಹ ರೈತರ ಪರವಾಗಿ, ಗ್ರಾಮೀಣ ಜನತೆಯ ಪರವಾಗಿ ಇರುವುದರಿಂದ ಇದನ್ನು implement ಮಾಡುವುದಕ್ಕೆ ನಮ್ಮದೇನೂ ವಿರೋಧವಿಲ್ಲ. ನಾವೆಲ್ಲ ಇದರ ಪರ ಇದ್ದೇವೆ. ಇಲ್ಲಿ ನನ್ನದೊಂದು ಅನಿಸಿಕೆ ಏನೆಂದರೆ, ಈ ಚರ್ಚೆಯ ಪೂರ್ವಭಾವಿಯಾಗಿ ನಮ್ಮ ರಾಜ್ಯದ ಕೃಷಿ ಕಮಿಷನ್‌ನ ಅಧ್ಯಕ್ಷರು ಮತ್ತು ಅದರ ಸದಸ್ಯರು ಸುದೀರ್ಘವಾಗಿ ಚರ್ಚೆ ಮಾಡಿ ಪ್ರತಿಯೊಂದು subjcet ನ ಆಗುಹೋಗುಗಳ ಬಗ್ಗೆ, ಅದರ ಆರ್ಥಿಕ ಪರಿಸ್ಥಿತಿಯ ಬಗ್ಗೆ, ಮುಂದೇನು ಮಾಡಬೇಕೆನ್ನುವುದರ ಬಗ್ಗೆ ಸಮಗ್ರವಾದ ವರದಿಯನ್ನು ತಯಾರು ಮಾಡಿ ಈ ಶಾಸನ ಸಭೆಯ ಮುಂದೆ ಮಂಡಿಸಿದ್ದರೆ ಅದು ಅರ್ಥಪೂರ್ಣವಾದ ಚರ್ಚೆಯಾಗುತ್ತಿತ್ತು. ಈ ವಿಷಯಗಳನ್ನು ಮಂಡನೆ ಮಾಡುವುದರಿಂದ ಇದು ಎಲ್ಲರಿಗೂ ಸಹ ಮಾನಸಿಕವಾಗಿ ಗೊತ್ತಿರುವ ವಿಚಾರವಾಗಿದೆ. ಅದರ ಜೊತೆಗೆ, ಯಾವ್ಯಾವ progamme ಗಳನ್ನು ಜಾರಿ ಮಾಡುತ್ತೇವೆ ಎನ್ನುವ ಬಗ್ಗೆ ಸರ್ಕಾರದಿಂದ ಯಾವುದೇ ಮಾಹಿತಿ ಇಲ್ಲ. ಇದರ ಬಗ್ಗೆ ಬಜೆಟ್ ಚರ್ಚೆಯ ಸಂದರ್ಭದಲ್ಲಿ subject-wise ಮಾತನಾಡಲಿಕ್ಕೆ, ಇಲಾಖಾವಾರು ಚರ್ಚೆ ಮಾಡಲಿಕ್ಕೆ ಅವಕಾಶ ಸಿಗಲಿಲ್ಲ. ಆದರೆ, ಇವತ್ತಿನ ದಿವಸ 76 subjcetsನ್ನು implement ಮಾಡಲಿಕ್ಕೆ ಸರ್ಕಾರ ಯಾವುದಾದರೂ

additional budget provide ಮಾಡಿರುವುದು ಕಾಣುತ್ತಿಲ್ಲ. ಒಂದು ಕಡೆ ಬಜೆಟ್ ಅನ್ನೂ provide ಮಾಡಿಲ್ಲ, ಅದರ ಜೊತೆಗೆ ಯಾವುದೇ ವರದಿ ಸಹ ಇಲ್ಲ. ಬಹಶಃ ವರದಿಯನ್ನಾದರೂ ಇಟ್ಟು ಅದನ್ನು ನಮಗೆ ಕೊಟ್ಟಿದ್ದರೆ ನಾವು ಸುದೀರ್ಘವಾಗಿ ಚರ್ಚೆ ಮಾಡಿ ಅದರ ಬಗ್ಗೆ ವಿಷಯವನ್ನು ಮನವರಿಕೆ ಮಾಡಿಕೊಡಬಹುದಿತ್ತು. ಕೇವಲ ಈ subjcet ಅನ್ನು ನಮ್ಮ ಮುಂದೆ ಕೊಟ್ಟಿದ್ದಾರೆ. ಮಾಜಿ ರಾಷ್ಟ್ರಪತಿಗಳಾದ ಅಬ್ದುಲ್ ಕಲಾಂರವರು ಕೊಟ್ಟಿರತಕ್ಕಂಥ ಅನೇಕ ಕಾರ್ಯಕ್ರಮಗಳು, ಸಲಹೆಗಳು ಬಹಳ ಉಪಯುಕ್ತವಾಗಿವೆ. ಅವುಗಳನ್ನು implement ಮಾಡಲಿಕ್ಕೆ ನಮಗೆ ಸಂತೋಷವಿದೆ. ಅದನ್ನು implement ಮಾಡಲಿಕ್ಕೆ ಸರ್ಕಾರ ಮುಂದೆ ಬರಬೇಕಾಗಿದೆ. 76 ವಿಷಯಗಳನ್ನು ಸರ್ಕಾರದವರು ಯಾವ ರೀತಿಯಾಗಿ implement ಮಾಡುತ್ತೀರಿ? Sources of budget ಏನಿದೆ? ಆರ್ಥಿಕ ವ್ಯವಸ್ಥೆ ಏನಿದೆ? ಆ programmeಗಳ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದರೆ ಬಹಳ ಚೆನ್ನಾಗಿರುತ್ತಿತ್ತು ಅಥವಾ additional budget ಆದರೂ ಕೊಟ್ಟಿದ್ದರೆ ಚರ್ಚೆ ಮಾಡಲಿಕ್ಕೆ ಅನುಕೂಲವಾಗುತ್ತಿತ್ತು. ಗ್ರಾಮಗಳನ್ನು improve ಮಾಡಬೇಕು, ಅದಕ್ಕೆ ಎಲ್ಲಾ ಸವಲತ್ತುಗಳನ್ನು ಕೊಡಬೇಕೆನ್ನುವುದು ಬಹಳ ಉಪಯುಕ್ತವಾದ ಚಿಂತನೆಯಾಗಿದೆ. ಅದಕ್ಕೆ ಬಜೆಟ್ ಏನು provide ಮಾಡಿದ್ದೀರಿ ಎನ್ನುವುದ ಮೂಲಭೂತವಾದ ಪ್ರಶ್ನೆಯಾಗಿದೆ. ಬಜೆಟ್ ಇಲ್ಲದೆ, ಕಾರ್ಯಕ್ರಮ ಇಲ್ಲದೆಯೇ ಕೇವಲ ನಾವು ಮೂರು ದಿವಸ ಚರ್ಚೆ ಮಾಡಿ ಹೋಗುವುದರಲ್ಲಿ ಅರ್ಥವಿಲ್ಲ. ಬಹಳ ಮುಖ್ಯವಾಗಿ ನಾನೊಂದು ಸಲಹೆಯನ್ನು ಕೊಡಲಿಕ್ಕೆ ಬಯಸುತ್ತೇನೆ, ಕೃಷಿ ಕಮಿಷನ್‌ನಿಂದ ಸಮಗ್ರ ವರದಿಯನ್ನು ತಯಾರು ಮಾಡಿ, ಇದರ ಆಗುಹೋಗುಗಳ ಬಗ್ಗೆ ಒಂದು ವರದಿಯನ್ನು ತಯಾರು ಮಾಡಿ, ನಂತರ ಈ ಸಭೆಯ ಮುಂದೆ ಅದನ್ನು ಮಂಡಿಸಿ ಚರ್ಚೆಗೆ ಅವಕಾಶ ಮಾಡುವುದು ಬಹಳ ಉತ್ತಮವಾದ ವಿಚಾರವಾಗುತ್ತದೆ. ಇನ್ನು Education ಬಗ್ಗೆ ಹೇಳುವುದಾದರೆ, ಕಳೆದ ಬಾರಿ ಸಚಿವರಾದ ಕಾಗೇರಿಯವರು ಮಾತನಾಡಿದ ಸಂದರ್ಭದಲ್ಲಿ ಕೊಠಡಿಗಳ ಕೊರತೆ ಬಗ್ಗೆ ಎಲ್ಲಾ ಶಾಸಕರು ಸಲಹೆಯನ್ನು ನೀಡಿದರು. ಶಾಲೆಯ ಸಮಯವನ್ನು ಬದಲಾವಣೆ ಮಾಡಿಕೊಳ್ಳಿ ಎನ್ನುವ ಸಲಹೆಯನ್ನು ಮಾನ್ಯ ಮುಖ್ಯಮಂತ್ರಿಯವರು ಹಾಗೂ ಶಿಕ್ಷಣ ಸಚಿವರು ಕೊಟ್ಟಿದ್ದಾರೆ. ಅಂಥ

ಸಂದರ್ಭದಲ್ಲಿ ನಾವು education ಬಗ್ಗೆ ಚರ್ಚೆ ಮಾಡುವುದಕ್ಕೆ ಸಾಧ್ಯವೇ? ಸರ್ಕಾರ ಮೊದಲು ಮಕ್ಕಳಿಗೆ ಕೊಠಡಿ ಒದಗಿಸಲಿ. ನಂತರ, ಅದರ ಬಗ್ಗೆ ಚರ್ಚೆ ಮಾಡಿದರೆ ಅನುಕೂಲ. ಇವರು ಹಣವನ್ನು provide ಮಾಡದೆ, ಬಜೆಟ್‌ನಲ್ಲಿ ಅವಕಾಶ ಮಾಡದೆ, ಶಾಲಾ ಕೊಠಡಿ ಕೊಡದೆ ಕಾರ್ಯಕ್ರಮದ ಬಗ್ಗೆ ನಾವು ಚರ್ಚೆ ಮಾಡುತ್ತೇವೆ, ನಿಮ್ಮ ಸಲಹೆ ಕೊಡಿ ಎಂದರೆ, ಇದು ಎಂಥ ಚರ್ಚೆ ಎನ್ನುವುದನ್ನು ನಾವು ಚಿಂತನೆ ಮಾಡಬೇಕಾಗುತ್ತದೆ. ದಯಮಾಡಿ, ಅದಕ್ಕೆ ಸಾಕಷ್ಟು ಹಣವನ್ನು ಸರ್ಕಾರ ಕೊಡಬೇಕು. ಮೂಲಭೂತವಾಗಿ ಪ್ರಾಥಮಿಕ ಶಾಲೆ, High School ಗಳಿಗೆ ನಾವು ಹೆಚ್ಚು ಒತ್ತನ್ನು ಕೊಟ್ಟಾಗ ಮಾತ್ರ ಅದು ಒಂದು ಅರ್ಥಪೂರ್ಣವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. Agriculture Coommissionನ ವರದಿಯನ್ನು ಪಡೆಯಬೇಕು. ಕಳೆದ ಬಾರಿ ವಿಪರ್ಯಾಸವಾಗಿದೆ. ಇಡೀ ಸದನ ವಿರೋಧ ಮಾಡಿತು. Agriculture Universityಗೆ IAS ಅಧಿಕಾರಿಗಳನ್ನು Director ಮಾಡಿ Board of Directorsಗೆ appaoint ಮಾಡುವುದಾದರೆ ನಾವು ಹೇಗೆ Agriculture ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ? Agriculture Universityಗೆ Director ಅನ್ನಾಗಿ ಯಾರನ್ನು ನೇಮಿಸಬೇಕೆಂಬ ಬಗ್ಗೆ ನಾವು ಚಿಂತನೆ ಮಾಡದೆ, ಅಧಿಕಾರಿಗಳನ್ನು ನೇಮಿಸಿ, agriculture ಬಗ್ಗೆ ಚರ್ಚೆ ಮಾಡಿ ಎಂದರೆ ನಾವೇನು ಚರ್ಚೆ ಮಾಡುವುದಕ್ಕಾಗುವುದೆ? ಬಹಳ ಮುಖ್ಯವಾಗಿ ಇವತ್ತಿನ ದಿವಸ ನಮ್ಮ ರೈತಾಪಿ ವರ್ಗ ಸಂಕಷ್ಟದಲ್ಲಿದೆ. ಅವರು ಬೆಳೆದ ಬೆಳೆಗೆ ನಾವು ಉತ್ತಮ ಬೆಲೆಯನ್ನು ಕೊಡಬೇಕು. ನಾವು Horticulture ಬಗ್ಗೆ ಮಾತನಾಡುತ್ತೇವೆ. ಯಾವುದೇ bus stand ಗೆ ಹೋಗಿ ನಿಂತುಕೊಂಡಾಗ, ರಸ್ತೆ ಬದಿಯಲ್ಲಿ ನಿಂತುಕೊಂಡಾಗ ಒಬ್ಬಳು ಹೆಣ್ಣುಮಗಳು ತಲೆಮೇಲೆ ಬಾಳೆಹಣ್ಣು, ನೇರಳೆ ಹಣ್ಣು, ಮಾವಿನ ಹಣ್ಣಿನ ಬುಟ್ಟಿ ಹೊತ್ತುಕೊಂಡು ಮಾರುವ ಸಂದರ್ಭದಲ್ಲಿ ನಾವಿಲ್ಲ ಆ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಇದಕ್ಕೆ ಪರಿಹಾರವೇನು? ಇದಕ್ಕೆ ಪರಿಹಾರ ಬಹಳ ಮುಖ್ಯ. ಹಾಗಾಗಿ, ಸರ್ಕಾರ ಕೂಡಲೆ ಮುಂದೆ ಬಂದು Horticulture, Agriculture ಇರಬಹುದು, ರೈತ ಬೆಳೆದ ಬೆಳೆಗೆ ನಿಖರವಾದ ಬೆಲೆಯನ್ನು ಮೊದಲು fix ಮಾಡಿ ನಾವು ಅವರಿಗೆ ಸ್ಪಂದಿಸಿದರೆ ಅನುಕೂಲವಾಗುತ್ತದೆ. ಇಲ್ಲವೆಂದರೆ ಇದು ಕೇವಲ ಚರ್ಚೆಯಾಗಿ

ಉಳಿಯುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸಾವಯವ ಕೃಷಿ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಒತ್ತು ಕೊಟ್ಟಿದ್ದಾರೆ. ಆದರೆ, ನನ್ನ ಕ್ಷೇತ್ರದಲ್ಲಿ ಆ ರೀತಿಯ ರೈತರು ಯಾರನ್ನೂ ನಾನು ನೋಡಿಲ್ಲ. ಯಾರೋ ಒಬ್ಬ ಬ್ಯಾಗ್‌ನಲ್ಲಿ file ತಗುಲಿಹಾಕಿಕೊಂಡು ಬರುತ್ತಾನೆ, ತಿಂಗಳಿಗೆ ಸಂಬಳ ಬರುತ್ತದೆ, ಅದನ್ನು ತೆಗೆದುಕೊಂಡು ಹೋಗುತ್ತಾನೆ.

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಕೃಷಿ ಮಂತ್ರಿ, ಮುಖ್ಯಮಂತ್ರಿ ಇಲ್ಲ. ಕೃಷಿ ಇಲಾಖೆಯ ಕಾರ್ಯದರ್ಶಿ ಇಲ್ಲ. ನಾವು ಯಾರಿಗೆ ಹೇಳಬೇಕು?

ಅಧ್ಯಕ್ಷರು : ಸದನದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಿದ್ದಾರೆ.

ಶ್ರೀ ಎಂ.ಟಿ. ಕೃಷ್ಣಪ್ಪ : ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಯವರು ಈ ಸಭೆಯಲ್ಲಿ ಇರಬೇಕು.

ಅಧ್ಯಕ್ಷರು : Council ನಲ್ಲಿ ಇದೇ ಚರ್ಚೆ ನಡೆಯುತ್ತಿದೆ.

ಶ್ರೀ ಎಂ.ಟಿ. ಕೃಷ್ಣಪ್ಪ : ಬಹಳ ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಯವರು ಈ ಸಭೆಯಲ್ಲಿ ಇದ್ದರೆ ಉತ್ತಮ. ಅವರೇ Finance Minister ಸಹ ಆಗಿರುವುದರಿಂದ ಅವರು ಈ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಅವರಿಲ್ಲಿದ್ದರೆ ಒಳ್ಳೆಯದು. ಇವತ್ತು ನೀರಿನ ಬಗ್ಗೆ ಬಹಳಷ್ಟು ಮಾತನಾಡುತ್ತಿದ್ದೇವೆ. Minor Irrigation ಸಚಿವರಾದ ಮಾನ್ಯ ಗೋವಿಂದ ಕಾರಜೋಳರವರು ಇದ್ದಾರೆ. ಇತ್ತೀಚೆಗೆ ಅಪ್ಪಿತಪ್ಪಿ ಕೆರೆ ತುಂಬಿದರೆ ಮೂರು ತಿಂಗಳಲ್ಲಿ ಒಣಗುತ್ತದೆ. ಅದಕ್ಕೆ ಕಾರಣ ಅನೇಕ ಕೆರೆಗಳು silt ಆಗಿ ತುಂಬಿಕೊಂಡಿವೆ. ಅದ್ದನ್ನು de-silt ಮಾಡುವುದರಿಂದ ರೈತರಿಗೆ ಅನುಕೂಲವಾಗುತ್ತದೆ. ಕೊನೆಯ ಪಕ್ಷ ಒಂದು ವರ್ಷ ಕಾಲ ನೀರು ನಿಲ್ಲಲಿಕ್ಕೆ ಅನುಕೂಲವಾಗುತ್ತದೆ. ಅದರ ಬಗ್ಗೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಅದರ ಬಗ್ಗೆ ಸಹ ಸರ್ಕಾರ ಸಂಪೂರ್ಣ ಚಿಂತನೆ ಮಾಡಬೇಕಾಗುತ್ತದೆ. ಇಲ್ಲಿ Irrigation Minister ರವರು ಇಲ್ಲ. ನಮ್ಮ ದಕ್ಷಿಣ ಕರ್ನಾಟಕದ ಕಾವೇರಿ ನೀರಾವರಿ ನಿಗಮ ನಿಶ್ಯಬ್ಧವಾಗಿದೆ. ಏನೇನೂ ಕೆಲಸ ನಡೆಯುತ್ತಿಲ್ಲ. ಹತ್ತು ವರ್ಷಗಳಿಂದ ನೀರು ಬಿಡುತ್ತಿದ್ದಾರೆ. ತುಂಬುತ್ತಿರುತ್ತದೆ. ಅವುಗಳೆಲ್ಲ ಮುಚ್ಚಿಕೊಂಡಿವೆ. ಆದರೂ ಸಹ ಕೆಲಸ ನಡೆಯುತ್ತಿಲ್ಲ. ಹಾಗಾಗಿ ದಯವಿಟ್ಟು ನೀರಾವರಿಗೆ ಹೆಚ್ಚು ಆದ್ಯತೆ ಕೊಡಬೇಕು. ಇವತ್ತು ನಾವು ಚೀನ ದೇಶದ ಬಗ್ಗೆ ಹೊರ ರಾಷ್ಟ್ರದ ಬಗ್ಗೆ ನಾವು ಪ್ರಶಂಸೆ ಮಾಡುತ್ತೇವೆ. ರೈತರಿಗೆ ನಾವೇನು

ಮಾಡಿದ್ದೇವೆ? ಕೇವಲ ಭಾಷಣ ಮಾಡಿ ಮರೆತು ಹೋಗುವುದೇ? ನಮ್ಮ ಕಾರ್ಯಕ್ರಮ ಏನು ಎನ್ನುವ ಬಗ್ಗೆ ಸಹ ಚಿಂತನೆ ಮಾಡಬೇಕಾಗುತ್ತದೆ. ಕೆರೆ de-silt ಮಾಡುವುದು, Canal de-silt ಮಾಡುವುದನ್ನು ಕೂಡಲೆ ಕೈಗೆತ್ತಿಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಬರದ ಬಗ್ಗೆ ಈಗಾಗಲೇ ವಿರೋಧ ಪಕ್ಷದ ನಾಯಕರು ಸೋಮವಾರ ಮಾತನಾಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ನಾವು ಭಾಗವಹಿಸುತ್ತೇವೆ. ಇಡೀ ತುಮಕೂರು ಜಿಲ್ಲೆಯಲ್ಲಿ ಸುಮಾರು 7–8 ತಾಲ್ಲೂಕುಗಳನ್ನು ಬರಪೀಡಿತ ಎಂದು declare ಮಾಡಿ ತುರುವೇಕೆರೆ, ಗುಬ್ಬಿಯನ್ನು ಬಿಟ್ಟಿರುವ ಔಚಿತ್ಯವೇನು? ಸರ್ಕಾರದಲ್ಲಿ ಏಕೆ ಈ ತಾರತಮ್ಯ? ನನ್ನ ಕ್ಷೇತ್ರದಲ್ಲಿ 59 ಸಾವಿರ ಹೆಕ್ಟೇರ್ ಬಿತ್ತನೆ ಆಗಬೇಕಾಗಿತ್ತು. ಆದರೆ, 26 ಸಾವಿರ ಹೆಕ್ಟೇರ್ ಮಾತ್ರ ಬಿತ್ತನೆಯಾಗಿದೆ. ನಮಗೇಕೆ ಈ ತಾರತಮ್ಯ ಎನ್ನುವುದನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ಅರ್ಥಮಾಡಿಕೊಂಡು, ಕೂಡಲೆ ಪರ–ವಿರೋಧ ಇರಲಿ, ಅಲ್ಲಿ ವಾಸ ಮಾಡುತ್ತಿರುವ ರೈತರು ಎಲ್ಲಾ ಪಕ್ಷದವರೂ ಇದ್ದಾರೆ, ತುರುವೇಕೆರೆ, ಗುಬ್ಬಿ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಸುವರ್ಣ ಗ್ರಾಮದ ಬಗ್ಗೆ ಹೇಳುವುದಾದರೆ, ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ತಾವೂ ಸಹ ಕಂದಾಯ ಸಚಿವರಾಗಿದ್ದಾಗ ಸುವರ್ಣ ಗ್ರಾಮ ಎನ್ನುವ ಯೋಜನೆಯನ್ನು ಜಾರಿಗೆ ತರಲಾಗಿತ್ತು. ಮೊದಲನೇ ಹಂತದಲ್ಲಿ ಹಣ ಬಿಡುಗಡೆಯಾಗಿತ್ತು. 25–30% ನಷ್ಟು ರಸ್ತೆ ಚರಂಡಿ ಕೆಲಸವಾಗಿದೆ. ತದನಂತರ ಯಾವುದೇ ಹಣ ಬಿಡುಗಡೆಯಾಗಿಲ್ಲ. ಮತ್ತೆ ಈ ಸರ್ಕಾರದಲ್ಲೂ ಸಹ ಸುವರ್ಣ ಗ್ರಾಮ ಕೊಟ್ಟಿದ್ದಾರೆ, ಆದರೆ ಹಣ ಬಿಡುಗೆಡಯಾಗಿಲ್ಲ. ಕೇವಲ scheme ಘೋಷಣೆ ಮಾಡಿಕೊಂಡು ಹೋದರೆ ಆಗುವುದಿಲ್ಲ. ಘೋಷಣೆ ಮಾಡಿದ scheme ಸಂಪೂರ್ಣವಾಗಿ, ನಮ್ಮೆಲ್ಲರ ಪರಿಕಲ್ಪನೆ ಏನಿದೆ ಅದು, ಸಮಗ್ರವಾಗಿ ಜಾರಿಯಾಗಬೇಕಾದರೆ ಅದಕ್ಕೆ ಹಣ ಕೊಡಬೇಕು. ಕೂಡಲೆ ಸರ್ಕಾರ ಅದರ ಬಗ್ಗೆ ಗಮನಹರಿಸಬೇಕು. ಇನ್ನೂ ಅನೇಕ ಸಮಸ್ಯೆಗಳಿವೆ. ಗ್ರಾಮ ಪಂಚಾಯಿತಿಯವರು ರಾಜ್ಯದಲ್ಲಿ strike ಮಾಡಿದರು. ಹಳ್ಳಿಯಿಂದ ಪಟ್ಟಣಕ್ಕೆ ಬರಬಾರದೆಂದು ನಾನು ಒಂದು ಕಡೆ ಹೇಳುತ್ತೇವೆ. ಅದಕ್ಕೆ ಕಡಿವಾಣ ಹಾಕಬೇಕು, ಅನೇಕ schemes ಅನ್ನು ತರಬೇಕೆನ್ನುವುದು ಸರ್ಕಾರದ ಮತ್ತು ಎಲ್ಲರ ಚಿಂತನೆಯಾಗಿದೆ. ಆದರೆ,

ಗ್ರಾಮ ಪಂಚಾಯಿತಿಯಲ್ಲಿ computer ಬಲ್ಲ ಒಂದು ಸಣ್ಣ ಹುದ್ದೆಯನ್ನು ಸಹ ತುಂಬಲು Keonicsಗೆ ಕೊಡುವುದಾದರೆ ಆ ಗ್ರಾಮ ಪಂಚಾಯಿತಿಯ ಮೌಲ್ಯವೇನಿದೆ? ಗ್ರಾಮ ಪಂಚಾಯಿತಿಯ ಚಿಂತನೆ ಏನಿದೆ? ಗ್ರಾಮ ಪಂಚಾಯಿತಿಯಲ್ಲಿ ನಮಗೆ ಕೆಲಸವೇನಿದೆ? ನಮ್ಮ concept ಏನಿದೆ? ಹಳ್ಳಿಯಿಂದ ಬೆಂಗಳೂರಿಗೆ ಬರಬಾರದೆಂಬ concept ಗೆ ಏನಾದರೂ ಬೆಲೆ ಇದೆಯೇ? ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲಿಯೇ ಇದ್ದಾರೆ. ನನ್ನ ವಿನಂತಿ ಇಷ್ಟೆ, ದಯವಿಟ್ಟು ಸ್ಥಳೀಯರಿಗೆ ಅವಕಾಶ ಮಾಡಿಕೊಡಿ. SSLC, PUC ಓದಿದ, computer ಬಲ್ಲ, ಆಯಾ ಪಂಚಾಯಿತಿಯ ವ್ಯಾಪ್ತಿಗೆ ಬರುವವರನ್ನು appoint ಮಾಡಿಕೊಳ್ಳುವುದರಿಂದ ಬಹುಶಃ ಅಲ್ಲಿ ಎಲ್ಲರ ಸಂಬಂಧ ಇರುತ್ತದೆ, ಕೆಲಸ easy ಆಗಿ ಆಗತ್ತದೆ. ಅದರ ಬದಲು Keonics companyಗೆ ಕೊಟ್ಟರೆ ಅವರು ಮಾಡಿದ ತಪ್ಪನ್ನು ತಿದ್ದಿಕೊಳ್ಳುವುದಕ್ಕಾಗುವುದಿಲ್ಲ. ಉದಾಹರಣೆಗೆ, ತಾಲ್ಲೂಕುವಾರು ಖಾತೆ ತಿದ್ದುಪಡಿಯನ್ನು ತೆಗೆದುಕೊಂಡಿರುವ scheme ನಲ್ಲಿ ನನ್ನ ತಾಲ್ಲೂಕಿನಲ್ಲಿ 1956 ಖಾತೆ ತಿದ್ದುಪಡಿಯಾಗಬೇಕಾಗಿತ್ತು. ಅದು ಸುಮಾರು 6 ತಿಂಗಳಿನಿಂದ ಪೆಂಡಿಂಗ್ ಇದೆ. ಇದನ್ನು ಮಾಡಲು ಯಾವುದೋ ಒಂದು private company ಗೆ ಕೊಟ್ಟಿದ್ದಾರೆ. ಅವರು ಬಂದು ಅದನ್ನು ಸರಿಮಾಡಿಕೊಡುತ್ತಿಲ್ಲ. ಹೀಗಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿರುವ ಯಾವುದೇ ಹುದ್ದೆಯನ್ನು ಆಯಾ ಗ್ರಾಮ ಪಂಚಾಯಿತಿಯಲ್ಲಿಯೇ ಇರುವ ಗ್ರಾಮೀಣ ಜನರಿಗೇ ಕೊಡಬೇಕೆಂದು ಹೇಳುತ್ತೇನೆ. ಇತ್ತೀಚೆಗೆ ಗ್ರಾಮ ಪಂಚಾಯಿತಿ Secretary ಹುದ್ದೆ ತುಂಬಲು exam ಮಾಡಿದ್ದಾರೆ. ಆ ಹುದ್ದೆಗಳನ್ನು ಯಾವತ್ತು ತುಂಬುತ್ತಾರೋ ಗೊತ್ತಿಲ್ಲ. ಎಲ್ಲಾ Secretaryಗಳು ಸಹ bill collector ನಿಂದ promote ಆಗುವವರು. ನಮ್ಮ RDPR Secretaryಯವರು ಇಲ್ಲಿದ್ದಾರೆ. ಮನೆ ಹಂಚಿಕೆ ವಿಷಯದಲ್ಲಿ ಸುಮಾರು ಇಬ್ಬರು ಮೂವರು ಗ್ರಾಮ ಪಂಚಾಯಿತಿ Secretary ಗಳನ್ನು suspend ಮಾಡಿದ್ದಾರೆ. Bill Collector SSLC or PUC pass ಆಗಿರುತ್ತಾನೆ. ಅಂಥವನಿಗೆ promotion ಕೊಟ್ಟು ಅಧಿಕಾರ ಕೊಟ್ಟರೆ ಅವನು ಏನು ಕೆಲಸ ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತದೆ? ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಸನ್ಮಾನ್ಯ ಮುಖ್ಯಮಂತ್ರಿಯವರು ಏತ

ನೀರಾವರಿ ಮೂಲಕ ರೈತರಿಗೆ ನೀರು ಕೊಡಬೇಕು, ಸರ್ಕಾರ ರೈತರ ಪರವಾಗಿದೆ ಎಂದು ಹೇಳಿಕೊಳ್ಳಬೇಕಾದರೆ ಮೊದಲು ರೈತರಿಗೆ ನೀರು ಕೊಡಬೇಕಾಗುತ್ತದೆ. ನಮ್ಮ ಗುಬ್ಬಿ ತಾಲ್ಲೂಕಿನ ಹೆಬ್ಬೂರಿನಲ್ಲಿ ಏತ ನೀರಾವರಿಗೆ ಶ್ರೀ ಎಸ್.ಎಂ. ಕೃಷ್ಣರವರು foundation ಹಾಕಿದ್ದರು. ಶ್ರೀಮಾನ್ ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ಮೇಲೆ Parliament Election ಗಿಂತ ಮುಂಚೆ ಅದಕ್ಕೆ foundation ಹಾಕಿದ್ದರು. ತದನಂತರ, ತಿಪಟೂರು ತಾಲ್ಲೂಕಿನ ಹೊನ್ನವಳ್ಳಿಯಲ್ಲೂ ಸಹ ಏತ ನೀರಾವರಿಗೆ foundation ಹಾಕಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ನನ್ನ ಕ್ಷೇತ್ರವಾದ ತುರುವೇಕೆರೆಗೆ ನಾಲ್ಕು ಏತನೀರಾವರಿ ಬಗ್ಗೆ ಈಗಾಗಲೇ ಸುದೀರ್ಘವಾಗಿ estimate ಮಾಡಿದ್ದಾರೆ, survey ಮಾಡಿದ್ದಾರೆ, ಸರ್ಕಾರ ದಲ್ಲಿ ಆ ಕಡತ pending ಇದೆ. ಏತಕ್ಕೆ ತುರುವೇಕೆರೆ ತಾಲ್ಲೂಕಿನ ಬಗ್ಗೆ ಕಾಳಜಿ ಇಲ್ಲ ಎನ್ನುವ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಬಯ ಸುತ್ತೇನೆ. ದಯವಿಟ್ಟು, ತುರುವೇಕೆರೆ ತಾಲ್ಲೂಕಿನಲ್ಲಿರುವ 4 ಏತ ನೀರಾವರಿ ಗಳನ್ನು ಕೂಡಲೆ ಮಂಜೂರು ಮಾಡಿ ಅವರೇ ಮುಖ್ಯಮಂತ್ರಿಯಾಗಿ foundation ಹಾಕಿರುವುದಕ್ಕೆ ನಾನು ಸಂತೋಷವನ್ನು ಹಂಚಿಕೊಳ್ಳುವುದಕ್ಕೆ ಬಯಸುತ್ತೇನೆ. ಹಾಗೆಯೇ, ಈ ತಾರತಮ್ಯವನ್ನು ನಿಲ್ಲಿಸಬೇಕೆಂದು ವಿನಂತಿಸುತ್ತೇನೆ. ಇನ್ನು horticulture ಬಗ್ಗೆ ಹೆಚ್ಚು ಒತ್ತು ಕೊಡಬೇಕಾಗಿತ್ತು. ದಾಳಿಂಬೆ, ಕಿತ್ತಳೆ, ಸೀಬೆ ಹಣ್ಣು ಇರಬಹುದು, ಈ ತರಹ ತೋಟಗಾರಿಕೆ ಬೆಳೆಗಳನ್ನು ನಮ್ಮ ರೈತರು ಬೆಳೆಯುತ್ತಾರೆ. ಅದಕ್ಕೆ ನಿಖರವಾದ ಬೆಲೆಯಿಲ್ಲ. ನಾನು ಮೊದಲೇ ಹೇಳಿದ ಹಾಗೆ ಹೆಣ್ಣು ಮಕ್ಕಳು ಬುಟ್ಟಿ ಹೊತ್ತುಕೊಂಡು bus stand ನಲ್ಲಿ ರಸ್ತೆ ಬದಿಯಲ್ಲಿ ತೋಟಗಾರಿಕೆ ಬೆಳೆಗಳನ್ನು ಮಾರಾಟ ಮಾಡುತ್ತಾರೆ. ಕಂಕುಳಿನಲ್ಲಿ ಮಗು ಎತ್ತಿಕೊಂಡು, ತಲೆಮೇಲೆ ಬುಟ್ಟಿ ಹೊತ್ತುಕೊಂಡು ಹಣ್ಣುಗಳನ್ನು ಮಾರಾಟ ಮಾಡುತ್ತಾರೆ. ನಾವು horticulture ಬಗ್ಗೆ ಎಷ್ಟು ವ್ಯಾಖ್ಯಾನ ಮಾಡಿದರೂ ಸಾಕಾಗುವುದಿಲ್ಲ. RMC ಇರಬಹುದು, Corporation ಇರಬಹುದು ಅದರ ಬಗ್ಗೆ ನಾವು ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಸರ್ಕಾರವೇ ಖರೀದಿ ಮಾಡಬೇಕು. ಅದನ್ನು export ಮಾಡುತ್ತೀರೋ, market ಮಾಡುತ್ತೀರೋ, ಅದನ್ನು ಯೋಚನೆ ಮಾಡಿ ಸರ್ಕಾರ horticultureಗೆ ಹೆಚ್ಚು ಒತ್ತು ಕೊಡಬೇಕು.

ಕಳೆದ ಬಾರಿ ಕೊಬ್ಬರಿಯನ್ನು NABARDನಿಂದ ಖರೀದಿ ಮಾಡಿದರು. ಬೇರೆ ಬೇರೆ ರಾಜ್ಯದಿಂದ ಬಂದು ಅಲ್ಲಿ ಖರೀದಿ ಮಾಡಿದರು. ತನ್ಮೂಲಕ ರೈತರಿಗೆ ಅನುಕೂಲವಾಯಿತು. ಅದು ಖುಷಿ ಪಡುವಂಥ ವಿಚಾರವಾಗಿದೆ. ಹಾಗಾಗಿ horticulture ಬೆಳೆಗೆ ಹೆಚ್ಚು ಒತ್ತು ಕೊಡಬೇಕು. ಅದನ್ನು ಸರ್ಕಾರವೇ ಖರೀದಿಸಬೇಕು. ಅದಕ್ಕೆ ಒಂದು ಕಾರ್ಪೋರೇಷನ್ ಮಾಡಬೇಕು. ನೀವು ಖರೀದಿಸಿ ಅದನ್ನು ರಫ್ತು ಮಾಡುವುದಕ್ಕೆ ಕ್ರಮ ತೆಗೆದುಕೊಂಡರೆ ಬಹುಶಃ ಅದು ರೈತರಿಗೆ ಹೆಚ್ಚು ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬಹಳ ಸಂಕಟದ ಸುದ್ದಿ ಎಂದರೆ, 'ಅನ್ನತೋ ಪ್ರಾಣ, ಪ್ರಾಣತೋ ಪರಾಕ್ರಮ.' ಸರ್ಕಾರ ರೈತರಿಗಾಗಿ ರೇಷನ್ ಕಾರ್ಡು ಕೊಟ್ಟು ಪುನಃ ವಾಪಸ್ ತೆಗೆದುಕೊಳ್ಳುತ್ತಿದೆ. ಸನ್ಮಾನ್ಯ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಬಹಳ ವಿನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ತಮಗೆ ಈ ರಾಜ್ಯದಲ್ಲಿ 19 ಜನ ಎಂ.ಪಿ.ಯವರನ್ನು ಗೆಲ್ಲಿಸಿ ಕಳುಹಿಸಿದ್ದಾರೆ. ಯಾರ್‍ಯಾರು ಐದೈದು ಹತ್ತು ಸಾವಿರದೊಳಗೆ ಗೆದ್ದಿದ್ದಾರೆ, ನೀವು ರೇಷನ್ ಕಾರ್ಡು ಕೊಟ್ಟಿರಲ್ಲ ಅದು ನಿಮಗೆ ಪ್ಲಸ್ ಪಾಯಿಂಟ್ ಆಗಿದ್ದು, ಅವರು ವೋಟನ್ನು ತೆಗೆದುಕೊಂಡಿದ್ದಕ್ಕೆ ನಿಮ್ಮ 19 ಜನ ಎಂ.ಪಿ.ಯವರು ಆಯ್ಕೆಯಾಗಿರುವುದು. ಇವತ್ತು ನೀವು ಅವರ ಕಾರ್ಡು ಕಿತ್ತುಕೊಂಡರೆ ದೇವರು ನಿಮ್ಮನ್ನು ಕ್ಷಮಿಸುತ್ತಾನೆಯೆ ಸ್ವಾಮಿ? ದಯಮಾಡಿ ಅರ್ಥ ಮಾಡಿಕೊಳ್ಳಿ ಸ್ವಾಮಿ. ತುಮಕೂರು ಜಿಲ್ಲೆಯಲ್ಲಿ ಡಿ.ಸಿ.ಯವರು ಆದೇಶ ಮಾಡುತ್ತಾರೆ. 80% ಕಾರ್ಡುಗಳನ್ನು ಕಿತ್ತು ಹಾಕಿ ಎಂದು ಆದೇಶ. ನೆಮ್ಮದಿ ಕೇಂದ್ರದಲ್ಲಿ 10,288 ಕಾರ್ಡುಗಳನ್ನು ತುರುವೇಕೆರೆ ಕ್ಷೇತ್ರದಲ್ಲಿ ಕೊಟ್ಟಿದ್ದಾರೆ. ವಾಪಸ್ ಪಡೆದಿರುವುದು 8,309. ಅಂದರೆ, 82%, ಅಲ್ಲಿರುವ ನೌಕರರು ಏನೂ ಮಾಡಲಿಕ್ಕೆ ಆಗುವುದಿಲ್ಲ. ಡಿ.ಸಿ.ಯವರ ಆದೇಶವಿದೆ. 80% ಅನ್ನು ಪ್ರಥಮ ಹಂತದ ಅಕ್ಷಯ ಯೋಜನೆಯಡಿಯಲ್ಲಿ ವಿತರಿಸಲಾದ ಬಿಪಿಎಲ್ ಕುಟುಂಬಗಳಿಗೆ ಶೇಕಡ 20 ರಷ್ಟು ಹಾಗೂ ನೆಮ್ಮದಿ ಕೇಂದ್ರದಿಂದ ವಿತರಿಸಲಾದ ಬಿಪಿಎಲ್ ಪಡಿತರ ಚೀಟಿಗಳ ಶೇಕಡ 80 ರಷ್ಟನ್ನು ಎಲ್ಲಾ ತಾಲ್ಲೂಕುಗಳಲ್ಲಿ, ತುಮಕೂರು ನಗರ ಪ್ರದೇಶದಲ್ಲಿ ಪತ್ತೆ ಮಾಡಿ ರದ್ದು ಪಡಿಸಬೇಕೆಂದು ಆದೇಶ ಮಾಡಿದ್ದಾರೆ. ಇದೇನು ಸರ್ ಇದು? ನೀವು ಕೊಟ್ಟಿದ್ದು ಏಕೆ? ಎರಡು ತಿಂಗಳು ಕಾರ್ಡು ಕೊಟ್ಟು ಅವರ ಹೊಟ್ಟೆಯ ಮೇಲೆ ಕಲ್ಲು ಹಾಕುತ್ತೀರಲ್ಲಾ, ದೇವರು ನಿಮಗೆ ಒಳ್ಳೆಯದು

ಮಾಡುತ್ತಾನೆಯೆ? ದಯಮಾಡಿ ನಾನು ಹೇಳುತ್ತೇನೆ, ಎಲ್ಲಾ ಸ್ಕೀಂ ಬಗ್ಗೆ ಇದೇನು ಚರ್ಚೆ ಇದೆ ಇದು ಒಂದು ಭಾಗ, ಮನುಷ್ಯನ ಹೊಟ್ಟೆಪಾಡು ಒಂದು ಭಾಗ. ಎರಡು ಹೊತ್ತು ಊಟ ಹಾಕುವುದಕ್ಕೆ ನಮಗೆ ಶಕ್ತಿಯಿಲ್ಲ ಎಂದರೆ ಈ ಚರ್ಚೆಯ ಅವಶ್ಯಕತೆ ಏನಿದೆ? ಅಧ್ಯಕ್ಷರೆ, ಈ ಚರ್ಚೆಯ ಅವಶ್ಯಕತೆ ಏನಿದೆ? ನೀವು ದಯಮಾಡಿ ನೋಡಿ, ಬಡವರ ಕಾರ್ಡುಗಳನ್ನು ಅವರು ಯಾವ ರೀತಿಯಾಗಿ ಕಿತ್ತು ಹಾಕಿದ್ದಾರೆಂದು ಹೇಳುವುದಾದರೆ, ನಮ್ಮಲ್ಲಿ 31 ವರ್ಷದ ಹುಡುಗ ಅವನಿಗೆ ಟ್ರ್ಯಾಕ್ಟರ್‌ನಲ್ಲಿ ಕೂಲಿ ಮಾಡುತ್ತಾನೆ, ನಾನು ಸೋಮವಾರ ತುರುವೇಕೇರಿಯಲ್ಲಿದ್ದಾಗ ಅವನು ಬಂದಿದ್ದ. ಅವನು, ತನ್ನ ಹೆಂಡತಿ ಮತ್ತು ಸಣ್ಣ ಮಗನನ್ನು ಕರೆದುಕೊಂಡು ಬಂದಿದ್ದ. ಅವನು ಟ್ರ್ಯಾಕ್ಟರ್‌ನಲ್ಲಿ ಮಣ್ಣು ಎತ್ತಲಿಕ್ಕೆ ಹೋಗುತ್ತಾನೆ. ಅವನ ಕಾರ್ಡು ಯಾವ ರೀತಿ ತೆಗೆದು ಹಾಕಿದ್ದಾನೆಂದರೆ ಅವನ ಹೆಸರಿನ ಮುಂದೆ ಪೌತಿ ಎಂದು ಬರೆದಿದ್ದಾರೆ. ಪೌತಿ ಎಂದರೆ 'ಡೆಡ್' ಎಂದು ಬರೆದಿದ್ದಾರೆ. ಅವನನ್ನು ಪೌತಿ ಮಾಡಿ ಕಾರ್ಡು ತೆಗೆದು ಹಾಕಿದ್ದಾರೆ. ಒಬ್ಬ ವಿಧವೆಯೊಬ್ಬರು ತಮ್ಮ ಎರಡು ಮಕ್ಕಳನ್ನು ಎತ್ತಿಕೊಂಡು ಅಡಿಕೆ ಕಾಯಿ ಸುಲಿಯುವ ಕೂಲಿ ಕೆಲಸಕ್ಕೆ ಹೋಗುತ್ತಾಳೆ. ಆಕೆಯ ಕಾರ್ಡು ಮುಂದೆ ಏನು ಬರೆದಿದ್ದಾರೆಂದರೆ 'ಲಾರಿ ಮಾಲೀಕರು' ಎಂದು ಬರೆದು ಕಾರ್ಡು ಕಿತ್ತು ಹಾಕಿದ್ದಾರೆ. ಯಾವ ವಿಲೇಜ್ ಅಕೌಂಟೆಂಟ್ ಆಗಲಿ, ಯಾವ ರೆವಿನ್ಯೂ ಇನ್ಸ್‌ಪೆಕ್ಟರಾಗಲಿ, ಯಾವ ಹಳ್ಳಿಗೂ ಹೋಗಿಲ್ಲ. ಕಂಪ್ಯೂಟರ್ ಮುಂದೆ ಕುಳಿತುಕೊಂಡು whims and fancy ಯಾಗಿ ಕಾರ್ಡು ಕಿತ್ತು ಹಾಕಿದ್ದಾರೆ. ಇದು ಬಹಳ ದುಃಖಕರವಾದ ಸಂಗತಿ. ಬಹುಶಃ ಈ ಬಡವರ ಶಾಪ ಈ ಸರ್ಕಾರಕ್ಕೆ ತಟ್ಟುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬಹುಶಃ ಯಾವ ಜಿಲ್ಲೆಯಲ್ಲೂ ಇಂಥ ಕೆಟ್ಟ ತೀರ್ಮಾನವಾಗಿಲ್ಲ, ತುಮಕೂರು ಜಿಲ್ಲೆಯಲ್ಲಿ ಆ ಡಿ.ಸಿ.ಯವರು ಆದೇಶ ಮಾಡಿ ಈ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. 5–8–09ಕ್ಕೆ ಆದೇಶ ಮಾಡುತ್ತಾರೆ, 7–8–09ಕ್ಕೆ ಎಲ್ಲಾ ಕಿತ್ತು ಹಾಕುತ್ತಾರೆ. ಈ ರೀತಿಯಾಗಿ ಕಾರ್ಡುಗಳನ್ನು ಕಿತ್ತು ಹಾಕಿ ರೈತರಿಗೆ ಬಡವರಿಗೆ ಎರಡು ಹೊತ್ತು ಅನ್ನ ಕೊಡಲಿಕ್ಕೆ ಆಗಲಿಲ್ಲವೆಂದರೆ, ನನಗೆ ಅನ್ನಿಸುತ್ತದೆ ಈ ಚರ್ಚೆಗೆ ಅರ್ಥವಿಲ್ಲ. ಹಸಿದವನಿಗೆ ಎರಡು ಹೊತ್ತಿನ ಊಟ ಕೊಡುವುದಕ್ಕೆ ನಮಗೆ ಶಕ್ತಿಯಿಲ್ಲ ಎಂದರೆ ಏಕೆ ಚರ್ಚೆ ಮಾಡುತ್ತೀರಿ? ನಿಮ್ಮ ಪ್ರಾಜೆಕ್ಟ್ ತೆಗೆದುಕೊಂಡು ಏನು ಮಾಡಬೇಕು? ನಾವು ಯಾವುದೇ ಪಕ್ಷದವರಿರಲಿ, ದಳ ಇರಲಿ, ಕಾಂಗ್ರೆಸ್ ಇರಲಿ, ಮಿತ್ರ ಪಕ್ಷದವರಾದ ಬಿಜೆಪಿ ಇರಲಿ, ಈ ಒಂದು ಕಾರ್ಯಕ್ರಮವನ್ನು

ಸರ್ಕಾರ ಇಂಪ್ಲಿಮೆಂಟ್ ಮಾಡುವುದಕ್ಕೆ ನಮ್ಮ ವಿರೋಧ ಇಲ್ಲ. ನಾವು ತುಂಬು ಹೃದಯದಿಂದ ಸ್ವಾಗತಿಸುತ್ತೇವೆ. ಆದರೆ, ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ನಮ್ಮ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಡಿಕ್ಲೇರ್ ಮಾಡಿಲ್ಲ. ರೇಷನ್ ಕಾರ್ಡುಗಳ ಬಗ್ಗೆ ತುಂಬಾ ಅನಾಹುತವಾಗಿದೆ. ಅದರ ಜೊತೆಗೆ ಮತ್ತೊಂದು ವಿಷಯ ಏನೆಂದರೆ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಒಂದು ನೋವನ್ನು ಹೇಳಿದರು. "ನಾವು ನೂರು ಕೋಟಿ ರೂಪಾಯಿಗಳನ್ನು ಪುರಸಭೆಗೆ, ಮುನಿಸಿಪಾಲಿಟಿಗೆ, ಕೊಡುತ್ತಿದ್ದೇವೆ, ಆದರೆ ಸಮಗ್ರವಾಗಿ ಇಂಪ್ಲಿಮೆಂಟ್ ಆಗುತ್ತಿಲ್ಲ, ನನಗೆ ನೋವು ಇದೆ." ಎಂದು ಆ ನೋವನ್ನು ಈ ಸಂದರ್ಭದಲ್ಲಿ ಹಂಚಿಕೊಂಡರು. ಮಾನ್ಯ ಮುಖ್ಯಮಂತ್ರಿಯವರೆ, ಆ ನೋವು ಅನ್ನು ಹೇಳುವುದಾದರೆ, ಸಾಮಾನ್ಯ ಜನತೆಯ ಸಮಸ್ಯೆ ಏನಾಗಿದೆ ಎಂದು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಇದರ ಬಗ್ಗೆ ನಾನೊಂದು ಉದಾಹರಣೆ ಹೇಳುವುದಾದರೆ, ನಮ್ಮ ಶರಣಪ್ರಕಾಶ್ ಪಾಟೀಲ್ ರವರು ಹೇಳುತ್ತಿದ್ದರು. ಭ್ರಷ್ಟಾಚಾರದ ಬಗ್ಗೆ ಹೇಗೆ ಏನು ಎಂದು ಹೇಳುತ್ತಿದ್ದರು. ನಮ್ಮ ತುಮಕೂರು ಜಿಲ್ಲೆಯಲ್ಲಿ ಪಿಡಬ್ಲೂಡಿಯಲ್ಲಿ ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್ ಇದ್ದಾರೆ. ಅತ್ಯಂತ ಭ್ರಷ್ಟ ಅಧಿಕಾರಿ ಅವನು. ಅವರನ್ನು ಬೆಳಗ್ಗೆ ವರ್ಗಾವಣೆ ಮಾಡಿದರು ನಮಗೆ ಬಹಳ ಖುಷಿಯಾಯಿತು. ಸರಕಾರ ಆದೇಶ ಕೊಟ್ಟಿದೆ Seniority maintain ಮಾಡಿ ಎಲ್‌ಒಸಿ ಕೊಡಿ ಎಂದು ಹೇಳಿದರೆ, whims and fancyಯಾಗಿ ಆ ಮನುಷ್ಯ ಮಾಡಿ ಹಾಕಿದ್ದ. ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಬಯಸುವುದಿಲ್ಲ. ಬಹುಶಃ ಎಲ್ಲವೂ ತಮಗೆ ಅರ್ಥವಾಗಿದೆ. ಆತನನ್ನು ವರ್ಗಾವಣೆ ಮಾಡಿದೆ ಎಂದು ಇಡೀ ಜಿಲ್ಲೆ ಖುಷಿ ಪಟ್ಟರೆ ಎರಡು ಗಂಟೆಗೆ ಬೇರೆಯವರನ್ನು ಹಾಕಿ ಪುನಃ ಐದು ಗಂಟೆಗೆ ಅವನನ್ನೇ ತಂದು ಕೂರಿಸುತ್ತಾರೆಂದರೆ, ಮುಖ್ಯಮಂತ್ರಿಗಳು ನೋವು ಈ ರೀತಿಯಾದರೆ ನಮ್ಮ ಗತಿ ಏನಾಗಬೇಕು? ದಯಮಾಡಿ ಅರ್ಥ ಮಾಡಿಕೊಳ್ಳಿ. ಏಕೆ ಸರ್ಕಾರದ ಕಾರ್ಯಕ್ರಮ ಸರಿಯಾಗಿ ಇಂಪ್ಲಿಮೆಂಟ್ ಆಗುವುದಿಲ್ಲವೆಂದರೆ ಇದು ಮೂಲಭೂತವಾದ ಪ್ರಶ್ನೆ. ಭ್ರಷ್ಟ ಅಧಿಕಾರಿಗಳಿಗೆ ಸರ್ಕಾರ ಹೆಚ್ಚು ಒತ್ತು ಕೊಟ್ಟಾಗ ಇವೆಲ್ಲವೂ ಸಹ ನಮ್ಮ ಮುಂದೆ ನಿಲ್ಲುತ್ತವೆ. ಹೀಗಾಗಿ ಬಹುಶಃ ಮುಖ್ಯಮಂತ್ರಿಯವರು ತಮ್ಮ ಸಮಸ್ಯೆಯನ್ನು ತಮ್ಮ ದುಃಖವನ್ನು ಈ ಸದನದಲ್ಲಿ ತೋಡಿಕೊಂಡಿದ್ದಾರೆ. ನಿಜವಾಗಿಯೂ ಸಹ ಬಳ ನೋವು

ಆಗುತ್ತದೆ. ಹಿಂದೆ ಹಿರಿಯ ರಾಜಕಾರಣಿ ಮುತ್ಸದ್ದಿ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರು, ವೀರೇಂದ್ರ ಪಾಟೀಲ್‌ರವರು, ಯಾವುದೇ ಶಾಸಕರಾಗಲಿ ಶಾಸಕರು ಮತ್ತು ಅಧಿಕಾರಿಗಳು ತಾಲ್ಲೂಕು ಮಟ್ಟದಲ್ಲಿ ಸಾಮರಸ್ಯ ಇರಲಿ, ಜನರಿಗೆ ಒಳ್ಳೆಯ ಕೆಲಸ ಮಾಡಲಿ ಎಂದು ಆಯಾಯ ಶಾಸಕರು ಕೇಳಿದ ಅಧಿಕಾರಿಗಳನ್ನು ಹಾಕಿಕೊಡುವಂಥ ಸಂಪ್ರದಾಯ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ನಮ್ಮ ಯಡಿಯೂರಪ್ಪನವರು ಬಹಳ ಉದಾರಿಗಳು. ಏಕೋ ಏನೋ ಈ ವಿಷಯದಲ್ಲಿ ಸಂಕುಚಿತ ಭಾವನೆ ತಾಳಿರುವುದು ನನಗೆ ನೋವು ಆಗಿದೆ. 29 ದಿವಸ ನನ್ನ ತಾಲ್ಲೂಕಿನಲ್ಲಿ ಒಬ್ಬ ತಹಶೀಲ್ದಾರ್ ಇಲ್ಲ, ಅಘೋಷಿತ ಬಂದ್ ಆಗಿದೆ. ನಾನು ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಎರಡು ಬಾರಿ ಹೋಗಿ ಕೇಳಿದೆ. ನಾನು ಕೊಟ್ಟಿರುವುದು ನಾಲ್ಕು ಪೇಪರ್. ಅದರಲ್ಲಿ ಎರಡು ಬರೀ ತಹಶೀಲ್ದಾರ್ ಬಗ್ಗೆ ಇವೆರಡು ಬಿಟ್ಟರೆ ಇನ್ನೇನೂ ಕೊಟ್ಟಿಲ್ಲ. ಹೀಗಾಗಿ ನಮಗೆ ಬೇಕಾದಂಥ ಒಳ್ಳೆಯ ಅಧಿಕಾರಿಯನ್ನು ಹಾಕಿಕೊಡದಿದ್ದರೆ ನಾವು ಏನು ಕೆಲಸ ಮಾಡುವುದಕ್ಕೆ ಆಗುತ್ತದೆ? ಯಾರೋ ಒಬ್ಬ ಮಾಜಿ ಶಾಸಕರ ಸ್ಥಳೀಯ ಕಾರ್ಯಕರ್ತರ ಮಾತು ಕೇಳಿ ನೀವು ಅಧಿಕಾರಿಗಳನ್ನು ಹಾಕಿಕೊಟ್ಟರೆ ಕೆಲಸ ಮಾಡುವುದು ಹೇಗೆ? ಅದರ ಔಚಿತ್ಯ ಏನು ಇದೆ? ಹೆಗಡೆಯವರಾಗಲಿ, ವೀರೇಂದ್ರ ಪಾಟೀಲ್‌ರವರ ಚಿಂತನೆ ಏನಿದೆ? ಯಾವುದೇ ಶಾಸಕನಾಗಲಿ, ಶಾಸಕರು ಮತ್ತು ಅಧಿಕಾರಿಗಳು ಒಂದು ತಾಲ್ಲೂಕಿನಲ್ಲಿ ಸಾಮರಸ್ಯವಾಗಿ ಕೆಲಸ ಮಾಡುವುದಕ್ಕೆ ಮುಖ್ಯಮಂತ್ರಿಗಳು ಸ್ಪಂದಿಸದಿದ್ದರೆ ನಿಜವಾಗಿಯೂ ಶೋಚನೀಯವಾಗುತ್ತದೆ. ದಯಮಾಡಿ ಅದರ ಬಗ್ಗೆ ಹೆಚ್ಚು ಒತನ್ನು ಕೊಡಬೇಕು. ಆ ಕಡೆಯ ಪಕ್ಷದ ಶಾಸಕರರಲಿ, ಈ ಕಡೆಯ ಪಕ್ಷದ ಶಾಸಕರಿರಲಿ, ಎಲ್ಲರೂ ಒಂದೇ ಎನ್ನುವ ಭಾವನೆ ಇರಬೇಕು. ಇಲ್ಲಾಂದ್ರೆ ವಿರೋಧ ಪಕ್ಷ ಅಬಾಲಿಷ್ ಮಾಡಿಬಿಡಿ. ಅಬಾಲಿಷ್ ಮಾಡಿ, ಆರ್‌ಎಂಸಿಯಲ್ಲಿ ನಾಮಿನೇಷನ್ ಅಪಾಯಿಂಟ್ ಮಾಡಿಕೊಳ್ಳುತ್ತಾರಲ್ಲ ಆ ರೀತಿ ಯಾರಿಗೆ ಬೇಕೋ ಅವರನ್ನು ನಾಮಿನೇಷನ್ ಮಾಡಿಕೊಂಡು ಸರ್ಕಾರ ನಡೆಸಲಿ. ನಮ್ಮದೇನೂ ವಿರೋಧವಿಲ್ಲ. ಹೀಗಾಗಿ ಈಗ ಆಡಳಿತ ಪಕ್ಷದಲ್ಲಿರುವವರು ಬಹಳ ವರ್ಷಗಳ ಕಾಲ ವಿರೋಧ ಪಕ್ಷದಲ್ಲಿದ್ದು ಕೆಲಸ ಮಾಡಿದ್ದಾರೆ. ಅವರಿಗೆ ಈ ಅನುಭವ ಆಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಅಲ್ಲಿಯವರೆಗೆ ಶಾಸಕರ ನಿಧಿಯಲ್ಲಿ ಹಣ ಬಿಡುಗಡೆಯಾಗಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈ ಕಡೆಗೆ ಗಮನಹರಿಸುತ್ತಾರೆಂದು ನಾನು

ನಂಬುತ್ತೇನೆ. ಕಳೆದ ವರ್ಷದ್ದೂ ಆಗಲ್ಲ. ಈ ವರ್ಷದ್ದೂ ಆಯಿತೆ? ಹೀಗಾಗಿ ಇದರ ಬಗ್ಗೆ ಹೆಚ್ಚು ಒತ್ತು ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಈ ರೇಷನ್ ಕಾರ್ಡುಗಳ ಬಗ್ಗೆ ಹೆಚ್ಚು ಗಮನಹರಿಸಬೇಕು. ಎಲ್ಲಕ್ಕಿಂತಲ್ಲೂ ಮಿಗಿಲಾಗಿ ಈ ಬಗ್ಗೆ ಸಮಗ್ರವಾದ ವರದಿ ತಯಾರಿಸಿ ನಮಗೆ ಕೊಟ್ಟರೆ ಬಹುಶಃ ಸುದೀರ್ಘವಾಗಿ ಚರ್ಚೆ ಮಾಡಲು ಅವಕಾಶವಾಗುತ್ತದೆಂದು ಹೇಳುತ್ತೇನೆ. ಇಲ್ಲಾಂದ್ರೆ, ಈ ಚರ್ಚೆ ಏನಾಗುತ್ತದೆಂದರೆ ದೊಡ್ಡ ಬೆಟ್ಟ ಅಗೆದು ಸಣ್ಣ ಇಲ್ಲಿ ಸುಂಡವನ್ನು ಹಿಡಿದ ಹಾಗೆ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಒಂದೇ ಮಾತಿನಲ್ಲಿ ಹೇಳುತ್ತಾರೆ. ನಿಮ್ಮ ಸಲಹೆಯನ್ನು ಕ್ರೋಢೀಕರಿಸಿ ನಾನು ಬಜೆಟ್‌ನಲ್ಲಿ ಚಿಂತನೆ ಹರಿಸುತ್ತೇನೆಂದು ಹೇಳಿದರೆ ಏನೂ ಅರ್ಥವಿಲ್ಲ. Government exchequer money ಈ ಸಂದರ್ಭದಲ್ಲಿ ಹಾಳಾಗುತ್ತದೆ. ಅದರ ಬಗ್ಗೆ ನಾನು ಏಕೆ ಒತ್ತಿ ಒತ್ತಿ ಹೇಳುತ್ತಿದ್ದೇನೆಂದರೆ, ಅಡಿಷನಲ್ ಬಜೆಟ್ ಕೊಟ್ಟು ಚರ್ಚೆ ಮಾಡಿ, ಅಥವಾ ಪ್ರಾಜೆಕ್ಟ್ ಕೊಟ್ಟು ಚರ್ಚೆ ಮಾಡಿ ಎಂದು ಹೇಳುತ್ತಾ, ಉತ್ತಮವಾದ ಚರ್ಚೆಗೆ ನನಗೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಬಹಳ ಸಂತೋಷ. ಈ ಚರ್ಚೆಯ ಸಾರಾಂಶವನ್ನು ಮಾನ್ಯ ಮುಖ್ಯಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ಈಶ್ವರಪ್ಪನವರು ಇಲ್ಲಿಯೇ ಇದ್ದಾರೆ. ಮಾನ್ಯ ಈಶ್ವರಪ್ಪನವರೆ, ನಿಮ್ಮ ಬಗ್ಗೆ ಅಪಾರವಾದ ಗೌರವ ಇದೆ. ಆದರೆ ಏಕೋ ಏನೋ ನೀವು ಟಿ.ಸಿ.ಯನ್ನೇ ಕೊಡುತ್ತಿಲ್ಲ. ಅದೇ ನಮಗೆ ನೋವು. ಗುಬ್ಬಿ ತಾಲ್ಲೂಕಿನ ಸಿಎಸ್ ಪುರ ಹೋಬಳಿಯಲ್ಲಿ 19 ಟಿ.ಸಿ. ಸುಟ್ಟು ಹೋಗಿ ಸುಮಾರು 6 ತಿಂಗಳಾಗಿವೆ. ಇದಕ್ಕೆ ಸಂಬಂಧಪಟ್ಟಂತೆ 2 ಪತ್ರಗಳನ್ನು ಕೊಟ್ಟಿದ್ದೇನೆ. ಮತ್ತೆ ಎಂ.ಡಿ. ಹಾಗೂ ಡೈರೆಕ್ಟರ್‌ರವನ್ನು ಭೇಟಿ ಮಾಡಿ ಈ ವಿಷಯ ಹೇಳಿದ್ದೇನೆ. ಆದರೂ ಕೂಡ ಈ ಕೆಲಸ ಇನ್ನೂ ಆಗಿಲ್ಲ. ಈ ವಿಚಾರವನ್ನು ನಿಮ್ಮ ಗಮನಕ್ಕೂ ಕೂಡ ತೆಗೆದುಕೊಂಡು ಬಂದಿದ್ದೇನೆ. ದಯಮಾಡಿ ಟಿ.ಸಿ. ಕೊಡುವಂಥ ಪ್ರಯತ್ನ ಮಾಡಿ. ರೈತರಿಗೆ ಬಹಳ ಮುಖ್ಯವಾಗಿ ನೀರು, ವಿದ್ಯುಚ್ಛಕ್ತಿ ಕೊಟ್ಟರೆ ರೈತ ಕಷ್ಟಪಟ್ಟು ಬೆಳೆದಂಥ ಬೆಳೆಗೆ ಒಳ್ಳೆಯ ಬೆಲೆ ಕೊಟ್ಟರೆ ಬಹುಶಃ ಅವರೆಲ್ಲರೂ ಉದ್ಧಾರ ಆಗುತ್ತಾರೆ. ಇಲ್ಲದಿದ್ದರೆ ಇವೆಲ್ಲಾ ಭಾಷಣದಲ್ಲಿ ಮತ್ತು ಕಾಗದ ಪತ್ರದಲ್ಲಿ ಮಾತ್ರ ಉಳಿಯುತ್ತದೆಂದು ಹೇಳುತ್ತ ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಸ್.ಆರ್. ವಿಶ್ವನಾಥ್(ಯಲಹಂಕ) : ಮಾನ್ಯ ಸಭಾಧ್ಯಕ್ಷರೆ, ರೈತರ ಬಗ್ಗೆ ವಿಶೇಷವಾದಂಥ ಕಾಳಜಿಯನ್ನು ವಹಿಸಿ ಈ ಅಧಿವೇಶನಕ್ಕೆ ಅವಕಾಶ ಮಾಡಿಕೊಟ್ಟಂಥ ಸನ್ಮಾನ್ಯ ಮುಖ್ಯ ಮಂತ್ರಿಯವರಿಗೆ ನನ್ನ ಅಭಿನಂದನೆಗಳನ್ನು ತಿಳಿಸುತ್ತೇನೆ. ಹಲವು ದಶಕಗಳ ಹಿಂದಿನ ಚರಿತ್ರೆಯನ್ನು ನೋಡಿದಾಗ ಅದರಲ್ಲಿ ಸುವರ್ಣಕಾಲ ಎನ್ನತಕ್ಕಂಥದ್ದನ್ನು ಕೂಡ ನಾವು ನೋಡುತ್ತೇವೆ. ಅದು ಚಂದ್ರಗುಪ್ತ ಮೌರ್ಯನ ಕಾಲ ಇರಬಹುದು, ವಿಜಯನಗರ ಸಾಮ್ರಾಜ್ಯದ ಕಾಲ ಇರಬಹುದು. ಆ ಕಾಲದಲ್ಲಿ ವಿಷಯಗಳನ್ನು ನಾವು ಚರಿತ್ರೆಯ ಪುಸ್ತಕದಲ್ಲಿ ನೋಡಿದಾಗ ಅಶೋಕ ರಾಜ ಸಾಲು ಮರಗಳನ್ನು ನೆಡಿಸಿರುವುದನ್ನು ಮತ್ತು ಕೆರೆ ಮತ್ತು ಕಲ್ಯಾಣಿಗಳನ್ನು ಕಟ್ಟಿಸಿರುವುದು ತಿಳಿಯುತ್ತದೆ. ವಿಜಯನಗರ ಸಾಮ್ರಾಜ್ಯದ ರಾಜರು ಏನು ಮಾಡಿದರೆಂದರೆ, ಅವರು ಕೂಡ ನೆಡುತೋಪುಗಳನ್ನು ಮಾಡಿದರು. ಕೆರೆಗಳನ್ನು ಸಂರಕ್ಷಣೆ ಮಾಡಿರುವ ವಿಚಾರಗಳನ್ನು ನಾವು ಚರಿತ್ರೆಯಲ್ಲಿ ನಾವು ಓದುತ್ತಿದ್ದೇವೆ. ಆದರೆ, ಆಗಿನ ಕಾಲಕ್ಕೂ ಮತ್ತು ಈಗ ಕಾಲ ಬದಲಾವಣೆ ಆದ ರೀತಿಯಲ್ಲಿ ಬರಗಾಲದ ಪರಿಸ್ಥಿತಿ ಏತಕ್ಕೆ ಬಂತು ಎಂಬುದುರ ಬಗ್ಗೆ ಗಮನಹರಿಸಬೇಕು. ಹಿಂದಿನ ಕಾಲದಲ್ಲಿ ರೈತರಿಗೆ ನಾವು ಯಾವುದೇ ರೀತಿಯ ರಾಸಾಯನಿಕ ಗೊಬ್ಬರಗಳನ್ನು ಕೊಡುತ್ತಿರಲಿಲ್ಲ. ಮತ್ತೆ ಆಧುನಿಕ ರೀತಿಯ ಸಲಕರಣೆಗಳಾದ ಟ್ರಾಕ್ಟರ್ ಇರಬಹುದು ಅಥವಾ ಬೇರೆ ಬೇರೆ ಸಲಕರಣೆಗಳನ್ನು ಆ ಕಾಲದಲ್ಲಿ ಕೊಟ್ಟಿರಲಿಲ್ಲ. ಆ ಕಾಲದಲ್ಲಿ ಯಾವುದೇ ರೈತ ಆತ್ಮಹತ್ಯೆಯನ್ನು ಮಾಡಿಕೊಂಡಿರಲಿಲ್ಲ. ಮತ್ತೆ ಗೊಬ್ಬರಕ್ಕಾಗಲಿ ಅಥವಾ ಯಾವುದೇ ವಿಚಾರಕ್ಕೆ ಗಲಾಟೆ ಅಥವಾ ಗೋಲಿಬಾರ್ ಕೂಡ ಆಗಿರಲಿಲ್ಲ. ಆ ಕಾಲದಲ್ಲಿ ರೈತರು ಬೆಳೆದಂಥ ಬೆಳೆಯನ್ನು ತುಂಬಿಸಿ ಇಡುವುದಕ್ಕೆ ಹಗೇವುಗಳೆಂದು ಕಟ್ಟುತ್ತಿದ್ದರು. ನಮ್ಮಲ್ಲಿ ಈಗಲೂ ಕೂಡ ಹಗೇವುಗಳು ಇವೆ. ಹಗೇವುಗಳು ಅಂದರೆ, ಬೆಳೆದಂಥ ಭತ್ತ ಮತ್ತು ರಾಗಿಯನ್ನು ತುಂಬಿಸಿ ಇಡುವಂಥದು. ಆದರೆ, ಈಗ ಕಾಲ ಬದಲಾದಂತೆ ಇವತ್ತಿನದಿವಸ ಡಬ್ಬಗಳಲ್ಲಿ ಅಕ್ಕಿ ಮತ್ತು ರಾಗಿಯನ್ನು ತುಂಬಿ ಇಡುವಂಥ ಪರಿಸ್ಥಿತಿ ಏಕೆ ಬಂತೆಂಬುದರ ಬಗ್ಗೆ ಎರಡು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ದೇಶ ಕೃಷಿ ಪ್ರಧಾನವಾದಂಥ ದೇಶವಾಗಿದೆ. ಹಿಂದಿನ ಕಾಲದಿಂದಲೂ ಕೂಡ ನಮ್ಮ ರಾಜ್ಯ ಕೂಡ ಕೃಷಿ ಪ್ರಧಾನವಾಗಿತ್ತು. ನೈಸರ್ಗಿಕವಾದಂಥ ಯಾವುದೇ ರೀತಿಯ ತೊಂದರೆಗಳು ನಮಗೆ ಇಲ್ಲಿರಲಿಲ್ಲ. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರಿನಲ್ಲಿ ಯಾವುದಾದರೂ ನದಿ ಇದೆಯೇ ಎಂದು

ಕೇಳಿದರೆ ಇಲ್ಲವೆಂದು ಹೇಳುತ್ತಾರೆ. ಆದರೆ, ಇಲ್ಲಿ ಐದಾರು ನದಿಗಳು ಹರಿಯುತ್ತಿತ್ತು. ಉದಾಹರಣೆಗೆ ಹೇಳುವುದಾದರೆ, ವೃಷಭಾವತಿ ನದಿ ಎಂದು ಏನು ಹೇಳುತ್ತೇವೆ ಆ ನದಿ ಈಗ ಇಡೀ ಬೆಂಗಳೂರಿನ ಕೊಳಚೆ ನೀರನ್ನು ತೆಗೆದುಕೊಂಡು ಮೈಸೂರು ರಸ್ತೆ ಪಕ್ಕದಲ್ಲಿ ಹರಿಯುತ್ತಿದೆ. ಮೈಸೂರು ರಸ್ತೆಯ ಪಕ್ಕದಲ್ಲಿ ಗಾಳಿ ಆಂಜನೇಯ ದೇವಸ್ಥಾನ ಇದೆ. ಕೆಲವು ದಶಕಗಳ ಹಿಂದೆ ಈ ದೇವಸ್ಥಾನದಲ್ಲಿ ಪೂಜೆ ಮಾಡುವಾಗ ಜನರು ವೃಷಭಾವತಿ ನದಿಯಲ್ಲಿ ಸ್ನಾನ ಮಾಡುತ್ತಿದ್ದರು ಮತ್ತೆ ದೇವರಿಗೆ ಆ ನದಿಯ ನೀರಿನಿಂದ ಅಭಿಷೇಕ ಮಾಡುತ್ತಿದ್ದರು. ಇದೆ ರೀತಿಯಾಗಿ ಅರ್ಕಾವತಿ, ಕುಮುದ್ವತಿ, ಸುವರ್ಣಮುಖಿ, ದಕ್ಷಿಣ ಪಿನಾಕಿನಿ, ಉತ್ತರ ಪಿನಾಕಿನಿ ನದಿಗಳೆಲ್ಲವೂ ಬೆಂಗಳೂರಿನ ಸುತ್ತ ಮುತ್ತಲು ಹರಿಯುತ್ತಿದ್ದವು. ಆದರೆ, ಕಾಲ ಬದಲಾದಂತೆ ನದಿಗಳನ್ನು ಏತಕ್ಕೆ ಒಣಗಿಸುತ್ತಿದ್ದೇವೆ? ನಮ್ಮ ರಾಜ್ಯದಲ್ಲಿ ಸುಮಾರು 36669 ಕೆರೆಗಳಿವೆ ಎಂದು ಅಂದಾಜು ಇದೆ. ಇದರಲ್ಲಿ ಎಷ್ಟು ಕೆರೆಗಳನ್ನು ನಾವು ಸಂರಕ್ಷಣೆ ಮಾಡಿದ್ದೀವಿ? ಮೂಲವಾಗಿ ರೈತನ ಬದುಕನ್ನು ಸರಿಮಾಡಬೇಕಾದರೆ, ಆತನಿಗೆ ಮೊದಲು ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕು. ನಾವು ಬೋರ್‌ವೆಲ್‌ಗಳನ್ನು ಕೊರೆಸಿ ಯಾವತ್ತು ಹಸಿರು ಕ್ರಾಂತಿ ಮಾಡಿದ್ದೇವೆಂದು ಹೆಮ್ಮೆ ಪಟ್ಟುಕೊಂಡೆವೋ ಆವತ್ತಿನಿಂದ ನಮ್ಮ ರೈತರ ಬಾಳು ಅವನತಿಯ ಕಡೆಗೆ ಪ್ರಾರಂಭವಾಯಿತೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಮೊದಲು ರೈತರು ಪ್ರತಿ ವರ್ಷ ಮಳೆಗಾಲ ಬಂದಾಗ ಕೆರೆಗಳನ್ನು ಮತ್ತು ರಾಜ ಕಾಲುವೆಗಳನ್ನು ಸ್ವಚ್ಛ ಮಾಡಿಕೊಳ್ಳುತ್ತಿದ್ದರು. ಈ ರೀತಿಯ ಕಾರ್ಯದಲ್ಲಿ ನಾನೂ ಕೂಡ ಭಾಗವಹಿಸಿದ್ದೇನೆ. ಮತ್ತೆ ಇಲ್ಲಿರತಕ್ಕಂಥ ಸದಸ್ಯರಿಗೆಲ್ಲರಿಗೂ ಕೂಡ ಈ ವಿಷಯ ಗೊತ್ತಿರಬೇಕೆಂದು ತಿಳಿದುಕೊಂಡಿದ್ದೇನೆ. ಪ್ರತಿ ಸೋಮವಾರದ ಕೆಲಸವೆಂದು ರಾಜಕಾಲುವೆಗಳನ್ನು ರಿಪೇರಿ ಮಾಡುವುದಕ್ಕೆ ರೈತರು ಸ್ವಯಂ ಪ್ರೇರಿತರಾಗಿ ಹೋಗುತ್ತಿದ್ದರು. ಮತ್ತೆ ನದಿಯಲ್ಲಿ ಸಾವಿರಾರು ಅಥವಾ ನೂರಾರು ಕಿ.ಮೀ. ದೂರದಿಂದ ನದಿ ನೀರು ಹರಿದು ಬರುವಾಗ ಬದಿಯಲ್ಲಿರತಕ್ಕಂಥ ಎಲೆಗಳೆಲ್ಲವನ್ನು ತೆಗೆದುಕೊಂಡು ಬರುವದರ ಜೊತೆಗೆ ಫಲವತ್ತಾದ ಮಣ್ಣನ್ನು ತೆಗೆದುಕೊಂಡು ಬಂದು ಕೆರೆಗಳನ್ನು ತುಂಬಿಸುತ್ತಿತ್ತು. ಆವತ್ತಿನ ದಿವಸ ಕೆರೆಯ ಗೋಡು ಮಣ್ಣನ್ನು ಹೊಲಕ್ಕೆ ಹಾಕುತ್ತಿದ್ದೆವು. ಯೂರಿಯಾ ಗೊಬ್ಬರನ್ನು ಆವತ್ತಿನ ದಿವಸ ನಾವು ಹಾಕುತ್ತಿರಲಿಲ್ಲ. ಗೋಡು ಮಣ್ಣನ್ನು ತೆಗೆದಾಗ ಕೆರೆಯಲ್ಲಿರತಕ್ಕಂಥ ಹೂಳನ್ನು ತೆಗೆದಂತೆ ಕೂಡ ಆಗುತ್ತಿತ್ತು. ಮತ್ತೆ ರಾಜಕಾಲುವೆಗಳನ್ನು ಕೂಡ ನಾವೇ ರಿಪೇರಿ

ಮಾಡಿಕೊಳ್ಳುತ್ತಿದ್ದೆವು. ಆದರೆ, ಈಗ ಆ ಜಾಗೃತಿ ಇಲ್ಲದೆ ಇರುವುದರಿಂದ ಇವತ್ತಿನ ದಿವಸ ನದಿಗಳು ಮತ್ತು ಕೆರೆಗಳು ಒಣಗಿ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಸಾವಿರಾರು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬೇರೆ ಬೇರೆ ಯೋಜನೆಗಳನ್ನು ತರುತ್ತಿದ್ದೇವೆ. ಆದರೆ, ನೀರಿನ ವ್ಯವಸ್ಥೆ ಮಾಡದೆ ಇದ್ದರೆ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಖಂಡಿತವಾಗಿ ಆಗುವುದಕ್ಕೆ ಸಾಧ್ಯವಿಲ್ಲ ವೆಂಬುದು ನನ್ನ ಅಭಿಪ್ರಾಯ. ಸ್ವಾತಂತ್ರ ಬಂದು 63 ವರ್ಷಗಳಲ್ಲಿ ನೀರಾವರಿಗೋಸ್ಕರ ನಾನಾ ಯೋಜನೆಗಳನ್ನು ತಂದಿದ್ದೇವೆ. ಆದರೆ, ಬರುತ್ತಾ ಬರುತ್ತಾ ಮಳೆಯ ಪ್ರಮಾಣ ಕಡಿಮೆಯಾಗಿದೆ. ಭೂಮಿಯಲ್ಲಿ ಪ್ರತಿವರ್ಷ ಅಂತರ್ಜಲ 40 ರಿಂದ 60 ಅಡಿ ಕೆಳಕ್ಕೆ ಹೋಗುತ್ತಿದೆ. ಆದರೆ, ಭೂಮಿಯಲ್ಲಿ ನೀರನ್ನು ತುಂಬಿಸತಕ್ಕಂಥ ಕೆಲಸವನ್ನು ನಾವು ಏನಾದರೂ ಮಾಡಿದ್ದೇವೆಯೆ? ಮಳೆಯ ಪ್ರಮಾಣದಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಾಸ ಬರಹುದು. ಸುಮಾರು 15 ರಿಂದ 20 ವರ್ಷಗಳ ಹಿಂದೆ ಬೆಂಗಳೂರಿನ ಸುತ್ತಮುತ್ತಲೂ ಮಳೆಯ ಪ್ರಮಾಣ ವಾರ್ಷಿಕ 860 ಮಿಲಿ ಮೀಟರ್ ಇತ್ತು. ಇವತ್ತಿನ ದಿವಸಗಳಲ್ಲಿ ಸುಮಾರು 50 ಮಿಲಿ ಮೀಟರ್‌ನಷ್ಟು ಕಡಿಮೆಯಾಗಿರಬಹುದು. ಆದ್ದರಿಂದ ಬರುವಂಥ ಮಳೆಯ ನೀರನ್ನು ಸರಿಯಾದ ರೀತಿಯಲ್ಲಿ ಸಂಗ್ರಹ ಮಾಡಿದರೆ ಖಂಡಿತವಾಗಿ ಮತ್ತೆ ಕೆರೆಗಳು ತುಂಬತಕ್ಕಂಥ ಅವಕಾಶ ಇದೆ. ಬೆಂಗಳೂರಿನಲ್ಲಿ ಕುಡಿಯುವ ನೀರಿಗಾಗಿ ಮೊದಲು ಅರ್ಕಾವತಿ ನದಿಯ ನೀರನ್ನು ಅವಲಂಬಿಸಿದ್ದೆವು. ಬೆಂಗಳೂರು ನಗರಕ್ಕೆ ಮೊದಲಿಗೆ ಕುಡಿಯುವ ನೀರು ಕೊಟ್ಟಂಥ ಅರ್ಕಾವತಿ ನದಿ ನಂದಿ ಬೆಟ್ಟದಿಂದ ಪ್ರಾರಂಭ ಆಗಿ ಸುಮಾರು 190 ಕಿ.ಮೀ. ಹರಿದು ಸಂಗಮದಲ್ಲಿ ಸೇರುತ್ತಿತ್ತು. ಈ ನದಿಯ ವಿಶೇಷ ಏನೆಂದರೆ, ಮಧ್ಯದಲ್ಲಿ ಸುಮಾರು 1200 ಕೆರೆಗಳನ್ನು ತುಂಬಿಸಿಕೊಂಡು ಈ ನದಿ ಹರಿಯುತ್ತಿತ್ತು. ಆದರೆ, 20 ವರ್ಷಗಳಿಂದ ಈ ನದಿ ಒಣಗಿ ಹೋಗಿದೆ. ಇದರಿಂದ ಆ ಭಾಗದಲ್ಲಿ ಬರತಕ್ಕಂಥ ಎಲ್ಲಾ ಕೆರೆಗಳು ಒಣಗಿ ಹೋಗಿವೆ. ಇಡೀ ರಾಜ್ಯದಲ್ಲಿಯೂ ಕೂಡ ಇದೇ ರೀತಿಯಾದ ಪರಿಸ್ಥಿತಿ ಉಂಟಾಗಿದೆ. ನಮ್ಮ ರಾಜ್ಯದಲ್ಲಿ ನೈಸರ್ಗಿಕವಾಗಿ ಮತ್ತು ದೈವದತ್ತವಾಗಿ ನೂರಾರು ನದಿಗಳು ಹರಿಯುತ್ತಿದ್ದು, ಇದರ ಬಗ್ಗೆ ಗಮನ ಕೊಡದೆ ಇವತ್ತಿನದಿವಸ ಮಾಡಬಾರದ ಅತ್ಯಾಚಾರವನ್ನು ನಾವು ನದಿಗಳ ಮೇಲೆ ಮಾಡಿದ್ದೇವೆ. ಮರಳು ಗಣಿಗಾರಿಕೆ ಮಾಡಿ ನದಿ ಪಾತ್ರಗಳನ್ನು ಬದಲಾಯಿಸಿದ್ದೇವೆ. ನದಿ ಪಕ್ಕದಲ್ಲಿ ಗಣಿಗಾರಿಕೆ ಮಾಡುವುದಕ್ಕೆ ನದಿಯನ್ನು ಬಗೆದು, ನದಿಗೆ ಹರಿದು ಬರುವಂಥ ನೀರು ಬಾರದ ರೀತಿಯಲ್ಲಿ ಇಡೀ

ರಾಜ್ಯಾದ್ಯಂತ ಆಗಿರುವುದನ್ನು ನಾವು ನೋಡುತ್ತಿದ್ದೇವೆ. ಇವತ್ತಿನದಿವಸ ಪ್ರತಿ ಹಳ್ಳಿಯಲ್ಲಿ ಸುಮಾರು 250 ರಿಂದ 300 ಬೋರ್‌ವೆಲ್‌ಗಳನ್ನು ಕೊರೆದಿದ್ದೇವೆ. ಮೊದಲು ವಿದ್ಯುಚ್ಛಕ್ತಿ ಇಲ್ಲದಂಥ ಸಂದರ್ಭದಲ್ಲಿ ಏತದ ಮುಖಾಂತರ ಸುಮಾರು 20 ರಿಂದ 30 ಅಡಿ ಆಳದ ಬಾವಿಗಳಿಂದ ನೀರನ್ನು ಮೇಲಕ್ಕೆ ತೆಗೆದು ಕುಡಿಯುವ ನೀರಗೆ ಮತ್ತು ವ್ಯವಸಾಯಕ್ಕೆ ಬಳಸಿಕೊಳ್ಳುತ್ತಿದ್ದೆವು. ಆವತ್ತಿನ ದಿವಸ ನಮ್ಮ ರೈತರ ಬದುಕು ವೈಜ್ಞಾನಿಕ ವಾಗಿಲ್ಲದಿದ್ದರೂ ಕೂಡ ಬಹಳ ಫಲವತ್ತಾಗಿ ಮತ್ತು ಸಮಾಧಾನಕಾರ ವಾದಂಥ ಜೀನವನ್ನು ಹಿಂದಿನ ದಿನಗಳಲ್ಲಿ ನಾವು ನಡೆಸಿಕೊಂಡು ಬರುತ್ತಿದ್ದೆವು. ಆದರೆ, ಕಾಲ ಬದಲಾವಣೆಯಾದ ಮೇಲೆ ನಾವು ವೈಜ್ಞಾನಿಕವಾಗಿ ಬಹಳ ಮುಂದುವರಿದಿದ್ದೇವೆಂದು ನಾವು ಏನು ಹೇಳಿಕೊಂಡೆವೊ ಅಲ್ಲಿಯೇ ನಾವು ಏನೋ ವ್ಯತ್ಯಾಸವನ್ನು ಮಾಡಿಕೊಂಡಿದ್ದೇವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ಪ್ರತಿ ಊರಿನಲ್ಲಿ ಸುಮಾರು 200 ರಿಂದ 300 ಬೋರ್‌ವೆಲ್‌ಗಳಿಗೆ ಏನೂ ಕಡಿಮೆ ಇಲ್ಲ. ಒಂದೊಂದು ಹಳ್ಳಿಯಲ್ಲಿ ಸುಮಾರು 300 ಬೋರ್‌ವೆಲ್‌ಗಳನ್ನು ಕೊರೆದು ನೀರನ್ನು ಮೇಲಕ್ಕೆ ತೆಗೆದಾಗ ಮತ್ತೆ ನೀರಿನ ಸಮಸ್ಯೆಯನ್ನು ಮುಂದಿನ ದಿನಗಳಲ್ಲಿ ಕಾಣುತ್ತೇವೆ. ಬೆಂಗಳೂರು ಸುತ್ತಮುತ್ತಲು ಮತ್ತು ಕೋಲಾರ, ತುಮಕೂರು ಜಿಲ್ಲೆಗಳಲ್ಲಿ 1100 ಅಡಿವರೆಗೆ ಬೋರ್‌ವೆಲ್‌ಗಳನ್ನು ಕೊರೆಯುತ್ತಿದ್ದೇವೆ. ಇನ್ನು 5 ವರ್ಷಗಳಲ್ಲಿ ಇದೇ ಪರಿಸ್ಥಿತಿ ಬಂದರೆ, ಮತ್ತೆ ಭೂಮಿಯಲ್ಲಿ 150 ರಿಂದ 200 ಅಡಿ ಕೆಳಕ್ಕೆ ನೀರು ಹೋಗುತ್ತದೆ. ಆದರೆ, ಮತ್ತೆ ಭೂಮಿಗೆ ನೀರನ್ನು ತಂಬಿಸತಕ್ಕಂಥ ಕೆಲಸವನ್ನು ಮಾಡುತ್ತಿಲ್ಲ. ಆದರೆ, ನೀರು ತುಂಬಿಸುವಂಥ ಸಾಧ್ಯತೆಗಳಿವೆ. ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿರವರು ನದಿಗಳನ್ನು ಜೋಡಣೆ ಮಾಡಬೇಕೆಂದು ಒಂದು ಕನಸನ್ನು ಕಂಡಿದ್ದರು. ನಮ್ಮ ರಾಜ್ಯದಲ್ಲಿ ಇವತ್ತಿನದಿವಸ ಕೆಲವು ಕಡೆ ಬರಗಾಲ ಇದೆ. ಬಹುಶಃ ದೇಶದಲ್ಲಿ ಎರಡನೇ ಬರಗಾಲ ಪೀಡಿತ ರಾಜ್ಯವೆಂದರೆ, ಅದು ಕರ್ನಾಟಕ. ಇದರಲ್ಲಿ ಹೆಚ್ಚಿನ ಪ್ರದೇಶ ಅಂದರೆ, ಸುಮಾರು 21% ನಷ್ಟು ಬರಗಾಲ ಪೀಡಿತ ಪ್ರದೇಶದಲ್ಲಿ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿ ನಮ್ಮ ಕರ್ನಾಟಕ ರಾಜ್ಯ ನಿಂತಿದೆ. ಇದಕ್ಕೆ ಕಾರಣ ವೇನೆಂದರೆ, ಪರಿಸರವನ್ನು ನಾಶ ಮಾಡಿತಕ್ಕಂಥದ್ದು, ಮತ್ತು ಇರತಕ್ಕಂಥ ಜಲಸಂಪನ್ಮೂಲವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡಿಲ್ಲ ಮತ್ತು ಉಳಿಸಿಕೊಂಡಿಲ್ಲ. ಆದ್ದರಿಂದ, ನನ್ನ ಸಲಹೆ ಏನೆಂದರೆ, ರಾಜಸ್ಥಾನದಲ್ಲಿ

ರಾಜೇಂದ್ರ ವರ್ಮ ಎಂಬ ಯುವಕ ಏನು ಮಾಡಿದ್ದಾನೆಂದರೆ, ಇವತ್ತಿನ ದಿವಸ ದೇಶದಲ್ಲಿ ಬರಗಾಲ ಇರತಕ್ಕಂಥ ಮೊದಲ ರಾಜ್ಯವಾದ ರಾಜಸ್ಥಾನ ದಲ್ಲಿ ಸತ್ತು ಹೋದಂಥ 5 ನದಿಗಳನ್ನು ಪ್ರಯತ್ನ ಮಾಡಿ ಮತ್ತೆ ಜೀವಂತ ವಾಗಿಟ್ಟು ಕೊಂಡಿರುವಂಥ ಬದಲಾವಣೆ ನಮ್ಮ ಕಣ್ಣು ಮುಂದೆ ಇದೆ. ನಮ್ಮ ರಾಜ್ಯದಲ್ಲಿ ಒಂದು ಕಾಲದಲ್ಲಿ ನಮ್ಮ ರೈತರ ಜೀವನಾಡಿಯಾದಂಥ ನದಿಗಳನ್ನು ನಾವೇಕೆ ಈಗ ಮತ್ತೆ ಪುನರ್ ಜೀವಗೊಳಿಸಬಾರದು? ಅನೇಕ ಕಡೆ ಪ್ರವಾಹ ಬಂದು ನದಿಗಳು ಉಕ್ಕಿ ಹರಿಯುತ್ತಿವೆ. ಇಂಥ ನದಿಗಳನ್ನು ಬೇರೆ ನದಿಗಳಿಗೆ ಎಕೆ ಜೋಡಿಸಬಾರದು? ಇವತ್ತಿನದಿವಸ ಏನಾಗಿದೆ ಎಂದರೆ, ರಾಜಕೀಯ ದೃಷ್ಟಿಯಿಂದ ಅಥವಾ ಬೇರೆ ಬೇರೆ ದೃಷ್ಟಿಯಿಂದ ಒಂದು ಊರಿನಿಂದ ಇನ್ನೊಂದು ಊರಿಗೆ ನೀರು ತರಬೇಕಾದರೆ, ನಾವು ವಿರೋಧ ವ್ಯಕ್ತಪಡಿಸುತ್ತೇವೆ. ಏಕೆಂದರೆ, ಆ ಭಾಗದ ಜನ ಮುಂದಿನ ಚುನಾವಣೆಯಲ್ಲಿ ಏನು ಮಾಡುತ್ತಾರೆಂಬ ಭಯ ಇರುತ್ತದೆ. ಆದರೆ, ಇದೇ ಪರಿಸ್ಥಿತಿ ಮುಂದುವರೆದಾಗ ಮುಂದಿನ 10 ವರ್ಷದಲ್ಲಿ ನಮಗೆ ಬಿ-ಫಾರಂ ಕೊಡುವುದಕ್ಕೆ ಬಂದರೆ ನಾವು ತೆಗೆದುಕೊಳ್ಳದೆ ಓಡಿ ಹೋಗುತ್ತೇವೆ. ಏಕೆಂದರೆ, ನಮ್ಮ ಕೈಯಿಂದ ಕುಡಿಯುವ ನೀರನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ತೊಟ್ಟು ನೀರು ರೈತರಿಗೆ ಸಿಗದಿದ್ದರೆ ಅವರೆಲ್ಲರೂ ನಮ್ಮ ಮೇಲೆ ಸಿಡಿದೇಳುತ್ತಾರೆ. ಈ ಒಂದು ಪರಿಸ್ಥಿತಿ ಬರುವುದಕ್ಕಿಂತ ಮೊದಲು ಎಚ್ಚೆತ್ತುಕೊಳ್ಳಬೇಕು. ಮೊನ್ನೆದಿವಸ ಅರ್ಕಾವತಿ ನದಿಗೆ ಸಂಬಂಧ ಪಟ್ಟಂತೆ ಆ ಭಾಗದ ಶಾಸಕರನ್ನು ಸೇರಿಸಿಕೊಂಡು ನಾವು ಪಾದಯಾತ್ರೆ ಯನ್ನು ಮಾಡಿದ್ದೇವೆ. 110 ಕಿ.ಮೀ. ಪಾದಯಾತ್ರೆಯನ್ನು ಮಾಡಿದಂಥ ಉದ್ದೇಶ ಏನೆಂದರೆ, ಅರ್ಕಾವತಿ ನದಿ ಪುನಶ್ಚೇತನ ಆಗಬೇಕೆಂದು ಹಿಂದಿನ ಮುಖ್ಯಮಂತ್ರಿಗಳಾಗಿದ್ದಂಥ ಸನ್ಮಾನ್ಯ ಕೃಷ್ಣರವರ ಕಾಲದಲ್ಲಿ ಅಂದರೆ 2003ನೇ ಇಸವಿಯಲ್ಲಿ ಇದಕ್ಕೆ ಗೆಜೆಟ್ ನೋಟಿಫಿಕೇಷನ್ ಮಾಡಿದ್ದರು. ಅಂದರೆ, ತಿಪ್ಪಗೊಂಡನಹಳ್ಳಿ ಕೆರೆಗೆ ಹರಿದು ಕೊಂಡು ಹೋಗುವ ಅರ್ಕಾವತಿ ನದಿಯ ಭಾಗದಲ್ಲಿ ಆ ಗೆಜೆಟ್ ಪ್ರಕಾರ ನದಿಯ ಎರಡೂ ಬದಿಯಲ್ಲಿ ಒಂದು ಕಿ.ಮೀ.ವರೆಗೆ ಯಾವುದೇ ಕಾರ್ಖಾನೆಗಳು ಬರಬಾರದು ಮತ್ತು ಮಲೀನವಾದ ನೀರನ್ನು ನದಿಯಲ್ಲಿ ಬಿಡಬಾರದು ಮತ್ತು ಆ ವ್ಯಾಪ್ತಿಯಲ್ಲಿ ಯಾವುದೇ ರೀತಿಯಾದ ಬಡಾವಣೆ ನಿರ್ಮಿಸಬಾರದೆಂದು ಹಾಗೂ ಯಾವುದೇ ಕಟ್ಟಡವನ್ನು ಕಟ್ಟಬಾರದೆಂದು 2003ನೇ ಇಸವಿಯಲ್ಲಿ ಆಗಿರತಕ್ಕಂಥ ಗೆಜೆಟ್ ನೋಟಿಫಿಕೇಷನ್ ಇಲ್ಲಿಯವರೆಗೆ ಆ ಭಾಗದ ಜನರಿಗೆ

ಗೊತ್ತಿಲ್ಲ. 18–20 ಅಧಿಕಾರಿಗಳನ್ನು ಸೇರಿಸಿ ಒಂದು ಗೆಜೆಟ್ ನೋಟಿಫಿಕೇಷನ್ ಬಹಳ ಚೆನ್ನಾಗಿ ಮಾಡಿದ್ದಾರೆ. ಮೊನ್ನೆ ದಿವಸ ನಾವು ಪಾದಯಾತ್ರೆ ಮಾಡಿದಾಗ ಅಲ್ಲಿ industrialist ಒಬ್ಬರು ಹಿಂದೆ ಮಾಡಿರುವ ಗೆಜೆಟ್ ನೋಟಿಫಿಕೇಷನ್ ನಮಗೆ ಗೊತ್ತಿಲ್ಲ ಎಂದು ಹೇಳಿದರು. ಆದರೆ, ಈಗ ಅರ್ಕಾವತಿ ನದಿಯನ್ನು ಪುನಶ್ಚೇತನ ಮಾಡಬೇಕೆಂದು ತಾವು ಬಂದಿದ್ದರಿಂದ ಡಿಸ್‌ಕನೆಕ್ಟ್ ಮಾಡುವುದಕ್ಕೆ ಬರುತ್ತಿದ್ದಾರೆಂದು ಹೇಳಿದರು. ನಾವು ಮೊನ್ನೆ ಪಾದಯಾತ್ರೆಯನ್ನು ಮಾಡಿದಂಥ ಉದ್ದೇಶಕ್ಕೆ ಬಹಳಷ್ಟು ಜನ ಬೇರೆ ಬೇರೆ ಟೀಕೆಗಳನ್ನು ಮಾಡಿದರು. ಕೈಗಾರಿಕೋದ್ಯಮಿಗಳ ಕಡೆ ದುಡ್ಡು ವಸೂಲು ಮಾಡುವುದಕ್ಕೆ ಇವರು ಪಾದ ಯಾತ್ರೆಯನ್ನು ಮಾಡುತ್ತಿದ್ದಾರೆಂದು ಹೇಳಿದರು. ಅವರು ಅವರ ಅನುಭವದ ಮಾತುಗಳನ್ನು ಹೇಳಿಕೊಂಡರು. ಆದರೆ ನಾವು ನಿಜವಾಗಿಯೂ ಮಾಡಿರುವಂಥ ಉದ್ದೇಶ 7 ಕ್ಷೇತ್ರಗಳಲ್ಲಿ ಆ ನದಿ 190 ಕಿ.ಮೀ.ವರೆಗೆ ಹರಿಯುತ್ತಿದೆ. 1200 ಹೆಚ್ಚು ಕೆರೆಗಳನ್ನು ತುಂಬಿಸತಕ್ಕಂಥ ನದಿ ಇವತ್ತು ಕೂಡ ಅದರ ಬಗ್ಗೆ ನಾವು ಪ್ರಯತ್ನ ಮಾಡಿದರೆ ಇನ್ನು ಐದು ವರ್ಷಗಳಲ್ಲಿ ಮತ್ತೆ ಕೆರೆಗಳು ತುಂಬುತ್ತವೆ. ಈಗಿನ ಮಳೆಯ ಪ್ರಮಾಣಕ್ಕೆ ಮತ್ತೆ ನದಿಯನ್ನು ನಾವು ಹರಿಸಬಹುದು. ನಂದಿಬೆಟ್ಟದ ಸುತ್ತಮುತ್ತ ಅಲ್ಲಿ ಐದು ಬೆಟ್ಟಗಳು ಬರುತ್ತವೆ. ಅಲ್ಲಿಂದ ಬರತಕ್ಕಂಥ ಮಳೆ ಅದು ಮುಂದಕ್ಕೆ ಬರುತ್ತಿಲ್ಲ. ನದಿಯನ್ನು ಆ ಬೆಟ್ಟದ ಬುಡದಲ್ಲಿಯೇಸಮತಟ್ಟು ಮಾಡಿ ಇಟ್ಟಿದ್ದಾರೆ. ಒತ್ತುವರಿಯನ್ನು ಮಾಡಿದ್ದಾರೆ. ನಾವು ಇದನ್ನು ಜಾಗೃತಿ ಮಾಡಬೇಕೆಂದು ಹೇಳಿ ಪಾದಯಾತ್ರೆಯನ್ನು ಮಾಡಿದೆವು. ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಬಜೆಟ್‌ಗಿಂತ ಮುಂಚೆ ಎರಡು ದಿವಸ ಇರುವಾಗ ನಾವು ಅವರನ್ನು ಕೇಳಿಕೊಂಡೆವು. ಈ ತರಹ ಅರ್ಕಾವತಿ ನದಿ ಸಂಪೂರ್ಣವಾಗಿ ಬತ್ತಿಹೋಗಿದೆ. ಆ ನದಿಯನ್ನು ಏನಾದರೂ ಮಾಡಿ ಉಳಿಸಿಕೊಳ್ಳಬೇಕು. ಅದರಿಂದ ನಮಗೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ. ಆ ಭಾಗದ ರೈತರಿಗೆ ಅನುಕೂಲವಾಗುತ್ತದೆಂದು ಹೇಳಿದಾಗ ಅವರು ಒಂದು ನಿಮಿಷ ಕೂಡ ಹಿಂದೆ ಮುಂದೆ ಯೋಚನೆ ಮಾಡಲಿಲ್ಲ. ಪ್ರಾರಂಭಿಕ ಸರ್ವೆಗೆ ಎಂದು ಬಜೆಟ್‌ನಲ್ಲಿ ಇವತ್ತು 2 ಕೋಟಿ ರೂ.ಗಳ ಅನುದಾನವನ್ನು ಕೊಟ್ಟಿದ್ದಾರೆ. ನಾವು ಪಾದಯಾತ್ರೆ ಮಾಡಿದ ಉದ್ದೇಶ ಜನಗಳನ್ನು ಇನ್‌ವಾಲ್ವ್ ಮಾಡಬೇಕು. ಇವತ್ತು ಕೇವಲ ಒಂದು ಸರ್ಕಾರದಿಂದ ಯೋಜನೆಗಳನ್ನು ಜಾರಿಗೆ ತರುವುದುಕ್ಕಾಗುವುದಿಲ್ಲ. ಒಬ್ಬ ಅಧಿಕಾರಿಯಿಂದ ಈ ಯೋಜನೆಗಳನ್ನು ಜಾರಿಗೆ ತರುವುದಕ್ಕಾಗುವುದಿಲ್ಲ.

ಜನಗಳ ಸಹಕಾರ ಬೇಕು. ಇದು ನಿಮ್ಮ ಕೆರೆ, ಯಾವುದೋ ರಾಜ ಮಹಾರಾಜರ ಕಾಲದಲ್ಲಿ ಕಟ್ಟಿದಂಥ ಕೆರೆಯನ್ನು ಜನಗಳಿಗೆ ಮುಚ್ಚುವುದಕ್ಕೆ ಅಧಿಕಾರವನ್ನು ಕೊಟ್ಟವರು ಯಾರು? ಆ ರಾಜ ಕಾಲುವೆಗಳು ಅರ್ಕಾವತಿ ನದಿಯ ದಡದಲ್ಲಿ ಸಾವಿರಾರು ಬರುತ್ತವೆ. ಇವತ್ತು ಅಲ್ಲಿ ಒಂದು ರಾಜ ಕಾಲುವೆ ಇಲ್ಲ. ಅವೆಲ್ಲವನ್ನು ಮುಚ್ಚಿ ಹಾಕಿದ್ದಾರೆ. ಆ ರಾಜ್ಯ ಕಾಲುವೆಗಳನ್ನು ತೆರವು ಮಾಡಬೇಕು. ಆ ಯುವಕರಿಗೆ ಹೇಳಿರುವಂಥದ್ದು, ನೀವು ಸರ್ಕಾರದ ಅನುದಾನಕ್ಕೆ ಕಾಯಬೇಡಿ. ನೀವೇ ಕೆಲಸವನ್ನು ಪ್ರಾರಂಭ ಮಾಡಿ. ಪ್ರಾಯೋಗಿಕವಾಗಿ ಮಾಡಿ. ಸರ್ಕಾರ ನಿಮ್ಮ ಜೊತೆಯಲ್ಲಿರುತ್ತದೆ ಎನ್ನುತಕ್ಕಂಥ ಮಾತುಗಳನ್ನು 4 ದಿವಸ ಪಾದಯಾತ್ರೆ ಮಾಡಿ ಹೇಳಿದಾಗ ಜನಗಳು ಆಗ ಹೇಳಿದರು. "ಹೌದು, ನಾವು ಬೋರ್‌ವೆಲ್‌ಗಳನ್ನು ನಂಬಿಕೊಂಡು ಇದೇ ರೀತಿ ನೀರು ಬರುತ್ತದೆಂದು ಅಂದುಕೊಂಡೆವು. ಮತ್ತೆ ನಾವು ಇನ್ನು ಮುಂದೆ ಕೆರೆಗಳನ್ನು ಉಳಿಸಿಕೊಳ್ಳಬೇಕು. ಮತ್ತೆ ನದಿಯನ್ನು ಉಳಿಸಿಕೊಳ್ಳಬೇಕು." ಎನ್ನತಕ್ಕಂಥ ಸಂಕಲ್ಪವನ್ನು ಇವತ್ತು ಹಳ್ಳಿಯ ಜನ ಹೇಳಿದರು. ನಮ್ಮದು ಅರ್ಧ ಎಕರೆ ಜಮೀನು ಹೋದರೂ ಚಿಂತೆ ಇಲ್ಲ, ನದಿಯನ್ನು ಅಗಲ ಮಾಡಿ ಎಂದು ಜನ ಇವತ್ತು ಸಂಕಲ್ಪವನ್ನು ತೊಟ್ಟಿರುವಾಗ ಸರ್ಕಾರ ಯಾವುದೇ ಯೋಜನೆಯನ್ನು ಜಾರಿಗೆ ತೆಗೆದುಕೊಂಡು ಬರಲಿ, ತಕ್ಷಣ ಮಾಡಬೇಕು. ಈ ವರ್ಷ ನಾವು ಹೇಳುವುದು. ಇನ್ನು 4 ವರ್ಷವಾದ ಮೇಲೆ ಶುರು ಮಾಡುವುದಾದರೆ ಖಂಡಿತವಾಗಿ ಈ ಯೋಜನೆಗಳು ಜಾರಿಗೆ ಬರುವುದಿಲ್ಲ. ಉದಾಹರಣೆಗೆ ನಮ್ಮ ಪರಮಶಿವಯ್ಯನವರು ನಮ್ಮ ಮಾನ್ಯ ಟಿ.ಬಿ.ಜಯಚಂದ್ರರವರಿಗೆ ಚೆನ್ನಾಗಿ ಗೊತ್ತು. 2003–04 ರಲ್ಲಿ ಸನ್ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದರು. ಅದು ಆದ ಮೇಲೆ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದರು. ಇಬ್ಬರೂ ಮುಖ್ಯಮಂತ್ರಿ ಗಳಾಗಿದ್ದಾಗ ಅದನ್ನು ಸರ್ವೆ ಮಾಡುವುದಕ್ಕೆ ಅದಕ್ಕೆ ಮುಂದಿನ ಬಜೆಟ್‌ನಲ್ಲಿ ಅನುದಾನ ಕೊಡಿ ಎಂದು ನಾನು ಕೇಳಿದರೂ ಕೂಡ ಅದು ಯಾವುದೋ ಕಾರಣದಿಂದ ಬರಲಿಲ್ಲ. ಪರಮಶಿವಯ್ಯನವರ ಒಂದು ವರದಿ ಇದೆ. ಆ ವರದಿಯನ್ನು ತರಿಸಿಕೊಳ್ಳಿ. ಇವತ್ತು ಅವರು ಹೇಳಿರತಕ್ಕಂಥದ್ದು ಇಡೀ ನಮ್ಮ ರಾಜ್ಯದಲ್ಲಿ ಏನು ಜಲಸಂಪನ್ಮೂಲ ಇದೆ, ಅದು ವ್ಯರ್ಥವಾಗಿ ಸಮುದ್ರಕ್ಕೆ ಹರಿದು ಹೋಗುತ್ತಿದೆ. ಆ ನದಿ ನೀರನ್ನು ಮತ್ತೆ ಎಲ್ಲೆಲ್ಲಿ ಬರಗಾಲ ಪೀಡಿತ ಜಿಲ್ಲೆಗಳು ಇದೆಯೋ ಆ ಜಿಲ್ಲೆಗಳಿಗೆ ನೀರು ತರತಕ್ಕಂಥ ವ್ಯವಸ್ಥೆಯನ್ನು ಖಂಡಿತವಾಗಿಯೂ ಕೂಡ ಮತ್ತೆ ಭೂಮಿಯಲ್ಲಿ ಮತ್ತೆ ಅಂತರ್ಜಲ ಮೇಲೆ

ಬರುತ್ತದೆ. ಕೆರೆಗಳು ತುಂಬುತ್ತವೆ, ಈ ಕೆರೆಗಳು ತುಂಬುವುದರಿಂದ 3-4 ವಿಧವಾದಂಥ ಅನುಕೂಲಗಳು ನಮ್ಮ ರೈತರಿಗೆ ಆಗುತ್ತದೆ. ಒಂದು ಹೈನುಗಾರಿಕೆ ಕೆರೆಗಳಲ್ಲಿ ನೀರು ಬಂತು ಎಂದರೆ, ಪಕ್ಕದಲ್ಲಿ ಹುಲ್ಲು ಬೆಳೆದು ಕೊಳ್ಳುತ್ತದೆ. ರೈತ ಪಶುಗಳನ್ನು ಸಾಕುತ್ತಾನೆ, ಅದರಿಂದ ಹೈನುಗಾರಿಕೆ ಜಾಸ್ತಿಯಾಗುತ್ತದೆ. ಇವತ್ತು ನಾವು ಮೀನುಗಳನ್ನು ತೆಗೆದುಕೊಳ್ಳಬೇಕಾದರೆ ಮೀನುಗಳು ಮಂಗಳೂರಿನಿಂದಲೇ ಬರಬೇಕಾಗುತ್ತದೆ. ಯಾವುದೋ ಕೆಲವು ಕೆರೆಗಳಲ್ಲಿ ಮಾತ್ರ ಮೀನು ಸಿಗುತ್ತಿದೆ. ಪ್ರತಿ ಕೆರೆಗಳು ತುಂಬಿದಾಗ ಮೀನುಗಾರಿಕೆ ಜಾಸ್ತಿಯಾಗಿ ಆ ಮೀನುಗಾರರಿಗೆ ಎಲ್ಲೋ ಒಂದು ಕಡೆ ಅನುಕೂಲವಾಗುತ್ತದೆ. ನದಿ ದಂಡೆ ಮತ್ತು ಕೆರೆಯ ಸುತ್ತಮುತ್ತಲೂ ಅರಣ್ಯವನ್ನು ನಾವು ಬೆಳೆಸಬಹುದು. ಅರಣ್ಯವನ್ನು ಬೆಳೆಸುತ್ತೇವೆಂದರೆ ಪಶು ಮತ್ತು ಪಕ್ಷಿ ಸಂಕುಲವೂ ಕೂಡ ಜಾಸ್ತಿಯಾಗುತ್ತದೆ. ಈ ದೃಷ್ಟಿಯಿಂದ ಅದರ ಕಡೆ ತಮ್ಮ ಸರ್ಕಾರ ಹೆಚ್ಚಿನ ಗಮನವನ್ನು ಹರಿಸಬೇಕು. ಇವತ್ತು ಸಾವಿರಾರು ಎಕರೆ ಸರ್ಕಾರಿ ಜಾಗವಿದೆ.

ಶ್ರೀ ಟಿ.ಬಿ. ಜಯಚಂದ್ರ : ಯಾರೂ ಮಂತ್ರಿಗಳು ಕಾಣುತ್ತಿಲ್ಲ.

ಅಧ್ಯಕ್ಷರು : ಎಲ್ಲರೂ ಇದ್ದರು ಈಗ ಹೋಗಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳು ಕೂಡ ಇಲ್ಲಿಯೇ ಇದ್ದರು. ಈಗ ಬರುತ್ತಾರೆ. ಅವರನ್ನು ಕರೆಸೋಣ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇದು ವಿಶೇಷವಾದ ಸದನದಲ್ಲಿ ವಿಶೇಷವಾದ ವಿಷಯದ ಮೇಲೆ ಚರ್ಚೆಯಾಗುವಾಗುವ ಸಮಯದಲ್ಲಿ ಈ ರೀತಿಯಾಗಿ ಇರತಕ್ಕಂಥ ರೀತಿಯಲ್ಲಿ ಹಾಜರಾತಿ ಇತ್ತು ಎಂದು ಹೇಳಿದರೆ, ಯಾರಿಗಾದರೂ ಸ್ಫೂರ್ತಿ ಬರುತ್ತದೆಯೆ ನೀವೇ ಹೇಳಿ. ಆದರೆ ಒಂದು ಕಾಂಪ್ಲಿಮೆಂಟ್ ಮಾಡುವಂಥದ್ದು, ಯಾವ ವಿಷಯವೇ ಇರಲಿ 100% ಹಾಜರಾತಿ ಇರಲೇಬೇಕು. ನೋಡಿ ನಾವು ಒಳ್ಳೆಯ ಕೆಲಸವನ್ನು ಮಾಡಿದರೆ ಹೋಗಳುತ್ತೇವೆ.

ಅಧ್ಯಕ್ಷರು : ಮಾನ್ಯ ಜೀವರಾಜ್‌ರವರೆ, ಮಾನ್ಯ ಮಂತ್ರಿಗಳನ್ನು ಕರೆಯಿರಿ. ಮಾನ್ಯ ಕೃಷಿ ಸಚಿವರು ಇಲ್ಲಿಯವರೆಗೆ ಇದ್ದರು, ಈಗ ಹೋಗಿದ್ದಾರೆ ಬರುತ್ತಾರೆ. ಮಾನ್ಯ ಕೃಷಿ ಸಚಿವರು ಈಗ ಕೌನ್ಸಿಲ್‌ನಲ್ಲಿ ಇದ್ದಾರೆ. ನೀವು ಮಾತನಾಡಿ ಅವರು ಇಲ್ಲಿಯವರೆಗೆ ಇದ್ದರಲ್ಲಾ? ಆಯಿತು ಕರೆಸೋಣ.

ಶ್ರೀ ಬಂಡೆಪ್ಪ ಕಾಶೆಂಪೂರ : ಮಾನ್ಯ ಅಧ್ಯಕ್ಷರೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಎಂದರೆ, ಎಲ್ಲಾ ಸಚಿವರುಗಳು ಇಲ್ಲಿ ಇರಬೇಕು. ಇದರಲ್ಲಿ ಎಲ್ಲಾ ಇಲಾಖೆಗಳು ಬರುತ್ತವೆ.

ಅಧ್ಯಕ್ಷರು : ಕೌನ್ಸಿಲ್‌ನಲ್ಲಿಯೂ ಕೂಡ ಇದೆ ವಿಷಯ ಚರ್ಚೆಯಾಗುತ್ತಿದೆ. ಈಗ ಹೇಳಿ ಕಳುಹಿಸಿದ್ದೇನೆ ಬರುತ್ತಾರೆ. ಮಾನ್ಯ ಜೀವರಾಜ್‌ರವರೆ, ಮಂತ್ರಿಗಳನ್ನು ಕರೆಸಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಈಶ್ವರಪ್ಪನವರು ಏನೋ ಮಾತನಾಡುತ್ತಾರೆ ಕೇಳಿ. ಮಾನ್ಯ ಕಾಶೆಂಪೂರ್ ಅವರೆ, ರಮಾನಾಥ್ ರೈ ರವರೆ ದಯವಿಟ್ಟು ಕುಳಿತುಕೊಳ್ಳಿ. ಕೃಷ್ಣ ಬೈರೇಗೌಡರೆ, ಏಕೋ ನೀವು ಅಪರೂಪವಾಗಿದ್ದೀರಿ? ನೀವು ಇವತ್ತು ಸದನಕ್ಕೆ ಬಂದಿದ್ದೀರಿ. ಕೃಷ್ಣ ಬೈರೇಗೌಡರೆ, ಪ್ಲೀಸ್ ಕುಳಿತುಕೊಳ್ಳಿ. ನೀವು ಹೇಳಿದಂತೆ ಮಾನ್ಯ ಮಂತ್ರಿಗಳನ್ನು ಕರೆಸುತ್ತೇನೆ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಸರ್ಕಾರಕ್ಕೆ ಜವಾಬ್ದಾರಿ ಇದೆ, ಎಲ್ಲಾ ಮಂತ್ರಿಗಳು ಇರಬೇಕು.

ಅಧ್ಯಕ್ಷರು : ಆಯಿತು, ಈಗ ಬಂದಿದ್ದಾರಲ್ಲವೆ? ವಿಶ್ವನಾಥ್‌ರವರೆ ನೀವು ಮುಂದುವರೆಸಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಈಶ್ವರಪ್ಪನವರು ಎದ್ದು ನಿಂತಿದ್ದರು. ಈ ಸದನದ ಮತ್ತು ಜನಗಳ ಪರವಾಗಿ ಒಂದು ಮನವಿ ಇದೆ. ನೀವು ಕರೆಂಟ್‌ನ್ನು ಈಗ ಐದು ಗಂಟೆ ಕೊಡುತ್ತಿದ್ದೀರಿ.

ಅಧ್ಯಕ್ಷರು : ಪ್ಲೀಸ್ ನೀವು ಮಾತನಾಡುವಾಗ ಮಾತನಾಡಿ. ದಯವಿಟ್ಟು ಇದು ಶೂನ್ಯವೇಳೆ ಅಲ್ಲ. ಈಗ ಈ ವಿಷಯವೇ ಬೇಡ. ಮಾನ್ಯ ವಿಶ್ವನಾಥ್‌ರವರೆ ನೀವು ಮುಂದುವರೆಸಿ.

ಶ್ರೀ ಎಸ್.ಆರ್.ವಿಶ್ವನಾಥ್ : ಮಾನ್ಯ ಅಧ್ಯಕ್ಷರೆ, ನಾನು ಇನ್ನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ನದಿಯ ದಡದಲ್ಲಿ ನೂರಾರು ಫ್ಯಾಕ್ಟರಿಗಳನ್ನು ಕಟ್ಟಿ ಕೊಳಚೆಯ ನೀರನ್ನು ಬಿಡುತ್ತಿದ್ದಾರೆ. ಅದಕ್ಕಿಂತಲೂ ಇನ್ನೊಂದು ದುಃಖಕರವಾದ ಸಂಗತಿ ಎಂದರೆ, ನಮ್ಮ Pollution Control Boardನ ಅಧಿಕಾರಿಗಳು ಮತ್ತು ಬೇರೆ ಬೇರೆ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಗೊತ್ತಾಗುತ್ತಿಲ್ಲ. ಕಾರ್ಖಾನೆಯ ಒಳಗಡೆ ಬೋರ್‌ವೆಲ್‌ಗಳನ್ನು 500–600 ಅಡಿ ಕೊರೆದು ನಂತರ ಅದು ಕೆಟ್ಟ ಮೇಲೆ ಆ ಫ್ಯಾಕ್ಟರಿ ವಿಷದ ನೀರನ್ನು ಆ

ಬೋರ್‌ವೆಲ್ ಒಳಗಡೆ ಬಿಡುತ್ತಾರೆ. ಅಲ್ಲಿ ಬಟ್ಟೆ ಕಾರ್ಖಾನೆಗಳು ಇವೆ, ಬಹಳ ವಿಷಕಾರಿಯಾದಂಥ ಅನಿಲವನ್ನು ಬೋರ್‌ವೆಲ್‌ಗಳ ಒಳಗಡೆ ಬಿಡುತ್ತಿದ್ದಾರೆ. ಆ ನೀರು 500–600 ಅಡಿ ಒಳಗಡೆ ಹೋಗಿ ಮತ್ತೆ ಪಕ್ಕದಲ್ಲಿ ಬೋರ್‌ವೆಲ್ ತೆಗೆದಾಗ ಆ ವಿಷದ ನೀರು ಮತ್ತೆ ಹೊರಗಡೆ ಬರುತ್ತದೆ. ಆ ವಿಷದ ನೀರನ್ನು ಜನ ಕುಡಿಯುತ್ತಾರೆ. ರೈತರು ಕೂಡ ವ್ಯವಸಾಯಕ್ಕೆ ಆ ನೀರನ್ನೇ ಉಪಯೋಗಿಸುತ್ತಿದ್ದಾರೆ. ವೈಜ್ಞಾನಿಕವಾಗಿ ಆ ವಿಷವನ್ನು ನೀರಿಗೆ ಬಿಟ್ಟರೆ ಆ ನೀರನ್ನು ಡೈಲ್ಯೂಟ್ ಮಾಡುವುದಕ್ಕೆ 20 ವರ್ಷ ಬೇಕಾಗುತ್ತದೆ. ಇವತ್ತು ನಿಮ್ಮ ಬೆಂಗಳೂರು ಸುತ್ತಮುತ್ತಲೂ ನೀವು ಯಾವುದೇ ನೀರನ್ನು ಆ ಕಾರ್ಖಾನೆಯ ಪಕ್ಕದಲ್ಲಿರುವ ನೀರನ್ನು ತೆಗೆಸಿ ಟೆಸ್ಟ್ ಮಾಡಿಸಿದರೆ ಒಂದು ಬೋರ್‌ವೆಲ್‌ನಲ್ಲಿರುವ ನೀರು ಕುಡಿಯುವುದಕ್ಕೆ ಯೋಗ್ಯವಾಗಿಲ್ಲ. ಅರ್ಕಾವತಿ ನದಿ ಇರಬಹುದು, ಕುಮುದ್ವತಿ ನದಿ ಇರಬಹುದು, ಪ್ರತಿಯೊಂದು ನದಿಗಳಿಗೂ ಕೂಡ ವಿಷದ ನೀರನ್ನು ಬಿಡತಕ್ಕಂಥ ಕೆಲಸವನ್ನು ಇವತ್ತು ಮಾಡುತ್ತಿದ್ದಾರೆ. ಅದನ್ನು ಸರ್ಕಾರ ಕಟ್ಟುನಿಟ್ಟಿನಿಂದ ತಡೆಯಬೇಕು. ರೈತರಿಗೆ ನೀರನ್ನು ಕೊಟ್ಟುಬಿಡಿ, ನೀರು ಕೊಡುತ್ತೇವೆಂದರೆ, ಉಳಿದದ್ದು ಎಲ್ಲವನ್ನು ಮಾಡಿಕೊಳ್ಳುವುದು ರೈತರಿಗೆ ಗೊತ್ತಿರುವ ವಿಚಾರ. ಮೊದಲನೆಯ ಆದ್ಯತೆ ನೀರನ್ನು ಸಂರಕ್ಷಣೆ ಮಾಡುವಂಥದ್ದು. ಕೆರೆಗಳ ಅಭಿವೃದ್ಧಿ ಮಾಡತಕ್ಕಂಥದ್ದು. ಸತ್ತು ಹೋಗಿರತಕ್ಕಂಥ ನದಿಗಳನ್ನು ಮತ್ತೆ ಜೀವಂತವಾಗಿಡುವಂಥ ಸಾಧ್ಯತೆಗಳು ಇರುವುದರಿಂದ ಅದನ್ನು ಮಾಡಬೇಕು. ಸರ್ಕಾರದ ಅಡಿಯಲ್ಲಿ ಲಕ್ಷಾಂತರ ಎಕರೆ ಜಾಗ ಇದೆ. ಆ ಜಾಗವನ್ನು ಸುಮ್ಮನೆ ಎಲ್ಲೋ ಒಂದು ಕಡೆ ವ್ಯರ್ಥವಾಗಿ ಇಟ್ಟುಕೊಂಡಿದ್ದೇವೆ. ಅದನ್ನು ಆ ಗ್ರಾಮದ ಸ್ತ್ರೀಶಕ್ತಿ ಸಂಘದವರಿಗೋ, ಯುವಕ ಸಂಘದವರಿಗೆ ಅಥವಾ ಗ್ರಾಮ ಪಂಚಾಯಿತಿಯವರಿಗೆ 20–30 ಎಕರೆಯನ್ನು ಲೀಸ್‌ನಲ್ಲಿ ಕೊಟ್ಟು ಆ ಜಮೀನಿನಲ್ಲಿ ಬೆಲೆ ಬಾಳತಕ್ಕಂಥ ಮರಗಳನ್ನು ಬೆಳೆಯುವುದಕ್ಕೆ ಅರಣ್ಯ ಇಲಾಖೆಯಿಂದ ನಮ್ಮ ಸರ್ಕಾರದಿಂದಲೇ ಗಿಡಗಳನ್ನು ಕೊಟ್ಟು ಬೆಳೆಸತಕ್ಕಂಥ ವ್ಯವಸ್ಥೆ ಮಾಡಬೇಕು. ಅದರಲ್ಲಿ ಸ್ವಲ್ಪ ಭಾಗ ವ್ಯವಸಾಯವನ್ನು ಮಾಡಿಕೊಳ್ಳು ವುದಕ್ಕೆ ಅವಕಾಶ ಮಾಡಿಕೊಡಿ. 25 ವರ್ಷವಾದ ಮೇಲೆ ಅದರಿಂದ ಬರತಕ್ಕಂಥ ಆದಾಯದಲ್ಲಿ 25% ಯಾರು ಸಂರಕ್ಷಣೆ ಮಾಡಿ ಬೆಳೆಸಿ ಕೊಂಡಿರುತ್ತಾನೆ ಅವನಿಗೆ ಕೊಡತಕ್ಕಕಂಥ ವ್ಯವಸ್ಥೆಯನ್ನು ಮಾಡಿದರೆ ಒಂದು ಅರಣ್ಯ ಬೆಳೆಯುತ್ತದೆ. ಆ ಭಾಗದ ನಿರುದ್ಯೋಗಿ ಯುವಕ ರೈತರು ಏನು ಇರುತ್ತಾರೆ, ಅವರಿಗೆ ಆದಾಯ ಬರತಕ್ಕಂಥ ಅವಕಾಶಗಳು ಸಾಕಷ್ಟು

ಇರುವುದರಿಂದ ವಿಶೇಷವಾಗಿ ನೀರಿನ ಬಗ್ಗೆ ಈ ರಾಜಕಾಲುವೆಗಳನ್ನು, ಈ ಕೆರೆಗಳನ್ನು ಈ ನದಿಗಳನ್ನು ಪುನಶ್ಚೇತನ ಮಾಡುವುದರ ಬಗ್ಗೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂಥ ಸನ್ಮಾನ್ಯ ಸಭಾಧ್ಯಕ್ಷರಿಗೂ ಹಾಗೂ ಎಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಯು.ಟಿ.ಖಾದರ್(ಉಳ್ಳಾಲ) : ಮಾನ್ಯ ಅಧ್ಯಕ್ಷರೆ, ಕೃಷಿಗೆ ಮತ್ತು ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟಂತೆ ವಿಶೇಷವಾದಂತಹ ಅಧಿವೇಶನದಲ್ಲಿ ನನ್ನ ಕೆಲವು ಅನಿಸಿಕೆ ಹಾಗೂ ಸಲಹೆ ಸೂಚನೆಗಳನ್ನು ಕೊಡುವುದಕ್ಕೆ ಇಚ್ಚೆಪಡುತ್ತೇನೆ. ಇದರ ಬಗ್ಗೆ ಹಲವಾರು ಜನರು ಮಾತನಾಡಿದ್ದಾರೆ. ಇವತ್ತು ಭಾರತ ದೇಶ ಬಲಿಷ್ಠವಾಗಬೇಕೆಂಬುದು ನಮ್ಮೊಬ್ಬರ ಅನಿಸಿಕೆಯಲ್ಲ. ಈ ಹಿಂದೆ ಸ್ವತಂತ್ರಪೂರ್ವದಲ್ಲಿ ಯಾರು ಸ್ವಾತಂತ್ರ್ಯ ಹೋರಾಟಗಾರರು, ಮಹಾತ್ಮ ಗಾಂಧೀಜಿಯವರ ಒಂದು ಕನಸು ಯಾವುದು ಇತ್ತು, ಅದು ಈ ದೇಶಕ್ಕೆ ಸ್ವಾತಂತ್ರವನ್ನು ಕೊಡುವುದಲ್ಲ; ಈ ದೇಶವನ್ನು ವಿಶ್ವದಲ್ಲಿಯೇ ಬಲಿಷ್ಠ ದೇಶವಾಗಿ ಅದು ಒಂದನೇ ಸ್ಥಾನಕ್ಕೆ ಬರಬೇಕೆಂಬ ಕನಸನ್ನು ಕಂಡಿದ್ದರು. ಆ ಕನಸು ನನಸಾಗಬೇಕಾದರೆ ಈ ದೇಶದಲ್ಲಿರುವ ಬೆರಳೆಣಿಕೆಯಷ್ಟು ಜನರು ಮಾತ್ರ ಶ್ರೀಮಂತರಾದರೆ ಸಾಕಾಗುವುದಿಲ್ಲ. ಈ ದೇಶದ ಪ್ರತಿಯೊಂದು ಗ್ರಾಮೀಣ ಮಟ್ಟದ ಜನರೂ ಕೂಡ ಅದು ರೈತರು, ಕೃಷಿಕರು ಇರಲಿ, ಬಡವರು ಇರಲಿ, ಗ್ರಾಮೀಣ ಮಟ್ಟದ ಜನರು ಇವತ್ತು ಅಭಿವೃದ್ಧಿಯಾದರೆ ಮಾತ್ರ ದೇಶವು ಮುಂದಿನ ದಿನಗಳಲ್ಲಿ ಬಲಿಷ್ಠವಾಗುತ್ತದೆ ಎಂಬುದು ಇವತ್ತು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಅಂತಹ ಸಂದರ್ಭದಲ್ಲಿ ಈ ದೇಶದ ಪ್ರತಿಯೊಬ್ಬ ರೈತನೂ, ಪ್ರತಿಯೊಬ್ಬ ಗ್ರಾಮೀಣ ಜನತೆಯೂ ಅವರ ಒಂದು ಸೇವೆಯನ್ನು ಈ ದೇಶಕ್ಕೆ ಕೊಟ್ಟಾಗ ಆ ಒಂದು ಬಲಿಷ್ಠವಾದ ಉದ್ದೇಶದಿಂದ ನಾವು ಈ ಒಂದು ರಾಜ್ಯ ಸರ್ಕಾರವೇ ಇರಲಿ, ಕೇಂದ್ರ ಸರ್ಕಾರವೇ ಇರಲಿ, ಎಲ್ಲರೂ ಕೂಡ ಒಂದು ಅತ್ಯಗತ್ಯ ಒಮ್ಮತದಿಂದ ಹೋಗುವಂತಹ ಕೆಲಸದ ಜೊತೆಯಲ್ಲಿ ಇವತ್ತು ಕರ್ನಾಟಕದ ಮೂಲಕ ವಿಶೇಷವಾದಂತಹ ಸಂಕಲ್ಪವನ್ನು ನಾವು ಮಾಡಬೇಕೆಂದು ಇಚ್ಚಿಸುತ್ತೇನೆ. ಅದು ಯಾವ ರೀತಿಯಲ್ಲಿ ಇರಬಹುದು ಎಂದು ಹೇಳಿದರೆ "ಮಾದರಿ ಗ್ರಾಮ, ಆದರ್ಶ ಕರ್ನಾಟಕ, ಬಲಿಷ್ಠ ಭಾರತ" ಎಂಬ ಸಂಕಲ್ಪವನ್ನು ಇಟ್ಟುಕೊಂಡು ನಮ್ಮ ಕಾರ್ಯಸೂಚಿಯನ್ನು ಹಮ್ಮಿಕೊಂಡು ಹೋದಾಗ ಖಂಡಿತವಾಗಿಯೂ ಬಹಳಷ್ಟು ಪ್ರಯೋಜನ ಈ ದೇಶಕ್ಕಾಗುತ್ತದೆ. ಅಂತಹ ಒಂದು ಸಂದರ್ಭದಲ್ಲಿ

ಗ್ರಾಮೀಣ ಮಟ್ಟದಲ್ಲಿ ವಾಸ ಮಾಡುವಂತಹ ಕೃಷಿಕರು ಮತ್ತು ರೈತರಿಗೆ ಇವತ್ತು ನಾವು ವಿಶೇಷವಾದಂತಹ ಮಹತ್ವವನ್ನು ಕೊಡುವುದು ಅತ್ಯಗತ್ಯವಾಗಿದೆ. ಯಾವುದೇ ಒಬ್ಬ ಕೃಷಿಕರು ಇರಲಿ, ರೈತರು ಇರಲಿ, ಅವನು ಬೆಳೆಯುವಂತಹ ಬೆಳೆಗಳಿಗೆ ಇವತ್ತು ಅವನು ಖರ್ಚು ಮಾಡಿರುವಂತಹ ಹಣ, ಅದಕ್ಕೆ ಉತ್ಪಾದನೆಯ ಮುಖಾಂತರ ಅವನು ಖರ್ಚು ಮಾಡಿರುವಷ್ಟು ಕೂಡ ಇವತ್ತು ಅವನಿಗೆ ಬೆಲೆಯು ಸಿಗದೇ ಇದ್ದರೆ, ಇವತ್ತು ಯಾವ ರೈತ ಕೃಷಿ ಮಾಡುವುದಕ್ಕೆ ಇನ್ನಿತರ ಬೆಳೆಯ ಆಹಾರ ಧಾನ್ಯಗಳನ್ನು ಉತ್ಪನ್ನಗಳನ್ನು ವಹಿಸುತ್ತಾನೆಂದು ಹೇಳಬೇಕು. ಅಲ್ಲಿ ಯಾರೇ ಇದ್ದರೂ ಅಷ್ಟೇ, ಇವತ್ತು ನಾವು ಶಾಸಕರಾಗಿ ಜನಸಾಮಾನ್ಯರಿಗೆ ಬಹಳಷ್ಟು ಕೆಲಸವನ್ನು ಮಾಡಿದರೆ ಅದಕ್ಕೆ ಮಾನ್ಯತೆ ಸಿಕ್ಕುವಂತಹ ಸಂದರ್ಭದಲ್ಲಿ ನಂತರ ಬಹಳಷ್ಟು ಕೆಲಸವನ್ನು ಮಾಡುವಂತಹ ಯೋಚನೆಯು ಇರುವುದಿಲ್ಲ. ಅದೇ ರೀತಿಯೂ ಕೂಡ ಇವತ್ತು ರೈತರು ಇರಲಿ, ಕೃಷಿಕರು ಇರಲಿ, ಅವರು ಬೆಳೆಯುವಂತಹ ಅಡಿಕೆಗೆ ಅಥವಾ ಭತ್ತಕ್ಕೆ, ತೆಂಗಿನಕಾಯಿಗೆ ಉತ್ಪಾದನೆ ಯನ್ನು ಮಾಡುವಂತಹ ವಸ್ತುಗಳಿಗೆ ಅತ್ಯಗತ್ಯವಾದ ಅನುದಾನವನ್ನು ಅವರು ಕೊಡುವಂತಹ ಕೆಲಸಗಳು ಆಗಬೇಕು. ಇವತ್ತು ಉದಾಹರಣೆಗೆ ಒಂದು ಎಕರೆ ಬಿಳಿ ಅಡಿಕೆಯನ್ನು ಮಾಡಬೇಕಾದರೆ ಅವನಿಗೆ 48,000 ರೂಪಾಯಿಗಳು ಖರ್ಚಾಗುತ್ತದೆ. ಇವತ್ತಿನ ಮಾರ್ಕೆಟ್ ರೇಟ್‌ನಲ್ಲಿ ಅವನಿಗೆ ಉತ್ಪಾದನೆ ಯಾಗುವುದು 36,000 ರೂಪಾಯಿಗಳು, ಅವನಿಗೆ 12,000 ರೂಪಾಯಿಗಳು ಕಡಿಮೆಯಾಗುವುದು ಆದರೆ ಆತನು ಅದನ್ನು ಏತಕ್ಕಾಗಿ ಬೆಳೆಯುವುದಕ್ಕೆ ಹೋಗುತ್ತಾನೆ? ಆದಕಾರಣ ಇವತ್ತು ಅಡಿಕೆ, ತೆಂಗಿನಕಾಯಿ ಇರಲಿ ಅಥವಾ ನಮ್ಮ ಭತ್ತಕ್ಕೆ ಇರಲಿ, ಕಬ್ಬಿಗೆ ಇರಲಿ, ಎಲ್ಲಾ long term crop ಯಾವುದು ಇದೆ, ಅದಕ್ಕೆ ವಿಶೇಷವಾದಂತಹ ಬೆಂಬಲ ಬೆಲೆಯನ್ನು ಶಾಶ್ವತವಾಗಿ ಘೋಷಿಸಬೇಕು. ಏಕೆಂದು ಹೇಳಿದರೆ ಒಬ್ಬ ರೈತನು ಇವತ್ತು ಏನಾದರೂ ಬೆಳೆಯನ್ನು ಬೆಳೆದ ನಂತರ ಅವನಿಗೆ ಆತ್ಮವಿಶ್ವಾಸ ಮತ್ತು ಧೈರ್ಯ ಬರಬೇಕು. ಈಗ ನಾನೊಬ್ಬ ಅಡಿಕೆ ಬೆಳೆಗಾರನಾಗಿ ನಾನು ಮಾಡುವುದಾದರೆ ನನಗೆ ಒಂದು ವಿಶ್ವಾಸ ಇರಬೇಕು. ನಾಳೆ ಯಾವ ಅತಿವೃಷ್ಟಿ ಮತ್ತು ಅನಾವೃಷ್ಟಿ ಏನು ಬಂದರೂ ಕೂಡ ಅವರು ಬೆಳೆಸಿದ ಆ ಒಂದು ಆಹಾರ ಉತ್ಪಾದನೆಯ ಬೆಳೆಗಳಿಗೆ ಇಷ್ಟೊಂದು ಶಾಶ್ವತವಾದಂತಹ ಬೆಂಬಲ ಬೆಲೆ ಇಷ್ಟು ಸಿಗುತ್ತದೆ ಎಂಬ ಧೈರ್ಯ ಮತ್ತು ಆತ್ಮವಿಶ್ವಾಸ

ಬಂದಾಗ ಕೃಷಿಕರು ಅದಕ್ಕೆ ಒತ್ತು ಕೊಡುವುದು ಅವಶ್ಯಕವಾಗುತ್ತದೆ. ಅವರ ಮಕ್ಕಳು ಕೂಡ ಇವತ್ತು ಕೃಷಿಕರವಾಗಿ, ರೈತರಾಗಿ ವಿವಿಧ ಬೆಳೆಗಳನ್ನು ಬೆಳೆಯುವಂತಹ ಆಸಕ್ತಿಯನ್ನು ಸಹ ತೋರಿಸುತ್ತಾರೆ. ಇಲ್ಲದೆ ಹೋದರೆ ಎಲ್ಲಾ ರೈತರ ಮಕ್ಕಳು ಸಹ ಪೇಟೆ ಪಟ್ಟಣಗಳಿಗೆ ಹೋಗುತ್ತಾರೆ. ಅವರು ತಲೆ ಇದ್ದರೂ ಕೂಡ ಅವರು ಕೃಷಿ ಮಾಡದೆ ಬೀಡಾ ಅಂಗಡಿಯನ್ನು ಇಟ್ಟು ಅಲ್ಲಿ ಇಲ್ಲಿ ಕುಳಿತುಕೊಳ್ಳುವಂತಹ ವ್ಯವಸ್ಥೆಯಾಗುತ್ತದೆ. ಇವತ್ತು ತಾವು ಬೆಂಬಲ ಬೆಲೆಯನ್ನು ಶಾಶ್ವತವಾಗಿ ಕೊಡಬೇಕು. ಇವತ್ತು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರ್ಥಿಕ ವ್ಯವಸ್ಥೆಯು ಕುಸಿದುಹೋಗಿದೆ. ಇವತ್ತು ಎಲ್ಲಾ ರೈತರು ತಲ್ಲಣವಾಗಿದ್ದಾರೆ. ಬಹುತೇಕ ಎಲ್ಲಾ ಬಿಳಿ ಅಡಿಕೆ ನಾಶವಾಗಿದೆ. ಆದರೂ ಕೂಡ ಸರಿಯಾದ ಬೆಲೆ ಇಲ್ಲದಂತಹ ಸಂದರ್ಭದಲ್ಲಿ ಇವತ್ತು ಆ ಒಂದು ಬಿಳಿ ಅಡಿಕೆಗೆ ಒಂದು ಬೆಂಬಲ ಬೆಲೆಯನ್ನು ಸರ್ಕಾರವು ತಕ್ಷಣ ಘೋಷಿಸಬೇಕು. ರೈತರ ಸಂಕಷ್ಟಕ್ಕೆ ತಾವು ಪರಿಹಾರವನ್ನು ಸೂಚಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ, ಇವತ್ತು ದೀರ್ಘ ಬೆಳೆಯಾದಂತಹ ಅಡಿಕೆ ಇರಲಿ, ತೆಂಗು ಹಾಗೂ ಇತ್ಯಾದಿ ಇರಲಿ, ಅವನ ಆಯಸ್ಸಿನಲ್ಲಿ ಅವನು ಒಮ್ಮೆ ಮಾಡುತ್ತಾನೆ. ಆಗ ಆಗದೆ ಇದ್ದರೆ ಅವನು ಮತ್ತೆ ಮಾಡುವುದಕ್ಕಾ ಗುವುದಿಲ್ಲ. ಇವತ್ತು ತೆಂಗಿನಮರವನ್ನು ನೆಟ್ಟು 7 ವರ್ಷಗಳ ಕಾಲ ಕಾದರೆ ಮತ್ತೆ ಅವನಿಗೆ 2.50 ರೂಪಾಯಿಯಿಂದ 3.00 ರೂಪಾಯಿಗಳು ಮಾತ್ರ ಸಿಗುತ್ತದೆ. ಈ ರೀತಿಯಾದರೆ ಇದಕ್ಕೆ ಯಾರು ಉತ್ತೇಜನವನ್ನು ಕೊಡುತ್ತಾ ರೆಂದು ನಾವು ಆಲೋಚನೆಯನ್ನು ಮಾಡಬೇಕಾಗುತ್ತದೆ. ಇಂತಹವರಿಗೆ ಒಂದು ನೆಮ್ಮದಿಯನ್ನು ಮತ್ತು ಆತ್ಮವಿಶ್ವಾಸವನ್ನು ಮೂಡಿಸುವಂತಹ ಕೆಲಸವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಅಡಿಕೆ ಮತ್ತು ತೆಂಗಿನಕಾಯಿ ಮತ್ತು ನಮ್ಮ ಕಬ್ಬಿನ ಜೊತೆಯಲ್ಲಿ ಭತ್ತಕ್ಕೂ ಕೂಡ ವಿಶೇಷವಾದಂತಹ ಮಹತ್ವವನ್ನು ನಾವು ಕೊಡಬೇಕಾಗುತ್ತದೆ. ನಾವು ಇವತ್ತು ಎಷ್ಟೇ ದೊಡ್ಡ ಸ್ಥಾನಕ್ಕೆ ಹೋದರೂ ಕೂಡ ಅದು Prime Minister ಇರಲಿ, ಮುಖ್ಯಮಂತ್ರಿಗಳು ಇರಲಿ, ಶಾಸಕರು ಇರಲಿ, ಇವತ್ತು ಅಕ್ಕಿಯನ್ನು ತಿನ್ನದೇ ಯಾರು ಕೂಡ ಜೀವಿಸುವುದಕ್ಕೆ ಸಾಧ್ಯವಿಲ್ಲ. ಅಂತಹ ಸಂದರ್ಭದಲ್ಲಿ ಈ ವರ್ಷ ಈ ದೇಶದಲ್ಲಿ ಶೇಕಡ 30ರಷ್ಟು ಭತ್ತದ ಉತ್ಪಾದನೆಯು ಕಡಿಮೆಯಾಗಿದೆ. ಇದನ್ನು ನಾವು ಬೇರೆ ಬೇರೆ ಯೋಜನೆಯ ಮುಖಾಂತರ ಜಾಸ್ತಿ ಮಾಡಬೇಕಾಗಿದೆ. ಆದುದರಿಂದ ಇವತ್ತು ರಾಜ್ಯ ಸರ್ಕಾರವು ವಿಶೇಷ ವಾದಂತಹ ಮನವಿಯನ್ನು ಕೇಂದ್ರಸರ್ಕಾರಕ್ಕೆ ಮಾಡಬೇಕು. ಬತ್ತದ ಯಾವ

ಪೈರನ್ನು ನಾವು ನೆಡುತ್ತೇವೋ, ಮತ್ತು ನಾವು ಅದನ್ನು ಕಟಾವು ಮಾಡುತ್ತೇವೋ ಇವೆರಡೂ ಕೂಡ ಉದ್ಯೋಗ ಖಾತರಿ ಯೋಜನೆಯಲ್ಲಿ ಬರುವಂತಹ ಒಂದು ಠರಾವನ್ನು ಈ ಅಧಿವೇಶನದಲ್ಲಿ ನಾವು ಮಂಡಿಸಬೇಕಾಗುತ್ತದೆ. ಅದರ ಮುಖಾಂತರ ಎಲ್ಲರೂ ಕೂಡ ಯಾರದು ಗದ್ದೆ ಇದೆ, ಅವರು ಭತ್ತವನ್ನು ಬೆಳೆಸುವಲ್ಲಿ ವಿಶೇಷವಾದಂತಹ ಆಸ್ತಿಯನ್ನು ವಹಿಸಿದರೆ ಖಂಡಿತವಾಗಿ ಮುಂದಿನ ದಿನಗಳಲ್ಲಿ ಈ ದೇಶಕ್ಕೆ ಸಮಾಜಕ್ಕೆ ಒಂದು ದೊಡ್ಡದಾದಂತಹ ಶಕ್ತಿ ಬರುತ್ತದೆ ಎಂದು ಹೇಳುವುದಕ್ಕೆ ಇಚ್ಚಿಸುತ್ತೇನೆ. ಉದ್ಯೋಗ ಖಾತರಿ ಯೋಜನೆಯಲ್ಲಿ ವಿಶೇಷವಾದಂತಹ ಮಹತ್ವವನ್ನು ಕೊಡುವಂತಹದನ್ನು ಮಾಡಿದರೆ ಇವತ್ತು ಕೃಷಿಗೆ ಬಹಳಷ್ಟು ಪ್ರಯೋಜನವಾಗುತ್ತದೆ ಎಂದು ಹೇಳುವುದಕ್ಕೆ ಇಚ್ಚಿಸುತ್ತೇನೆ. ಅದೇ ರೀತಿಯಲ್ಲಿ ಇವತ್ತು ಖರೀದಿ ಹಾಗೂ ಮಾರಾಟ ಕೇಂದ್ರವನ್ನು ಪ್ರತಿಯೊಂದು ದೊಡ್ಡ ಹಳ್ಳಿಯಲ್ಲಿ ಮಾಡಬೇಕು. ಇವತ್ತು ಗ್ರಾಮ ಮಟ್ಟದಲ್ಲಿ ಹಳ್ಳಿಯಲ್ಲಿ ಅದು ಯಾವುದೇ ಒಂದು ಕೃಷಿ ಇರಲಿ, ಯಾವುದೇ ಒಂದು ಉತ್ಪಾದನೆಯೂ ಇರಲಿ, ಯಾರಾದರೂ ಮಾಡಿ ಅದನ್ನು ಮಾರಬೇಕಾದರೆ ಮತ್ತೆ 20 ಕಿ.ಮೀ. 60–70 ಕಿ.ಮೀ. ಬಂದು ಪೇಟೆಗೆ ಬರಬೇಕು. ಯಾರದರೂ ಅದನ್ನು ಖರೀದಿಸಿದರೂ ಕೂಡ, ಅವನು ಮತ್ತೆ 60–70 ಕಿ.ಮೀ. ಹೋಗುವಂತಹದ್ದು ಆಗುತ್ತಿದೆ. ಆದಕಾರಣ 10 ಕಿ.ಮೀ. ಒಳಗಡೆ ಪ್ರತಿಯೊಂದು ದೊಡ್ಡ ಹಳ್ಳಿಯಲ್ಲಿ ಒಂದು ಮಾರಾಟ ಕೇಂದ್ರ ಅದೇ ರೀತಿಯಾಗಿ ಒಂದು ಖರೀದಿ ಕೇಂದ್ರವನ್ನು ಕೂಡ ಎಪಿಎಂಸಿಯ ಮುಖಾಂತರ ಮಾಡಿದರೆ ಇದರಿಂದ ರೈತರಿಗೆ ಮತ್ತು ಕೃಷಿಕರಿಗೆ ಆ ಪ್ರದೇಶದ ಜನಸಾಮಾನ್ಯರಿಗೆ ಇದರಿಂದ ಬಹಳಷ್ಟು ಉಪಕಾರವಾಗುತ್ತದೆ. ಅದೇ ರೀತಿಯಾಗಿ ಹೈನುಗಾರಿಕೆಯೂ ಅಷ್ಟೇ. ಇವತ್ತು ಜನರು ಒಂದು ಲೀಟರ್ ನೀರನ್ನು ಕುಡಿಯುವುದಕ್ಕೆ 15 ರೂಪಾಯಿಗಳನ್ನು ಕೊಟ್ಟು ನೀರನ್ನು ತೆಗೆದುಕೊಳ್ಳುತ್ತಾರೆ. ಆದರೆ ಇವತ್ತು ನಾವು ಒಂದು ಲೀಟರ್ ಹಾಲಿಗೆ 12 ರೂಪಾಯಿಯನ್ನು ಕೊಡುವಂತಹ ವ್ಯವಸ್ಥೆಯಾಗಿದೆ. ಅದೇ ರೀತಿಯಲ್ಲಿ ಇಂತಹ ಒಂದು ಯೋಜನೆಗೆ ಯಾವ ರೀತಿಯಲ್ಲಿ ಹೈನುಗಾರಿಕೆಯನ್ನು ಹೆಚ್ಚು ಮಾಡಿಸುವಂತಹದ್ದನ್ನು ಮಾಡಬಹುದು ಅಥವಾ ಭೌಗೋಳಿಕವಾ ದಂತಹ ಪರಿಸ್ಥಿತಿಯನ್ನು ನೋಡಿ ಇವತ್ತು ಒಂದು ಪರಿಹಾರವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಹೈನುಗಾರಿಕೆಯಲ್ಲಿ ಏಕೆಂದು ಹೇಳಿದರೆ ಇವತ್ತು ಬೆಂಗಳೂರಿನ ವಾತಾವರಣ ಹೈನುಗಾರಿಕೆಗೆ

ಉತ್ತಮವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಇನ್ನಿತರ ಉಡುಪಿ, ಕಾರವಾರ ಇನ್ನಿತರ ಕಡೆಯಲ್ಲಿ ಅಲ್ಲಿ ಅಷ್ಟು ಆಗುವುದಿಲ್ಲ. ಆದಕಾರಣ ಇನ್ನು ಹೆಚ್ಚು ಪ್ರೋತ್ಸಾಹದ ಹಣವನ್ನು ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಜಿಲ್ಲೆಯ ಹೈನುಗಾರಿಕೆಗೆ ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಬೇರೆಬೇರೆ ಸಮಸ್ಯೆಗಳು ಇದ್ದಂತಹ ಸಂದರ್ಭದಲ್ಲಿ ಕೆಲವೊಂದು ಸಲಹೆ ಮತ್ತು ಅನಿಸಿಕೆಗಳನ್ನು ಸರ್ಕಾರದ ಮುಂದಿಡುವುದಕ್ಕೆ ಇಚ್ಚಿಸುತ್ತೇನೆ. ಇದನ್ನೆಲ್ಲಾ ಬಹಳಷ್ಟು ವಿಶೇಷವಾಗಿ ಪರಿಗಣಿಸಬೇಕೆಂದು ಇವತ್ತು ನಾನು ಕೋರುತ್ತಿದ್ದೇನೆ. ಒಂದು ಯಾವುದು ಎಂದು ಹೇಳಿದರೆ ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ವಿಶ್ವನಾಥ್‌ರವರು ಹೇಳಿದರು. ನಮ್ಮ ದೇಶದಲ್ಲಿ ನಮ್ಮ ರಾಜ್ಯ ಬರಗಾಲದಲ್ಲಿ ಎರಡನೆಯ ಸ್ಥಾನಕ್ಕೆ ಬಂದಿದೆ. ಎಲ್ಲರೂ ಕೂಡ ಸಂಕಷ್ಟದಲ್ಲಿದ್ದಾರೆ. ಅತಿವೃಷ್ಟಿ ಮತ್ತು ಅನಾವೃಷ್ಟಿ ಆಗಿರುವುದರಿಂದ ಆಗಿದೆ. ಆದಕಾರಣ ಸರ್ಕಾರವು ಇವತ್ತು ಕೃಷಿಕರ ಮತ್ತು ರೈತರ ಮೇಲೆ ವಿಶೇಷ ವಾದಂತಹ ಕಾಳಜಿಯನ್ನು ಇಟ್ಟಿದ್ದರೆ ಈ ವರ್ಷ ಒಂದು ಆದೇಶವನ್ನು ಹೊರಡಿಸಬೇಕಾಗಿದೆ. Moratorium ಎಂದು ಆದೇಶ ಹೊರಡಿಸಬೇಕು. ಅಂದರೆ ಈ ವರ್ಷ ಬ್ಯಾಂಕಿನವರು ಬಂದು ಹಣವನ್ನು ವಸೂಲು ಮಾಡುವುದಕ್ಕೆ ರೈತರಿಗೆ ಉಪದ್ರವಮಾಡಬಾರದು. ಇಲ್ಲಿ ಬೇಕಾದಷ್ಟು ಮನವಿಯೂ ನಮ್ಮ ಮುಂದೆ ಬಂದಿದೆ. ಎಲ್ಲಾ ರೈತರ ಮನೆಗೆ ಇವತ್ತು ಬ್ಯಾಂಕಿನವರು ಸೊಸೈಟಿಯವರು ಆ ಸೊಸೈಟಿ ಮತ್ತು ಈ ಸೊಸೈಟಿಯವರು ಎಂದು ಹೋಗಿ ಹಣವನ್ನು ವಸೂಲಿ ಮಾಡುವುದರ ಬಗ್ಗೆ ಅವರನ್ನು ಪೀಡಿಸುತ್ತಿದ್ದಾರೆ. ಅವರಿಗೆ ಮಾನಸಿಕವಾಗಿ ಕಿರುಕುಳವನ್ನು ಕೊಡುತ್ತಿದ್ದಾರೆ. ಅದಕ್ಕಾಗಿ ಸರ್ಕಾರವು ಆದೇಶವನ್ನು ಮಾಡಬೇಕಾಗಿದೆ. ಈ ವರ್ಷ ಯಾವ ಸೊಸೈಟಿಯವರು, ಬ್ಯಾಂಕಿನವರು ಈ ರೈತರುಗಳ ಮನೆಗೆ ಹೋಗಿ ಹಣವನ್ನು ವಸೂಲು ಮಾಡಬಾರದು ಎಂದು Moratorium ಆದೇಶವನ್ನು ಸರ್ಕಾರವು ಹೊರಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಎರಡನೆಯದು ಅಡಿಕೆ ಕೃಷಿಗೆ ಅವರಿಗೆ ಪುನರ್ ವಸತಿಯನ್ನು ಕಲ್ಪಿಸಲು ವಿಶೇಷ ಪ್ಯಾಕೇಜ್ ಅದನ್ನು ಡೈವರ್ಟ್ ಮಾಡುವುದಕ್ಕೆ ಅದರ ಬಗ್ಗೆ ತಾವು ಆಲೋಚನೆಯನ್ನು ಮಾಡಬೇಕು. ಇವತ್ತು ಅಡಿಕೆ ಇಲ್ಲದಿದ್ದರೂ ಆ ಕೃಷಿ ಸರಿಯಿಲ್ಲ ಎನ್ನುವುದು ಬಹಳ ಕಷ್ಟವಾಗುತ್ತದೆ. ಹೇಗೆ ಅದನ್ನು ಬದಲಾವಣೆ ಮಾಡಿ ಆ ಪ್ರದೇಶವು ಬೇರೆ ಕೃಷಿಗೆ ಹೋಗಬಹುದು ಎಂಬ ಆಲೋಚನೆ

ಯನ್ನು ಮಾಡುವುದರ ಬಗ್ಗೆಯೂ ಕೂಡ ವಿಶೇಷವಾದಂತಹ ಪ್ಯಾಕೇಜನ್ನು ಸರ್ಕಾರವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬಿಳಿ ಅಡಿಕೆಗೆ ಆ ಒಂದು ಅನುದಾನವನ್ನು ಕೂಡ ಈ ವರ್ಷವೇ ಅದನ್ನು ಈಗಲೇ ಕನಿಷ್ಟವಾಗಿ 110 ರೂಪಾಯಿಗಳಾದರೂ ಘೋಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. 2006–07ನೇ ಇಸವಿಯಲ್ಲಿ ನಮ್ಮ 25,000 ರೂ. ಸಾಲವನ್ನು ಮನ್ನಾ ಮಾಡುವುದಾಗಿ ಸರ್ಕಾರವು ಘೋಷಿಸಿದೆ. ಬ್ಯಾಂಕಿನವರು ಸಾಲವನ್ನು ಮನ್ನಾ ಕೂಡ ಮಾಡಿದರು. Immediate ಆಗಿ ರಿನ್ಯೂ ಕೂಡ ಮಾಡಿದರು. ಇದರಿಂದ ಏನಾಗಿದೆ ಎಂದು ಹೇಳಿದರೆ 2008ರಲ್ಲಿ ಕೇಂದ್ರ ಸರ್ಕಾರವು ಸಂಪೂರ್ಣ ಸಾಲವನ್ನು ಮನ್ನಾ ಮಾಡುವಂತಹ ಯೋಜನೆಯನ್ನು ಹಮ್ಮಿಕೊಂಡಿದ್ದು, ಯಾರೆಲ್ಲರೂ ರಿನ್ಯೂ ಮಾಡಿದ್ದಾರೆ, ಅವರೆಲ್ಲರೂ ಅವಕಾಶದಿಂದ ವಂಚಿತರಾಗಿದ್ದಾರೆ.

ಅದರ ಪ್ರಯೋಜನ ಸಿಗುವಂತಾಗಬೇಕೆಂದು ಒತ್ತಾಯವನ್ನು ಮಾಡುತ್ತೇನೆ. ಪ್ರಕೃತಿ ವಿಕೋಪವಾದ ಅತಿವೃಷ್ಟಿ, ಅನಾವೃಷ್ಟಿಯಿಂದ ಹಾನಿಗೊಳಗಾದ ಜಿಲ್ಲೆಗಳು ಶೇಕಡ 50 ರಷ್ಟು ಯಾವುದಿವೆ, ಅಲ್ಲಿ ಸಂಪೂರ್ಣವಾಗಿ ಬೆಳೆ ನಾಶ ಹೊಂದುವುದು ಅಥವಾ ಅಲ್ಲಿ ರೈತರಿಗೆ ತೊಂದರೆಯಾಗುವುದು. ಶೇಕಡ 50 ಕ್ಕಿಂತ ಹೆಚ್ಚು ತೊಂದರೆಯಾದ ಸಂದರ್ಭದಲ್ಲಿ ಆ ಜಿಲ್ಲೆಗಳಲ್ಲಿ ಆಣೆವಾರಿ ಪದ್ಧತಿಯನ್ನು ಶೀಘ್ರವಾಗಿ ಅಳವಡಿಸುವುದು. ಆಣೆವಾರಿ ಪದ್ಧತಿ ಎಂದರೆ ಉದಾಹರಣೆಗೆ ಅಲ್ಲಿ ಮೂರು ವರ್ಷಗಳವರೆಗೆ ರೈತರಿಂದ ಟ್ಯಾಕ್ಸ್ ವಸೂಲು ಮಾಡಬಾರದು ಅಥವಾ ಮೂರು ವರ್ಷಗಳವರೆಗೆ ಎಲ್ಲಾ ರೀತಿಯ exemption ಕೊಟ್ಟು ಅವರು ಮತ್ತೆ ಮೇಲೆ ಬರುವಂಥ ಅವಕಾಶವನ್ನು, ಈ ಪದ್ಧತಿಯನ್ನು ಅಳವಡಿಸಿ ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಕೃಷಿಯಲ್ಲಿ long-term and short-term crops ಎರಡೂ ಇವೆ. ಇದರಲ್ಲೇನಾಗಿದೆಯೆಂದರೆ ನಾವು ಬೆಂಬಲ ಬೆಲೆ ಕೊಡುವಾಗ ಆಲೋಚನೆ ಮಾಡಿ ಒಂದೇ ರೀತಿಯಿಂದ ಕೊಡುವಂಥ ವ್ಯವಸ್ಥೆ ಆಗುತ್ತದೆ. ಆದಕಾರಣ ಇವತ್ತು long-term crop ಯಾವುದಿದೆ, ಅದು ಅಡಿಕೆ ಇರಲಿ, ತೆಂಗಿನಕಾಯಿ ಇರಲಿ, ಅವರಿಗೆ ದುಪ್ಪಟ್ಟು ಕೊಡುವಂತಹ ಕೆಲಸವನ್ನು ಮಾಡಬೇಕು. ಇವತ್ತು 52 ದಿವಸಗಳಲ್ಲಿ ಸೌತೆಕಾಯಿ ಬೆಳೆದರೆ ಅವನಿಗೆ 5 ದಿವಸಗಳಲ್ಲಿ 5 ರಿಂದ 15 ರೂ.ಗಳವರೆಗೆ ಸಿಗುತ್ತದೆ. ಏಳು ವರ್ಷಗಳವರೆಗೆ ಕಾದರೆ ಅವನಿಗೆ ಒಂದು ತೆಂಗಿನಕಾಯಿಗೆ

ಸಿಗುವುದು 2.50 ರೂ.ಗಳು. ಆದಕಾರಣ ಈ ಎಲ್ಲಾ ಸಮಸ್ಯೆಗಳನ್ನು ಅರಿತು ಒಂದು ವಿಶೇಷವಾದ ಯೋಜನೆಯನ್ನು ಹಮ್ಮಿಕೊಳ್ಳಬೇಕೆಂದು ಹೇಳಬಯಸುತ್ತೇನೆ. ವಿಶೇಷವಾಗಿ ನಮ್ಮ ರಾಜ್ಯ, ದೇಶ ಅಭಿವೃದ್ಧಿಯಾಗಬೇಕು. ಇದಕ್ಕೆ ಮೂಲಭೂತ ಸೌಕರ್ಯ ಸಿಗಬೇಕು ಎನ್ನುವ ದೃಷ್ಟಿಯಿಂದ ವಿಶೇಷ ಆರ್ಥಿಕ ವಲಯ ಯೋಜನೆಯನ್ನು ನಗರ ಪ್ರದೇಶದಲ್ಲಿ ಮಾಡಿ ಹಲವಾರು ಕೃಷಿ ಪ್ರದೇಶಗಳಲ್ಲಿ ಇವತ್ತು ಅದನ್ನು ಒತ್ತುವರಿ ಮಾಡಿ ಕೃಷಿ ಮಾಡುವಂಥ ಪರಿಸ್ಥಿತಿ ಇದೆ. ಆದಕಾರಣ ಇಂಥ ಒಂದು ವಿಶೇಷ ಆರ್ಥಿಕ ವಲಯ ಬಂದಂಥ ಸಂದರ್ಭದಲ್ಲಿ ಅದಕ್ಕೊಂದು parallel ಆಗಿ ವಿಶೇಷ ಕೃಷಿ ವಲಯ ಯೋಜನೆಯನ್ನು ರೂಪಿಸಬೇಕು. ಒಂದು ಪ್ರದೇಶದಲ್ಲಿ ಅಪೂರ್ಣವಾದ ಕೃಷಿ ವಲಯವನ್ನು ಸೃಷ್ಟಿಸಿ ಅಲ್ಲಿಗೆ ಬೇಕಾದಂಥ ನೀರಾವರಿ ಯೋಜನೆ, ಅಲ್ಲಿಗೆ ಯಾವರೀತಿ ಸೌಲಭ್ಯಗಳು ಬೇಕಾಗಿವೆ ಅದಕ್ಕನುಗುಣವಾಗಿ ಒಂದು ಕೃಷಿ ವಲಯವನ್ನು ಸ್ಥಾಪಿಸಬೇಕೆಂದು ನಾನು ಮನವಿ ಮಾಡುತ್ತೇನೆ. ಇವತ್ತು ಕೃಷಿಗೆ ಪೂರಕವಾದ ಹೈನುಗಾರಿಕೆ, ಜೇನು ಸಾಕಣೆ, ಆಡುಸಾಕಣೆ ಹಾಗೂ ಇನ್ನಿತರ ಕೃಷಿಗೆ ಸಂಬಂಧಪಟ್ಟಂತಹವುಗಳಿಗೆ ಅನುದಾನ ಮತ್ತು ಸವಲತ್ತುಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕರಾವಳಿ ಪ್ರದೇಶದಲ್ಲಿರುವಂಥ ಮೀನುಗಾರಿಕೆ ಕೂಡ ಒಂದು ಕೃಷಿ ಎನಿಸಿಕೊಂಡಿರುವುದರಿಂದ ಅವರಿಗೂ ಕೂಡ ಹಲವಾರು ಸವಲತ್ತುಗಳನ್ನು ಕೊಡಬೇಕೆಂದು ನಾವು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ. ಕೃಷಿ ಜೀವನ ಭದ್ರತೆಗೆ ವಿಮಾ ಯೋಜನೆ ಏನಾಗಿದೆ ಎಂದು ಹೇಳಿದರೆ ಒಂದು ಪ್ರದೇಶ ಅಥವಾ ಜಿಲ್ಲೆಯಲ್ಲಿ ಅನಾವೃಷ್ಟಿಯಾದಾಗ ಅಲ್ಲಿ ವಿಮಾ ಯೋಜನೆ ಇದೆ. ಅದು ವೈಯಕ್ತಿಕವಾಗಿ ನನ್ನ ಒಬ್ಬನ ತೋಟದಲ್ಲಿನ ಬೆಳೆಗಳಿಗೆ ರೋಗ ಬಂದು ಹಾಳಾಗಿದೆ, ಆದರೆ ಅದಕ್ಕೆ ವಿಮಾ ಯೋಜನೆ ಇಲ್ಲದಂಥ ಪರಿಸ್ಥಿತಿ ಇದೆ. ಆದಕಾರಣ ಕೃಷಿಗೂ ಕೂಡ ವೈಯಕ್ತಿಕ ವಿಮಾ ಯೋಜನೆಯನ್ನು ಅನುಷ್ಠಾನಗೊಳಿಸಬೇಕೆಂದು, ಇವೆಲ್ಲವನ್ನು ರಾಜ್ಯ ಸರ್ಕಾರ ವಿಶೇಷ ಆಸಕ್ತಿಯಿಂದ ಮಾಡಬೇಕೆಂದು ಮನವಿ ಮಾಡುತ್ತೇನೆ. ನಮ್ಮ ರೈತರ ಬಹಳಷ್ಟು ಸಮಸ್ಯೆಯನ್ನು ಇವತ್ತು ದೂರ ಮಾಡಬಹುದಾದರೆ ಒಂದು ಆಯೋಗವನ್ನು ರಚಿಸುವಂಥ ಅಗತ್ಯವಿದೆ. ಕರ್ನಾಟಕ ರಾಜ್ಯ ಸಾಲ ಪರಿಹಾರ ಆಯೋಗವನ್ನು ಮಾಡಬೇಕು. ಇದೊಂದು Karnataka State Farmer's Debt Commission ಮಾಡಿ ಯಾವೊಬ್ಬ ರೈತನಿಗೆ, ಕೃಷಿಕನಿಗೆ ಅವನು

ಸಂಪೂರ್ಣ ಆದಾಯ ಆ ಸಂಪನ್ಮೂಲದಿಂದ ಬರುವಂಥ ಸಂದರ್ಭದಲ್ಲಿ ಅತಿವೃಷ್ಟಿ ಅನಾವೃಷ್ಟಿಯಿಂದ ಕಷ್ಟಪಡುತ್ತಿದ್ದ ಸಂದರ್ಭದಲ್ಲಿ ಈ ಒಂದು ಕಮಿಷನ್ ಮೂಲಕ ಮನವಿ ಕೊಟ್ಟಾಗ ಅವನ ಸಮಸ್ಯೆಯನ್ನು ಪರಿಹರಿಸಿ 1.00 ಲಕ್ಷ ರೂ.ಗಳನ್ನು ಪರಿಹಾರ ಧನವಾಗಿ ಅವನ ಬ್ಯಾಂಕ್ ಖಾತೆಗೆ ಆಯೋಗದವರು ಕೊಡುವಂತೆ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕು ಅಥವಾ Housing Scheme ಅನ್ನು ರಚಿಸುವ ಮೂಲಕ ವಿಶೇಷವಾದಂತಹ ಪ್ರಯೋಜನವನ್ನು ಕೊಡಬೇಕೆಂದು ಕಳಕಳಿಯಿಂದ ವಿನಂತಿ ಮಾಡುತ್ತೇವೆ. ನಮ್ಮ ದೇಶದ, ರಾಜ್ಯದ ರೈತರ ಬಗ್ಗೆ ನಾವು ಬಹಳಷ್ಟು ಹೆಮ್ಮೆ ಪಟ್ಟುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಚೈನಾದ ಬಹಳಷ್ಟು ಜನ ರೈತರು ವಯಸ್ಸಾದರೂ ಕೆಲಸ ಮಾಡುತ್ತಾರೆಂದು ಹೇಳಿದರು. ನಾವು ಕೂಡ ನಮ್ಮ ರೈತರ ಬಗ್ಗೆ ಹೆಮ್ಮೆಯಿಂದ ಹೇಳಬೇಕು, ಚೈನಾ ಇರಲಿ, ಅಮೆರಿಕಾ ಇರಲಿ, ಇಂಗ್ಲೆಂಡ್ ಇರಲಿ, ಅಮೆರಿಕ, ಇಂಗ್ಲೆಂಡ್‌ಗೆ ಡೆಮಾಕ್ರಸಿ ಬಂದು 300–400 ವರ್ಷಗಳಾಗಿವೆ. ನಮ್ಮ ದೇಶ ಸಂಪೂರ್ಣವಾಗಿ ನಾಶವಾಗಿದ್ದರೂ ಕೇವಲ 60 ವರ್ಷಗಳಲ್ಲಿ ಮತ್ತೆ ಸದೃಢವಾಗಿ ನಿಲ್ಲಿಸಿ ವಿಶ್ವದಲ್ಲೇ ತಲೆ ಎತ್ತಿ ಜೀವಿಸುವಂತಹ ಅವಕಾಶ ಕೊಟ್ಟಿದ್ದಾರೆ ಅದು ನಮ್ಮ ದೇಶದ, ರಾಜ್ಯದ ರೈತರು ಎಂದು ಹೇಳಬೇಕು. ಅವರಿಗೆ ಪೂರಕವಾದ 90 ವರ್ಷದ ಪ್ರಾಯದ ರೈತನು ದುಡಿದರೆ ಅವನಿಗೆ ಸ್ವಲ್ಪ ಹೆಚ್ಚು ಆದಾಯ ಬರುತ್ತದೆಂದು ಗೊತ್ತಾದಾಗ ನಮ್ಮ ಹಳ್ಳಿಯಲ್ಲಿರುವ ಹೆಚ್ಚು ವಯಸ್ಸಾದ ರೈತರು ಗದ್ದೆಯಲ್ಲಿ ಕೆಲಸ ಮಾಡಿ ಆ ಆದಾಯ ಗಳಿಸಲಿಕ್ಕೆ ಪ್ರಭಾವ ಬೀರುತ್ತಾರೆ. ಆ ಒಂದು ವ್ಯವಸ್ಥೆ ಇವತ್ತು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಚೈನಾ ದೇಶಕ್ಕೆ ಹೋದಾಗ ನಮ್ಮ ಕೃಷಿ ಸಚಿವರನ್ನು ಇಲ್ಲೇ ಬಿಟ್ಟು ಹೋಗಿದ್ದಾರೆ, ಕಾರಣ ಏನೆಂದು ಗೊತ್ತಿಲ್ಲ, ಆದ್ದರಿಂದ ಮುಂದಿನ ದಿನಗಳಲ್ಲಾದರೂ ಆ ಸಚಿವರು ದೇಶಗಳನ್ನು ಸುತ್ತಾಡಿ ಅದರ ಬಗ್ಗೆ ತಿಳಿವಳಿಕೆ ಮೂಡಿಸಿಕೊಳ್ಳುವುದು ಒಂದು. ಚೈನಾಗಿಂತಲೂ ನಮ್ಮ ದೇಶದ ಬಹಳಷ್ಟು ಹಳ್ಳಿಗಳಿಗೆ ನಮ್ಮ ಮಂತ್ರಿಗಳು, ಇನ್ನಿತರ ಐಎಎಸ್ ಅಧಿಕಾರಿಗಳು ಹೋಗಿ ಅಲ್ಲಿನ ಕೆಲವೊಂದು ವಿಚಾರಗಳನ್ನು ಅರಿತಾಗ, ನಮಗೆ ಬಹಳಷ್ಟು ಇನ್ನೂ ಉತ್ತಮವಾದ ಅಭಿಪ್ರಾಯ ಅಥವಾ ಪ್ರಯೋಜನ ಬರುತ್ತದೆ. ಕೃಷಿಗೆ ಸಂಬಂಧಪಟ್ಟಂತೆ ಆ ಸಮಸ್ಯೆಗಳನ್ನು ಪರಿಹರಿಸಬೇಕು. ಪಂಚಾಯತ್‌ರಾಜ್ ಬಗ್ಗೆ ಎರಡು ಮಾತು ಹೇಳಬಯಸುತ್ತೇನೆ. ಪಂಚಾಯತ್‌ರಾಜ್ ಎಂದರೆ

ಅದೊಂದು ವ್ಯಾಪಕವಾದ ವ್ಯವಸ್ಥೆ. ಪಂಚಾಯತ್‌ರಾಜ್ ದೇಶದಲ್ಲಿ ಅಭಿವೃದ್ಧಿ ಯಾಗಬೇಕಾದರೆ ಎಲ್ಲರೂ ಕೂಡ ಇದರಲ್ಲಿ ಭಾಗವಹಿಸಬೇಕು. ಆದಕಾರಣ ಪಂಚಾಯತ್‌ರಾಜ್ ವ್ಯವಸ್ಥೆ ಯಶಸ್ವಿಯಾಗಬೇಕಾದರೆ ವಿಶೇಷವಾದ ಅರಿವನ್ನು ಇವತ್ತು ಜನರ ಮಧ್ಯೆ ಮೂಡಿಸಬೇಕಾಗುತ್ತದೆ. ಜನಜಾಗ್ರತೆಯನ್ನು ಗಳಿಸಬೇಕಾಗುತ್ತದೆ. ಜನರಿಗೆ ಪಂಚಾಯತ್‌ರಾಜ್ ವ್ಯವಸ್ಥೆಯ ಬಗ್ಗೆ ವಿಶೇಷವಾದ ಅರಿವಿಲ್ಲ. ಜನರು ಏನಾದರೂ ಕೆಲಸಕ್ಕೆ ಹೋದರೆ ಒಬ್ಬೊಬ್ಬರು ಒಂದೊಂದು ಮಾತನಾಡುತ್ತಾರೆ. ಗ್ರಾಮೀಣಾಭಿವೃದ್ಧಿಯ ಬಗ್ಗೆ ಜನಸಾಮಾ ನ್ಯರಲ್ಲಿ ವಿಶೇಷವಾದ ಅರಿವು ಮೂಡಿಸುವಂಥ ಕೆಲಸ ಮಾಡಬೇಕು. ಅದರಲ್ಲಿ ಸ್ವಾರ್ಥವಿಲ್ಲದೆ ಜನರು ಅದರಲ್ಲಿ ವಿಶೇಷವಾಗಿ ಭಾಗವಹಿಸುವಂತಾಗಬೇಕು. ಜನಪ್ರತಿನಿಧಿಗಳಿರಲಿ, ಜನರಿರಲಿ ಅಥವಾ ಇನ್ನಿತರರಿರಲಿ, ಅಲ್ಲಿ ಗ್ರಾಮೀಣಾ ಭಿವೃದ್ಧಿಯಾಗಬೇಕಾದರೆ ಯಾವುದೇ ರೀತಿಯ ಸ್ವಾರ್ಥ ಇರದೆ ಭಾಗವಹಿಸು ವಂತಾಗಬೇಕು. ಪಂಚಾಯತ್‌ರಾಜ್ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಜೊತೆಗೂಡಿಕೊಂಡು ಯಾವ್ಯಾವ ಯೋಜನೆ ಗಳಿವೆ, ಅವು ನೇರವಾಗಿ ಇವತ್ತು ಗ್ರಾಮ ಪಂಚಾಯತಿಯ ಮೂಲಕ ಜನರಿಗೆ ಮುಟ್ಟಿಸು ವಂಥ ಕೆಲಸ ಇವತ್ತು ಮಾಡಬೇಕಾಗಿದೆ. ಉದಾಹರಣೆಗೆ ಸಾವಯವ ಎಂಬ ಅತ್ಯುತ್ತಮ ಯೋಜನೆ ಇದೆ. ಅದು implement ಆಗಿದ್ದು ಅದರಿಂದ ದುಷ್ಪರಿಣಾಮವಾಗಿದೆ ಎಂದು ಹೇಳಬಯಸುತ್ತೇನೆ. ಸಾವಯವ ಯಾವ ಗುಣಮಟ್ಟದ್ದು ಎಂದು ಟೆಸ್ಟ್ ಮಾಡುವಂತಹ ಹಕ್ಕು ಕೃಷಿ ಇಲಾಖೆಗೆ ಇರುವುದಿಲ್ಲ ಅಥವಾ ಗ್ರಾಮ ಪಂಚಾಯಿತಿಯಲ್ಲಿ ಎಷ್ಟು ಹಣ ಬಂದಿದೆ ಎಂದು ಯಾರಿಗೆ ಹಣ ದೊರೆತಿದೆ ಎಂದು ಗೊತ್ತಿರುವುದಿಲ್ಲ. ಆದಕಾರಣ ಸಾವಯವ ಫಲಾನುಭವಿಗಳನ್ನು ಗ್ರಾಮ ಪಂಚಾಯಿತಿಯಿಂದಲೇ ಆಯ್ಕೆ ಮಾಡಬೇಕು. ಕೃಷಿ ಇಲಾಖೆ ಆ ಕ್ವಾಲಿಟಿಯನ್ನು ಟೆಸ್ಟ್ ಮಾಡಬೇಕು. ಇವತ್ತು ಆಶ್ರಯ ಯೋಜನೆಯಲ್ಲಿ ಹಲವಾರು ಸಮಸ್ಯೆಗಳಿವೆ, ಬಹಳಷ್ಟು ಜನ ಇದರ ಬಗ್ಗೆ ಹೇಳಿರುವುದರಿಂದ ಇದರ ಬಗ್ಗೆ ಹೆಚ್ಚೇನು ಹೇಳಲಿಕ್ಕೆ ಹೋಗುವುದಿಲ್ಲ. ಆದಷ್ಟು ಬೇಗನೆ ಇದರ ಬಗ್ಗೆ ಒಂದೊಂದು ಯೋಜನೆ, ಸುತ್ತೋಲೆ ಬರುತ್ತದೆ. ಇದಕ್ಕೆ ಆರ್.ಟಿ.ಸಿ. ಮಾಡುವಂಥ ಆ ಕಾನೂನನ್ನು ರದ್ದುಪಡಿಸ ಬೇಕೆಂದು ಕೇಳಿಕೊಂಡು ಸೆಕ್ಷನ್ 94(ಸಿ)ಗೆ ಮತ್ತೊಂದು ಅವಕಾಶ ಕೊಡಬೇಕೆಂದು ಕೇಳಬಯಸುತ್ತೇನೆ. ಶಿಕ್ಷಣಕ್ಕೆ ಇವತ್ತು ವಿಶೇಷ ಮಹತ್ವ ಕೊಡಬೇಕಾಗುತ್ತದೆ. ಎಲ್ಲಾ ಮೂಲಭೂತ ಸೌಲಭ್ಯಗಳ ಜೊತೆಯಲ್ಲಿ ಹೈಸ್ಕೂಲಿಗೆ, ಕಾಲೇಜುಗಳಿಗೆ ಮೂಲಭೂತ ಸೌಲಭ್ಯಗಳನ್ನು ಕೊಡುವುದ

ರೊಂದಿಗೆ ನಾಲ್ಕು ಅಥವಾ ಐದು ಕಿರಿಯ ಪ್ರಾಥಮಿಕ ಶಾಲೆಗಳಿಗೆ ಒಂದು ಪ್ರೌಢಶಾಲೆಯನ್ನು ಕೊಡುವಂಥ ಕೆಲಸ ಮಾಡಬೇಕಾಗುತ್ತದೆ. ಆ ನಾಲ್ಕು ಪ್ರೌಢಶಾಲೆಗಳಿರುವಂಥ ಕಡೆಯಲ್ಲಿ ಒಂದು ಕಾಲೇಜು ಕೊಡುವಂಥ ವ್ಯವಸ್ಥೆ ಮಾಡಬೇಕು. ಎಲ್ಲಾ ಒಂದೇ ಬಾರಿ ಆಗುವುದಿಲ್ಲ. ಆದರೆ ಕೆಲವೊಂದು ಯೋಜನೆಗಳನ್ನು ಹಾಕಿಕೊಂಡು ಪರಿಹರಿಸಬೇಕೆಂದು ಹೇಳಬಯಸುತ್ತೇನೆ. ಇವತ್ತು ಮಾನವ ಸಂಪನ್ಮೂಲವನ್ನು ಉಪಯೋಗಿಸದಿದ್ದರೆ ನಾವು ಯಾವುದೇ ಅಭಿವೃದ್ಧಿಗೊಳಿಸಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಬೇರೆ ಬೇರೆ ಯೋಜನೆಗಳಿವೆ. ಇವತ್ತು ಕೇಂದ್ರ ಸರ್ಕಾರದಿಂದ Skill Development ಎಂಬ ಕೋರ್ಸ್ ಇದೆ. ಇವತ್ತು ಆ ಕೋರ್ಸ್‌ಗೆ ಅನುದಾನ ಕೂಡ ಬರುತ್ತದೆ, ಆದಕಾರಣ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಪ್ರತಿಯೊಂದು ಗ್ರಾಮದಲ್ಲಿಯೂ ಕೂಡ ಇವತ್ತು Skill Training Centre ಅನ್ನು ಸ್ಥಾಪನೆ ಮಾಡಬೇಕು. ಅನುದಾನ ಬಿಡುಗಡೆ ಮಾಡುವುದರೊಂದಿಗೆ ಇವತ್ತು Rural Energy Resource Training Centre ಎಂದು ನಿರ್ಮಾಣ ಮಾಡಬೇಕಾಗುತ್ತದೆ. ಸೋಲಾರ್ ಇರಲಿ, ಬಯೋಗ್ಯಾಸ್ ಇರಲಿ, ಇನ್ನಿತರೆ ಸೌಲಭ್ಯವಿರಲಿ, ಅದರ ಬಗ್ಗೆ ಪ್ರತಿಯೊಂದು ಗ್ರಾಮದವರಿಗೆ ನಾವು ತರಬೇತಿ ಕೊಟ್ಟಾಗ ಅದರಿಂದ ಮುಂದಿನ ದಿನಗಳಲ್ಲಿ ಬಹಳಷ್ಟು ಪ್ರಯೋಜನ ಆಗುತ್ತದೆ. ಇವತ್ತು Smokeless gas ಎಂದು ಪ್ರತಿಯೊಂದು ಮನೆಗೆ ಕೊಡಬೇಕೆಂದು ಹೇಳುತ್ತೇನೆ. ಕುಡಿಯುವ ನೀರಿನ ಬಗ್ಗೆ ಮಾತನಾಡುವುದಾದರೆ, ಕುಡಿಯುವ ನೀರಿಗೆ ಒಂದು ವಿಶೇಷವಾದ ಯೋಜನೆಯನ್ನು ಇಟ್ಟಾಗ ಅದೊಂದು Practical ಆಗಿರಬೇಕು. ಕೇವಲ theory ಇದ್ದರೆ ಆಗದು. ನೇತ್ರಾವತಿ ತಿರುವು ಯೋಜನೆ ಮಾಡುತ್ತೇವೆಂದು ಹೇಳಿದರೆ ಎಲ್ಲಾ ಪ್ರಾಕ್ಟಿಕಲ್ ಆಗಿ ಆಗುವುದಿಲ್ಲ. ಆ ಯೋಜನೆ ಸಂಪೂರ್ಣವಾಗಿ ನಮ್ಮ ವಿರುದ್ಧವಾಗಿದೆ. ಆದಕಾರಣ ಈ ನೇತ್ರಾವತಿ ತಿರುವು ಯೋಜನೆ ಬಿಟ್ಟು ಅಂತರ್ಜಲವನ್ನು ಹೇಗೆ ಅಭಿವೃದ್ಧಿಪಡಿಸಬಹುದು ಎಂಬುದನ್ನು ಪರಿಶೀಲಿಸಬೇಕು. ಅಂತರ್ಜಲವನ್ನು ಅಭಿವೃದ್ಧಿ ಪಡಿಸಬೇಕಾದರೆ ಯಾವುದಾದರೂ ಒಂದು ಯೋಜನೆ ಇರಬೇಕು. ನೀರಿನ ವಿಷಯದಲ್ಲಿ ಒಬ್ಬೊಬ್ಬರು ಒಂದೊಂದು ಶೈಲಿಯಲ್ಲಿ ಮಾಡುತ್ತಾರೆ. ಯಾವ ರೀತಿ ಮಾಡಬೇಕೆಂದು ಯಾರಿಗೂ ಸರಿಯಾಗಿ ಗೊತ್ತಿಲ್ಲ. ಆದಕಾರಣ ಯಾವುದರಿಂದ ಅತ್ಯುತ್ತಮವಾದ ಪ್ರಯೋಜನವಾಗುತ್ತದೆ ಅಂಥದೊಂದು ಪ್ರಯೋಗ ಮಾಡಿ

ಎಲ್ಲಾ ಗ್ರಾಮ ಪಂಚಾಯಿತಿಯಲ್ಲಿ, ಎಲ್ಲಾ ಶಾಲೆಗಳಲ್ಲಿ, ಎಲ್ಲಾ ಧಾರ್ಮಿಕ ಕೇಂದ್ರಗಳಲ್ಲಿ ಅಥವಾ ಮನೆ ಕೊಡುವಂಥ ಸಂದರ್ಭದಲ್ಲಿ ಲೈಸೆನ್ಸ್ ಕೊಡಬೇಕಾದರೆ ಈ ನೀರು ಒದಗಿಸುವಂಥ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : ಖಾದರ್‌ರವರೇ, ಕೆಲವು ವಿಷಯಗಳನ್ನಷ್ಟೇ ನೀವು ಮಾತನಾಡಿ, ಕುಡಿಯುವ ನೀರು ಎಂದಾಗ ಅದರ ಬಗ್ಗೆ ಮಾತ್ರ ಮಾತನಾಡಿ. ನೀವು ಎಲ್ಲಾ ವಿಷಯಗಳನ್ನು ಕವರ್ ಮಾಡಲಿಕ್ಕೆ ಹೋಗುತ್ತೀರಿ. ಒಂದು ವಿಷಯವೂ perfect ಆಗುವುದಿಲ್ಲ. ಒಂದೊಂದೇ ವಿಷಯವನ್ನು ತೆಗೆದು ಕೊಂಡು ಮಾತನಾಡಿ.

ಶ್ರೀ ಯು.ಟಿ.ಖಾದರ್ : ಇವತ್ತು ನಮ್ಮ ಆರ್.ಡಿ.ಪಿ.ಆರ್. ಸಚಿವರು ಇದ್ದಾರೆ, ಸ್ವರ್ಣಗ್ರಾಮ ಯೋಜನೆ ಅತ್ಯುತ್ತಮವಾದ ಕಾರ್ಯಕ್ರಮವಾಗಿದೆ. ಆದರೆ ಇವತ್ತು ಬಹಳ ಬೇಸರವಾದ ಸಂಗತಿಯೆಂದರೆ ಕೆಲವೆಡೆ ಅದರ ಅನುಷ್ಠಾನವಾಗದೆ, ಅದರ ಸಂಪೂರ್ಣವಾದ ಪ್ರಯೋಜನವಾಗದೆ, ಅದರ ದುರ್ಬಳಕೆ ಮಾಡಿ ಆ ಯೋಜನೆಗೆ ಇವತ್ತು ಅರ್ಥವಿಲ್ಲದಂತಾಗಿದೆ.

ಇವತ್ತು ಯಾವುದೇ ಒಂದು ಸ್ವರ್ಣ ಯೋಜನೆಯನ್ನು ಮಾಡುವಾಗ ಶಾಸಕರಿಗೆ monitoring power ಅನ್ನಾದರೂ ಕೊಡಬೇಕು. ಏನಾದರೂ ಹೆಚ್ಚು-ಕಡಿಮೆ ಇದ್ದರೆ ಸರಿಪಡಿಸುವಂಥ ಅವಕಾಶವನ್ನಾದರೂ ಕೊಡಬೇಕು. ಇವತ್ತು ಗ್ರಾಮಪಂಚಾಯಿತಿಯಲ್ಲಿ ಏನಾದರೂ ಹೆಚ್ಚು-ಕಡಿಮೆಯಾದರೆ ಅದನ್ನು ಸರಿಪಡಿಸುವಂಥ ಅಧಿಕಾರವನ್ನು ಶಾಸಕರಿಗೆ ಕೊಡಬೇಕೆಂದು ಹಾಗೂ ಇವತ್ತು ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರ ಗೌರವಧನವನ್ನು ಕನಿಷ್ಠ ಒಂದು ಸಾವಿರ ರೂಪಾಯಿಗಳನ್ನು ಮಾಡುವಂಥ ಅವಕಾಶ ಕಲ್ಪಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಇವತ್ತು 5 ಲಕ್ಷ ರೂಪಾಯಿಗಳನ್ನು ಯಾವುದಕ್ಕೆ ಕೊಡುತ್ತಿದ್ದೇವೆ, ಅದರಲ್ಲಿ 2-3 ಲಕ್ಷ ಬರೀ ಕರೆಂಟ್‌ಗೆ ಹೋಗುತ್ತಿದೆ. ಆದಕಾರಣ ಇವತ್ತು ಅದನ್ನು 10 ಲಕ್ಷ ರೂಪಾಯಿಗಳಿಗೆ ಏರಿಸಿದರೆ ಕರೆಂಟ್‌ಗೆ 3 ಲಕ್ಷ ರೂಪಾಯಿಗಳನ್ನು ಕೊಡಬಹುದು. ಉಳಿದ 7 ಲಕ್ಷಗಳಲ್ಲಿ ಏನಾದರೂ ಕೆಲಸಗಳು ಕೂಡ ಆಗಬಹುದು ಎಂದು ಹೇಳುತ್ತೇನೆ. ಇವತ್ತು ಇದೆಲ್ಲಾ ಆಗಬೇಕಾದರೆ, ನಮಗೆ ಪವರ್ ಅತ್ಯಂತ ಅಗತ್ಯವಾದುದು. ವಿದ್ಯುತ್ ಸಚಿವರು ಕೂಡ ಇಲ್ಲಿದ್ದಾರೆ. ಇವತ್ತು ಎಲ್ಲಾ ಗ್ರಾಮಗಳಲ್ಲಿಯೂ ಕೂಡ ಕೃಷಿಕರು ಇರಲಿ, ರೈತರು ಇರಲಿ, ಮಕ್ಕಳಿರಲಿ ಅವರಿಗೆ ಯಾರಿಗೂ

ತೊಂದರೆಯಾಗದ ರೀತಿಯಲ್ಲಿ ವಿದ್ಯುತ್ತಿನ ವ್ಯವಸ್ಥೆಯನ್ನು ಮಾಡಬೇಕು. ರಾಜೀವ್‌ಗಾಂಧಿ ವಿದ್ಯುತ್ ಯೋಜನೆ ಯಾವುದು ಇದೆ ಅದನ್ನು ಸಮರ್ಪಕವಾಗಿ ಬಳಸಿಕೊಂಡು ಎಲ್ಲಾ ಜಿಲ್ಲೆಗಳಿಗೂ ಅನುಷ್ಠಾನ ಮಾಡಿಸುವಂಥ ಪ್ರಾಮಾಣಿಕವಾದ ಕೆಲಸ ಮಾಡಬೇಕು ಎಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಎಲ್ಲರಿಗೂ ವಂದನೆಗಳು.

ಅಧ್ಯಕ್ಷರು : ಮಾನ್ಯ ಸುಭಾಷ್ ಗುತ್ತೇದಾರ್‌ರವರು ಮಾತನಾಡಲಿ. ನಾನು ಸದಸ್ಯರಲ್ಲಿ ಒಂದು ವಿನಂತಿ ಮಾಡುವುದು ಏನೆಂದರೆ, ಎಲ್ಲರೂ ನಮಗೆ ಅವಕಾಶ ಕೊಡಿ ಎಂದು ಪದೇ ಪದೇ ಕೈ ಎತ್ತುವ ಅವಶ್ಯಕತೆ ಇಲ್ಲ. ಇಲ್ಲಿ ನಿಮ್ಮ ಪಕ್ಷದವರು ಒಂದು ಲಿಸ್ಟ್ ಕೊಟ್ಟಿದ್ದಾರೆ. ಆ ಲಿಸ್ಟ್ ಪ್ರಕಾರ ನಾನು ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಎಲ್ಲರೂ ಕೈ ಎತ್ತುವಂಥ ಅವಶ್ಯಕತೆ ಇಲ್ಲ. ಎಲ್ಲರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ನಮ್ಮ ಹೆಸರೂ ಸಹ ಲಿಸ್ಟ್‌ನಲ್ಲಿದೆ.

ಅಧ್ಯಕ್ಷರು : ಮಾನ್ಯ ಶಿವಲಿಂಗೇಗೌಡರೇ ನಿಮ್ಮ ಹೆಸರೂ ಕೂಡ ಲಿಸ್ಟ್‌ನಲ್ಲಿದೆ. ಈಗ ಮಾನ್ಯ ಸುಭಾಷ್ ಗುತ್ತೇದಾರ್‌ರವರು ಮಾತನಾಡಬೇಕು. ಹಾಗಾದರೆ ಸುಭಾಷ್ ಗುತ್ತೇದಾರ್‌ರವರು ಕುಳಿತುಕೊಳ್ಳಿ. ಮಾನ್ಯ ಶಿವಲಿಂಗೇಗೌಡರೇ ಮಾತನಾಡಲಿ, ನಿಮ್ಮ ಪಕ್ಷದವರು ಏನು ಲಿಸ್ಟ್ ಕೊಟ್ಟಿದ್ದಾರೆ. ಅದರ ಪ್ರಕಾರ ಕರೆಯುತ್ತಿದ್ದೇನೆ. Wait ಮಾಡಿ, ತಾಳ್ಮೆ ತೆಗೆದುಕೊಳ್ಳಿ. ಎಲ್ಲರೂ ಒಮ್ಮೆಗೆ ಮಾತನಾಡುವುದಕ್ಕೆ ಆಗುತ್ತದೆಯೇ? ನಿಮಗೂ ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ. ನಿಮ್ಮ ಪಕ್ಷದವರು ಯಾವ ಪ್ರಕಾರ ಲಿಸ್ಟ್ ಕೊಟ್ಟಿದ್ದಾರೆ, ಅದರ ಪ್ರಕಾರ ಕರೆಯುತ್ತಿದ್ದೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಸಲಹೆ ಸೂಚನೆಗಳನ್ನು ತೆಗೆದುಕೊಳ್ಳುವುದಕ್ಕೂ ಇಷ್ಟೊಂದು ಕಷ್ಟವಾದರೆ ಇನ್ನು ಹಣವನ್ನು ಕೊಡುವುದಾದರೆ ಹೇಗೆ? ನಾವು ಬರೀ ಸಲಹೆಯನ್ನು ಕೊಡುತ್ತಿದ್ದೇವೆ ಅಷ್ಟೆ.

ಅಧ್ಯಕ್ಷರು : ಎಲ್ಲರೂ ಒಮ್ಮೆ ಮಾತನಾಡುವುದಕ್ಕೆ ಹೇಗೆ ಆಗುತ್ತದೆ? ಹತ್ತು ಜನ ಎದ್ದು ನಿಂತರೆ ಒಂದೇ ಬಾರಿ ಹೇಗೆ ಮಾತನಾಡುತ್ತೀರಿ? ಒಬ್ಬೊಬ್ಬರಿಗೆ ಅವಕಾಶ ಕೊಡಬೇಕಲ್ಲವೇ? ಮಾನ್ಯ ಸಂಗಮೇಶ್ವರ್‌ರವರೆ ನಿಮ್ಮ ಹೆಸರು ಲಿಸ್ಟ್‌ನಲ್ಲಿ ಇದ್ದರೆ ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ನಿಮ್ಮ ಪಾರ್ಟಿಯವರು ಹೆಸರು ಕೊಟ್ಟಿದ್ದಾರೆ. ಅದರ ಪ್ರಕಾರ ನಾನು

ಕರೆಯುತ್ತೇನೆ. ಎಲ್ಲರೂ wait ಮಾಡಿ. ಎಲ್ಲರೂ 15 ನಿಮಿಷ ಮಾತನಾಡುವುದಕ್ಕೆ ಲಿಮಿಟ್ ಮಾಡಿಕೊಳ್ಳಿ.

ಶ್ರೀ ಸುಭಾಷ್ ಗುತ್ತೇದಾರ್ (ಆಳಂದ) : ಸನ್ಮಾನ್ಯ ಅಧ್ಯಕ್ಷರೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಮಾತನಾಡುವುದಕ್ಕೆ ನನಗೆ ಅನುಕೂಲ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ನಮ್ಮ ಕ್ಷೇತ್ರ ಮಳೆ ಆಧಾರಿತ ಕ್ಷೇತ್ರ, ಮಳೆ ಬಂದರೆ ಮಾತ್ರ ರೈತರು ಬೆಳೆ ಬೆಳೆಯಬೇಕು. ಇವತ್ತು ಆ ಒಂದು ನೀರಿನ ಮಟ್ಟವನ್ನು ಹೆಚ್ಚಿಸುವುದಕ್ಕೆ ರೈತರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಹೆಚ್ಚಾಗಿ ಯಾವ ರೀತಿಯಾಗಿ ಚೆಕ್ ಡ್ಯಾಮ್, ಇಂಗು ಗುಂಡಿ, ಕೃಷಿ ಹೊಂಡ, ಇವುಗಳನ್ನು ಮಾಡಿ ಹಾಗೂ ಆ ಭಾಗದಲ್ಲಿ ಕೆರೆಗಳನ್ನು ಮಾಡಿಕೊಡಬೇಕು ಎಂದು ಇಲ್ಲಿ ಸಲಹೆ ಕೊಡುತ್ತಾ, ನೀವು ಹೇಳಿದ ಹಾಗೆ ಉದ್ಯೋಗ ಖಾತರಿಯಡಿಯಲ್ಲಿ ಈ ಒಂದು ಕೆಲಸಗಳನ್ನು ನಾವು ಮಾಡಬಹುದು. ಕಡ್ಡಾಯವಾಗಿ Watershed ನವರಿಗೆ ಆಗಲಿ, agriculture ನವರಿಗೆ ಆಗಲಿ, ಉದ್ಯೋಗ ಖಾತರಿಯಡಿಯಲ್ಲಿ ಈ ಒಂದು ನೀರಿನ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ತಾವು ಒಂದು ಆದೇಶ ಕೊಟ್ಟು ಪ್ರತಿಯೊಬ್ಬರ ಹೊಲದಲ್ಲಿಯೂ ಇಂಗು ಗುಂಡಿ, ಚೆಕ್‌ಡ್ಯಾಮ್ ಮತ್ತು ಕೃಷಿ ಹೊಂಡ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ಕೇಳಿ ಬಹಳ ಸಂತೋಷವಾಯಿತು. 'ಊರಿಗೊಂದು ಕೆರೆ ಮತ್ತು ವನ' ಮಾಡುವ ಉದ್ದೇಶವಿದೆ. ಎಂದು ಹೇಳಿದರು. ನಮ್ಮಲ್ಲಿ ಕೆರೆಗಳನ್ನು ಮಾಡುವ ಸಲುವಾಗಿ ಬಹಳಷ್ಟು ಸೈಟ್‌ಗಳು ಇವೆ. ಪ್ರತಿಯೊಂದು ಊರಿಗೂ ಒಂದೊಂದು ಕೆರೆಯಾಗಬಹುದು. ಅದಕ್ಕೆ ಕೆರೆಗಳನ್ನು ಹೆಚ್ಚಾಗಿ ಮಾಡಿಕೊಡಬೇಕಾಗಿ ನನ್ನ ಒಂದು ಸಲಹೆಯನ್ನು ಕೊಡುತ್ತೇನೆ. ಒಂದು ಕೃಷಿ ಸಲುವಾಗಿ ನಮ್ಮಲ್ಲಿ ಒಂದು ಅಮರ್ಜ ಡ್ಯಾಮ್ ಒಂದೇ ಇದೆ. ಆ ಅಮರ್ಜ ಡ್ಯಾಂ ನಿಂದ ಬರೀ ಎರಡೇ ಊರುಗಳಿಗೆ ನೀರಾವರಿಯಾಗುತ್ತದೆ. ಆಗ ಅಫ್ಜಲ್‌ಪುರ್ ತಾಲ್ಲೂಕಿನದನ್ನು ಅವರು ಎಸ್ಟಿಮೇಟ್ ಮಾಡಿದ್ದಾರೆ. ಆದರೆ ನೀರು ಹೋಗುತ್ತಿಲ್ಲ. ಇವತ್ತು ಬರೀ ಭೂಸನೂರು ಹಾಗೂ ಕೋರಳ್ಳಿ ಎಂದು ಎರಡೇ ಊರುಗಳಿಗೆ ಉಪಯೋಗವಾಗುತ್ತಿದೆ. ಅದಕ್ಕೆ ನೀರಿನ ಮಟ್ಟವನ್ನು ಹೆಚ್ಚಿಸಬೇಕಾದರೆ ಹೆಚ್ಚಿನದಾಗಿ ಒಂದು ಇಂಗು ಗುಂಡಿ, ಕೃಷಿ ಹೊಂಡ ಹಾಗೂ ಕೆರೆಗಳನ್ನು ಮಾಡಬೇಕೆಂದು ತಮಗೆ ಹೇಳುತ್ತೇನೆ. ಇವತ್ತು ಈ ಒಂದು ಗ್ರಾಮೀಣಾಭಿವೃದ್ಧಿ ಸಲುವಾಗಿ, ಬಹಳಷ್ಟು ಗ್ರಾಮೀಣಾಭಿವೃದ್ಧಿ

ಮಾಡಬೇಕಾದರೆ ನನಗೆ ಅನಿಸಿದಮಟ್ಟಿಗೆ ಒಂದು ಹೊಸ ಬದ್ಧತೆಯನ್ನು ಮಾನ್ಯ ಮುಖ್ಯಮಂತ್ರಿಗಳು ತರಬೇಕಾಗುತ್ತದೆ. ಇವತ್ತು ಗ್ರಾಮ ಪಂಚಾಯತಿಗೆ, ತಾಲ್ಲೂಕು ಪಂಚಾಯಿತಿಗೆ ಹಾಗೂ ಜಿಲ್ಲಾ ಪಂಚಾಯಿತಿಗೆ category ಗಳನ್ನು ತಂದಿದ್ದೀರಿ. ಒಂದು ಸಲ ಒಂದು category ಬಂತು ಎಂದರೆ ಮುಂದಿನ ಸಲ ಆ category ಅಲ್ಲಿ ಬರುವುದಿಲ್ಲ. ಇವತ್ತು ಆ ಕ್ಷೇತ್ರವನ್ನು ಅವರು ಉದ್ಧಾರ ಮಾಡುವುದಕ್ಕೆ ಹೋಗುವುದಿಲ್ಲ, ಅಭಿವೃದ್ಧಿ ಮಾಡುವುದಕ್ಕೆ ಹೋಗುವುದಿಲ್ಲ, ಏನೋ ಈ ಸಲ ಚುನಾವಣೆಯಲ್ಲಿ ಆರಿಸಿ ಬಂದಿದ್ದೇವೆ ಈ ಸಲ ಚೆನ್ನಾಗಿ ಹೊಡೆದುಕೊಂಡು ಹೋಗೋಣ ಎನ್ನುವ ದೃಷ್ಟಿಯಿಂದ ಮಾಡುತ್ತಾರೆ. ಮುಂದೆ ಅವರು ಚುನಾವಣೆಗೆ ನಿಲ್ಲುವುದಿದ್ದರೆ ಅಥವಾ ಅಲ್ಲಿ ಚುನಾವಣೆಯಲ್ಲಿ ಆರಿಸಿ ಬರುವುದಿದ್ದರೆ ಅವರು ಆ ಭಾಗವನ್ನು ಅಭಿವೃದ್ಧಿ ಮಾಡುತ್ತಾರೆ, ಇಲ್ಲದಿದ್ದರೆ ಅಭಿವೃದ್ಧಿ ಮಾಡುವುದಿಲ್ಲ. ಅಲ್ಲಿ ಎಷ್ಟೋ ಮಂದಿ ಗ್ರಾಮ ಪಂಚಾಯತಿ ಅಧ್ಯಕ್ಷರುಗಳು ಶಾಲೆಗೆ ಹೋಗಿ ಅಕ್ಷರ ಕಲಿತವರು ಇಲ್ಲ, ಏನೋ category-wise ಅವರನ್ನು ಚುನಾವಣೆಯಲ್ಲಿ ಆರಿಸಿ ಅಧ್ಯಕ್ಷ ಸ್ಥಾನ ಕೊಟ್ಟಿರುತ್ತಾರೆ. ಇಲ್ಲಿ ಎಲ್ಲಾ Secretary ಯಿಂದಲೇ ನಡೆಯುತ್ತದೆ.

(ಗೊಂದಲ)

ಅಧ್ಯಕ್ಷರು : ಸದಸ್ಯರು ಮಾತನಾಡುವಾಗ ಹೀಗೆ disturb ಮಾಡಿದರೆ ಹೇಗೆ? ಅವರು ಸರಿಯಾಗಿ ಮಾತನಾಡುವುದಕ್ಕೆ ಆಗುವುದಿಲ್ಲ.

ಶ್ರೀ ಸುಭಾಷ್ ಗುತ್ತೇದಾರ್ : ಶಾಲೆ ಕಲಿಯದಂಥ ಅಧ್ಯಕ್ಷರಿಗೆ ಹಳ್ಳಿಯನ್ನು ಹೇಗೆ ಅಭಿವೃದ್ಧಿ ಮಾಡಬೇಕೆಂದು ಗೊತ್ತಿರುವುದಿಲ್ಲ. ಇವತ್ತು Secretary, Engineer ಏನು ಅಭಿವೃದ್ಧಿ ಮಾಡಿದ್ದಾರೆ, ಏನು ಎಸ್ಟಿಮೇಟ್ ಮಾಡಿದ್ದಾರೆ ಎನ್ನುವುದು ಅವರಿಗೆ ಗೊತ್ತೇ ಇರುವುದಿಲ್ಲ, ಏನೋ ಕೊಟ್ಟಿದ್ದಾರೆ ಎಂದು ತಿಳಿದು ಅಧ್ಯಕ್ಷರು ಸಹಿ ಹಾಕುತ್ತಾರೆ. ಅಧ್ಯಕ್ಷರು ಶಾಲೆ ಕಲಿತಿಲ್ಲವೆಂದು ತಿಳಿದ Secretary ಗಳು ಇಷ್ಟು ಕೊಟ್ಟಿದ್ದೇವೆ ಎಂದು ಸಹಿ ಹಾಕಿಸಿಕೊಳ್ಳುತ್ತಾರೆ. ಇವತ್ತು Secretary ಹಾಗೂ Engineer ಗಳದೇ ನಡೆಯುತ್ತಿದೆ.

(ಈ ಹಂತದಲ್ಲಿ ಅಧ್ಯಕ್ಷ ಪೀಠವನ್ನು ಮಾನ್ಯ ಎನ್. ಯೋಗೀಶ್ ಭಟ್‌ರವರು ಅಲಂಕರಿಸಿದರು)

ಹಿಂದಿನ ಕಾಲದಲ್ಲಿ category-wise ಇರಲಿಲ್ಲ. ಎಲ್ಲಾ ಗ್ರಾಮ ಪಂಚಾಯತಿ ಅಧ್ಯಕ್ಷರುಗಳು ತಾಲ್ಲೂಕು ಪಂಚಾಯಿತಿ ಸದಸ್ಯರುಗಳಾಗಿದ್ದರು, ಆ ತಾಲ್ಲೂಕಿನ ಎಂ.ಎಲ್.ಎ. ಅದರ ಅಧ್ಯಕ್ಷರಾಗಿರುತ್ತಿದ್ದರು. ಎಲ್ಲಾ ಎಂ.ಎಲ್.ಎ.ಗಳು, ಜಿಲ್ಲಾ ಪಂಚಾಯತಿ ಸದಸ್ಯರು ಉಸ್ತುವಾರಿ ಸಚಿವರು ಅಧ್ಯಕ್ಷರಾಗಿರುತ್ತಿದ್ದರು. ಈ ತರಹ ಮಾಡಿದರೆ ಅಂದರೆ category ಹೋದರೆ ಇವತ್ತು ಗ್ರಾಮಗಳನ್ನು ಸುಧಾರಿಸಬಹುದು. ಅಲ್ಲಿ category ಇರುವುದರಿಂದ ಇವತ್ತು ಬಹಳಷ್ಟು ತಾಲ್ಲೂಕು ಪಂಚಾಯತಿ ಅಧ್ಯಕ್ಷರುಗಳನ್ನು ನೋಡಿದ್ದೇವೆ, ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳನ್ನು ನೋಡಿದ್ದೇವೆ, ಇವತ್ತು ಬಹಳಷ್ಟು ಮಂದಿ ಶಾಲೆಯನ್ನು ಕಲಿತಿಲ್ಲದವರು ಅದಕ್ಕೆ ಅಧ್ಯಕ್ಷರಾಗಿದ್ದಾರೆ. ಇವತ್ತು ಶಾಲೆ ಕಲಿತವರನ್ನು ಅಲ್ಲಿ ತರಬೇಕು, ಅದನ್ನು ಮಾಡಲೇಬೇಕು. ನೀವು category-wise ತರಬೇಕು ಎಂದರೆ ಹೇಗೆ? ಜನರು ಏನೆಲ್ಲಾ ಕೇಳಬೇಕು ಎಂದರೂ ಎಂ.ಎಲ್.ಎ.ಗಳನ್ನು ಕೇಳುತ್ತಾರೆ. ಇವತ್ತು ನಾವು ಹಳ್ಳಿಗಳಿಗೆ ಹೋದರೆ ಜನ ಕುಡಿಯುವ ನೀರಿನ ಬಗ್ಗೆ ಎಂ.ಎಲ್.ಎ.ಗಳನ್ನು ಕೇಳುತ್ತಾರೆ, ಮನೆಗಳನ್ನು ಕಟ್ಟಿಸಿಕೊಡಲು ಎಂ.ಎಲ್.ಎ.ಗಳನ್ನು ಕೇಳುತ್ತಾರೆ, ಇವತ್ತು ಆ ತಾಲ್ಲೂಕಿನಲ್ಲಿ ಏನೇ ಸೌಕರ್ಯ ಬೇಕಾದರೂ ಕೂಡ ಎಂ.ಎಲ್.ಎ.ಗಳನ್ನೇ ಕೇಳುತ್ತಾರೆ. ಇವತ್ತು ಜಿಲ್ಲಾ ಪಂಚಾಯಿತಿಗೆ, ತಾಲ್ಲೂಕು ಪಂಚಾಯಿತಿಗೆ ಹಾಗೂ ಗ್ರಾಮ ಪಂಚಾಯಿತಿಗೆ ಎಲ್ಲಾ ಅಧಿಕಾರವನ್ನು ಕೊಟ್ಟರೂ ಕೂಡ ಅವರನ್ನು ಯಾರೂ ಕೇಳುತ್ತಿಲ್ಲ. ಆ ಉದ್ದೇಶವನ್ನು ಇಟ್ಟುಕೊಂಡು ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಹೊಸ ರೂಪ ಕೊಡಬೇಕು. ಈ ಹಿಂದೆ ಇದ್ದ ರೀತಿಯಲ್ಲಿ ಗ್ರಾಮ ಪಚಾಯಿತಿ ಅಧ್ಯಕ್ಷರು ತಾಲ್ಲೂಕಿನ ಸದಸ್ಯರಾಗಬೇಕು, ಎಂ.ಎಲ್.ಎ. ಅದಕ್ಕೆ ಅಧ್ಯಕ್ಷರಾಗಬೇಕು, ಅದಕ್ಕೆ ಎಂ.ಎಲ್.ಎ. ಜಿಲ್ಲಾ ಪಂಚಾಯಿತಿ ಸದಸ್ಯರಾಗಬೇಕು, ಉಸ್ತುವಾರಿ ಸಚಿವರೂ ಆಗಬೇಕು ಹಾಗೂ ಅಧ್ಯಕ್ಷರೂ ಆಗಬೇಕು. ಮತ್ತೊಂದು ಸಲ ಚುನಾವಣೆಯಲ್ಲಿ ನಾನು ಆರಿಸಿ ಬರಬೇಕೆಂದು ಎಂ.ಎಲ್.ಎ.ಗೆ ಆಸಕ್ತಿ ಇರುತ್ತದೆ. ಮುಂದೆ ನಾನು ಮತ್ತೆ ಇಲ್ಲೇ ಚುನಾವಣೆಯಲ್ಲಿ ಸ್ಪರ್ಧಿಸಬೇಕು, ಆರಿಸಿ ಬರಬೇಕು ಎಂಬುದು ಗೊತ್ತಿರುತ್ತದೆ, ಒಳೆಯ ಕೆಲಸಗಳನ್ನು ಮಾಡಬೇಕೆಂದು ಗೊತ್ತಿರುತ್ತದೆ. ಈ category-wise ನಲ್ಲಿ ಆರಿಸಿ ಬಂದವರು ಒಬ್ಬರೂ ಕೆಲಸ ಮಾಡುವುದಿಲ್ಲ. ಹಣವನ್ನು ಕೊಡಲಾಗಿದೆ. ಆದರೆ, ಕೆಲಸವಾಗಿಲ್ಲ. ಇವತ್ತು RDPR ಮಂತ್ರಿಗಳು ಇದನ್ನು ತಿಳಿದುಕೊಳ್ಳಬೇಕು. ಇವತ್ತು ಜಿಲ್ಲಾ ಪಂಚಾಯಿತಿಗೆ

ಒಂದೊಂದು ಕೋಟಿ ರೂಪಾಯಿಗಳನ್ನು ನೀವು ಕೊಟ್ಟಿದ್ದೀರಿ. ಇವತ್ತು ನನ್ನ ಕ್ಷೇತ್ರದಲ್ಲಿ ಒಂದು ಕೋಟಿ ರೂಪಾಯಿ ಕೊಡಲಾಗಿದೆ. ಆದರೆ, ಏನೂ ಕೆಲಸ ಮಾಡಿಲ್ಲ, ದುಡ್ಡನ್ನು ಉಪಯೋಗಿಸಿಕೊಂಡಿದ್ದಾರೆ. ನೀವು ಬೇಕಾದರೆ ಯಾವುದೇ ಒಂದು ಜಿಲ್ಲಾ ಪಂಚಾಯಿತಿ ಕ್ಷೇತ್ರದಲ್ಲಿ ನೋಡಿ, ಇತ್ತೀಚೆಗೆ ಮಾಡಿದಂಥ ಬ್ರಿಡ್ಜ್ ಮೊನ್ನೆ ಬಂದ ಮಳೆಯಿಂದಾಗಿ ಈಗಾಗಲೇ ಮುರಿದು ಹೋಗಿದೆ. ಇವತ್ತು ಇಂಜಿನಿಯರ್‌ಗಳು ಹಾಗೂ ಅವರು ಇಬ್ಬರೂ ಸೇರಿ ಬೋಗಸ್ ಬಿಲ್ ಬರೆಯುತ್ತಾರೆ. ಇವತ್ತು ನಾವು ಯಾರನ್ನು ಕೇಳಬೇಕು? ಇವತ್ತು ಕೆ.ಡಿ.ಪಿ. ಮೀಟಿಂಗ್‌ಗೆ ಹೋದರೆ AEE ಅವರು ಬರೀ ಎಂ.ಎಲ್.ಎ. ಗ್ರ್ಯಾಂಟ್ ಹಾಗೂ HKDB ಯನ್ನು ನೋಡುವ ಸಲುವಾಗಿ ಮಾತ್ರ ಕೊಟ್ಟಿರುತ್ತಾರೆ. ಎಂ.ಪಿ.ಗ್ರ್ಯಾಂಟ್ ಮತ್ತು ಜಿಲ್ಲಾ ಪಂಚಾಯತಿ ಬಜೆಟ್ ಕೆಲಸ ಏನಾಗಿವೆ ಎಂದು ನಾವು ಕೇಳಿದರೆ ನೀವು ಎಂ.ಎಲ್.ಎ. ನಿಮಗೆ ಏತಕ್ಕೆ ಬೇಕು, ನೀವು ಎಂ.ಎಲ್.ಎ. ಆಗಿದ್ದೀರಿ ಅಷ್ಟನ್ನು ಮಾತ್ರ ನೋಡಿಕೊಳ್ಳಿ ಎಂದು ಹೇಳುತ್ತಾರೆ. ಜಿಲ್ಲಾ ಪಂಚಾಯಿತಿಗೆ ಸಂಬಂಧಪಟ್ಟದ್ದನ್ನು ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ನೋಡುತ್ತಾರೆ ಎಂದು ಒಬ್ಬ AEE ನಮಗೆ ಹೇಳುತ್ತಾನೆ. ಅಲ್ಲಿ ಯಾವ ಮಟ್ಟಿಗೆ ಆಡಳಿತ ನಡೆಯುತ್ತಿದೆ ಎನ್ನುವುದನ್ನು ತಾವು ನೋಡಬೇಕಾಗಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಛೇರ್‌ಮನ್‌ರವರೇ, ಒಂದು KDP Meeting ನಲ್ಲಿ ಒಬ್ಬ AEE ನೀವು ಬರೀ ಎಂ.ಎಲ್.ಎ. ಕೆಲಸವನ್ನು ಮಾತ್ರ ನೋಡಿ, ಎಂ.ಪಿ. ವರ್ಕ್ ಹಾಗೂ ಜಿಲ್ಲಾ ಪಂಚಾಯಿತಿ ವರ್ಕ್ ನೋಡಬೇಡಿ ಎಂದು ಎಂ.ಎಲ್.ಎ.ಗೆ ಹೇಳುತ್ತಾರೆ ಎಂದರೆ ಹೇಗೆ? ಅದನ್ನು ಅವರು ಹೇಳುತ್ತಿದ್ದಾರೆ ದಯಮಾಡಿ ಇದರ ಬಗ್ಗೆ ಮಂತ್ರಿಗಳು ಗಮನಹರಿಸಬೇಕು. RDPR ಮಂತ್ರಿಗಳು ರೇಷ್ಮೆ ಮಂತ್ರಿಗಳ ಜೊತೆ ಚರ್ಚೆ ಮಾಡುತ್ತಿದ್ದಾರೆ. ಅದಕ್ಕೆ RDPR ಮಂತ್ರಿಗಳಿಗೆ ಗಮನಹರಿಸಬೇಕು ಎಂದು ಹೇಳಿದೆ. ಸಮಸ್ಯೆ ಏನು ಹೇಳುತ್ತಿದ್ದಾರೆ ಎಂದು ಕೇಳಿ?

ಶ್ರೀ ಸುಭಾಷ್ ಗುತ್ತೇದಾರ್ : ಅದರ ಸಲುವಾಗಿ ಮಾನ್ಯ ಛೇರ್‌ಮನ್‌ರವರೆ, ಇವತ್ತು ಜಿಲ್ಲಾ ಪಂಚಾಯಿತಿಯೊಳಗೆ ಒಂದೊಂದು ಕೋಟಿ ರೂಪಾಯಿ ಕೊಟ್ಟರೂ ಕೂಡ ಅಲ್ಲಿ ಬಹಳ ಬೋಗಸ್ ಕೆಲಸಗಳಾಗುತ್ತಿವೆ. ಮುಚ್ಚುಮರೆಯಿಲ್ಲದೆ ಹೇಳಬೇಕಾದರೆ, ಎಷ್ಟು ಬೇಕೋ ಅಷ್ಟು ಪರ್ಸೆಂಟೇಜ್, 30 ಪರ್ಸೆಂಟ್ ಮುರಿದುಕೊಂಡೇ ಯಾರು

ಕೆಲಸವನ್ನು ಮಾಡಿರುತ್ತಾರೆ ಅವರಿಗೆ ಬಿಲ್ ಕೊಡುತ್ತಾರೆ. 'ಇಲ್ಲ, ಅವರು ಮೇಲಿನ ಅಧಿಕಾರಿಗಳಿಗೆ ಏನಾದರೂ ಕೊಡಬೇಕಾಗುತ್ತದೆ' ಎಂದು ಅವರು ಹೇಳುತ್ತಾರೆ. ಅವರಿಗೆ ಏನೂ ಹೆದರಿಕೆಯೇ ಇಲ್ಲ. ನಮ್ಮಲ್ಲಿ 108 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅಮರ್ಜಾ ಕೆನಾಲ್ ಕೆಲಸ ನಡೆದಿದೆ. ಕಳಪೆಮಟ್ಟದ ಕೆಲಸ ನಡೆದಿದೆ ಎಂದು ಅಧಿಕಾರಿಗಳಿಗೆ ಹೇಳಿದರೂ ಕೂಡ, ಇವತ್ತು ಯಾರೂ inspectionಗೆ ಬರಲಿಕ್ಕೆ ತಯಾರಿಲ್ಲ. ಯಾರೂ ಕೇಳಲಿಕ್ಕೆ ತಯಾರಿಲ್ಲ. ಹಿಂದೊಮ್ಮೆ ಆ ಕೇಸ್‌ನಿಂದ ಒಟ್ಟಾರೆ ಎರಡು ಊರು ಬಿಟ್ಟು ಬೇರೆ ಊರಿಗೆ ಕೆನಾಲ್‌ನಿಂದ ನೀರು ಹೋಗಿಯೇ ಇಲ್ಲ. ಈಗ ಮತ್ತೆ ಅದೇ ರೀತಿ ಆದರೆ ಹೇಗೆ? ಚೀಫ್ ಇಂಜಿನಿಯರ್‌ಗಳಿಗೆ ಹೇಳಿದರೆ ಕೇಳುತ್ತಿಲ್ಲ. Executive Engineer ಅವರಿಗೆ ಹೇಳಿದರೆ ಕೇಳುತ್ತಿಲ್ಲ. ನಾವು ಯಾರಿಗೆ ಹೇಳಬೇಕು? ಎರಡು ವರ್ಷಗಳ ಹಿಂದೆ ಉದ್ಯೋಗ ಖಾತರಿ ಕೆಲಸದೊಳಗೆ ಬಹಳಷ್ಟು ಅವ್ಯವಹಾರವಾಗಿದೆ. ಯಾವ ರೀತಿ ಅವ್ಯವಹಾರವೆಂದರೆ, ಇವತ್ತು ಬೆಂಗಳೂರಿನಿಂದ ಯಲಹಂಕದವರೆಗೆ ಒಂದು ರೋಡ್ ಹಾಕಿದರೆ ಹತ್ತು ಲಕ್ಷ ರೂಪಾಯಿ ಮತ್ತೆ ಅದೇ ರೋಡ್‌ಗೆ ಯಲಹಂಕದಿಂದ ಬೆಂಗಳೂರಿನವರೆಗೆ ಹತ್ತು ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಒಂದೇ head ನಲ್ಲಿ ಇಲ್ಲ. ಎಂ.ಎಲ್.ಎ head ನಲ್ಲಿಟ್ಟಿದ್ದಾರೆ. ಉದ್ಯೋಗ ಖಾತರಿಯಡಿಯಲ್ಲಿ ಇಟ್ಟಿದ್ದಾರೆ. ಹೀಗೆ ಮತ್ತೊಂದು, ಮತ್ತೊಂದು head ನೊಳಗೆ ಇಟ್ಟು 3–4 ಸಲ ಒಂದೇ ರೋಡ್‌ಗೆ ಹಣವನ್ನು ಎತ್ತಿದ್ದಾರೆ. ನಾನು ಇದಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತಕ್ಕೆ ಕೊಟ್ಟು ಎರಡು ವರ್ಷವಾಯಿತು. ಇನ್ನೂ enquiry ಆಗಿಲ್ಲ. ಕಳಪೆ ಕೆಲಸಗಳಾಗುತ್ತಿರುವ ಬಗ್ಗೆ ನಾವು ಯಾರಿಗೆ ಕೇಳಬೇಕು? ಎಲ್ಲಿ ಹೋಗಬೇಕು? ಅದರ ಬಗ್ಗೆ ನೋಡಬೇಕು, ಹೇಳಬೇಕೆಂದರೆ ಯಾರಿಗೆ ಹೇಳಬೇಕು? ಯಾರೂ ಕೇಳುತ್ತಿಲ್ಲ. ಆದುದರಿಂದ ಹಳೆಯ ಪದ್ಧತಿಯನ್ನು ನೀವು ತಂದರೆ ಒಳ್ಳೆಯದಾಗುತ್ತದೆ. ಇವತ್ತು ಹಳ್ಳಿಯಲ್ಲಿ ಮೂರು ಗ್ರಾಮ ಪಂಚಾಯಿತಿಗೆ ಒಬ್ಬರು ಸೆಕ್ರೆಟರಿ ಇರುತ್ತಾರೆ. ಸೆಕ್ರೆಟರಿಗಳು ಕಡಿಮೆಯಿರುವುದರಿಂದ ಈ ರೀತಿಯಾಗುತ್ತಿದೆ. ಒಬ್ಬ ಸೆಕ್ರೆಟರಿಗೆ ಮೂರು ಗ್ರಾಮ ಪಂಚಾಯಿತಿಯನ್ನು ಕೊಟ್ಟಿದ್ದಾರೆ. ಒಂದು ಗ್ರಾಮ ಪಂಚಾಯಿತಿಗೆ 3–4 ಹಳ್ಳಿಗಳಿವೆ. ಅವರು ಯಾವ ಗ್ರಾಮ ಪಂಚಾಯತಿಗೂ ಹೋಗುವುದಿಲ್ಲ, ಕೇಳುವುದಿಲ್ಲ. ಕುಡಿಯುವ ನೀರಿನ ಮೋಟರ್ ಕೆಟ್ಟು ಹೋದರೆ ಸೆಕ್ರೆಟರಿ ಬೇಕು. ಆದರೆ ಅವರು ಅಲ್ಲಿ ಇರುವುದಿಲ್ಲ. ಗುಲಬರ್ಗಾದ ಸಿಟಿಯೊಳಗೆ

ಕುಳಿತುಕೊಂಡಿರುತ್ತಾರೆ. ಹಳ್ಳಿಯೊಳಗೆ ಯಾರೂ ಇರುವುದಿಲ್ಲ. ಸೆಕ್ರೆಟರಿಗಳನ್ನು ತೆಗೆದುಕೊಳ್ಳಿ, ಗ್ರಾಮ ಸಹಾಯಕರನ್ನು ತೆಗೆದುಕೊಳ್ಳಿ, ಅನೇಕ ವೈದ್ಯಾಧಿಕಾರಿಗಳನ್ನು ತೆಗೆದುಕೊಳ್ಳಿ, ಯಾರೂ ಇರುವುದಿಲ್ಲ. ಜಿಲ್ಲೆಯಿಂದ ಇವತ್ತು ಹಳ್ಳಿಗೆ ಬರುತ್ತಾರೆ. ಜಿಲ್ಲೆಯಿಂದ ತಾಲ್ಲೂಕಿಗೆ ಬರುತ್ತಾರೆ.

ಶ್ರೀ ಮಾಲೀಕಯ್ಯ ಗುತ್ತೇದಾರ್ : ಸೆಕ್ರೆಟರಿ ಬಗ್ಗೆ ಹೇಳಬೇಕೆಂದರೆ ಅಧ್ಯಕ್ಷರದ್ದು ಬೋಗಸ್ ಸಹಿ ಮಾಡಿ ಬಿಲ್ ಎತ್ತುತ್ತಾರೆ. ಇದನ್ನು ಗಮನಕ್ಕೆ ತಂದರೆ ಅವರ ಮೇಲೆ action ಇಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಚೈನಾ ಪ್ರವಾಸ ಮಾಡಿದ ಮೇಲೆ ಗ್ರಾಮೀಣಾಭಿವೃದ್ಧಿಯಾಗಬೇಕೆಂದು ಅದಕ್ಕೋಸ್ಕರ ಸದಸ್ಯರು ಸಲಹೆಗಳನ್ನು ಕೊಡಬೇಕೆಂದು ಹೇಳುತ್ತಿದ್ದಾರೆ. ಅಂತಹ ಭ್ರಷ್ಟ ಅಧಿಕಾರಿಯನ್ನು ರಕ್ಷಣೆ ಮಾಡುತ್ತಾ ಹೋದರೆ ಯಾವ ರೀತಿ ನೀವು ಆಡಳಿತ ಕೊಡುವುದಕ್ಕಾಗುತ್ತದೆ? ಅದಕ್ಕೋಸ್ಕರ ಮಾನ್ಯ ಸುಭಾಷ್‌ಗುತ್ತೇದಾರ್ ಅವರು ಹೇಳುತ್ತಿರುವುದೇನೆಂದರೆ, ಅಮರ್ಜಾ ಕೆನಾಲ್ ವರ್ಕ್ complete ಆದ ಮೇಲೆ ಅದರ level ಸರಿ ಇಲ್ಲದಿರುವುದರಿಂದ ಪುನಃ ಮತ್ತೊಂದು level ಮಾಡುತ್ತಿದ್ದಾರೆ. ಅದೂ 100 ಕೋಟಿ ರೂ. ಖರ್ಚಾದ ಮೇಲೆ. ಇದು ಅಮರ್ಜಾ ಪ್ರಾಜೆಕ್ಟ್‌ದು ಹೇಳುತ್ತಿದ್ದೇನೆ. ಪಂಚಾಯಿತಿಯಲ್ಲಂತೂ ಬಹಳಷ್ಟು ಹದಗಟ್ಟಿದೆ. ಇಂತಹ ಅಧಿಕಾರಿಗಳನ್ನು ಹಾಕಿ ಎಂದು ನಾವು ಕೊಡುವುದಿಲ್ಲ. ಇಂತಹವರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದರೆ ಅವರ ವರ್ಗಾವಣೆ ಇಲ್ಲ. ಅವರ ಪಕ್ಷದಿಂಧ ಯಾರಾದರೂ ಅರ್ಜಿ ಕೊಟ್ಟರೆ ಅವರನ್ನು ನಿಲ್ಲಿಸುತ್ತಾರೆ. ಈ ರೀತಿ ಆದರೆ ಗ್ರಾಮೀಣಾಭಿವೃದ್ಧಿ ಆಗುವುದಿಲ್ಲ. ಇದರ ಬಗ್ಗೆ ಅಧಿವೇಶನ ಕರೆದಿದ್ದು ನಷ್ಟವಾಗುತ್ತದೆ. ದಯವಿಟ್ಟು ಮಾನ್ಯ ಸಚಿವರು ಅದರ ಬಗ್ಗೆ ಗಮನಹರಿಸಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ(ಕಾರ್ಮಿಕ ಸಚಿವರು) : ಮಾನ್ಯ ಗುತ್ತೇದಾರ್ ರವರೆ, ಯಾರೇ ಸೆಕ್ರಟರಿ ಅಥವಾ ಬಿಲ್ ಕಲೆಕ್ಟರ್ಸ್ ಆಗಲಿ ನಾವು ನೋಡಿರುವ characters, ರಾಜಕೀಯವಾಗಿ divide ಮಾಡುತ್ತಾರೆ. ಗುಂಪುಗಾರಿಕೆ ಮಾಡಿಕೊಂಡು, ಅವನಿಗೆ ಒಬ್ಬ ಎಂ.ಎಲ್.ಎ. support ಅಥವಾ ಅಲ್ಲಿನ ಪಂಚಾಯತಿ ಅಧ್ಯಕ್ಷರ support ನಿಂದ ಹೀಗೆ ಅವರು ದಂಧೆ ಮಾಡಿ ನಡೆಸಿಕೊಂಡು ಹೋಗುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ : ಇಲ್ಲ ಅವರು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ. ಒಬ್ಬ ಬಿಲ್ ಕಲೆಕ್ಟರ್ ಅನ್ನೂ ಮಾತನಾಡಿಸದೇ ಇರುವಂಥ ಪರಿಸ್ಥಿತಿಯೂ ಇದೆ. Listen to me. We have experience in this. ಇವೆಲ್ಲಾ ಸರಿಪಡಿಸಬೇಕಾಗುತ್ತದೆ. Even ಕಾರ್ಯದರ್ಶಿಯೂ, ಪಂಚಾಯತಿ ಅಧ್ಯಕ್ಷರೂ, at the lower level ಯಾವ ಮಟ್ಟಕ್ಕೆ ಇದೆಯೆಂದು ನಾವು ನೋಡುತ್ತಿದ್ದೇವೆ. we are seeing it. ಇವತ್ತು ಬೆಳಗ್ಗೆ ಒಬ್ಬರು ಬಂದರು. ಅವನೊಬ್ಬ ಬಿಲ್ ಕಲೆಕ್ಟರ್. ಅವನ ಮೇಲೆ ಒಂದು ಮೊಕದ್ದಮೆ ಇದೆ. ಅವನು ಬಳಸಿರುವ ಶಬ್ದಗಳು, ಹೇಗಿವೆ ಎಂದರೆ, ಅವನ ಮೇಲೆ ಸಿಇಒಗೆ ಹಾಕಿರುವ threat case ಇದೆ. This is the position. ಅವನನ್ನು ಏನೂ ಮಾಡಲಿಕ್ಕೆ ಆಗುವುದಿಲ್ಲ. ಅವನು ಬಿಲ್ ಕಲೆಕ್ಟರ್. ನಾನು ಮಂತ್ರಿಯಿದ್ದೇನೆ. ಆ ಕ್ಷೇತ್ರದಲ್ಲೇ, ಅಂದರೆ ಹೊಸಕೋಟೆಯಲ್ಲಿ ಒಂದು ಸಭೆಯಿದೆ ಎಂದು ನಾನು ಮೊನ್ನೆ ಹೋಗಿದ್ದೆ. ಆದರೆ ಆವತ್ತು ಬರುವುದಿಲ್ಲವೆಂದು ಅವನು ರಜಾ ಹಾಕಿರುತ್ತಾನೆ.

ಶ್ರೀ ವೆಂಕಟರಾವ್ ನಾಡಗೌಡ : ಸರ್, ನಿಮ್ಮ ಗತಿಯೇ ಹೀಗಾದರೆ ಇನ್ನು ನಮ್ಮ ಗತಿ ಹೇಗೆ?

ಶ್ರೀ ಬಿ.ಎನ್. ಬಚ್ಚೇಗೌಡ : ಕುಳಿತುಕೊಳ್ಳಿ, ಸ್ವಲ್ಪ ನಾನು ಹೇಳುತ್ತಿರುವುದನ್ನು ಕೇಳಿ.

ಶ್ರೀ ಅಪ್ಪಾಜಿ ನಾಡಗೌಡ : ನೀವು ಹೇಳುತ್ತಿರುವುದು ಸರಿಯಿದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಕುಳಿತುಕೊಳ್ಳಿ. ಮಂತ್ರಿಗಳು, ಎಲ್ಲರ ಕಥೆಯೂ ಇದೇ ರೀತಿ ಇದೆ ಕುಳಿತುಕೊಳ್ಳಿ. Why do you bother?

ಶ್ರೀ ಹೆಚ್.ಸಿ.ಬಾಲಕೃಷ್ಣ : ನೀವು ಹೇಳುತ್ತಿರುವುದು ಸರಿಯಿದೆ.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ : ನಾನು ಮಾನ್ಯ ಗುತ್ತೇದಾರ್ ಅವರು ಹೇಳಿದ್ದಕ್ಕೆ ಹೇಳುತ್ತಿದ್ದೇನೆ. ನೋಡಿ, ಮಾನ್ಯ ಬಾಲಕೃಷ್ಣರವರೆ, you are JD(S) man. ಇಲ್ಲೇ ಕೃಷ್ಣ ಬೈರೇಗೌಡರು ಇದ್ದಾರೆ. Another gentleman ಮಾಜಿ ಮಂತ್ರಿಗಳಾದ ಮುನಿಯಪ್ಪನವರು ಇಲ್ಲೇ ಕುಳಿತಿದ್ದಾರೆ. ಇನ್ನೊಬ್ಬರು ಸುಧಾಕರ್ ಅವರು ಇದ್ದಾರೆ. In their constituency ಒಬ್ಬ ಬಿಲ್ ಕಲೆಕ್ಟರ್

ಏನು ಮಾಡಿದ್ದಾ ರೆಂದು morning I came to know. ತಾವು ಏನು ಮಾತನಾಡುತ್ತೀರಿ? ಕಳೆದ ವಾರ ಒಬ್ಬ ಮಂತ್ರಿಯಾದ ನಾನು ಹೋಗಿದ್ದೇನೆ. ರಜಾ ಹಾಕಿಬಿಟ್ಟು ಅವನು ಹೇಳುತ್ತಾನೆ,...

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ : ಸ್ವಲ್ಪ ಕೇಳಿ. ಎಲ್ಲರಿಗೂ ಇರುವಂಥ ಸಮಸ್ಯೆ. Why do you bother? Is it not a Government job. ಏಕೆ ಬಚ್ಚೇಗೌಡ ಮಾತನಾಡಬಾರದೇ? ತಾವು ಈಗ ಬಂದಿದ್ದೀರಿ. ತಿಳಿದುಕೊಳ್ಳಿ. ನಿಮಗೇನು ಗೊತ್ತಿದೆ?

ಶ್ರೀ ಕೃಷ್ಣ ಬೈರೇಗೌಡ : ನಿಮಗೇ ಅವರು support ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ : ಬಿಲ್ ಕಲಕ್ಟರ್ ರಜಾ ಹಾಕಿಬಿಟ್ಟು ಹೋಗುತ್ತಾನೆ. ಏಕೆ absent ಆಗಿದ್ದೀರೆಂದು, When I wrote a letter ನಾನು training ಗೆ ಹೋಗಿದ್ದೆ ಎಂದು ಹೇಳುತ್ತಾರೆ. ಒಬ್ಬ ಬಿಲ್ ಕಲೆಕ್ಟರ್ responsibility, ಒಬ್ಬ ಮಂತ್ರಿ ಹೋಗಿ inauguration ಮಾಡುವಾಗ he was not present? That fellow is a congress ZP member's brother. ಈ ಬಿಲ್ ಕಲೆಕ್ಟರ್ ಅವರನ್ನು ನಾವೇ ನೇಮಕ ಮಾಡಿದ್ದವರು. ಬಿಜೆಪಿ ಬಿಲ್ ಕಲೆಕ್ಟರ್‌ಗಳು, ಕಾಂಗ್ರೆಸ್ ಬಿಲ್ ಕಲೆಕ್ಟರ್‌ಗಳು, ಜೆಡಿ(ಎಸ್) ಬಿಲ್ ಕಲೆಕ್ಟರ್‌ಗಳು, ಜೆಡಿ(ಎಸ್) ಕಾರ್ಯದರ್ಶಿಗಳು, this is what we are facing everyday. ಸುಮ್ಮನೆ ಮಾತನಾಡಿದರೆ ಏನು ಬಂತು?

(ಗೊಂದಲ)

ಶ್ರೀ ಮಾಲೀಕಯ್ಯ ಗುತ್ತೇದಾರ್ : ನಾವು ಇಲ್ಲಿ ಪಾರ್ಟಿ ಬಗ್ಗೆ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ ; ಪರಿಸ್ಥಿತಿ ಈ ರೀತಿ ಇದೆ. ವ್ಯವಸ್ಥೆ ಈ ರೀತಿಯಾಗಿದೆಯೆಂದು what is your suggestion?

ಶ್ರೀ ಬಿ.ಎನ್. ಬಚ್ಚೇಗೌಡ : ಸರಿಪಡಿಸುವುದಕ್ಕೆ ಹೇಳಿದೆ. ಅವರನ್ನು ಸಸ್ಪೆಂಡ್ ಮಾಡುವುದೇ, ಅವರ ಮೇಲೆ action ತೆಗೆದುಕೊಳ್ಳುವುದೇ ಅಥವಾ enquiry conduct ಮಾಡುವುದೇ, ಏನು ಮಾಡಬೇಕೆಂದು ಕೇಳಿದೆ.

ಶ್ರೀ ಮಾಲೀಕಯ್ಯ ಗುತ್ತೇದಾರ್ : ಏನು ಮಾಡಬೇಕೆಂದು ನೀವು ಸರ್ಕಾರದವರು ಹೇಳಿ.

ಶ್ರೀ ಬಿ.ಎನ್. ಬಚ್ಚೇಗೌಡ : ನಾವು ಮಾಡುತ್ತೇವೆ. We are doing it. We have not closed our hands. We have powers, we will do it.

ಶ್ರೀ ಸಿದ್ದರಾಮಯ್ಯ : ಮಾನ್ಯ ಬಚ್ಚೇಗೌಡರೆ, ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಬಿ.ಎನ್. ಬಚ್ಚೇಗೌಡ : ನಾವು politicians ಇದರಿಂದ ಮುಕ್ತವಾಗಿ ದೂರವಿದ್ದರೆ ಅದು ಸರಿಯಾಗಿ ನಡೆದುಕೊಂಡು ಹೋಗುತ್ತದೆ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಸುಭಾಷ್ ಗುತ್ತೇದಾರ್ : ಆಯಿತು, ಈಗ ಯಾರು ಮಾಡುತ್ತಿದ್ದಾರೆ?

ಶ್ರೀ ಬಿ.ಎನ್. ಬಚ್ಚೇಗೌಡ : It is our ಹಸ್ತಕ್ಷೇಪ, which is doing all this.

ಶ್ರೀ ಸಿದ್ದರಾಮಯ್ಯ : you are correct. ನೀವು ಹೇಳಿದ್ದೀರಿ. ನೀವು ಹೇಳುವುದೂ ಕೂಡ ಸತ್ಯ ಇರಬಹುದು. I am not disputing it. ರಾಜಕಾರಣಿಗಳು, ಅವರವರ ಪಕ್ಷದವರು...........

ಶ್ರೀ ಬಿ.ಎನ್.ಬಚ್ಚೇಗೌಡ : This is my experience. I am just telling it.

ಶ್ರೀ ಸಿದ್ದರಾಮಯ್ಯ : ಇಲ್ಲ, ನಿಮ್ಮ experience ಸರಿಯಿಲ್ಲವೆಂದು ನಾನು ಹೇಳುತ್ತಿಲ್ಲ. ಕೇಳಿ ಮಾನ್ಯ ಬಚ್ಚೇಗೌಡರೆ, ಏಕೆ ಆ ಕಡೆ ತಿರುಗಿಕೊಳ್ಳುತ್ತಿದ್ದೀರಿ? ಈ ಕಡೆ ತಿರುಗಿಕೊಳ್ಳಿ. ಆ ಕಡೆ ಯಾರ ಮೇಲೆ ಕೋಪ?

ಶ್ರೀ ಬಿ.ಎನ್.ಬಚ್ಚೇಗೌಡ : ಕೋಪ ಯಾರ ಮೇಲೂ ಇಲ್ಲ. ಮಾನ್ಯ ಗುತ್ತೇದಾರ್ ಅವರು ಹೇಳಿದ್ದೂ, ಅವರು ಹೇಳಿರುವುದೂ ಸತ್ಯ.

ಶ್ರೀ ಸಿದ್ದರಾಮಯ್ಯ : ಅವೆಲ್ಲಾ ಸತ್ಯ. ಆಗಿರುವುದೂ ಸತ್ಯ, ಈ ತರಹ ನಡೆಯುತ್ತಿರುವುದೂ ಸತ್ಯ. ಅವರು ಏನು ಹೇಳುತ್ತಿದ್ದಾರೆಂದರೆ, ನೀವು ಸರ್ಕಾರದಲ್ಲಿದ್ದೀರಿ, ಪರಿಶೀಲಿಸುವುದಕ್ಕೆ ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ ಅಷ್ಟೆ. ಅಷ್ಟನ್ನು ಮಾಡಿ, ಅವರು ಯಾವ ಪಕ್ಷಕ್ಕಾದರೂ

ಸೇರಿರಲಿ, ಜಿಲ್ಲಾ ಪಂಚಾಯತ್ ಬಿಜೆಪಿ ಪಕ್ಷಕ್ಕಾದರೂ ಸೇರಿರಲಿ, ಕಾಂಗ್ರೆಸ್ ಪಕ್ಷಕ್ಕಾದರೂ ಸೇರಿರಲಿ, ಜೆಡಿ(ಎಸ್) ಪಕ್ಷಕ್ಕಾದರೂ ಸೇರಿರಲಿ. Merciless ಆಗಿ action ತೆಗೆದುಕೊಳ್ಳಿ.

ಶ್ರೀ ಸುಭಾಷ್‌ಗುತ್ತೇದಾರ್ : ಶಿಕ್ಷಕರ ಬಗ್ಗೆ ಹೇಳಬೇಕೆಂದರೆ, ಒಬ್ಬರೂ head quarters ನಲ್ಲಿ ಇರುವುದಿಲ್ಲ. ಎಲ್ಲರೂ ಸಿಟಿಯಿಂದಲೇ ಬರುತ್ತಾರೆ. ಶಾಲೆಗೆ ಬೆಳಗ್ಗೆ ಬರುವುದಕ್ಕೆ 11 ಗಂಟೆ ಮಾಡುತ್ತಾರೆ ಮತ್ತು 4 ಗಂಟೆಗೆ ಹೋಗಲು ಶುರು ಮಾಡುತ್ತಾರೆ. ಇವತ್ತು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಏಕೆ ಕೆಳಗೆ ಹೋಗಿದೆಯೆಂದರೆ, ಶಿಕ್ಷಕರು ಸಮಯಕ್ಕೆ ಸರಿಯಾಗಿ ಬರುತ್ತಿಲ್ಲ, ಸಮಯಕ್ಕೆ ಸರಿಯಾಗಿ ಪಾಠವನ್ನು ಕಲಿಸುತ್ತಿಲ್ಲ. ಆದುದರಿಂದ ಶಿಕ್ಷಕರು ಅಲ್ಲೇ ಇರುವ ಹಾಗೆ ಏನಾದರೂ ವ್ಯವಸ್ಥೆ ಮಾಡಬೇಕು. ಶಿಕ್ಷಕರು ಯಾವ ಶಾಲೆಯಲ್ಲಿ ನೇಮಕ ಹೊಂದಿರುತ್ತಾರೋ ಆ ಊರಿನಲ್ಲೇ ಇರುವ ಹಾಗೆ ಮಾಡಬೇಕು. ಇವತ್ತು ಕಾನೂನಿನ ಬಗ್ಗೆ ಹೇಳಬೇಕೆಂದರೆ, ನಮ್ಮಲ್ಲಿ ಪ್ರತಿಯೊಂದು ಹಳ್ಳಿಗೆ 10 ರಿಂದ 20 ರವರೆಗೆ ಜೀಪುಗಳಿವೆ. ಕೆಎಸ್‌ಆರ್‌ಟಿಸಿ ಬಸ್‌ಗಳು ಇದ್ದರೂ ಕೂಡ ಪ್ರೈವೇಟ್ ಜೀಪ್‌ಗಳಿವೆ. ಆ ಜೀಪ್‌ನಿಂದ ಅವರು passengers ಹೊಡೆಯುತ್ತಾರೆ. ಪೊಲೀಸ್ ಇಲಾಖೆಯವರು ಒಂದು ಜೀಪ್‌ಗೆ 100 ರೂಪಾಯಿ ತೆಗೆದುಕೊಳ್ಳುತ್ತಾರೆ. ಹಾಗೆ ನಮ್ಮಲ್ಲಿ 1000 ಜೀಪುಗಳಿವೆ. ಒಂದು ಊರಿಗೆ 10–10 ಜೀಪ್ ಎಂದರೂ, ಒಂದೊಂದು ಜೀಪಿಗೂ 100 ರೂಪಾಯಿ ಎಂದರೂ, 100 ರೂಪಾಯಿ ಪಿಎಸ್‌ಐ ಪೊಲೀಸ್ ಇಲಾಖೆ, 100 ರೂಪಾಯಿ ಆರ್‌ಟಿಓ ಹೋಗುತ್ತದೆ. ಅವರಿಗೆ ಒಂದು ತಿಂಗಳಿಗೆ ಎಷ್ಟು income ಆಗುತ್ತದೆ?

ನಮ್ಮ ಕೆಎಸ್‌ಆರ್‌ಟಿಸಿ ಬಸ್ಸುಗಳೆಲ್ಲವೂ ಖಾಲಿಯಾಗಿ ಸಂಚರಿಸುತ್ತವೆ. ಜೀಪುಗಳು ಸಂಚರಿಸುವುದನ್ನು ಬಂದ್ ಮಾಡಿದಾಗ ಕೆಎಸ್‌ಆರ್‌ಟಿಸಿ ಯಿಂದ ರಾಜ್ಯಕ್ಕೆ ಅನುಕೂಲವಾಗುತ್ತದಲ್ಲದೆ ಹೆಚ್ಚಿಗೆ ಆದಾಯವೂ ಬರುತ್ತದೆ. ಇವರು RTO ಎದುರಿಗೆ ಮತ್ತು ಪೊಲೀಸರ ಎದುರಿಗೇ ಜೀಪುಗಳಲ್ಲಿ ಜನರನ್ನು ತುಂಬಿಸಿಕೊಂಡು ಹೋಗುತ್ತಾರೆ! ಇದನ್ನು ಗಮನಿಸುವುದಕ್ಕೆ ಯಾರೂ ತಯಾರಿಲ್ಲ. ಅವರಿಗೆ ಬರಬೇಕಾದ್ದು ಬಂದರೆ ಸರಿ, ಬರಲಿಲ್ಲ ವೆಂದರೆ ಜೀಪು ಹಿಡಿದು ಅವರನ್ನು ಒಳಗಡೆ ಹಾಕುತ್ತಾರೆ. ಇವತ್ತು ಕಾನೂನಿನ ಬಗ್ಗೆ ಹೇಳಬೇಕೆಂದರೆ, ಒಬ್ಬ PSI ಇದ್ದಾರೆ. ಅಣ್ಣ–ತಮ್ಮಂದಿರ ಜಗಳವಾಗಿ ಪೊಲೀಸ್ ಠಾಣೆಗೆ ಬಂದು ಅರ್ಜಿ ಕೊಟ್ಟರೆ ಕಾನೂನಿನನ್ವಯ

ಸೂಕ್ತ ಕ್ರಮ ತೆಗೆದುಕೊಳ್ಳಲಿಲ್ಲ. ಮುಂದೆ ಅಣ್ಣನಾದವನು ತಮ್ಮನನ್ನು ಕೊಲೆ ಮಾಡಿಸಿದ. ಈ ಸಂಬಂಧ PSI ಅವರನ್ನು ವರ್ಗಾಯಿಸಿದರೂ ಪುನಃ ಅದೇ ಸ್ಥಳಕ್ಕೆ ಆತನನ್ನು ನೇಮಕ ಮಾಡಿದರು! ವರ್ಗಾವಣೆ ಹಾವಳಿವುಂಟಾಗಿದೆ. ತಹಶೀಲ್ದಾರ್ ನೇಮಕಗೊಂಡ ಒಂದೆರಡು ದಿವಸಗಳಲ್ಲೇ ಮತ್ತೊಂದು ಸ್ಥಳಕ್ಕೆ ವರ್ಗಾವಣೆಯಾದರು. ಮುಂಜಾನೆ ಒಂದು ಆದೇಶ ಹೊರಡಿಸಿದರೆ, ಸಂಜೆ ಮತ್ತೊಂದು ಆದೇಶ ಹೊರಡಿಸುತ್ತಾರೆ. ಆ ತರಹದ ಪರಿಸ್ಥಿತಿ ಇಲ್ಲಿದೆ.

ತಹಶೀಲ್ದಾರ್, CPI ಹುದ್ದೆಗಳೂ ಒಳಗೊಂಡಂತೆ ತಾಲ್ಲೂಕಿನಲ್ಲಿ ಮುಖ್ಯವಾದ ಹುದ್ದೆಗಳು ಖಾಲಿ ಇದದಾಗ ಅಲ್ಲಿ ಯಾವ ರೀತಿಯ ಆಡಳಿತ ನಡೆಸಬೇಕು? ಯಾರಿಗೆ ಹೇಳಬೇಕು? PSI ಅವರನ್ನು ವರ್ಗಾಯಿಸಿ ಪುನಃ ಅದೇ ಸ್ಥಳಕ್ಕೆ ನೇಮಿಸಿದರೂ ಆತ ಯಾವುದಕ್ಕೂ ಹೆದರುತ್ತಿಲ್ಲ. ಅಲ್ಲಿ ಬಹಳಷ್ಟು ಕೊಲೆಗಳಾಗಿವೆ. ಗುಲ್ಬರ್ಗಾದಿಂದ ಬಂದು ನಮ್ಮ ಕ್ಷೇತ್ರದಲ್ಲಿ ಕೊಲೆಗಳನ್ನು ನಡೆಸುತ್ತಿದ್ದಾರೆ. ಏಕೆಂದರೆ, PSI adjustment. ನಿಜವಾಗಿಯೂ ನಡೆದಿರುವುದನ್ನು ಹೇಳಬೇಕಾಗುತ್ತದೆ. ಒಬ್ಬರನ್ನು ವರ್ಗಾಯಿಸಿದಾಗ ಮಾತ್ರ ಅಲ್ಲಿ ಆಡಳಿತ ನಡೆಯುತ್ತದೆ, ಇಲ್ಲದಿದ್ದರೆ, ಅವರು ಅಲ್ಲಿಯೇ ಇದ್ದರೆ, ಅವರು ಯಾರಿಗೂ ಹೆದರುವುದಿಲ್ಲ. ಆದೇಶದಲ್ಲಿ ವರ್ಗಾಯಿಸಬೇಕೆಂದು ಮುಖ್ಯಮಂತ್ರಿಗಳು ಬರೆದಿದ್ದರೂ *ವರ್ಗಾವಣೆಯಾಗುತ್ತಿಲ್ಲ. ಕಾರ್ಯದರ್ಶಿ ಅಧೀನದಲ್ಲಿರುವ ಅಧಿಕಾರಿಗಳು ಫೋನ್ ಮಾಡಿ ಹೇಳುತ್ತಾರೆ,* 'ನಿಮ್ಮದು *ವರ್ಗಾಯಿಸಬೇಕೆಂದು ಬಂದಿದೆ, ನಿಮ್ಮ ಎಂಎಲ್‌ಎ ಲೆಟರ್ ಹಾಕಿಸಿದ್ದಾರೆ, ನಿಮ್ಮ ವರ್ಗಾವಣೆಗೆ ಸಂಬಂಧಿಸಿದಂತೆ ಬಿಜೆಪಿಯ ಯಾರದಾದರೂ ಲೆಟರ್ ತಂದಿಡು, ನಿನ್ನ ವರ್ಗಾವಣೆಯನ್ನು ಪೆಂಡಿಂಗ್* ಇಡುತ್ತೇವೆ' ಎಂದು ಹೇಳುತ್ತಾರೆ!! ಆಡಳಿತ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಪತ್ರದಲ್ಲಿ ವರ್ಗಾಯಿಸಬೇಕೆಂದು ಬರೆದರೂ, ಆ ಪತ್ರಕ್ಕೆ ಕಿಮ್ಮತ್ತು ಇಲ್ಲವೆಂದರೆ ಹೇಗೆ?

ಅಲ್ಲಿ ನಮ್ಮ ಸರ್ಕಾರಿ ಜಾಗಗಳಿವೆ. ಹಳೆಯ PSI ಮನೆಗಳು, ಹಳೆಯ ಕಚೇರಿಗಳು, ಅವೆಲ್ಲವೂ PWD ಗೆ ಸೇರಿರುವುದಾಗಿದೆ. ಈ ಜಾಗಗಳೆಲ್ಲವನ್ನೂ ಅಲ್ಲಿ ಕಬ್ಜಾ ಮಾಡಿದ್ದಾರೆ. ಕೇಳುವುದಕ್ಕೆ ಯಾರೂ ತಯಾರಿಲ್ಲ. ಒಂದು ಊರಿನಲ್ಲಿ I.B. ಇದೆ. ಆ I.B. ಯಲ್ಲಿ ಒಬ್ಬರು ಶಾಲೆ ನಡೆಸುತ್ತಾರೆ! PWD ಯವರಿಗೆ ಹೇಳಿದರೆ ಅವರು ಕೇಳುವುದಕ್ಕೆ ತಯಾರಿಲ್ಲ. ಆಳಂದ ಊರಿನ 36 ಎಕರೆ ಪ್ರದೇಶದಲ್ಲಿ ಸರ್ಕಾರಿ ಕಚೇರಿಗಳಿವೆ. ಒಬ್ಬ

ಪಿ.ಎ. ಹೋಲ್ಡರ್, ಮೊದಲು ಇದ್ದವರಿಂದ ಏನೋ ಬರೆಸಿಕೊಂಡು ತನ್ನ ಹೆಸರಿನಲ್ಲಿಯೇ ಆ ಜಾಗ ಮಾಡಿಸಿಕೊಂಡಿದ್ದಾನೆ! ಯಾವ ರೀತಿಯ ಪರಿಸ್ಥಿತಿ ಇದೆಯೆಂದರೆ, ಸರ್ಕಾರಿ ಕಚೇರಿಗಳ ಮಗ್ಗಲಲ್ಲಿ ಖುಲ್ಲಾ ಜಾಗ ಇದ್ದರೆ ಖಾಸಗಿಯವರಿಗೆ ಮಾರಾಟ ಮಾಡಿದ್ದಾನೆ! ಮತ್ತು ಅಧಿಕಾರಿಗಳು ವಾಸ್ತವ್ಯ ಹೂಡುವ ಸಲುವಾಗಿ ಸರ್ಕಾರಿ ಕ್ವಾರ್ಟರ್ಸ್ ಇರುತ್ತವಲ್ಲ, ಒಂದು ಕ್ವಾರ್ಟರ್ಸ್‌ಗೂ ಮತ್ತೊಂದು ಕ್ವಾರ್ಟರ್ಸ್‌ಗೂ ನಡುವೆ ಇರುವ ಜಾಗವನ್ನೂ ಮಾರಾಟ ಮಾಡಿದ್ದಾನೆ! ಒಟ್ಟು 36 ಎಕರೆಗಳಷ್ಟು ಪ್ರದೇಶ. ಇಲ್ಲಿ ಯಾವ ರೀತಿಯ ಆಡಳಿತ ನಡೆಯುತ್ತಿದೆ ಎಂಬುದನ್ನು ತಾವು ಗಮನಿಸಬೇಕು. Heart of the town ನಲ್ಲಿರುವ ಸುಮಾರು 36 ಎಕರೆಗಳಷ್ಟು ಪ್ರದೇಶವನ್ನು ಇವತಯ್ತು ಖಾಸಗಿಯವರು ಕಬ್ಜಾ ಮಾಡುತ್ತಿದ್ದಾರೆ. ಆ ಪ್ರದೇಸದಲ್ಲಿ ಮನೆಗಳನ್ನು ಕಟ್ಟಿದ್ದಾರೆ.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇನ್ನು ಭ್ರಷ್ಟಾಚಾರದ ಬಗ್ಗೆ ಬಹಳಷ್ಟು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಭ್ರಷ್ಟಾಚಾರ ಮೇಲಿನ ಹಂತದಿಂದಲೂ ಇದೆ, ಕೆಳಗಿನ ಹಂತದಿಂದಲೂ ಇದೆ. ನಾವು ಮತ ಕೇಳಲು ಜನರ ಬಳಿ ಹೋದಾಗ ಇಲ್ಲೊಂದು ಗುಡಿ ಕಟ್ಟಿಸಿಕೊಡಿ, ಕಲ್ಯಾಣ ಮಂಟಪ ಕಟ್ಟಿಸಿಕೊಡಿ ಎನ್ನುತ್ತಾರೆ. ಚುನಾವಣೆ ವೇಳೆಯಲ್ಲಿ ಎಲ್ಲಿ ನಾವು ಗುಡಿ ಕಟ್ಟಿಸಿಕೊಡುವುದು? ಎಲ್ಲಿ ಕಲ್ಯಾಣ ಮಂಟಪ ಕಟ್ಟಿಸಿಕೊಡುವುದು? ಗುಡಿ ಕಟ್ಟಿಸಿಕೊಟ್ಟರೆ ಸಮುದಾಯದವರೆಲ್ಲರೂ ನಿಮಗೇ ಓಟು ಹಾಕುತ್ತೇವೆಂದು ಹೇಳುತ್ತಾರೆ. ಇದಕ್ಕೆ ಬೇಕಾಗುವ ಸಿಮೆಂಟ್, ಸ್ಟೀಲ್, ಇತ್ಯಾದಿಗಳನ್ನು ಅಲ್ಲಿಗೆ ತೆಗೆದುಕೊಂಡು ಹೋದಾಗ ಮಾತ್ರ ಅವರು ಓಟು ಹಾಕುತ್ತಾರೆ. ಭ್ರಷ್ಟಾಚಾರ ಎಲ್ಲಿಂದ ಶುರುವಾಯಿತೆಂಬುದನ್ನು ತಾವೇ ಲೆಕ್ಕಾಚಾರ ಮಾಡಿ. ಕೆಳಮಟ್ಟದಲ್ಲಿ ಭ್ರಷ್ಟಾಚಾರ ಇರಲಿಲ್ಲವೆಂದರೆ, ಇನ್ನು ನಾವು ಹೇಗೆ ಭ್ರಷ್ಟಾಚಾರಿಗಳಾಗುತ್ತೇವೆ? ಇಲ್ಲಿ ಮತದಾರರೇ ಮೊದಲು ಭ್ರಷ್ಟಾಚಾರಿಗಳಾಗಿದ್ದಾರೆ! ಭ್ರಷ್ಟಾಚಾರ ಮೊದಲು ಕೆಳಮಟ್ಟದಿಂದ ಕಡಿಮೆಯಾಗಬೇಕು. ಇವತ್ತು ಭ್ರಷ್ಟಾಚಾರ ಹೋಗಲಾಡಿಸಲು ಯಾರಿಂದಲೂ ಸಾಧ್ಯವಿಲ್ಲ. ಎಲ್ಲರ ಮನಸ್ಸಿನಲ್ಲಿ ಬಂದಾಗ ಮಾತ್ರ ಭ್ರಷ್ಟಾಚಾರ ಹೋಗಲಾಡಿಸಲು ಸಾಧ್ಯ, ಇಲ್ಲದಿದ್ದಲ್ಲಿ ಆಗುವುದಿಲ್ಲ.

ಇನ್ನು ಶೌಚಾಲಯಗಳ ಬಗ್ಗೆ ಹೇಳಬಯಸುತ್ತೇನೆ. ನಾವು ಯಾವುದೇ ಹಳ್ಳಿಗಳಿಗೆ ಹೋದರೂ ಶೌಚಾಲಯಗಳನ್ನು ಕಟ್ಟಿಸಿಕೊಡ ಬೇಕೆಂದು ಕೇಳುತ್ತಾರೆ. ಶೌಚಾಲಯಗಳಿಗೆ ಸಂಬಂಧಿಸಿದಂತೆ septic tank ಕಟ್ಟಬೇಕೆಂದು ಜಿಲ್ಲಾ ಪಂಚಾಯತಿಯಲ್ಲಿ ನಿಯಮಾವಳಿಗೆ ತಿದ್ದುಪಡಿ ಯಾಗಿದೆ. ಈಗ ಹಳ್ಳಿಗಳಲ್ಲಿ septic tank ಕಟ್ಟಲು ಸಾಧ್ಯವಿಲ್ಲ. septic tank ಗಳನ್ನು ಗ್ರಾಮೀಣರು ಹೆಚ್ಚಾಗಿ ಉಪಯೋಗಿಸುವುದಿಲ್ಲ. ಬೇರೆ ರೀತಿ ಕಟ್ಟಿಸಿಕೊಡಬೇಕೆಂದು ಹೇಳುತ್ತಾರೆ. ಆದರೆ, ಬೇರೆ ರೀತಿಯಲ್ಲಿ ಕಟ್ಟಿಸಿಕೊಡಲು ಸಾಧ್ಯವಿಲ್ಲವೆಂದು AEE ಯವರು ಹೇಳುತ್ತಾರೆ. ಆದಕಾರಣ, ಎರಡೂ ರೀತಿಯ ಟ್ಯಾಂಕುಗಳನ್ನು ಕಟ್ಟಲು ತಾವು ಪರವಾನಗಿ ಕೊಡಬೇಕು. ನಾಲ್ಕು ಗೋಡೆಗಳ ಶೌಚಾಲಯಗಳನ್ನೂ ಕಟ್ಟಿಸಿಕೊಡಿ, ಜೊತೆಗೆ septic tank ಕಟ್ಟಿಸಿಕೊಡಿ. ಎಲ್ಲಿ ಯಾವ ರೀತಿಯ ಅನುಕೂಲ ಮಾಡಿಕೊಡಬೇಕೋ, ಆ ರೀತಿಯ ಅನುಕೂಲ ಮಾಡಿಕೊಡಿ.

ಇನ್ನು ರೇಷನ್ ಕಾರ್ಡ್‌ಗಳ ಬಗ್ಗೆ ಹೇಳುವುದಾದರೆ, ಎಂ.ಪಿ. ಎಲೆಕ್ಷನ್‌ಗೂ ಮುಂಚೆ ಎಲ್ಲರಿಗೂ ತಾತ್ಕಾಲಿಕವಾಗಿ ರೇಷನ್ ಕಾರ್ಡ್‌ಗಳನ್ನು ವಿತರಿಸಿ, ಎಂ.ಪಿ. ಎಲೆಕ್ಷನ್‌ನಲ್ಲಿ ಗೆದ್ದ ಬಳಿಕ ರೇಷನ್ ಕಾರ್ಡ್‌ಗಳನ್ನು ಪುನಃ ರದ್ದುಗೊಳಿಸಿದ್ದಾರೆ. ಬಹಳಷ್ಟು ಮಂದಿ ಈಗ ನಮ್ಮ ಮನೆ ಮುಂದೆ ಅಂದರೆ, ಎಂ.ಎಲ್.ಎ. ಮನೆ ಮುಂದೆ ಬಂದು ಕುಳಿತುಕೊಳಲು ಶುರು ಮಾಡಿದ್ದಾರೆ. ನಮಗೆ ತಾತ್ಕಾಲಿಕವಾಗಿ ಒದಗಿಸಿಕೊಟ್ಟಿದ್ದ ರೇಷನ್ ಕಾರ್ಡ್‌ಗಳನ್ನು ರದ್ದುಗೊಳಿಸಿದ್ದಾರೆಂದು ಹೇಳುತ್ತಿದ್ದಾರೆ. ಆದರೆ, ಈ ತಿಂಗಳಿನಲ್ಲಿ ಕೋಟಾ ಬಂದಿಲ್ಲವೆಂದು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯವರು ಹೇಳುತ್ತಾರೆ. ಈಗ ರೇಷನ್ ಕಾರ್ಡ್ ಸಮಸ್ಯೆ ಮುಖ್ಯವಾಗಿದೆ. ಬಹಳಷ್ಟು ಯಾವ ಬಡ ಜನರಿಗೆ ರೇಷನ್ ಕಾರ್ಡ್ ಸಿಗಬೇಕೋ, ಅವರುಗಳಿಗೆ ಸಿಕ್ಕಿಲ್ಲ. ಈಗ ರದ್ದುಗೊಳಿಸಿರುವ ರೇಷನ್ ಕಾರ್ಡುಗಳು ಪುನಃ ಅವರಿಗೆ ದೊರಕುವಂತೆ ಕ್ರಮ ಕೈಗೊಳ್ಳಬೇಕು.

ನಮ್ಮಲ್ಲಿ ಒಂದೇ ಒಂದು ಶುಗರ್ ಫ್ಯಾಕ್ಟರಿ ಇದೆ. ಈ ಸಲ ಶುಗರ್ ಫ್ಯಾಕ್ಟರಿಯನ್ನು ಏನಾದರೂ ಮಾಡಿ ಪ್ರಾರಂಭಿಸಿದಲ್ಲಿ ರೈತರಿಗೆ ಅನುಕೂಲ ವಾಗುತ್ತದೆ. ಇನ್ನು ಸಾರಾಯಿ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಇವತ್ತು ಸಾರಾಯಿಯನ್ನು ತಾವು ಬಂದ್ ಮಾಡಿದ್ದೀರಿ. ಆದರೆ, ಬ್ರಾಂದಿ, ವಿಸ್ಕಿ, ಇತ್ಯಾದಿಗಳನ್ನು ಬಂದ್ ಮಾಡಿಲ್ಲ. ಇವುಗಳಿಗೇನೂ ಕೊರತೆಯಿಲ್ಲ.

ಪಾನ ನಿಷೇಧಿಸುವುದಿದ್ದರೆ, ಸಂಪೂರ್ಣವಾಗಿ ನಿಷೇಧಿಸಬೇಕು. ಇವತ್ತು ಸಾರಾಯಿ ಬಂದ್ ಮಾಡಿದ್ದರೂ, ಬಡವರು ಸಾರಾಯಿ ಕುಡಿಯುವುದೇನೂ ಬಿಟ್ಟಿಲ್ಲ. ಮತ್ತೆ ಹೆಚ್ಚು ದುಡ್ಡು ತೆತ್ತು ಸಾರಾಯಿ ಕುಡಿಯುತ್ತಿದ್ದಾರೆ. ಇದು ಬಡವರ ಮೇಲೆ ಇನ್ನೂ ಹೆಚ್ಚಿನ ಹೊರೆಯಾದಂತಾಗಿದೆ. ಮದ್ಯಪಾನ ದೇವಾನುದೇವತೆಗಳಿಂದ ಬಂದಿರುವ ಬಳುವಳಿಯಾಗಿದೆಯೇ ವಿನಾ ಇತ್ತೀಚಿಗೆ ಬಂದುದಲ್ಲ. ಅಣ್ಣ ಬಸವಣ್ಣನವರ ಕಾಲದಲ್ಲಿಯೂ ಹೆಂಡದ ಮಾರಯ್ಯನಿದ್ದ. ಆಗಲೂ ಮದ್ಯ ಮಾರಾಟ ಮಾಡುತ್ತಿದ್ದರು.

ಶ್ರೀ ಸಿ.ಟಿ.ರವಿ : ಆಗ ಸುರಾಪಾನ ಎನ್ನುತ್ತಿದ್ದರೆ, ಈಗ ಸೆರೆಪಾನ ಅನ್ನುತ್ತಿದ್ದಾರಷ್ಟೆ.

ಶ್ರೀ ಸುಭಾಷ್‌ಗುತ್ತೇದಾರ್ : ಆದುದರಿಂದ, ಸಾರಾಯಿ ಮೇಲಿನ ನಿಷೇಧ ತೆಗೆದುಹಾಕುವ ಮೂಲಕ ಹಿಂದಿನ ವ್ಯವಸ್ಥೆಯನ್ನೇ ಪುನಃ ಚಾಲೂ ಮಾಡಿದರೆ, ರಾಜ್ಯದ ಬೊಕ್ಕಸಕ್ಕೆ ಆದಾಯ ಬರುತ್ತದೆ. ಇಲ್ಲದಿದ್ದಲ್ಲಿ, ಕಳ್ಳಬಟ್ಟಿ ಕುಡಿದು ಜನರು ಆರೋಗ್ಯ ಕೆಡಿಸಿಕೊಂಡು ಸಾಯುತ್ತಾರೆ. ಇವತ್ತು ಮಹಾರಾಷ್ಟ್ರ ಮತ್ತು ಬೇರೆ ಕಡೆಗಳಿಂದ ತಂದು ಮಾರಾಟ ಮಾಡುವ ಮೂಲಕ ಇದನ್ನು ದಂಧೆಯಾಗಿಸಿಕೊಂಡಿದ್ದಾರೆ. ಇದರಿಂದಾಗಿ ಯುವಕರೆಲ್ಲರೂ ಹಾಳಾಗುತ್ತಿದ್ದಾರೆ. ಆದಕಾರಣ, ಸಾರಾಯಿ ಮಾರಾಟವನ್ನು ಪುನಃ ಪ್ರಾರಂಭಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದಿರುವುದರಿಂದ, ಇನ್ನೊಂದು ಮಾತನ್ನು ಹೇಳಬಯಸುತ್ತೇನೆ.

ಶ್ರೀ ಮಾಲೀಕಯ್ಯ ಎ. ಗುತ್ತೇದಾರ್ : ಮುಖ್ಯಮಂತ್ರಿಗಳು ಒಳ್ಳೆಯದನ್ನು ಮಾಡಿದ್ದಾರೆ. ಆದರೆ, ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧಿಸಬೇಕಾಗಿತ್ತು. ಇದರಿಂದ ಏನಾಗಿದೆಯೆಂದರೆ, ಮಹಾರಾಷ್ಟ್ರ ಮತ್ತು ಬೇರೆ ಕಡೆಗಳಿಂದ ಮದ್ಯಪಾನ ಸರಬರಾಜಾಗುತ್ತಿದ್ದು, ಥರ್ಡ್ಸ್ ಕೂಡ ಪ್ರಾರಂಭವಾಗಿದೆ. ಇದು ಆರೋಗ್ಯಕ್ಕೆ ಬಹಳ ಹಾನಿಕರವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಂಭೀರವಾಗಿ ವಿಚಾರ ಮಾಡಬೇಕಾಗುತ್ತದೆ. ಈಗಾಗಲೇ ನಮ್ಮ ಭಾಗದಲ್ಲಿರುವ ಮೂರ್ತೆದಾರರೆಲ್ಲರೂ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿಯಾಗಿದ್ದಾರೆ. ಸಾರಾಯಿ ನಿಷೇಧಿಸಿರುವುದರಿಂದ ಅವರೆಲ್ಲರೂ ನಿರುದ್ಯೋಗಿಗಳಾಗಿದ್ದಾರೆ. ಅವರೆಲ್ಲರಿಗೂ ಸಹಾಯ ಮಾಡುವುದಾಗಿ ಬಜೆಟ್‌ನಲ್ಲಿ ತಾವು ಭರವಸೆ ನೀಡಿದ್ದೀರಿ. ಇದರ ಬಗ್ಗೆ ಪ್ರಾಕ್ಟಿಕಲ್ ಆಗಿ ವಿಚಾರ ಮಾಡಬೇಕು. ಮಾನ್ಯ ಸಿದ್ದರಾಮಯ್ಯನವರು ಹಿಂದೆ ಹಣಕಾಸು ಮಂತ್ರಿಗಳಾಗಿದ್ದಾಗ ಗುಜರಾತ್ ಒಳಗೊಂಡಂತೆ ಬೇರೆ

ರಾಜ್ಯಗಳಿಗೂ ಹೋಗಿ ನೋಡಿ ಬಂದಿದ್ದಾರೆ. ಇವತ್ತು ಅಲ್ಲಿಯೂ ಬಿಜೆಪಿ ಸರ್ಕಾರವಿದೆ. ಇಲ್ಲಿ ಬಿಜೆಪಿ ಸರ್ಕಾರವಿದ್ದರೂ ವಿಫಲವಾಗಿದೆ. ಅಲ್ಲಿ excise contractor ಗುತ್ತಿಗೆ ತೆಗೆದುಕೊಂಡಿದ್ದಾರೆ. ಇಲ್ಲಿಯೂ ಅದೇ ರೀತಿ ಆಗಿದ್ದರೆ ಬೇರೆ ರಾಜ್ಯಗಳಿಂದಾಗುವ ಅವ್ಯವಹಾರವನ್ನು ತಡೆಗಟ್ಟಲು ಸಾಧ್ಯವಾಗುತ್ತಿತ್ತು, ರಕ್ಷಣೆ ಸಿಗುತ್ತಿತ್ತು. ಆದರೆ, ಇಲ್ಲಿ ಏನಾಗುತ್ತಿದೆಯೆಂದರೆ, ಅಧಿಕಾರಿಗಳಿಂದ ಸಾಧ್ಯವಾಗುತ್ತಿಲ್ಲ. ಅಧಿಕಾರಿಗಳೇ ಶಾಮೀಲಾಗಿದ್ದಾರೆ. ಅವರೇ ರಕ್ಷಣೆ ಒದಗಿಸುತ್ತಿದ್ದಾರೆ. ಇದರ ಬಗ್ಗೆ ಗಂಭೀರವಾಗಿ ವಿಚಾರ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸಿದ್ದು ಸವದಿ : ರಾಜ್ಯದಲ್ಲಿ ಕಳ್ಳಬಟ್ಟಿ ದೊಡ್ಡ ಪ್ರಮಾಣದಲ್ಲಿ ಪ್ರಾರಭವಾಗಿದೆ. ಅದನ್ನು ತಡೆಯುವ ವ್ಯವಸ್ಥೆ ಮೊದಲಾಗಬೇಕು. ಇಲ್ಲದಿದ್ದರೆ, ರಾಜ್ಯದ ಖಜಾನೆಗೆ ಬರಬೇಕಾದ ಹಣ ವಿನಾಕಾರಣ ನಿಂತು ಹೋಗುತ್ತದಲ್ಲದೆ, ಜನರ ಆರೋಗ್ಯವೂ ಹಾಳಾಗುತ್ತದೆ.

ಶ್ರೀ ಸುಭಾಷ್‌ಗುತ್ತೇದಾರ್ : ಇನ್ನು ಗ್ರಾಮಸಭೆ ಮೂಲಕ ಆಶ್ರಯ ಮನೆಗಳನ್ನು ಹಂಚುವುದು. ಮೊದಲು ಎಂ.ಎಲ್.ಎ.ಗಳೇ ಅಧ್ಯಕ್ಷರಾಗುವ ಪದ್ಧತಿ ಏನಿತ್ತು, ಅವರುಗಳನ್ನೇ ಅಧ್ಯಕ್ಷರನ್ನಾಗಿ ಮಾಡಬೇಕು. ಒಂದು ಸಲವೂ ಗ್ರಾಮಸಭೆ ಸೇರಿಲ್ಲ. ಪ್ರತಿ ಊರಿನಲ್ಲೂ ಜಗಳವಾಗುತ್ತಿದೆ. ಗ್ರಾಮಸಭೆ ಸೇರದೇ ಇರುವುದರಿಂದ ಆಶ್ರಯ ಮನೆಗಳ ಹಂಚಿಕೆ ವಿಚಾರದಲ್ಲಿ ಅಖೈರು ತೀರ್ಮಾನಗಳಾಗುತ್ತಿಲ್ಲ. ಮುಖ್ಯಮಂತ್ರಿಗಳು ಸದನದಲ್ಲಿರುವುದರಿಂದ, ಇದರ ಲ್ಲಿರುವ ಕ್ಯಾಟೆಗರಿಗಳನ್ನು ತೆಗೆದು ಹಾಕಿ, ಮೊದಲು ಗ್ರಾಮ ಪಂಚಾಯತಿ ಅಧ್ಯಕ್ಷರು ಯಾರು ಆಗಬೇಕೆಂದಿತ್ತೋ, ಎಂ.ಎಲ್.ಎ. ಅವರೇ ಅದಕ್ಕೆ ಅಧ್ಯಕ್ಷರನ್ನಾಗಿ ಪುನಃ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತಾ, ಸೇಂದಿ ಮರಗಳು ಸಾಕಷ್ಟಿರುವುದರಿಂದ, ಸಾರಾಯಿ ಮಾರಾಟವನ್ನು ಪುನಃ ಪ್ರಾರಂಭಿಸಬೇಕೆಂದು ಕೇಳಿಕೊಂಡು, ಬರಗಾಲದ ವಿಷಯವಾಗಿ ಚರ್ಚೆಯಾಗುವಾಗ ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತಾ, ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆಲ್ಲರಿಗೂ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಕೃಷಿ ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದಂತೆ ಒಂದು ವಿಶೇಷ ಚರ್ಚೆಗೆ ಅವಕಾಶ ಮಾಡಿ ಕೊಟ್ಟ ತಮಗೆ ನಾನು ಧನ್ಯವಾದಗಳನ್ನು ಸಲ್ಲಿಸುವುದಕ್ಕೆ

ಬಯಸುತ್ತೇನೆ. ಸಾವಿರಾರು ವರ್ಷಗಳ ಹಿಂದೆಯೇ ಒಂದು ಎಚ್ಚರಿಕೆ ಸೂಕ್ತಿಯನ್ನು ಬಳಸಿದ್ದರು. 'ಕೃಷಿಕೋ ನಾಸ್ತಿ ದುರ್ಭಿಕ್ಷಂ' ಎಂದು ಕೃಷಿಕ ರೈತ ಇಲ್ಲದಿದ್ದರೆ ದೇಶಕ್ಕೆ ದುರ್ಭಿಕ್ಷೆ ಬರುತ್ತದೆ ಎಂದು ಹೇಳಿದ್ದರು. ಪಂಚವಾರ್ಷಿಕ ಯೋಜನೆಗಳನ್ನು ಕೈಗೆತ್ತಿಕೊಂಡಾಗ ಕೈಗಾರಿಕಾ ರಂಗದಲ್ಲಿ ಗುರಿ ಮುಟ್ಟುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ಪಂಚವಾರ್ಷಿಕ ಯೋಜನೆಯ ಗುರಿಯನ್ನು ನಿಗದಿ ಮೀರಿ ಸಾಧಿಸಿದ್ದು ಕೃಷಿ ರಂಗದಲ್ಲಿ ಕೇವಲ ರೈತ ಮಾತ್ರ. ಆಹಾರ ಇಲ್ಲದೆ ಹಾಹಾಕಾರ ಪಡುತ್ತಿದ್ದಾಗ ರೈತ ದೇಶದ ಹೊಟ್ಟೆಯನ್ನು ತುಂಬಿಸಿದ. ಹಾಗೆಯೇ ದೇಶದ ಹೊಟ್ಟೆ ತುಂಬಿಸಿದ ರೈತ ಇವತ್ತು ಬಡವಾಗಿದ್ದಾನೆ. ಅವನ ರಟ್ಟೆಯಲ್ಲಿ ಬಲ ಇಲ್ಲದೆ ಇರತಕ್ಕಂತಹ ಪರಿಸ್ಥಿತಿ ಇದೆ. ಇವತ್ತು ಅದನ್ನು ಬಲಗೊಳಿಸದೆ ಇದ್ದರೆ ಹೇಗೆ ಸಾವಿರಾರು ವರ್ಷಗಳ ಹಿಂದೆ 'ಕೃಷಿಕೋ ನಾಸ್ತಿ ದುರ್ಭಿಕ್ಷಂ' ಎಂದು ಹೇಳಿ ಸೂಕ್ತಿಯನ್ನು ಬಳಸಿ ಎಚ್ಚರಿಸಿದ್ದರೋ ಅದು ಎಲ್ಲಿ ನಿಜವಾಗುತ್ತಿದೆಯೋ, ನಿಜವಾಗುವ ಮುನ್ಸೂಚನೆ ಕಾಣುತ್ತಿದೆಯೋ ಎನ್ನತಕ್ಕಂತಹ ಭಯ ಈ ಸಂದರ್ಭದಲ್ಲಿ ನನಗೆ ಕಾಡುತ್ತಿದೆ. ನಾನು ಸಾವಯವ ಕೃಷಿ ಮಿಷನ್ ಸಭೆಗೆ ಹೋಗಿದ್ದೆ. ಸಾವಯವ ಕೃಷಿ ಮಿಷನ್ ಅಧ್ಯಕ್ಷರು ಹಾವೇರಿಯ ಒಬ್ಬ ಅನಕ್ಷರಸ್ತ ರೈತ ಬಳಸಿದ ಒಂದು ಪದವನ್ನು ಉಲ್ಲೇಖ ಮಾಡಿದರು. ಅವರು ಅಲ್ಲಿ ಮಾತನಾಡುತ್ತಾ ಹೇಳಿದರು, 'ಮನುಷ್ಯ ಸತ್ತರೆ ಮಣ್ಣಿಗೆ;ಮಣ್ಣೇ ಸತ್ತರೆ ಮತ್ತೆಲ್ಲಿಗೆ?' ಎಂದು ಹೇಳಿದ್ದರು. ಬಹುಶಃ ಈ ಒಂದು ಶಬ್ದದಲ್ಲಿ ಯಾವ ಪರಿಸ್ಥಿತಿಯ ಕಡೆಗೆ ನಾವು ಹೋಗುತ್ತಿದ್ದೇವೆ ಎನ್ನುವುದನ್ನು ವಿವರಿಸಬಹುದು ಎಂದು ನನಗನ್ನಿಸುತ್ತದೆ, 'ಮನುಷ್ಯ ಸತ್ತರೆ ಮಣ್ಣಿಗೆ, ಮಣ್ಣೇ ಸತ್ತರೆ ಮತ್ತೆಲ್ಲಿಗೆ?' ನಾವು ಆಧುನಿಕ ಕೃಷಿಯ ಪದ್ಧತಿಗೆ ನಮ್ಮನ್ನು ಒಳಪಡಿಸಿಕೊಂಡು ಜೀವವಾಗಿದ್ದ ಮಣ್ಣನ್ನು ಸಾಯಿಸಿದ್ದೇವೆ. ಅದನ್ನು ಸಾಯಿಸಿರುವ ಪರಿಣಾಮವಾಗಿ ರೈತ ಸಾಯುವ ಪರಿಸ್ಥಿತಿ ಬಂದಿದೆ. ರೈತ ಸತ್ತರೆ ಭಾರತ ದೇಶ ಉಳಿಯುವುದಿಲ್ಲ. 110 ಕೋಟಿ ಜನರ ಹೊಟ್ಟೆ ತುಂಬಿಸತಕ್ಕಂತಹ ತಾಕತ್ತು ಜಗತ್ತಿನ ಯಾವ ದೇಶಕ್ಕೂ ಇಲ್ಲ. 110 ಕೋಟಿ ಜನರ ಹೊಟ್ಟೆ ತುಂಬಿಸತಕ್ಕಂತಹ ಸಾಮರ್ಥ್ಯ ಇನ್ನು ಯಾವುದೇ ದೇಶಕ್ಕೆ ಇಲ್ಲ. ನಮ್ಮ ಹೊಟ್ಟೆಯನ್ನು ನಾವೇ ತುಂಬಿಸಿಕೊಳ್ಳಬೇಕೆಂದರೆ ರೈತ ಸಾಯಬಾರದು. ರೈತ ಸಾಯಬಾರದು ಎಂದರೆ ಮಣ್ಣು ಸಾಯಬಾರದು. ತುಂಡಾಗಿರುವ ಕೃಷಿ ಸರಪಳಿಯನ್ನು ಜೋಡಿಸುವ ಅವಶ್ಯಕತೆ ಇದೆ. ತುಂಡಾಗಿರುವ ಕೃಷಿ ಸರಪಳಿಯನ್ನು ಮತ್ತೆ ಜೋಡಿಸದೇ ಇದ್ದರೆ, ನಾವು ಏನೇ ಮಾತನಾಡಲಿ,

ಎಷ್ಟೇ ರೀತಿಯ ಸವಲತ್ತುಗಳನ್ನು ಕೊಡಲಿ ಮತ್ತೆ ಹಳಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ತುಂಡಾಗಿರುವ ಸರಪಳಿಯನ್ನು ಜೋಡಿಸಬೇಕೆಂದರೆ, ಯಾವ ಯಾವ ಕಾರಣಕ್ಕೆ ತುಂಡಾಯಿತು ಎಂದು ಕಾರಣಗಳನ್ನು ಪತ್ತೆ ಹಚ್ಚಬೇಕು. ನನಗನ್ನಿಸುತ್ತದೆ ಮೂರು ಕಾರಣಗಳಿಂದ ಇವತ್ತು ಕೃಷಿ ಸೊರಗಿದೆ. ರೈತ ಸೊರಗಿದ್ದಾನೆ. ಒಂದು ಶೈಕ್ಷಣಿಕ ಕಾರಣ. ಪ್ಯಾಂಟ್ ಹಾಕಿದ ಮನುಷ್ಯನಿಗೆ ಮತ್ತೆ ಗದ್ದೆ ಉಳಬೇಕು ಎಂದು ಅನ್ನಿಸುವುದಿಲ್ಲ. ನಮ್ಮ ಇವತ್ತಿನ ಓದಿನ ಪರಿಣಾಮವಾಗಿ ತನ್ನ ಮೂಲ ವೃತ್ತಿಯ ಬಗ್ಗೆ ಅವನಿಗೆ ಕೀಳರಿಮೆ ಮೂಡುತ್ತದೆ. ತನ್ನ ಮೂಲ ವೃತ್ತಿಯ ಬಗ್ಗೆ ಅಭಿಮಾನ ಬೆಳೆಸದೇ ಇರತಕ್ಕಂತಹ ಈ ಶಿಕ್ಷಣದಲ್ಲಿ ಬದಲಾವಣೆ ತರಬೇಕೋ ಬೇಡವೋ ಎಂದು ನಾವು ಚಿಂತನೆ ಮಾಡಬೇಕಾಗಿದೆ. ನಮ್ಮ ಈ ಶಿಕ್ಷಣ ವ್ಯವಸ್ಥೆ ನಮ್ಮ ಮೂಲ ವೃತ್ತಿಯ ಬಗ್ಗೆ ಕೀಳರಿಮೆ ಮೂಡಿಸಿ, ಇದು ಮಾಡಿದರೆ ಅಪಮಾನ, ಇದನ್ನು ಮುಟ್ಟಬಾರದು ಎಂಬ ಅಪಮಾನವ ಭಾವನೆಯನ್ನು ಮೂಡಿಸುತ್ತದೆ. ಅದರಿಂದಾಗಿ ಇವತ್ತು ಒಂದು ಸಾರಿ ಪ್ಯಾಂಟ್ ಸಾಕಿದವನು ಮತ್ತೆ ಅವನು ಗದ್ದೆಗೆ ಹೋಗುತ್ತಾನೆ, ಹೊಲಕ್ಕೆ ಹೋಗುತ್ತಾನೆ, ಭೂಮಿ ಕೆಲಸ ಮಾಡುವುದು, ಮಣ್ಣಿನ ಕೆಲಸ ಮಾಡುವುದು ಅಪಮಾನ ಎಂದು ಅವನು ಭಾವಿಸುತ್ತಾನೆ. ಹಾಗಾಗಿ ನಮ್ಮ ಶಿಕ್ಷಣದಲ್ಲಿ ಕೃಷಿಯ ಬಗ್ಗೆ ಅಭಿಮಾನ ಮೂಡಿಸುವ ರೀತಿಯಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಮಾರ್ಪಾಡು ಮಾಡುವುದಕ್ಕೆ ಸಾಧ್ಯ ಇಲ್ಲವಾ? ಇವತ್ತಿನ ಶಿಕ್ಷಣ ವ್ಯವಸ್ಥೆ ನಮ್ಮ ಬದುಕಿಗೆ ಪೂರಕವಾಗಿರುವ ರೀತಿಯಲ್ಲಿ ಜೋಡಿಸುವ ರೀತಿಯಲ್ಲಿ ಮಾಡುವುದಕ್ಕಾಗುವುದಿಲ್ಲವೆ? ಇವತ್ತು ನಾವು ಏನು ಶಿಕ್ಷಣ ಕಲಿಯುತ್ತೇವೆ, ಇಂಜಿನಿಯರ್‌ಗಳನ್ನು, ಡಾಕ್ಟರ್‌ಗಳನ್ನು, ಕ್ಲರ್ಕ್‌ಗಳನ್ನು ನೌಕರಶಾಹಿಗಳನ್ನು ಸೃಷ್ಟಿ ಮಾಡುತ್ತವೆ. ಇರುವ ಎಲ್ಲಾ ಜನರಿಗೆ ನೌಕರಿ ಕೊಡುವುದಕ್ಕೆ ಸಾಧ್ಯವೆ? ಏಕೆ ಸಾಧ್ಯವಿಲ್ಲವೆಂದರೆ, ಬದುಕನ್ನು ಕಟ್ಟಿಕೊಳ್ಳತಕ್ಕಂತಹ ಶಿಕ್ಷಣ ವ್ಯವಸ್ಥೆಯನ್ನು ನಮ್ಮ ಮೂಲ ವೃತ್ತಿಯ ಬಗ್ಗೆ ಅಭಿಮಾನ ಮೂಡಿಸತಕ್ಕಂತಹ ಶಿಕ್ಷಣವನ್ನು, ನಮ್ಮ ಮೂಲ ವೃತ್ತಿಯಲ್ಲಿ ಜೋಡಣೆ ಮಾಡುವುದಕ್ಕೆ ಅನುಕೂಲವಾಗುವಂತಹ ಶಿಕ್ಷಣವನ್ನು ರೂಪಿಸ ಬೇಕಾದ ಅವಶ್ಯಕತೆ ಇದೆ. ಆ ಭಾವನೆಯನ್ನು ಜೋಡಿಸದೇ ಇದ್ದರೆ ಶಿಕ್ಷಣದಲ್ಲಿ ಬದಲಾವಣೆ ತರದೇ ಇದ್ದರೆ ಬಹುಶಃ ನಾವು ಏನೇ ಮಾಡಿದರೂ ಮತ್ತೆ ಟ್ರ್ಯಾಕ್‌ಗೆ ತರಲಿಕ್ಕೆ ಸಾಧ್ಯವಾಗುವುದಿಲ್ಲ. ಇನ್ನು ಎರಡನೇ ಕಾರಣ ಆರ್ಥಿಕವಾಗಿ ಕೃಷಿ ನಂಬಿಕೊಂಡು ಬದುಕುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಆರ್ಥಿಕ ಸ್ಥಿತಿ ಎರಡನೇ ಕಾರಣ. ಇವತ್ತು ನಾವು ಹೇಳುತ್ತೇವೆ, 'ಬೇಸಾಯ,

ನಾ ಸಾಯ, ನೀ ಸಾಯ, ನಂಬಿದವರೆಲ್ಲಾ ಸಾಯುವುದೇ' ಎಂದು ಹೇಳುತ್ತೇವೆ. ಆದರೆ ಒಂದು ಕಾಲ ಹೇಗಿತ್ತು? ವ್ಯವಸಾಯ ಉತ್ತಮ, ವ್ಯಾಪಾರ ಮಧ್ಯಮ, ನೌಕರಿ ಎಂದರೆ ಅಧಮ ಎಂದು ಹೇಳುತ್ತಿದ್ದರು. ನೌಕರಿ ಮಾಡುವುದು ಎಂದರೆ ಕೀಳರಿಮೆ ಭಾವನೆ ಇತ್ತು. ಎಲ್ಲೋ ಹೋಗಿ ಯಾರದೋ ಕೈ ಕೆಳಗೆ ಕೆಲಸ ಮಾಡಬೇಕಂತೆ ನಾವು ಗೇಯ್ಕೆಂಡು ತಿನ್ನುವುದಕ್ಕಾಗುವುದಿಲ್ಲವಾ? ಎನ್ನುವಂತಹ ಒಂದು ಅಭಿಮಾನದ ಭಾವನೆ ಆವತ್ತು ಇತ್ತು. ಮತ್ತು ಹೇಳುತ್ತಿದ್ದರು, ಆರಂಭ ವರ್ಷ ವ್ಯಾಪಾರ ನಿಮಿಷ ಎಂದು ಹೇಳುತ್ತಿದ್ದರು. ವ್ಯವಸಾಯ ಮಾಡಿದವರನ್ನು ಭೂಮಿ ತಾಯಿ ಕೈ ಬಿಡುವುದಿಲ್ಲ, ಆಕೆ ತನ್ನನ್ನು ನಂಬಿದವರನ್ನು ಸಾಕುತ್ತಾಳೆ ಎನ್ನುವ ಬಾವನೆ ಇತ್ತು. ಆ ಭಾವನೆ ಹೋಗಿ ಇವತ್ತು ಹೊಲ ಮನೆ ಮಾರಿ ಆದರೂ ಸರಿ ನಮಗೆ ಏನಾದರೂ ಒಂದು ಕೆಲಸ ಕೊಡಿಸಿ, ನಮ್ಮ ಐದು ಎಕರೆ ಹೊಲ ಇದೆ, ಹೊಲ ಮಾರಿ ಆದರೂ ದುಡ್ಡು ಕೊಡುತ್ತೇವೆ, ನಮಗೆ ಅಟೆಂಡರ್ ಪೋಸ್ಟ್ ಕೊಡಿಸಿ' ಎಂದು ಹೇಳುತ್ತಾರೆ. ನಿಜ ಹೇಳಬೇಕೆಂದರೆ, ಅವರಿಗೆ ಕುಕ್ ಪೋಸ್ಟ್ ಎಂದು ಕೂಡ ಹೇಳುವುದಕ್ಕೆ ಬರುವುದಿಲ್ಲ. 'ಒಂದು ಕುಕ್ಕ್ ಪೋಸ್ಟ್ ಕೊಡಿಸಿ' ಎಂದು ಹೇಳುತ್ತಾರೆ. 'ಹಾಸ್ಟೆಲ್‌ನಲ್ಲಿ ಕುಕ್ಕರ್ ಪೋಸ್ಟ್ ಇದೆಯಲ್ಲಾ ಆ ಕುಕ್ಕರ್ ಪೋಸ್ಟ್ ಕೊಡಿಸಿ ಎಷ್ಟಾದರೂ ಪರವಾಗಿಲ್ಲ, ಇರುವ ಒಬ್ಬ ಮಗ ಎಂಥದೋ ಒಂದು ದಡ ಸೇರಿಕೊಳ್ಳುತ್ತಾನೆ, ನನ್ನ ಎರಡು ಎಕರೆ ಹೊಲ ಮಾರಿ ಅದರೂ ರೊಕ್ಕ ಕೊಟ್ಟು ಬಿಡುತ್ತೇನೆ, ನಮಗೆ ಒಂದು ಕುಕ್ಕರ್ ಪೋಸ್ಟ್ ಕೊಡಿಸಿ'. ಎಂದು ಹೇಳುತ್ತಾರೆ. ಅವರು ಭಾವಿಸಿರುವ ಕುಕ್ಕರ್ ಪೋಸ್ಟ್ ಅಡುಗೆ ಕೆಲಸವೇ ಕೃಷಿಗಿಂತ ಉತ್ತಮ ಎನ್ನುವ ಭಾವನೆ ಇವತ್ತು ಬಂದಿದೆ. ಏಕೆ ಇದು ಬಂದಿತು ಎಂದರೆ ಆರ್ಥಿಕವಾಗಿ ಇದನ್ನು ನಂಬಿ ನಾವು ಬದುಕಬಹುದು ಎನ್ನತಕ್ಕಂತಹ ಭಾವನೆ ಇಲ್ಲದೆ ಇರತಕ್ಕಂಥದ್ದು ಎರಡನೇ ಕಾರಣ. ಆರ್ಥಿಕವಾಗಿ ಕೃಷಿಯನ್ನು ನಂಬಿ ಬದುಕಬಹುದು ಎನ್ನತಕ್ಕಂತಹ ಭಾವನೆಗಳನ್ನು ಬಲಗೊಳಿಸುವುದಕ್ಕೆ ಮತ್ತು ಅದಕ್ಕೆ ಬೇಕಾದ ಶಕ್ತಿಯನ್ನು ತುಂಬತಕ್ಕಂತಹ ಕೆಲಸ ಮಾಡಬೇಕು. ಆ ಮೇಲೆ ನಾನು ವಿವರಕ್ಕೆ ಹೋಗುತ್ತೇನೆ. ಮೂರನೇ ಕಾರಣ, ಸಾಮಾಜಿಕ ಕೃಷಿಯಿಂದ ವಿಮುಖರಾಗಲಿಕ್ಕೆ ಕಾರಣವಾಗಿದೆ. ಸಾಮಾಜಿಕ ಕಾರಣವೆಂದರೆ ಒಂದು ಚಿಕ್ಕ ಗೂಡು ಅಂಗಡಿ ಇಟ್ಟುಕೊಂಡಿರುವವನು ತನ್ನ ಹೆಂಡತಿ ಮಕ್ಕಳನ್ನು ಕೆಲಸಕ್ಕೂ ಕಳುಹಿಸದೆ ಒಳ್ಳೆಯ ಶಾಲೆಯಲ್ಲಿ ಮಕ್ಕಳನ್ನು ಓದಿಸುತ್ತಾನೆ, ಒಬ್ಬನೇ ದುಡಿದು ಆತ ಚೆನ್ನಾಗಿರುತ್ತಾನೆ. ಕೃಷಿಯಲ್ಲಿ ಮನೆ ಮಂದಿ ಎಲ್ಲಾ ದುಡಿಯುತ್ತೇವೆ,

ಮನೆ ಮಂದಿ ಎಲ್ಲಾ ದುಡಿದರೂ ಕೂಡ ಅವರು ಒಂದು ದಿನ ಸುಖವಾಗಿರುವುದಕ್ಕೆ ಆಗುವುದಿಲ್ಲ ಎನ್ನುವಂತಹ ಪರಿಸ್ಥಿತಿ ಇದೆ. ಒಂದು ಕಾಲದಲ್ಲಿ ಹೆಣ್ಣು ಕೊಡಬೇಕೆಂದರೆ ಕೊಟ್ಟಿಗೆಗೆ ಹೋಗಿ ಬಗ್ಗಿ ನೋಡುವರಂತೆ. ಕೊಟ್ಟಿಗೆಯಲ್ಲಿ ದನ ಎಲ್ಲಾ ಚೆನ್ನಾಗಿವೆ ಎಂದರೆ, ಇಲ್ಲಿ ಒಳ್ಳೆಯ ಕರುಗಳು ಇವೆ, ಹಾಲು ಮೊಸರು ಚೆನ್ನಾಗಿ ಸಿಗುತ್ತದೆ, ಈ ಮನೆಗೆ ಹೆಣ್ಣು ಕೊಟ್ಟರೆ ನನ್ನ ಮಗಳಿಗೆ ನನ್ನ ಮೊಮ್ಮಕಳಿಗೆ ಹಾಲು ಮೊಸರು ಚೆನ್ನಾಗಿ ಸಿಗುತ್ತದೆ, ಸುಖವಾಗಿರುತ್ತಾರೆ ಎಂದು ಹೆಣ್ಣು ಕೊಡುತ್ತಿದ್ದರಂತೆ. ಇವತ್ತು ಬಹುಶಃ ಕೊಟ್ಟಿಗೆ ಇದೆ ಎಂದರೆ ಹೆಣ್ಣು ಕೊಡುವುದಿಲ್ಲ. ಕೊಟ್ಟಿಗೆ ಇದೆ ಎಂದರೆ ಆ ಹೆಣ್ಣು ಅಲ್ಲ, ಆ ಊರಿನ ದಿಕ್ಕಿನ ಕಡೆಗೂ ತಲೆ ಹಾಕುವುದಿಲ್ಲ. ಇದು ಸಾಮಾಜಿಕವಾಗಿ ಆಗಿರತಕ್ಕಂತಹ ಬದಲಾವಣೆ. ಆವತ್ತು ಕೊಟ್ಟಿಗೆಯಲ್ಲಿರುವ ದನಕರಗಳನ್ನು ನೋಡಿ ಹೆಣ್ಣು ಕೊಡುತ್ತಿದ್ದರೆ, ಇವತ್ತು ಕೊಟ್ಟಿಗೆ ಇದ್ದರೆ ಹೆಣ್ಣು ಕೊಡದೇ ಇರತಕ್ಕಂತಹ ಪರಿಸ್ಥಿತಿ ಬಂದಿದೆ. ಏಕೆ ಹೀಗಾಯಿತು? ಇದರ ಬಗ್ಗೆ ಕೂಡ ಅಷ್ಟು ವಿಶ್ಲೇಷಣೆ ಮಾಡಿ ಅಲೋಚಿಸಬೇಕಾದ ಅವಶ್ಯಕತೆ ಇದೆ. ಮುಂಚೆ ಹಾಗಾದರೆ ರೈತ ಬದುಕುತ್ತಿರಲಿಲ್ಲವಾ? ಮಾನ್ಯ ಸದಸ್ಯರಾದ ವಿಶ್ವನಥ್‌ರವರು ಮಾತನಾಡುತ್ತಾ ಹೇಳಿದರು, ನಮ್ಮ ದೇಶದ ಸುವರ್ಣ ಯುಗದ ಕಾಲಗಳನ್ನು ನೆನಪಿಸಿಕೊಂಡರು. ಗುಪ್ತರ ಕಾಲ, ವಿಜಯನಗರದ ಕಾಲ ಇವೆಲ್ಲಾ ಸುವರ್ಣಯುಗದ ಕಾಲಗಳನ್ನು ನೆನಪಿಸಿಕೊಂಡರು. ಗುಪ್ತರ ಕಾಲ, ವಿಜಯನಗರದ ಕಾಲ ಇವೆಲ್ಲಾ ಸುವರ್ಣಯುಗ ಎಂದು ಹೇಳಿದರು. ಈ ಸುವರ್ಣಯುಗದ ಕಾಲದಲ್ಲಿ ನಮ್ಮ ದೇಶ ಕೈಗಾರಿಕೆಗಳ ಮೇಲೆ ಅವಲಂಬಿತವಾಗಿ ಸುವರ್ಣಯುಗವನ್ನು ಕಂಡಿದ್ದಲ್ಲ. ನಮ್ಮ ದೇಶ ಸುವರ್ಣ ಯುಗವನ್ನು ಕಂಡಿದ್ದು, ಶ್ರೀಮಂತವಾಗಿದ್ದು ಕೇವಲ ಕೃಷಿಯನ್ನು ಆಧರಿಸಿ, ಆವತ್ತಿನ ಕೃಷಿ ಏನು? ಆವತ್ತು ಬಳಸುತ್ತಿದ್ದಂತಹ ಪಾರಂಪರಿಕ ಜ್ಞಾನ ಏನು? ಆ ಪರಂಪರಿಕ ಜ್ಞಾನವನ್ನು ನಾವು ಏಕೆ ಬಿಟ್ಟೆವು? ಪಾರಂಪರಿಕ ಜ್ಞಾನದಿಂದ ಏನೂ ಉಪಯೋಗವೇ ಇಲ್ಲವೇ? ಇದರ ಬಗ್ಗೆ ಚಿಂತಿಸಬೇಕಾದ ಅವಶ್ಯಕತೆ ಇದೆ. ಅವತ್ತಿನ ಕೃಷಿ ಶೂನ್ಯ ಬಂಡವಾಳದ ಕೃಷಿ. ಬೀಜ ನಮ್ಮದು, ಗೊಬ್ಬರ ನಮ್ಮದು, ಶ್ರಮ ನಮ್ಮದು, ಭೂಮಿ ತಾಯಿ ನಮ್ಮನ್ನು ಕೈ ಬಿಡುತ್ತಿರಲಿಲ್ಲ. ಇವತ್ತು ಶೂನ್ಯ ಬಂಡವಾಳದ ಕೃಷಿ ಇಲ್ಲ. ಬೀಜ ದುಡ್ಡು ಕೊಟ್ಟು ತರಬೇಕು. ಒಳ್ಳೆಯ ಬೀಜ ಇದ್ದರೆ ಪರವಾಗಿಲ್ಲ. ಕಳಪೆ ಬೀಜ ಆದರೆ ರೈತನ ಕಥೆ ಗೋವಿಂದ. ಇವತ್ತು ಬೀಜವೂ ಸೀಡ್‌ಲೆಸ್, ಅದನ್ನು ಬೆಳೆದವನೂ ಸೀಡ್‌ಲೆಸ್ ಆಗುತ್ತಿದ್ದಾನೆ. ಅವನೂ ಕೂಡ ಧ್ವನಿ ಕಳೆದುಕೊಳ್ಳುತ್ತಿದ್ದಾನೆ.

ಬೀಜಕ್ಕೆ ದುಡ್ಡು ಕೊಟ್ಟು ತರಬೇಕು. ಗೊಬ್ಬರ ದುಡ್ಡು ಕೊಟ್ಟು ತರಬೇಕು. ಆ ಗೊಬ್ಬರವನ್ನು ಬಳಸಿದ ಪರಿಣಾಮ ಭೂಮಿ ಜೀವ ಸತ್ವವನ್ನು ಕಳೆದುಕೊಂಡಿತು. ಜೀವಾಣುಗಳು ಸತ್ತು ಹೋದವು. ಇದರ ಪರಿಣಾಮವಾಗಿ ಕೃಷಿ ವೆಚ್ಚ ದುಬಾರಿಯಾಗಿದೆ.

ಕೃಷಿ ವೆಚ್ಚ ದುಬಾರಿಯಾಗಿರುವ ಕಾರಣದಿಂದಾಗಿ ಇವತ್ತು ಯಾವುದೇ ಬೆಳೆ ಕಣಕ್ಕೂ ಬರುವುದಿಲ್ಲ, ಕಳವೆಗೂ ಬರುವುದಿಲ್ಲ, ಹಗೇವಿಗೂ ಬರುವುದಿಲ್ಲ. ಒಂದು ಕಾಲದಲ್ಲಿ ಅವನು ಮುಂದಿನ ಬೆಳೆ ತೆಗೆಯುವವರೆಗೂ ಅವನ ಹಗೇವನ್ನು, ಕೊಂತವನ್ನು, ಕಳವೆಯನ್ನು open ಮಾಡುತ್ತಿರಲಿಲ್ಲ. ಮುಂದಿನ ಬೆಳೆ ಬಂದ ಮೇಲೆಯೇ ಅದನನು ತೆಗೆಯುತ್ತಿದ್ದ. ಆದರೆ ಇವತ್ತು ಹೇಗಿದೆ ಎಂದರೆ, ಸಾಲಗಾರರು ಕುತ್ತಿಗೆ ಮೇಲೆ ಕುಳಿತಿರುತ್ತಾರೆ, ಆತ ಸಾಲ ತೀರಿಸಬೇಕಾಗಿರುತ್ತದೆ. ಆದ್ದರಿಂದ ಅವನು ದವಸ ಧಾನ್ಯಗಳನ್ನು ಗದ್ದೆಯಿಂದ ಅಥವಾ ಹೊಲದಿಂದ ಹಾಗೆಯೇ ಮೂಟೆ ಮಾಡಿ, ಅಂಗಡಿಗೆ ಹಾಗೆಯೇ ತುಂಬಿ ಕಳುಹಿಸಿ ಬಿಡುತ್ತಾನೆ. ಲಾರಿಯನ್ನೂ ಕೂಡ ವ್ಯಾಪಾರ ಮಾಡುವ ಅಂಗಡಿಯವನೇ ಕಳುಹಿಸಿರುತ್ತಾನೆ. ಹೊಲ ಅಥವಾ ಗದ್ದೆಯಿಂದಲೇ ಹಾಗೆಯೇ ತುಂಬಿಕೊಂಡು ಹೋಗಿ ಬಿಡುತ್ತಾರೆ. ಏಕೆಂದರೆ ಕೃಷಿ ವೆಚ್ಚ ದುಬಾರಿಯಾಗಿದೆ. ದುಬಾರಿ ಕೃಷಿ ವೆಚ್ಚದ ಕಾರಣದಿಂದ ಬೆಳೆ ಕೈಗೆ ಬರಲಿಲ್ಲವೆಂದರೆ ರೈತ ಆತ್ಮಹತ್ಯೆ ಹಾದಿ ಹಿಡಿಯುತ್ತಿದ್ದಾನೆ. ಹಿಂದೆ ಸತತ ಮೂರು ವರ್ಷ ಬರಗಾಲ ಬಂದಾಗಲೂ ಯಾವ ರೈತನೂ ಸಹ ಸತ್ತ ಉದಾಹರಣೆ ಇರಲಿಲ್ಲ. ಆದರೆ ಇವತ್ತು ಒಂದು ಬೆಳೆ ಬರದಿದ್ದರೆ ಇವತ್ತು ಆತ ಅಧೀರನಾಗುತ್ತಾನೆ, ಪ್ರಾಣ ಕಳೆದುಕೊಳ್ಳುತ್ತಾನೆ ಎಂದರೆ, ಇದರ ಹಿಂದೆ ಇರತಕ್ಕಂಥ ವೈಜ್ಞಾನಿಕ ಕಾರಣವೇನು ಎಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಕೃಷಿ ವೆಚ್ಚ ದುಬಾರಿಯಾಗಿರುವುದೇ ವೈಜ್ಞಾನಿಕ ಕಾರಣವಾಗಿದೆ. ಕೃಷಿ ವೆಚ್ಚ ದುಬಾರಿಯಾಗಲಿಕ್ಕೆ ಕಾರಣ ನಾವು ಪಾರಂಪರಿಕ ಕೃಷಿಯ ಜ್ಞಾನವನ್ನು ಮರೆತ್ತಿದ್ದೇವೆ. ನಮ್ಮ ಹಿರಿಯರು ಯಾವ ಪಾರಂಪರಿಕ ಜ್ಞಾನದ ಮೂಲಕ ಉತ್ಪಾದನೆ ಮಾಡುತ್ತಿದ್ದರೋ, ಅದನ್ನು ಮರೆತು, ನಾವೇ ತಪ್ಪು ಮಾಡಿದ್ದೇವೆ. ಸರ್ಕಾರವೇ ಉಚಿತವಾಗಿ ಸಬ್ಸಿಡಿ ದರದಲ್ಲಿ ಕಳೆನಾಶಕ, ಕೀಟನಾಶಕ ಮತ್ತು ಗೊಬ್ಬರ ಎಂದು ಕೊಟ್ಟು, ಸ್ವಾವಲಂಬಿ ರೈತನನ್ನು ಪರಾವಲಂಬಿಯನ್ನಾಗಿ ಮಾಡಿದೆ. ಇವತ್ತು ಆ ಪರಾವಲಂಬಿಯನ್ನು ಅನಿವಾರ್ಯವಾಗಿ, ಈ ಕಡೆಯೂ ಇಲ್ಲ, ಆ ಕಡೆಯೂ ಇಲ್ಲ ಎನ್ನತಕ್ಕಂಥ ಸ್ಥಿತಿಗೆ ತಂದು ದೂಡಿದ್ದೇವೆ. ಕೃಷಿ ವೆಚ್ಚ ದುಬಾರಿಯಾಗಿರುವ ಕಾರಣ

ದಿಂದಾಗಿ ರೈತ ಇವತ್ತು ಸಾಯುವ ಸ್ಥಿತಿಗೆ ಬಂದಿದ್ದಾನೆ. ಹಾಗಾಗಿ ಮತ್ತೆ ನಾವು ಪಾರಂಪರಿಕ ಕೃಷಿಯ ಕಡೆಗೆ ಹೊರಳುವುದು ಅನಿವಾರ್ಯವಾಗಿದೆ. ಹಾಗೆ ಹೊರಳದಿದ್ದರೆ, ನಮ್ಮ ಕೃಷಿಕನ ಬದುಕನ್ನು, ರೈತನ ಬದುಕನ್ನು ಸುಧಾರಿಸತಕ್ಕಂಥ ಯಾವುದೇ ಆಧುನಿಕ ಮಾನದಂಡವಿಲ್ಲ. ನಮ್ಮದು ಜನಸಂಖ್ಯೆ ಹೆಚ್ಚು ಇರತಕ್ಕಂಥ ದೇಶವಾಗಿದೆ. ಮಾನವ ಸಂಪನ್ಮೂಲ ಅಧಿಕ ಇರತಕ್ಕಂಥ ದೇಶವಾಗಿದೆ. ನಮ್ಮಲ್ಲಿ ಚಿಕ್ಕ ಚಿಕ್ಕ ಹಿಡುವಳಿಗಳಿವೆ. ಇದನ್ನು ಅಮೆರಿಕದ ಮಾದರಿಯಲ್ಲಿ ನಾವು ಆಧುನೀಕರಣಗೊಳಿಸಲಿಕ್ಕೆ ಸಾಧ್ಯವಿಲ್ಲ. ಅಮೆರಿಕಾದ ಮಾದರಿಯಲ್ಲಿ ಇದನ್ನು ಆಧುನೀಕರಣಗೊಳಿಸಲಿಕ್ಕೆ ಹೋದರೆ, ಇಲ್ಲಿರುವ ಜನರಿಗೆ ಪರ್ಯಾಯ ಉದ್ಯೋಗ ಕಲ್ಪಿಸಿಕೊಡತಕ್ಕಂಥ ವ್ಯವಸ್ಥೆ ಇಲ್ಲ. ಸಣ್ಣ ಸಣ್ಣ ಹಿಡುವಳಿಗಳನ್ನು ದೊಡ್ಡ ದೊಡ್ಡ ಹಿಡುವಳಿಗಳನ್ನಾಗಿ ಪರಿವರ್ತಿಸುವಂಥದ್ದು ಅಷ್ಟೊಂದು ಸುಲಭವೂ ಅಲ್ಲ, ಸಾಧ್ಯವೂ ಇಲ್ಲ. ಹಾಗಿದ್ದಾಗ, ಪಾರಂಪರಿಕ ಕೃಷಿಯ ಕಡೆಗೆ ಹೋಗುವುದೇ ನಮಗಿರುವ ದಾರಿಯಾಗಿದೆ. ಬಹಳ ಜನ ಇಲ್ಲಿ ಚರ್ಚೆ ಮಾಡುತ್ತಿದ್ದಾಗ ನಾನು ಕೇಳಿದೆ. ನಮಗೆ ನೀರು ಕೊಟ್ಟರೆ ಸಾಕು, ನಮ್ಮ ರೈತನ ಬದುಕು ಸುಧಾರಿಸಿ ಬಿಡುತ್ತದೆಂದು ಅವರೆಲ್ಲರೂ ಹೇಳುತ್ತಿದ್ದರು. ನೀವು ನೀರನ್ನು ಮಾತ್ರ ಕೊಡಿ ಸಾಕು, ಅದನ್ನು ಬಿಟ್ಟು ಬೇರೇನನ್ನೂ ಮಾಡಬೇಡಿ, ಅದರಿಂದ ನಮ್ಮ ರೈತನ ಬದುಕು ಸುಧಾರಿಸಿ ಬಿಡುತ್ತದೆಂದು ಅವರು ಹೇಳಿದರು. ನೀರೊಂದೇ ರೈತನ ಬದುಕನ್ನು ಸುಧಾರಿಸುವುದಾಗಿದ್ದರೆ, ಮಂಡ್ಯ ಜಿಲ್ಲೆಯಲ್ಲಿ, ದಾವಣಗೆರೆಯಲ್ಲಿ, ಮೈಸೂರಿನ ಬಹುತೇಕ ತಾಲ್ಲೂಕುಗಳಲ್ಲಿ ರೈತ ಸಾಯಬಾರದಾಗಿತ್ತು. ಅವನು ಕೃಷಿಯಿಂದ ವಿಮುಖವಾಗಿ ಪಟ್ಟಣದ ಕಡೆಗೆ ವಲಸೆ ಬರುವುದು ನಿಲ್ಲಬೇಕಿತ್ತು. ಮಂಡ್ಯದಿಂದಲೂ ದೊಡ್ಡ ಪ್ರಮಾಣದಲ್ಲಿ ಪಟ್ಟಣಕ್ಕೆ ವಲಸೆ ಬರುತ್ತಿದ್ದಾರೆ. ಮಂಡ್ಯದಲ್ಲಿ ನೀರಿಗೇನೂ ಬರವಿಲ್ಲ. ಆದರೂ ಕೂಡ ಅಲ್ಲಿಂದ ದೊಡ್ಡ ಪ್ರಮಾಣದಲ್ಲಿ ವಲಸೆ ಬರುತ್ತಿದ್ದಾರೆ. ನಾಗಮಂಗಲ ತಾಲ್ಲೂಕು ಮಾತ್ರವೇ ಬರಪೀಡಿತ ತಾಲ್ಲೂಕು ಆಗಿದೆ. ಆದರೆ ಉಳಿದ ತಾಲ್ಲೂಕುಗಳಲ್ಲಿ ನೀರು ಇದ್ದರೂ ಕೂಡ, ನೀರು ಒಂದೇ ರೈತನ ಬದುಕನ್ನು ರೂಪಿಸುವುದಕ್ಕೆ ಸಾಧ್ಯವಾಗಿಲ್ಲ. ಇದರ ಹಿಂದೆ ನೀರು ಒಂದೇ ಕಾರಣವಾಗುವುದಿಲ್ಲ. ಮಾನ್ಯ ಜಯಚಂದ್ರರವರು ಬಹಳ ಚೆನ್ನಾಗಿ explain ಮಾಡಿದರು. ಅವರು explain ಮಾಡುತ್ತಾ ಒಂದು ಮಾತನ್ನು ಹೇಳಿದರು. ಮಣ್ಣಿನ ಗುಣ ಏನು ಎನ್ನುವುದನ್ನು ಇವತ್ತು ತಿಳಿದುಕೊಳ್ಳತಕ್ಕಂಥ ವ್ಯವಸ್ಥೆಯಿಲ್ಲವೆಂದು ಹೇಳಿದರು. ಮಣ್ಣಿನ ಗುಣ ನಮ್ಮ ಹಿರಿಯರಿಗೆ ಗೊತ್ತಿತ್ತು. ಯಾವ ಮಣ್ಣಿನಲ್ಲಿ ಏನನ್ನು.

ಬೆಳೆಯಬೇಕು ಎಂದು ಅವರಿಗೆ ತಿಳಿದಿತ್ತು ಎಂದರು. ಯಾವ ಮಣ್ಣಿನಲ್ಲಿ ಏನನ್ನು ಬೆಳೆಯಬೇಕಾಗಿತ್ತೋ, ಅದನ್ನೇ ಅವರು ಬೆಳೆಯುತ್ತಿದ್ದರು. ನಮ್ಮ ಮಲೆನಾಡಿನಲ್ಲಿ ಅಡಿಕೆ ಎಲ್ಲಿ ಇರುತ್ತಿತ್ತು? ನೀರಿನ ಹೊನಲು ಎಲ್ಲಿ ಇರುತ್ತಿತ್ತೋ, ಅಲ್ಲಿ ಮಾತ್ರ ಅಡಿಕೆ ಇರುತ್ತಿತ್ತು. ಈಗ ಇರುವ ಬರೋ ಗದ್ದೆಯಲ್ಲೆಲ್ಲಾ ಅಡಿಕೆ ಹಾಕಿಬಿಟ್ಟಿದ್ದೇವೆ. ಕಾಫಿ ಎಲ್ಲಿ ಇರುತ್ತಿತ್ತು ಎಂದರೆ, ಗುಡ್ಡದ ಪ್ರದೇಶಗಳಲ್ಲಿ ಮಾತ್ರವಿತ್ತು. ಹಿಂದೆ ರಾಗಿ ಬೆಳೆಯುವ ಹೊಲಗಳಲ್ಲೆಲ್ಲಾ ಕಾಫಿ ಗಿಡ ಇರಲಿಲ್ಲ. ನಾವು ರಾಗಿ ಬೆಳೆಯುವ ಹೊಲದಲ್ಲೆಲ್ಲಾ ಕಾಫಿ ಗಿಡ ಹಾಕಿದೆವು. ಇರುವ ಗದ್ದೆಗಳನ್ನೆಲ್ಲಾ ಅಡಿಕೆ ತೋಟ ಮಾಡಿದೆವು. ಅದು ನೀರು ಹೆಚ್ಚು ಬೇಡುತ್ತದೆ. ಆ ನೀರಿನ ಬೇಡಿಕೆಯನ್ನು ಪೂರೈಸುವುದಕ್ಕೆ ಬೋರ್‌ವೆಲ್ ಕೊರೆದೆವು. ಬೋರ್‌ವೆಲ್‌ನಿಂದ 4–5 ವರ್ಷ ಸುಖ ಕಂಡೆವು. ಬೋರ್‌ವೆಲ್ ಬತ್ತಿ ಹೋಯಿತು. ನಮ್ಮ ಅಡಿಕೆ ಮರಗಳೆಲ್ಲಾ ದಾವಣಗೆರೆ, ಜಗಳೂರಿನ ಆದಿಯಾಗಿ ಎಲ್ಲಾ ಕಡೆಯೂ ಒಣಗಿ ಹೋದವು. ಹೀಗೆ ನಮ್ಮ ಮಣ್ಣಿನ ಗುಣವನ್ನು ಅರ್ಥ ಮಾಡಿಕೊಳ್ಳದೇ, ನಾವು ಬೆಳೆ ಪದ್ಧತಿಯನ್ನು ಅನುಸರಿಸುತ್ತಿರುವುದು ಕೂಡ ಒಂದು ಕಾರಣವಾಗಿದೆ. ಈ ಬೆಳೆ ಪದ್ಧತಿಗೆ ಬದಲಾವಣೆ ತರಬೇಕು. ನಾವು ಏನಾದರೂ ನಿರ್ದಿಷ್ಟವಾಗಿ ಇಂತಹ ಪ್ರದೇಶದಲ್ಲಿ ಇಂತಹುದ್ದೇ ಬೆಳೆ ಬೆಳೆಯಬೇಕೆಂದು ತರದಿದ್ದರೆ, ರೈತ ಮತ್ತೆ ಸಾಲದ ಸುಳಿಗೆ ಸಿಕ್ಕಿಹಾಕಿಕೊಳ್ಳುತ್ತಾನೆ. ಅವನು ಸಾಲದ ಸುಳಿಯಿಂದ ಹೊರಗೆ ಬರಲಿಕ್ಕೆ ಆಗದೇ ಆತ್ಮಹತ್ಯೆ ದಾರಿ ಹಿಡಿಯುತ್ತಾನೆ. ಹಾಗಾಗಿ, ನಾವು ಬೆಳೆ ನಿಯಂತ್ರಣದ ಬಗ್ಗೆ ಯೋಚನೆ ಮಾಡಬೇಕಾದ ಅವಶ್ಯಕತೆ ಇದೆ. ಯಾವ್ಯಾವ ಪ್ರದೇಶಗಳಲ್ಲಿ ಯಾವ್ಯಾವ ಬೆಳೆಗಳನ್ನು ಬೆಳೆಯಬೇಕು ಎಂದು ನಿಗದಿಗೊಳಿಸಿ ಬೆಳೆ ನಿಯಂತ್ರಣ ಕಾಯ್ದೆಯನ್ನು ಕಡ್ಡಾಯಗೊಳಿಸಿ, ಅದನ್ನು ಜಾರಿಗೆ ತರಬೇಕು. ಬೆಳೆ ನಿಯಂತ್ರಣ ಕಾಯ್ದೆಯನ್ನು ಕಡ್ಡಾಯಗೊಳಿಸದಿದ್ದರೆ ಕಷ್ಟವಾಗುತ್ತದೆ. ನಿರ್ದಿಷ್ಟ ಪ್ರದೇಶ, ನಿರ್ದಿಷ್ಟ ಬೆಳೆ, ಆ ಬೆಳೆಗೆ ಒಂದು ವೈಜ್ಞಾನಿಕ ಬೆಲೆ ನಿಗದಿಪಡಿಸಬೇಕಾಗಿದೆ. ಇದನ್ನು ಮಾಡಬೇಕಾಗಿರುವಂಥದ್ದು ಕೃಷಿಕನನ್ನು ಉಳಿಸುವುದಕ್ಕೆ ಅನಿವಾರ್ಯವಾಗಿದೆ. ಹಾಗಾಗಿ ಬೆಳೆ ನಿಯಂತ್ರಣ ಪದ್ಧತಿಯನ್ನು ತರಲೇಬೇಕು. ಇನ್ನು ಎರಡನೆಯದಾಗಿ, ಆ ಬೆಳೆ ನಿಯಂತ್ರಣದ ಜೊತೆಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಬೇಕು. ತಾನು ಬೆಳೆದ ಬೆಳೆಗೆ ನಿರ್ದಿಷ್ಟವಾಗಿ ಇಷ್ಟು ಬೆಲೆ ಸಿಕ್ಕೇ ಸಿಗುತ್ತದೆಂದು ಅವನಿಗೊಂದು ಖಾತರಿ ಇರಬೇಕು. ಉತ್ಪಾದನಾ ವೆಚ್ಚ, ಲಾಭ, ಶ್ರಮ, ಇದೆಲ್ಲವನ್ನೂ ಕಳೆದು, ಅವನಿಗೆ ವೈಜ್ಞಾನಿಕ ರೀತಿಯಲ್ಲಿ ಬೆಲೆ ಸಿಗುವ ರೀತಿಯಲ್ಲಿ ಮಾಡಬೇಕು.

ಸಂಸ್ಕರಿತ ಆಹಾರ ಧಾನ್ಯಗಳಿಗೆ ಇವತ್ತು ಒಳ್ಳೆಯ ಬೆಲೆ ಇದೆ. ನಮ್ಮ ಹತ್ತಿರ ಆಲೂಗಡ್ಡೆ ತೆಗೆದುಕೊಳ್ಳುತ್ತಾರೆ. ಅದನ್ನು Lay's chips ಮಾಡುತ್ತಾರೆ. ಆಲೂಗೆಡ್ಡೆಗೆ ಕೆ.ಜಿ.ಗೆ 4–6 ರೂ.ಗಳ ಬೆಲೆ ಇದ್ದರೆ, Lay's chips 50 gramsಗೆ ಬಹುಶಃ 20--25 ರೂ.ಗಳು ಇರಬೇಕು. ನಾನು ಯಾವತ್ತೂ ಅದನ್ನು ಕೊಂಡಿಲ್ಲ. ಅಂದರೆ ಒಂದು ಕೆ.ಜಿ. chipsಗೆ 400 ರೂ.ಗಳಾಗುತ್ತದೆ. ಒಂದು ಕೆ.ಜಿ. ಆಲೂಗೆಡ್ಡೆ 4 ರೂ.ಗಳಾದರೆ, ಒಂದು ಕೆ.ಜಿ. chipsಗೆ 400 ರೂ.ಗಳ ಬೆಲೆ ಇದೆ. ಅದಕ್ಕೆ ಏನು ಮಾಡಿರುತ್ತಾರೆ? ಅದಕ್ಕೆ ಬರೇ ಉಪ್ಪು ಹಚ್ಚಿರುತ್ತಾರೆ. ಅದನ್ನೇ ಬ್ರಾಂಡ್ ಮಾಡಿ ಮಾರ್ಕೆಟ್ ಮಾಡುತ್ತಾರೆ. ಹಾಗೆ ರೈತ ಬೆಳೆದ ಬೆಳೆಗಳನ್ನು ಬ್ರಾಂಡ್ ಮಾಡಿ ಮಾರ್ಕೆಟ್ ಮಾಡತಕ್ಕಂಥ ವ್ಯವಸ್ಥೆಯನ್ನು ತಂದರೆ, ಅದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ರೂಪಿಸಿದರೆ ಯಾವ ರೈತನಿಗೂ ಯಾರ ಉದಾರತೆಯ ಅವಶ್ಯಕತೆಯೂ ಇರುವುದಿಲ್ಲ. ಆತ ಸ್ವಾವಲಂಬಿಯಾಗುತ್ತಾನೆ. ಹಾಗೆ ಬೆಳೆದ ಬೆಳೆಗೆ, ಆ ಸಂಸ್ಕರಿತ ಪದ್ಧತಿಯನ್ನು ಜೋಡಿಸತಕ್ಕಂಥ, ಆ ತಂತ್ರಜ್ಞಾನವನ್ನು ಸರಳಗೊಳಿಸತಕ್ಕಂಥ ಕೆಲಸ ಆಗಬೇಕು. ನಾನು ಸ್ವದೇಶಿ ಆಂದೋಲನ ರಾಜೀವ್ ದೀಕ್ಷಿತ್ ರವರ ಭಾಷಣವನ್ನು ಕೇಳುತ್ತಿದ್ದೆ. ರಾಜೀವ್ ದೀಕ್ಷಿತ್ ರವರು ಒಂದು ಮಾತನ್ನು ಹೇಳುತ್ತಿದ್ದರು. ನಮ್ಮ ದೇಶದಲ್ಲಿ ಎಂತೆಂತಹ ವಿಜ್ಞಾನಿಗಳಿದ್ದಾರೆ. ಚಂದ್ರಲೋಕಕ್ಕೆಲ್ಲಾ ಹೋಗುವಂತಹ ಸಾಧನಗಳನ್ನು ಕಂಡು ಹಿಡಿದರು. ಹಾಗೆ ಕಂಡು ಹಿಡಿದಂತಹ ವಿಜ್ಞಾನಿಗಳು ದೇಶದಲ್ಲಿ ಶೇಕಡ 75ರಷ್ಟು ಇರುವ ರೈತನ ಎತ್ತಿನ ಗಾಡಿಯನ್ನು ಸರಳಗೊಳಿಸತಕ್ಕಂಥ ತಂತ್ರಜ್ಞಾನವನ್ನು ಕಂಡು ಹಿಡಿಯುವುದು ಅವರಿಗೆ ಕಷ್ಟವೇನೂ ಆಗಿರಲಿಲ್ಲ. ಎರಡು ಎತ್ತಿನ ಗಾಡಿಯಲ್ಲಿ 4–5 ಟನ್ ತೆಗೆದುಕೊಂಡು ಹೋಗುವುದು ಕಷ್ಟ ಎನ್ನುವಂತಹ ಪರಿಸ್ಥಿತಿ ಅವನಿಗಿದೆ. ಅದಕ್ಕೊಂದು ಬೇರಿಂಗ್ ಅಳವಡಿಸಿ, ಸರಳ ತಂತ್ರಜ್ಞಾನ ರೂಪಿಸಿ, ಆ ಗಾಡಿಯನ್ನು ಸರಳಗೊಳಿಸತಕ್ಕಂಥ ತಂತ್ರಜ್ಞಾನ ರೂಪಿಸಿದ್ದರೆ, ಬಹುಶಃ 7–8 ಟನ್ ಅನ್ನು ಸರಾಗವಾಗಿ ಎತ್ತು ಎಳೆದುಕೊಂಡು ಹೋಗಬಹುದಾಗಿತ್ತು. ಅದನ್ನು ರೂಪಿಸತಕ್ಕಂಥ ಕೆಲಸ ವಾಗಿಲ್ಲ. ಬಹುಶಃ ಬಹು ಜನರ ಬದುಕಿಗೆ ಆಧಾರವಾಗತಕ್ಕಂಥ, ಕೃಷಿಗೆ ಅನುಕೂಲವಾಗತಕ್ಕಂಥ ಸರಳ ತಂತ್ರಜ್ಞಾನವನ್ನು ರೂಪಿಸಬೇಕಾದಂತಹ ಅವಶ್ಯಕತೆ ಇದೆ. ಹಾಗೆ ರೂಪಿಸದಿದ್ದರೆ, ಇವತ್ತು ದುಬಾರಿ ವೆಚ್ಚ ಭರಿಸಿ ಆಧುನಿಕ ಕೃಷಿಯನ್ನು ಅಳವಡಿಸಿಕೊಳ್ಳುವುದಕ್ಕೆ ರೈತನಿಗೆ ಸಾಧ್ಯವಾಗುವುದಿಲ್ಲ. ಸರಳ ತಂತ್ರಜ್ಞಾನ ರೈತನ ಕೈಗೆ ಎಟಕುತ್ತಿಲ್ಲ.

ಹೀಗಾಗಿ ಇದೊಂದು ಸಮಸ್ಯೆಯಾಗಿದೆ. ನಮ್ಮಲ್ಲಿ ರೈತ ದೇಶಕ್ಕೆ ಹೆಚ್ಚು ಬೆಳೆದು ಕೊಟ್ಟು ತಾನು ಬಡವನಾದ. ಇಲ್ಲಿ Milk Federation ಮಾಡಿದ ನಂತರ ದಾಖಲೆ ಪ್ರಮಾಣದ ಹಾಲು ಉತ್ಪಾದನೆಯನ್ನು ನಾವು ಮಾಡಿದೆವು. ಆದರೆ ಹಸು ಕಟ್ಟಿ, ಎಮ್ಮೆ ಕಟ್ಟಿ, ಆ ಹಾಲು ಉತ್ಪಾದನೆ ಮಾಡತಕ್ಕಂಥ ಆ ರೈತನ ಮನೆಯಲ್ಲಿ ಅವನ ಮಗುವಿಗೆ ಕುಡಿಸಲಿಕ್ಕೆ ಅರ್ಧ ಲೀಟರ್ ಹಾಲೂ ಕೂಡ ಇರುವುದಿಲ್ಲ. ಬಂದವರಿಗೆ ಕಾಫಿ ಕೊಡಬೇಕೆಂದರೆ, ಅವನು ಬರಗಾಫಿಯನ್ನೇ ಕೊಡುತ್ತಾನೆ. ಅವನು milk society ಗೆ ಹತ್ತು ಲೀಟರ್ ಹಾಲು ಹಾಕುತ್ತಾನೆ. ಆದರೆ ಅವನ ಮನೆಯಲ್ಲಿ ಬರಗಾಫಿ. ಇದೊಂದು ವೈಪರೀತ್ಯ. ಏಕೆ ಎಂದರೆ, ಇವತ್ತು ನಮ್ಮ ಭಾವನೆಗಳು ಬದಲಾಗಿದೆ. ಹಣ ಆಧಾರಿತ ವ್ಯವಸ್ಥೆಯನ್ನು ಜೋಡಿಸಿಕೊಂಡು ಅವನೂ ಬಡವಾದ, ಅವನ ಮಕ್ಕಳೂ ಬಡವಾದರು. ಮಕ್ಕಳಿಗೂ ಹಾಲು ಇರದಿರತಕ್ಕಂಥ ಪರಿಸ್ಥಿತಿ ಇವತ್ತು ನಿರ್ಮಾಣವಾಯಿತು. ಹಾಗಾಗಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಶಿಕ್ಷಣದಲ್ಲೇ ಒಂದು ಬದಲಾವಣೆಯನ್ನು ತರಬೇಕು. ಆ ಬಗ್ಗೆ ನಾನು ಆರಂಭದಲ್ಲೇ ಹೇಳಿದೆ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ಒಂದು ವೃತ್ತಿ ಇತ್ತು. ಆದರೆ ದುರ್ದೈವ, ಆ ವೃತ್ತಿಗೆ ಮೇಲುಕೀಳು ಎಂಬ ಭಾವನೆ ಸೇರಿಕೊಂಡಿದೆ. ಆ ಎಲ್ಲಾ ವೃತ್ತಿಗೂ ಆರ್ಥಿಕ ಬೆಂಬಲ ಇಲ್ಲ. ಪ್ರತಿಯೊಬ್ಬರ ಬದುಕಿಗೂ ಒಂದು ವೃತ್ತಿ ಇದೆ. ಯಾರೂ ನಮ್ಮ ದೇಶದಲ್ಲಿ ನಿರುದ್ಯೋಗಿಗಳಿರಲಿಲ್ಲ. ನಾವು ಮಾಡಬೇಕಾಗಿದ್ದು ಏನು? ಆ ವೃತ್ತಿಯಲ್ಲಿ ಕೀಳರಿಮೆ ಮೂಡಿಸತಕ್ಕಂಥ ಆ ಭಾವನೆಯನ್ನು ತೊಡೆದು ಹಾಕಿ, ಆ ವೃತ್ತಿಗೆ ಆರ್ಥಿಕ ಬೆಂಬಲ ಸಿಗುವಂತೆ ಮಾಡಿದರೆ, ನಮ್ಮ ದೇಶದಲ್ಲಿ ಯಾವೊಬ್ಬ ವ್ಯಕ್ತಿಯೂ ನಿರುದ್ಯೋಗಿ ಆಗಿರಲಿಕ್ಕೆ ಸಾಧ್ಯವೇ ಇಲ್ಲ. ಎಲ್ಲಾ ವೃತ್ತಿಗೂ ವೃತ್ತಿ ಗೌರವ ಸಲ್ಲಬೇಕು ಮತ್ತು ಅದಕ್ಕೆ ಆರ್ಥಿಕ ಬಲವಿರಬೇಕು. ಇದಿಷ್ಟನ್ನು ಮಾಡಿ ನೋಡಿದರೆ ಒಂದು ಮ್ಯಾಜಿಕ್, wonder create ಮಾಡುತ್ತೇವೆ. ಆದರೆ, ನಾವು ಅದರ ಬದಲಾಗಿ ಮೂಲ ವೃತ್ತಿಯಿಂದ ವಂಚಿತನನ್ನಾಗಿ ಮಾಡಿ ಆಮೇಲೆ ಅದಕ್ಕೆ ಕಾಲೇಜನ್ನು ತೆರೆದು ಏನೇನನ್ನೋ ಮಾಡಿ, ಅದನ್ನೇ ಮತ್ತೆ ಹೇಳಿಕೊಡುತ್ತೇವೆ. ದುಬಾರಿ ವೆಚ್ಚ ಕೊಟ್ಟು ಅದನ್ನೇ ಮತ್ತೆ ಕಲಿಯಬೇಕು. ಆಗ ಅದಕ್ಕೆ ಏನೋ ಒಂದು ಇಂಗ್ಲಿಷ್‌ನ ಹೊಸ ಹೆಸರನ್ನು ಕೊಟ್ಟು ಪ್ರತಿಷ್ಠೆಯನ್ನಾಗಿ ಮಾಡಿ ಆ ಹೆಸರಿನ ಮೂಲಕ ಮಾಡಿದಾಗ ಮಾತ್ರ ಅದು ಒಂದು ಪ್ರತಿಷ್ಠೆಯಾಗುತ್ತದೆ. ಬಡಗಿ ಕೆಲಸ ಮಾಡಿದರೆ ಕೀಳು. ಕಾರ್ಪೆಂಟರ್

ಎಂದರೆ ಕೈತುಂಬಾ ಪಗಾರ. ಊರಿನಲ್ಲಿ ಆಚಾರಿ ಕೆಲಸ, ಬಡಗಿ ಕೆಲಸ ಮಾಡುತ್ತಾನೆಂದರೆ ಗೌರವವೂ ಇಲ್ಲ, ಕಿಮ್ಮತ್ತೂ ಇಲ್ಲ, ಅವನ ಕೆಲಸಕ್ಕೆ ಮೂರು ಕಾಸಿನ ಬೆಲೆಯೂ ಇಲ್ಲ. ಆದರೆ ಅವನೇ ಕಾರ್ಪೆಂಟರ್ ಆಗಿಬಿಟ್ಟರೆ ಬೆಲೆ. ಆತನ ಪಾರಂಪರಿಕ ಜ್ಞಾನಕ್ಕೆ ಇವತ್ತಿನ ಆಧುನಿಕ ಯುಗಕ್ಕೆ ಬೇಕಾದಂಥ ತಂತ್ರಜ್ಞಾನವನ್ನು ಸೇರಿಸಿ ಹಳ್ಳಿಗಳಲ್ಲೇ ಶಿಕ್ಷಣವನ್ನು ಕೊಡತಕ್ಕ ಕೆಲಸವನ್ನು ಮಾಡಿದರೆ, ಅಲ್ಲೇ ಸ್ವಾವಲಂಬಿ ಶಿಕ್ಷಣ ಕೊಡತಕ್ಕ ಕೇಂದ್ರಗಳನ್ನು ತೆರೆದರೆ ನಮ್ಮ ದೇಶದಲ್ಲಿ ಯಾರೂ ನಿರುದ್ಯೋಗಿಗಳು ಇರುವುದಕ್ಕೆ ಸಾಧ್ಯವೇ ಇಲ್ಲ. ಆ ಸಾಂಪ್ರದಾಯಿಕ ಜ್ಞಾನವನ್ನು ನಿರ್ಲಕ್ಷ್ಯ ಮಾಡುವುದು ಬೇಡವೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಹಾವಳಿಯ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ನಿಜ, ಬೆಳೆದವನಿಗೆ ಎರಡು ರೂಪಾಯಿ ಸಿಗುವುದಿಲ್ಲ. ಆದರೆ, ಅದನ್ನು ಕೊಂಡವನು ಕೆಲವೇ ನಿಮಿಷಗಳಲ್ಲಿ ನಾಲ್ಕು ರೂಪಾಯಿ ದುಡಿದುಬಿಡುತ್ತಾನೆ. ಬೆಳೆದವನಿಗೆ 2 ರೂಪಾಯಿ. ಅದನ್ನು ಕೊಂಡವನು ಕೆಲವೇ ನಿಮಿಷಗಳಲ್ಲಿ ಇನ್ನೊಬ್ಬನಿಗೆ 6 ರೂಪಾಯಿಗೆ ಮಾರಿಬಿಡುತ್ತಾನೆ. ಅವನು ಅದನ್ನು 8 ರೂಪಾಯಿಗೆ ಗ್ರಾಹಕರಿಗೆ ತಲುಪಿಸು ತ್ತಾನೆ. ಈ ರೀತಿ ಮಾರುಕಟ್ಟೆ ವ್ಯವಸ್ಥೆ ಇದೆ. ನಾವು ಕೃಷಿ ಮಾರುಕಟ್ಟೆಯನ್ನು ಮಾಡಿ ರೈತರಿಗೆ ಅನುಕೂಲವಾಗಲಿಯೆಂದು ಮಾಡಿದ್ದೇವೆ. ಆದರೆ ಅದು ಈಗ ದಲ್ಲಾಳಿಗಳ ಮಾರುಕಟ್ಟೆಯಾಗಿದೆ. ದಲ್ಲಾಳಿಗಳ ಕಪಿಮುಷ್ಟಿಯೊಳಗೆ ರೈತ ಸಿಕ್ಕಿಹಾಕಿಕೊಂಡಿದ್ದಾನೆ. ರೇಷ್ಮೆ ನೂಲು ತೆಗೆದುಕೊಂಡು ಹೋಗಲಿ, ದಲ್ಲಳಿಗಳೆಲ್ಲರು ಸೇರಿಕೊಂಡು ರೈತನನ್ನು ಸಮಾಧಿ ಮಾಡಲು ಏನು ಬೇಕೋ ಅವೆಲ್ಲವನ್ನು ಮಾಡುತ್ತಾರೆ. ಮಾರುಕಟ್ಟೆಗೆ ಕೇಳಿಕೊಂಡು ಬರಬೇಕಾದರೆ ಒಂದು rate ಆಗುತ್ತದೆ. ರಾಮನಗರಕ್ಕೆ ಹೋಗಲಿ ಮತ್ತೆ ಯಾವುದೇ ಮಾರುಕಟ್ಟೆಗೆ ಹೋಗಲಿ. ಬಂದ ತಕ್ಷಣ ಆ ಬೇಲ್‌ಗೆ ಬೆಲೆಯೇ ಇಲ್ಲ. ಎಲ್ಲರೂ ಸೇರಿ ಅಲ್ಲಿ ಬೆಲೆಯೇ ಇಲ್ಲ, ಚೈನಾದಲ್ಲಿ ಬೆಲೆ ಬಿದ್ದುಹೋಗಿದೆ, ಆ ರೀತಿ ಈ ರೀತಿಯಾಗಿದೆಯೆಂದು ಹೇಳಿ ಹೊಸ ಕಥೆಯನ್ನು ಕಟ್ಟುಬಿಡುತ್ತಾರೆ. ಮೆಣಸಿನಕಾಯಿ ಬೆಳೆದವನಿಗೆ rate ಇಲ್ಲ. ಆದರೆ ಅದನ್ನು ತೆಗೆದುಕೊಂಡು ಮಾರುವವನು ಬಂಗಲೆ ಕಟ್ಟುತ್ತಾನೆ. ಬೆಳೆದವನು ಮಾತ್ರ ಬೀದಿಯಲ್ಲೇ ಇರುತ್ತಾನೆ. ಈ ಪರಿಸ್ಥಿತಿ ಇದೆ. ಆದ್ದರಿಂದ ನಮ್ಮ ಕೃಷಿ ಮಾರುಕಟ್ಟೆ ನಿಜವಾದ ರೈತರ ಮಾರುಕಟ್ಟೆಯಾಗಬೇಕು. ರೈತ ಮೇಲುಗೈ ಸಾಧಿಸಲು

ಕ್ರಮವನ್ನು ಕೈಗೊಂಡರೆ ಮಾತ್ರ, ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿದರೆ ಮಾತ್ರ ಸಾಧ್ಯವಾಗುತ್ತದೆ.

ಉಪಕಸುಬುಗಳ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದು ಹೈನುಗಾರಿಕೆ. ಮೀನುಗಾರಿಕೆ ಇರಬಹುದು. ಮೀಟ್ ಫೆಡೆರೇಷನ್ ಮಾಡಬೇಕೆಂದು ಮಾನ್ಯ ಜಯಚಂದ್ರರವರು ಹೇಳಿದ್ದಾರೆ. ಇವೆಲ್ಲವನ್ನು ಸೇರಿಸಿ ಕೃಷಿ ಅಂದರೆ ಅದು ಆರ್ಥಿಕವಾಗಿ ಬಲಯುತವಾಗಿ ಮಾಡಿದರೆ ನಗರದ ಕಡೆಯವರೂ ಆ ಕಡೆಗೆ ವಲಸೆ ಬರುವಂತೆ ಆಗುತ್ತದೆ.

ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದಂತೆ ಸಾಕಷ್ಟು ಚರ್ಚೆಯಾಗಿದೆ. ನಾನು ಅದರ ವಿವರಕ್ಕೆ ಹೋಗುವುದಿಲ್ಲ. ಜನರೇಕೆ ಹಳ್ಳಿಯನ್ನು ತೊರೆಯುತ್ತಿದ್ದಾರೆ? ನಮ್ಮ ಮುಖ್ಯಮಂತ್ರಿಯವರು ಪ್ರತಿಸಾರಿ ಹಳ್ಳಿಗಳು ವೃದ್ಧಾಶ್ರಮವಾಗುತ್ತಿದೆಯೆಂದು ತಮ್ಮ ಸಂಕಟವನ್ನು ವ್ಯಕ್ತಪಡಿಸಿದ್ದಾರೆ. ಏಕೆ ಹಳ್ಳಿಯ ಜನರು ಹಳ್ಳಿಯನ್ನು ಬಿಟ್ಟು ಹೊರಕ್ಕೆ ಬರುತ್ತಿದ್ದಾರೆ ಎಂಬ ಬಗ್ಗೆ ಚಿಂತಿಸಬೇಕು. ಹಳ್ಳಿಯ ಜನರು ನಮ್ಮ ಹತ್ತಿರ ನನ್ನ ಮಗನಿಗೆ ಯಾವುದಾದರೂ ಒಂದು ಕೆಲಸ ಕೊಡಿಸಿ' ಎಂದು ಬರುತ್ತಾರೆ. ಆದರೆ, ನಮ್ಮ ಹಳ್ಳಿಯಲ್ಲಿ ಯಾವುದಾದರು ಒಂದು ಕೆಲಸ ಕೊಡಿಸುವ ವಾತಾವರಣ ಇಲ್ಲ. ಡ್ರೈವಿಂಗ್ ಕಲಿತಿದ್ದಾನೆಂದರೂ ನಾವು ಬೆಂಗಳೂರಿಗೇ ಕರೆದುಕೊಂಡು ಬಂದು ಕೆಲಸಕ್ಕೆ ಸೇರಿಸಬೇಕಾದ ಪರಿಸ್ಥಿತಿ ಇದೆ. ಎಸ್.ಎಸ್.ಎಲ್.ಸಿ. ಪಾಸಾಗಿದ್ದಾ ನೆಂದರೂ ನಾವು ಬೆಂಗಳೂರಿನಲ್ಲೇ ಕೆಲಸ ಹುಡುಕಿ ಕೊಡಬೇಕಾದ ಸ್ಥಿತಿ ಇದೆ. ಆದ್ದರಿಂದ ಹಳ್ಳಿಗಳನ್ನು, ಕನಿಷ್ಠ ಒಂದು ಗ್ರಾಮ ಪಂಚಾಯತಿಯನ್ನು ಕೇಂದ್ರವಾಗಿಟ್ಟುಕೊಂಡು ಅದನ್ನೇ ಒಂದು ಆರ್ಥಿಕ ಕೇಂದ್ರವಾಗಿ ರೂಪಿಸತಕ್ಕ ಕೆಲಸ ಆಗಬೇಕಾಗಿದೆ. ಹಳ್ಳಿಗಳಲ್ಲಿ ಸವಲತ್ತುಗಳು ಯಾವ ರೀತಿಯಾಗಿದೆ ಯೆಂದು ನಿಮಗೆ ಗೊತ್ತಿದೆ. ಗ್ರಾಮೀಣಾಭಿವೃದ್ಧಿ ಪಟ್ಟಿಯನ್ನು ನಾನು ನೋಡುತ್ತಿದ್ದೆ. ಅದರಲ್ಲಿ ನಮ್ಮ ರಾಜ್ಯದ ಗ್ರಾಮೀಣ ಭಾಗದಲ್ಲಿ 37 ಪರ್ಸೆಂಟ್ ಮಾತ್ರ ಶೌಚಾಲಯವಿದೆಯೆಂದು ಮಾಹಿತಿ ಕೊಟ್ಟಿದ್ದಾರೆ. ಅಂದರೆ ಸ್ವಾತಂತ್ರ್ಯ ಬಂದು 64 ವರ್ಷವಾದರೂ ಇನ್ನೂ 63 ಪರ್ಸೆಂಟ್ ಭಾಗದಲ್ಲಿ ಶೌಚಾಲಯವಿಲ್ಲ. ನಮ್ಮಲ್ಲಿರುವ 84 ಸಾವಿರ ಹಳ್ಳಿಗಳಿಗೆ 59,639 ವಸತಿ ಕೇಂದ್ರಗಳು. ಅದರಲ್ಲಿ ಶುದ್ಧ ಕುಡಿಯುವ ನೀರನ್ನು ಶೇಕಡ 50 ಭಾಗಕ್ಕೂ ಕೊಡಲು ಸಾಧ್ಯವಾಗಿಲ್ಲ. 30 ಭಾಗಕ್ಕೆ ನೀರನ್ನೂ ಕೊಡಲು ಒದ್ದಾಡಬೇಕಾದ ಸ್ಥಿತಿ ಇದೆ. ನಮಗೆ ಸ್ವಾತಂತ್ರ್ಯ ಬಂದು 64 ವರ್ಷಗಳಾದರೂ ನಮ್ಮ ಹಳ್ಳಿಗಳಿಗೆ ನೀರನ್ನೇ ಒದಗಿಸಲಾರದಂಥ ಸ್ಥಿತಿಗೆ

ಏಕೆ ತಲುಪಿದೆವು? ಕುಡಿಯುವ ನೀರಿಗೋಸ್ಕರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿದಂಥ ಯೋಜನೆಗಳು ಏನಾದವು? ಆ ಯೋಜನೆಗಳಲ್ಲಿ ನಾವು ಏಕೆ ಯಶಸ್ಸನ್ನು ಕಾಣಲು ಆಗಲಿಲ್ಲ? ದೂರದೃಷ್ಟಿಯನ್ನಿಟ್ಟುಕೊಂಡು ಯೋಜನೆ ಗಳನ್ನು ರೂಪಿಸುತ್ತಿಲ್ಲ. ಹಣ ಬಂದಿದೆ ಖರ್ಚು ಮಾಡಬೇಕು ಅಷ್ಟೇ. ಮೂಗುತಿ ಇದೆಯೆಂದು ಮೂಗು ಚುಚ್ಚಿಸುವ ಸ್ಥಿತಿ ಬಂದಿದೆ. ಮೂಗನ್ನು ಚುಚ್ಚುವ ಅಗತ್ಯತೆ ಇದೆಯೋ ಇಲ್ಲವೋ ಎಂಬುದು ಬೇರೆ ಪ್ರಶ್ನೆ. ಆದರೆ, ಮೂಗುತಿ ಇದೆ, ಆದ್ದರಿಂದ ನೀವು ಎಲ್ಲಿಗಾದರೂ ಒಂದು ಕಡೆ ಚುಚ್ಚಿಸಿ ಎಂಬಂತಾಗಿದೆ. ಆದ್ದರಿಂದ ನಾವು ಒಂದು ಪೈಲೆಟ್‌ಪ್ಲಾನ್‌ನ್ನು ಇಟ್ಟುಕೊಂಡು ಏಕಕಾಲಕ್ಕೆ ನಮ್ಮ ರಾಜ್ಯದ ಎಲ್ಲಾ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ರೂಪಿಸತಕ್ಕಂಥ ಕಾಲಬದ್ಧ ಯೋಜನೆಯನ್ನು ರೂಪಿಸಲು ಸಾಧ್ಯವಾಗುವುದಿಲ್ಲವೇ? ನೀರನ್ನೇ ಕೊಡದೆ 'ನೀನು ಹಳ್ಳಿಯಲ್ಲಿರು' ಎಂದರೆ ಯಾವ ಜನರು, ಯಾವ ಹೆಣ್ಣುಮಗಳು ಹಳ್ಳಿಯಲ್ಲಿರುತ್ತಾರೆ? ವಿದ್ಯುತ್, ವಿದ್ಯುಚ್ಛಕ್ತಿ ಕಡಿತ ಎಂದರೆ ನಗರಕ್ಕೆ ಒಂದು ಗಂಟೆ, ಗ್ರಾಮಾಂತರ ಪ್ರದೇಶಕ್ಕೆ ಹತ್ತು ಗಂಟೆ. ಹೀಗಾದರೆ ಯಾವ ಜನರು ಹಳ್ಳಿಯಲ್ಲಿ ಇರುತ್ತಾರೆ? ಇದಕ್ಕೆ ಈಗಿರುವ ಸರ್ಕಾರವೇ ಕಾರಣ, ಹಿಂದೆ ಇದ್ದ ಸರ್ಕಾರವೇ ಕಾರಣ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ತಾರತಮ್ಯ ಏಕೆ? ಈಗ ಇರುವ ವಿದ್ಯುತ್ ಸಹಾ ಸೀಮೆಎಣ್ಣೆ ದೀಪಕ್ಕಿಂತ ಕಡೆ ಮಾನ್ಯ ರೇವಣ್ಣನವರೆ. ಸೀಮೆಎಣ್ಣೆ ದೀಪವಾದರೂ ಸ್ವಲ್ಪ ಬೆಳಕನ್ನು ಕೊಡುತ್ತದೆ, ಆದರೆ ಈಗ ಇರುವ ವಿದ್ಯುತ್ ಅದಕ್ಕಿಂತಲೂ ಕಡೆ. ವೋಲ್ಟೇಜೇ ಇಲ್ಲ. ಈ ಪರಿಸ್ಥಿತಿ ಇವತ್ತೂ ಸುಧಾರಿಸಿಲ್ಲ. ಹಿಂದೆಯೂ ಸುಧಾರಿಸಿರಲಿಲ್ಲ. ಹಿಂದೆಯೂ ಸೀಮೆಎಣ್ಣೆ ದೀಪಕ್ಕಿಂತ ಕಡೆಯಾದ ಬೆಳಕೇ ಇದ್ದದ್ದು. ಇವತ್ತಿಗೂ ಹಳ್ಳಿಗಳಲ್ಲಿ ಸೀಮೆಎಣ್ಣೆ ದೀಪದ ಬೆಳಕಿಗಿಂತಲೂ ಕಡೆಯಾದ ಬೆಳಕೇ ಇರುವುದು. ಅದನ್ನು ಸುಧಾರಿಸುವುದಕ್ಕೆ ಯೋಜನೆಗಳನ್ನು ರೂಪಿಸಿದ್ದೇವೆಂದು ಹೇಳಿದ್ದೀರಿ. ಆ ಯೋಜನೆಯನ್ನು ಕಾಲಬದ್ಧವಾಗಿಟ್ಟುಕೊಂಡು ಹಳ್ಳಿಗಳಿಗೂ 24 ಗಂಟೆ ವಿದ್ಯುತ್ ಎಂದು ಹೇಳಿ. ಆಗ ಪೇಟೆಯಲ್ಲಿದ್ದ ಜನರು ವಾತಾವರಣ ಚೆನ್ನಾಗಿದೆಯೆಂದು ಹಳ್ಳಿಗೆ ಹೋಗಿ ಮನೆ ಮಾಡಿಕೊಳ್ಳುತ್ತಾರೆ. ಅನಂತರ, ಸುಲಭ ರೀತಿಯಲ್ಲಿ ಸಾಲ ಕೊಡುವ ವ್ಯವಸ್ಥೆಯನ್ನು ರೂಪಿಸಬೇಕು. ಇವತ್ತು ಎಲ್ಲಾ ರೈತರಿಗೆ, ಹಳ್ಳಿಯಲ್ಲಿರುವ ಜನರಿಗೆ, ಅದು ಪ್ರಾಥಮಿಕ ಸಹಕಾರಿ ಸಂಘಗಳಿರಬಹುದು, ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕುಗಳಿರಬಹುದು, ರಾಷ್ಟ್ರೀಕೃತ ಬ್ಯಾಂಕುಗಳಿರಬಹುದು, ಜಿಲ್ಲಾ

ಬ್ಯಾಂಕುಗಳಿರಬಹುದು. ಅಲ್ಲೆಲ್ಲಾ ರೈತರಿಗೆ ಸುಲಭವಾಗಿ ಸಾಲ ಸಿಗುವ ವ್ಯವಸ್ಥೆ ಇವತ್ತಿನವರೆಗೂ ಇಲ್ಲ. ಅಲ್ಲಿ ರೈತನಿಗೆ ಗೌರವವೂ ಇಲ್ಲ. ರೈತನಿಗೆ ಸುಲಭವಾಗಿ ಸಾಲ ಸಿಗತಕ್ಕ ಸೂತ್ರವನ್ನು ಸರ್ಕಾರ ಜಾರಿಗೆ ತಂದಿದ್ದೇ ಆದರೆ ಅವನಿಗೆ ಸುಲಭವಾಗಿ ಸಾಲ ದೊರಕಿ ಅವನ ಬದುಕನ್ನು ಕಟ್ಟಿಕೊಳ್ಳಲು ಅವಕಾಶವಾಗುತ್ತದೆ. ಇನ್ನು ಕೆಲವು ಕಡೆ ರಾಜಕೀಯ ಹಿಂಬಾಲಕರಿಗೆ ಮಾತ್ರ ಸಾಲ ಕೊಡುವುದು. ಸಾಮಾನ್ಯ ರೈತರಿಗೆ ಸಾಲ ಇಲ್ಲ. ಅವನ ವಿರೋಧಿ ಯಾಗಿ ಕೆಲಸ ಮಾಡಿದಂಥವನಿಗೆ ಇಲ್ಲವೇ ಇಲ್ಲ. ಈ ರಾಜಕೀಯದಿಂದ ಮುಕ್ತಿ ಮಾಡಿ, ಪಹಣಿ ತೆಗೆದುಕೊಂಡು ಹೋಗತಕ್ಕಂಥ ಯಾರು ಖಾತೆದಾರ ಇದ್ದಾನೆ ಅವನಿಗೆ ಸಾಲ ಕೊಡತಕ್ಕ ಸುಲಭ ಸಾಲ ವ್ಯವಸ್ಥೆಯನ್ನು ತರಬೇಕಾಗಿದೆ. ಬ್ರಿಟಿಷರ ಕಾಲದಲ್ಲೇನೋ ರೈಲ್ವೆಗೆ ಒಂದು ಬಜೆಟ್ ಅನಂತರ ಮತ್ತೊಂದು ಮುಂಗಡ ಪತ್ರವನ್ನು ಮಂಡಿಸುತ್ತಿದ್ದರು. ನಮ್ಮ ದೇಶ 80 ಪರ್ಸೆಂಟ್ ಕೃಷಿಕರು ಇರುವ ದೇಶ. ಆದ್ದರಿಂದ ಕೃಷಿಗೇ ಏಕೆ ಒಂದು ಮುಂಗಡ ಒತ್ರವನ್ನು ರೂಪಿಸಬಾರದು? ಇವತ್ತು ಕೃಷಿ ಮತ್ತು ಗ್ರಾಮೀಣಾ ಭಿವೃದ್ಧಿಯನ್ನೇ ಒಂದು ವಿಶೇಷವಾಗಿ ಚರ್ಚೆಗೆ ತೆಗೆದುಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಕೃಷಿಗೇ ಒಂದು ವಿಶೇಷ ಮುಂಗಡ ಪತ್ರವನ್ನು ತಯಾರಿಸಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯನ್ನೇ ದೃಷ್ಟಿಯಲ್ಲಿಟ್ಟುಕೊಂಡು ಒಂದು ಮುಂಗಡ ಪತ್ರವನ್ನು ತಯಾರಿಸಿ ಅಲ್ಲೇ ಕೃಷಿಕನ, ಗ್ರಾಮೀಣ ಜನರ, ರೈತರ ಬದುಕಿಗೆ ಬೇಕಾಗಿರುವ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿ ಸುವುದಕ್ಕೆ ಪ್ರತ್ಯೇಕ ಮುಂಗಡ ಪತ್ರವನ್ನು ಮಂಡಿಸಬೇಕು. ಅದರ ಮೇಲೆ ಪ್ರತಿ ವರ್ಷ ಚರ್ಚೆಯಾಗುವಂತೆ ಮಾಡಬೇಕು ಎಂದು ವಿನಂತಿ ಮಾಡಿಕೊ ಳ್ಳುತ್ತೇನೆ. ಈ ರೀತಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಸಂಬಂಧಪಟ್ಟಂತೆ ವಿಶೇಷ ಚರ್ಚೆ ಇದೆಯೆಂದು ಹೇಳಿದಾಗ ಪತ್ರಕರ್ತರೆಲ್ಲರೂ ಒಂದು ಪ್ರಶ್ನೆಯನ್ನು ಕೇಳಿದ್ದರು.

"ಇನ್ನಾದರೂ ಕೂಡ ನೀವು ಹಳ್ಳಿಗಳ ಕಡೆಗೆ ನೋಡುತ್ತೀರಿ ಅಲ್ಲವೇ?" ಎಂದು ಕೇಳಿದರು. ಆಸೆಯ ದೃಷ್ಟಿಯಿಂದ ಈ ಚರ್ಚೆಯಲ್ಲಿ ಏನು ಚಿಂತನೆ ಬರುತ್ತದೆ ಮತ್ತು ಏನು ಫಲಿತಾಂಶ ಬರುತ್ತದೆ ಎಂದು ಕಾಯುತ್ತಿದ್ದಾರೆ. ನನ್ನ ವಿನಂತಿ ಏನೆಂದರೆ ನಾವು ನುಡಿ ಜಾಣರಾದರೆ ಜನ ನಂಬುವುದಿಲ್ಲ, ನಾವು ನಡೆ ಜಾಣರಾದರೆ ಮಾತ್ರ ಜನ ನಮ್ಮನ್ನು ನಂಬುವುದು. ಹಾಗಾಗಿ ಏನು ಚಿಂತನ ಮಂಥನ ಬರುತ್ತದೆ, ಅದು ಕಾಲಮಿತಿಯೊಳಗೆ ಅನುಷ್ಠಾನವಾಗಬೇಕು. ಹಾಗಾದಾಗ ಹಳ್ಳಿಗಳು

ವೃದ್ಧಾಶ್ರಮವಾಗುವುದು ತಪ್ಪುತ್ತದೆ, ರೈತನ ಬದುಕು ಹಸನಾಗುತ್ತದೆಂದು ಹೇಳುತ್ತಾ ಒಟ್ಟಾರೆಯಾಗಿ ವಿಶೇಷವಾದ ಕಾಳಜಿಯಿಂದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟಂತೆ ಚರ್ಚೆಗೆ ಅವಕಾಶ ಮಾಡಿ ಕೊಟ್ಟಿರುವ ಮಾನ್ಯ ಅಧ್ಯಕ್ಷರಿಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಜೈಹಿಂದ್.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ :

ವಿಷಯ : ಬೆಂಗಳೂರು ನಗರ ಹೊಸೂರು ರಸ್ತೆಯಲ್ಲಿರುವ ಚರ್ಚ್ ಮೇಲೆ ನಡೆದ ದಾಳಿ ಬಗ್ಗೆ :

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಿಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ, ಫೋಟೋ ಕೂಡ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇರುವುದರಿಂದ, ಅವರು ಸದನಕ್ಕೆ ಬರಲಿ ಎಂದು ನಾನು ಕಾಯುತ್ತಿದ್ದೆ. ಮಾನ್ಯ ಸದಸ್ಯರು ಮಾತನಾಡುವುದಕ್ಕೆ ನಿಂತುಬಿಟ್ಟರು. ಹಾಗಾಗಿ ನಾನು ಸುಮ್ಮನಾದೆ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದು ಮಾನ್ಯ ಮುಖ್ಯಮಂತ್ರಿಗಳಿಂದ ನಾನು ಹೇಳಿಕೆಯನ್ನು ಬಯಸುತ್ತೇನೆ. ಹೊಸೂರು ರಸ್ತೆಯಲ್ಲಿ...

ಶ್ರೀ ಹೆಚ್.ಡಿ.ರೇವಣ್ಣ : ಪತ್ರಿಕೆಗಳಲ್ಲಿ ಈ ವಿಚಾರ ಬಂದಿದೆ, ಆದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಬಂದಿಲ್ಲವೆಂದು ಹೇಳಿರುವುದಕ್ಕೆ ವಿಚಾರ ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಈ ಹೊಸೂರು ರಸ್ತೆಯಲ್ಲಿ ಒಂದು ಚರ್ಚ್ ಮೇಲೆ ನಸುಕಿನ ವೇಳೆಯಲ್ಲಿ, ಬೆಳಗ್ಗೆ 3.00 ಗಂಟೆಯಲ್ಲಿ ದಾಳಿ ನಡೆದಿದೆ. ಯಾರೋ ಕೆಲವು ದುಷ್ಕರ್ಮಿಗಳು, ಸುಮಾರು 25 ಕ್ಕಿಂತ ಹೆಚ್ಚು ಜನರು ಆ ಚರ್ಚ್‌ನ ಕಿಟಕಿ ಬಾಗಿಲುಗಳನ್ನು ಮುರಿದು ಹಾಕಿ ಚರ್ಚ್ ಒಳಗಡೆ ನುಗ್ಗಿ, ಅಲ್ಲಿದ್ದಂತಹ ಇಬ್ಬರು ಕಾವಲುಗಾರರನ್ನು ಓಡಿಸಿದ್ದಾರೆ ಎಂದು as per the report in the newspaper, ಸಂಜೆವಾಣಿಯಲ್ಲಿ ಬಂದಿರತಕ್ಕಂಥದ್ದು. ಅಲ್ಲಿರತಕ್ಕಂಥ ಏಸು ಮೂರ್ತಿಯನ್ನು ಕಿತ್ತು ಹಾಕಿ, ಒಡೆದು ಹಾಕಿ, ಹೊರಗಡೆ ತಂದು ಎಸೆದಿದ್ದಾರೆ. ಎಲ್ಲಾ damage ಮಾಡಿ ಹೊರಗಡೆಯೆಲ್ಲಾ ಕೆಡವಿಬಿಟ್ಟಿದ್ದಾರೆ. ಅಲ್ಲಿ ಶಿಲುಬೆಯನ್ನು ವಿರೂಪಗೊಳಿಸಿದ್ದಾರೆ. ಮೇರಿ ವಿಗ್ರಹವನ್ನು ಕೂಡ ಕಿತ್ತು ಹಾಕಿದ್ದಾರೆ. ಈ ರೀತಿ ದುಷ್ಕರ್ಮಿಗಳು ಇದ್ದಕ್ಕಿದ್ದ